
ದ್ವಿತೀಯ ಭಾಗ

ಮಂತ್ರೇಶ್ವರ ಕೃತ

ಫಲದೀಪಿಕಾ

ಗಜಾನನ ಪ್ರಕಾಶನ, ಮಂಗಳೂರು-1



ಜ್ಯೋತಿಷ ಬೋಧಿನಿ

ಉತ್ತಮ ಪ್ರಾಥಮಿಕ ಜ್ಯೋತಿಷ ಗ್ರಂಥ

ಗ್ರಹ ರಾಶಿ ಸಂಬಂಧ, ನಕ್ಷತ್ರ ವಿಚಾರ, ರಾಶಿಯ ಗುಣಧರ್ಮ, ಸೌರವ್ಯೂಹ, ಗ್ರಹ-ಕಾರಕತ್ವ, ಸ್ವರೂಪ, ಬಲ, ರೋಗವಿಚಾರ, ದೃಷ್ಟಿ, ಮಿತ್ರತ್ವ-ಶತ್ರುತ್ವ, ದಶವರ್ಗ, ಅವಸ್ಥಾಫಲ, ಭಾವ, ಭಾವಫಲ, ದ್ರೇಕ್ಕಾಣ, ರಾಶಿಸ್ಥಿತ ಗ್ರಹಫಲ, ಉಪಗ್ರಹ, ಗುಳಿಕ-ಮಾಂದಿ, ದ್ವಿಗ್ರಹಯೋಗ, ಕರ್ಮ ಅಥವಾ ವೃತ್ತಿ, ದಶಾಫಲ, ಬಾಧಕಸ್ಥಾನ, ಯೋಗಗಳು, ಗೋಚರ ಫಲ, ಅಷ್ಟಕವರ್ಗಪದ್ಧತಿ, ಪ್ರಶ್ನಶಾಸ್ತ್ರ ವಿಚಾರ ಇತ್ಯಾದಿ ಉಪಯುಕ್ತ ಹಾಗೂ ಬೋಧಪ್ರದ ಪ್ರಾರಂಭಿಕ ಪಾಠಗಳಿಂದ ಕೂಡಿದ ಈ ಜ್ಯೋತಿಷಬೋಧಿನಿ ಗ್ರಂಥವು ಶಾಸ್ತ್ರಜ್ಞಾನ ಪ್ರವೇಶಕ್ಕೆ ಸಹಾಯಕ ಆಗಿರುತ್ತದೆ.

ಪುಟ 135 **ಬೆಲೆ ರೂ.10-00**

ಮೇಷ ಲಗ್ನ

ಮೇಷಲಗ್ನದಲ್ಲಿ ಜನಿಸಿದವರ ಗುಣಾವಗುಣ. ಸ್ವಭಾವ, ಗ್ರಹಸ್ಥಿತಿಯಿಂದ ಲಭಿಸುವ ಫಲಾಫಲಗಳು, ಲಗ್ನಫಲ, ದ್ರೇಕ್ಕಾಣಫಲ ಮತ್ತು ನವಾಂಶಫಲ, ಭಾವಸ್ಥಿತ ಗ್ರಹಫಲ, ಗ್ರಹಗಳ ಕಾರಕತ್ವ, ಪ್ರಾಮುಖ್ಯಯೋಗಗಳು, ರಾಜಯೋಗ, ಗ್ರಹಯುತಿ ಮತ್ತು ಪರಿವರ್ತನ ಯೋಗಫಲ, ಮಾದರಿಜಾತಕಗಳಿಂದ ಕೂಡಿದ ಜ್ಯೋತಿಷಗ್ರಂಥ.

ಪುಟ 102 **ಬೆಲೆ ರೂ.2-25**

ಗುಳಿಕ ಅಥವಾ ಮಾಂದಿ ಮತ್ತು ಉಪಗ್ರಹಗಳು

ಗುಳಿಕ ಸ್ವರೂಪ, ಗುಳಿಕ ಶೋಧನೆ, ಭಾವಸ್ಥಿತ ಮಾಂದಿ ಫಲ, ಉಪಗ್ರಹಗಳು, ಲಗ್ನಸ್ಫುಟ, ಗ್ರಹಸ್ಫುಟ, ಉಪಗ್ರಹಶೋಧನೆ, ಆರೂಢಪದ, ಆತ್ಮ ಕಾರಕಗ್ರಹ, ಕಾರಕ ಗ್ರಹಫಲ, ಇತ್ಯಾದಿ ವಿವರಗಳಿಂದ ಕೂಡಿದ ಉಪಯುಕ್ತ ಜ್ಯೋತಿಷಗ್ರಂಥ.

ಪುಟ 107 **ಬೆಲೆ ರೂ.3-00**

ಆಯುರ್ದಾಯ

ಬಾಲಾರಿಷ್ಟ, ಸದ್ಯೋಮರಣ, ಯೋಗಜಾಯು, ಅಲ್ಪಾಯು, ಮಧ್ಯಾಯು ದೀರ್ಘಾಯು, ಪೂರ್ಣಾಯು ಇತ್ಯಾದಿ ಆಯುರ್ದಾಯ ವಿಚಾರ, ಅಪಘಾತ, ಅಪಮೃತ್ಯು, ಅಕಾಲ ಮರಣ, ಆತ್ಮಹತ್ಯೆ, ಕೊಲೆ ಮೊದಲಾದವುಗಳನ್ನು ಮಾದರಿ ಜಾತಕ ಜೊಂದಿಗೆ ವಿವರಿಸಿ ಬರೆದಿರುತ್ತದೆ. ದ್ರೇಕ್ಕಾಣಹೇತು, ಮರಣಕಾಲ, ಮರಣಹೇತು, ಮಾರಕ ವಿಚಾರ, ಶವಪರಿಣಾಮ ಇತ್ಯಾದಿ ಆಧಾರ ಶ್ಲೋಕಗಳಿಂದ ಮತ್ತು 108 ಮಾದರಿ ಜಾತಕಗಳಿಂದ ವಿವರಿಸಿ ಬರೆದಿರುತ್ತದೆ.

ಪುಟ 144 **ಬೆಲೆ ರೂ.10-00**

ಮಂತ್ರೇಶ್ವರ ಕೃತ

ಫಲದೀಪಿಕಾ

ದ್ವಿತೀಯ ಭಾಗ

ಭಾವಾನುವಾದ ಮತ್ತು ಟಿಪ್ಪಣಿ

ಅನುವಾದಕರು:

ಬಿ. ಜಿ. ಆಚಾರ್ಯ

Venkoba Rao

1983

ಬೆಲೆ ರೂ. 14-00

MANTRESWARA'S

ಮಂತ್ರೇಶ್ವರಕೃತ

PHALADEEPIKA-Part II

ಫಲದೀಪಿಕಾ ಭಾಗ-೨

A Translation of Astrological Book in kannada on pridictive Astrology, Chapters fourteen to twenty seven

P. P. 128+4

ಬೆಲೆ ರೂ. 14-00

ಪ್ರಥಮ ಮುದ್ರಣ 1983

ಪ್ರಕಾಶಕರು: ಗಜಾನನ ಪ್ರಕಾಶನ,
ಗಣಪತಿ ಹೈಸ್ಕೂಲ್ ಕ್ರೋಸ್ ರೋಡ್, ಮಂಗಳೂರು-೧

ಮುದ್ರಕರು: ಕಾಮಧೇನು ಪ್ರಿಂಟರ್ಸ್,
ಗಣಪತಿ ಹೈಸ್ಕೂಲ್ ಕ್ರೋಸ್ ರೋಡ್, ಮಂಗಳೂರು-೧

ಪೀಠಿಕೆ

ದೈವಜ್ಞ ಮಂತ್ರೇಶ್ವರ ಕೃತ **ಫಲದೀಪಿಕಾ** ಗ್ರಂಥವು ಜ್ಯೋತಿಷ ಶಾಸ್ತ್ರದ ಫಲಾಫಲ ಚಿಂತನೆಗೆ ಅತ್ಯಂತ ಉಪಯುಕ್ತ ಆಗಿರುತ್ತದೆ. ಈ ಗ್ರಂಥದಲ್ಲಿ ೨೭ಅಧ್ಯಾಯ ಗಳಿವೆ. ಅಧ್ಯಾಯ ೧೪ರಿಂದ ೨೭ನೇ ಅಧ್ಯಾಯದ ಭಾವಾನುವಾದವನ್ನು ಈ ಗ್ರಂಥದಲ್ಲಿ ಬರೆದಿರುತ್ತದೆ.

ಬೃಹಜ್ಜಾತಕ, ಪರಾಶರೀ, ಪ್ರಶ್ನಮಾರ್ಗ, ಸಾರಾವಲಿ ಮೊದಲಾದ ಗ್ರಂಥಕಾರರ ಮತವನ್ನು ಆಧಾರವಾಗಿ ಟಿಪ್ಪಣಿ ಸಹಿತ ಈ ಗ್ರಂಥದಲ್ಲಿ ಬರೆದಿರುತ್ತದೆ.

ಈ ಗ್ರಂಥದ ಅನುವಾದಕ್ಕೆ ಅಮೂಲ್ಯ ಸಲಹೆಗಳನ್ನಿತ್ತ ನನ್ನ ಮಿತ್ರ ಹಾಗೂ ಹಿತ ಚಿಂತಕ **ವೇದಮೂರ್ತಿ ಪುಂಡಲೀಕ ಅನಂತ ಭಟ್**ರವರಿಗೆ ನಾನು ಉಪಕೃತನಾಗಿದ್ದೇನೆ.

ಈ ಗ್ರಂಥಾನುವಾದದಲ್ಲಿ ಲೋಪದೋಷಗಳು ಕಂಡು ಬಂದಲ್ಲಿ ಇದನ್ನು ವಾಚಕರು ಕ್ಷಮಿಸಬೇಕಾಗಿ ಕೇಳಿಕೊಂಡು ನನ್ನ ಈ ಪೀಠಿಕೆಯನ್ನು ಕೊನೆಗಾಣಿಸುತ್ತೇನೆ.

ಈ ಚಿಕ್ಕ ಗ್ರಂಥವು ವಿದ್ಯಾರ್ಥಿಗಳಿಗೆ, ವಾಚಕರಿಗೆ ಮತ್ತು ಗ್ರಂಥಾಲಯಗಳಿಗೆ ಉಪಯುಕ್ತವಾಗಿ ಲೋಕಪ್ರೇಮವನ್ನು ಗಳಿಸಲಿ ಎಂದು ಹಾರೈಸುವ,

28-12-1983
ಮಂಗಳೂರು.

ತಮ್ಮೆಲ್ಲರ ಹಿತೇಚ್ಛು
ಬಿ. ಜಿ. ಆಚಾರ್ಯ

ಅನುಕ್ರಮಣಿಕೆ.



॥ ಶ್ರೀ ಗಣೇಶಾಯ ನಮಃ ॥

ಆಧಾರೇ ಪ್ರಥಮಂ ಸಹಸ್ರಕಿರಣಂ ತಾರಾಧಿಪಂ ಸ್ವಾಲಯೇ ।
ಮಾಹೇಯಂಮಣಿಪೂರಕೇ ಹೃದಿಬುಧಮ್ ಕಂಠೇಚ ವಾಚಸ್ಪತಿಮ್ ।
ಭ್ರೂಮಧ್ಯೇ ಭೃಗುನಂದನಂ ದಿನಮಣೇ ಪುತ್ರಂ ತ್ರಿಕೂಟಸ್ಥಲೇ ।
ನಾಡೀಮರ್ಮಸುರಾಹುಕೇತುಗುಳಿಕಾನ್ ನಿತ್ಯಂ ನಮಾಮ್ಯಾಯುಷೇ ।

ರೋಗವಿಚಾರ

"ಆರೋಗ್ಯವೇಭಾಗ್ಯ" ಎಂಬ ಉಕ್ತಿಯಂತೆ, ಉತ್ತಮ ಆರೋಗ್ಯವೇ ಸಕಲಸಂಪತ್ತಿನಲ್ಲಿ ಶ್ರೇಷ್ಠ ಆಗಿರುತ್ತದೆ. ಆದರೆ ಲೋಕದಲ್ಲಿ ತನ್ನ ಕರ್ಮಶೇಷವನ್ನು ಅನುಭವಿಸಲು ಜನಿಸಿದ ಮಾನವನು ಆಗ್ಗಾಗ್ಯೆ ಹಲ-ಕೆಲವು ರೋಗದಿಂದ ಬಳಲುವುದು ಪ್ರತ್ಯಕ್ಷವಾಗಿ ಕಂಡುಬರುತ್ತದೆ, ಕರ್ಮಫಲರೂಪವಾಗಿ ಉದ್ಭವಿಸುವ ವ್ಯಾಧಿಗಳನ್ನು, ಜಾತಕನು ಅನುಭವಿಸುವ ವಿಧಾನ, ರೋಗಹೇತು, ಪರಿಹಾರ, ರೋಗ ವಿಮುಕ್ತಿ, ರೋಗ ಗುಣಆಗುವ ಸಾಧ್ಯತೆ ಅಥವಾ ಅಸಾಧ್ಯತೆ, ಇತ್ಯಾದಿಗಳನ್ನು ಜನನಕಾಲದ ಗ್ರಹಸ್ಥಿತಿಯಿಂದ ತಾತ್ಕಾಲಿಕ ದಶಾ-ಭುಕ್ತಿಗಳಿಂದ, ಗೋಚರದ ಗ್ರಹಸ್ಥಿತಿ ಮತ್ತು ಪ್ರಶ್ನಶಾಸ್ತ್ರದ ಆಧಾರದಿಂದಲೂ ತಿಳಿಯಬಹುದು.

ಋತುಗಳ ಬದಲಾವಣೆಯಿಂದ ಸಂಭವಿಸುವ ಕೆಲವೊಂದು ಚಿಕ್ಕ-ಪುಟ್ಟ ವ್ಯಾಧಿಗಳನ್ನು ಗೋಚರದ ಗ್ರಹರು ಸೂಚಿಸುತ್ತಾರೆ. ಇವುಗಳನ್ನು ವೈದ್ಯಕೀಯ ಸಲಹೆಯಂತೆ, ಔಷಧ, ಪಥ್ಯ ಇತ್ಯಾದಿಗಳಿಂದ ಅಲ್ಪಕಾಲದಲ್ಲಿ ಗುಣಪಡಿಸಬಹುದು. ಆಹಾರ ದೋಷ, ಅಧಿಕಆಹಾರ ಸೇವನೆ, ಶಾರೀರಿಕಶ್ರಮ, ನಿದ್ರಾನಾಶ, ಮೊದಲಾದ ತಾತ್ಕಾಲಿಕ ಕಾರಣಗಳಿಂದ ಕೆಲವೊಮ್ಮೆ ಅನಾರೋಗ್ಯ ಸಂಭವಿಸುತ್ತದೆ. ಇವುಗಳನ್ನು ಕೂಡಾ ಸೂಕ್ತ ವಿಧಾನದಿಂದ ನಿವಾರಿಸಬಹುದು.

ಗೋಚರದ ಗ್ರಹರಿಂದ ಸೂಚಿತ ಚಿಕ್ಕ-ಪುಟ್ಟ ದೋಷಗಳನ್ನು ಸಾಮಾನ್ಯವಾಗಿ ಎಲ್ಲರೂ ಅನುಭವಿಸ ಬೇಕಾಗುತ್ತದೆ. ಆದರೆ ಜನನಕಾಲದ ಗ್ರಹಸ್ಥಿತಿಯು ಆರೋಗ್ಯವನ್ನು ಸೂಚಿಸುವುದಾದರೆ, ಅಂಥವರಿಗೆ ಈ ಚಿಕ್ಕ-ಚಿಕ್ಕ ದೋಷಗಳು ಅಧಿಕ ಪರಿಣಾಮಕರವಲ್ಲ. ದೃಢಕಾಯನೂ, ನಿರೋಗಿಯೂ ಆದವನು ಕೆಲವೊಮ್ಮೆ, ಅಕಸ್ಮಾತ್ ತೀವ್ರ ಅನಾರೋಗ್ಯದಿಂದ ಪೀಡಿಸಲ್ಪಡುವುದು ಕಂಡು ಬರುತ್ತದೆ. ಇಂಥಹವ್ಯಾಧಿಯ ಹೇತುವನ್ನು ಜನನಕಾಲದ ಗ್ರಹಸ್ಥಿತಿಯಿಂದ ತಿಳಿಯಬಹುದು. ಅಲ್ಲದೆ ವ್ಯಾಧಿಯಿಂದ ಪೀಡಿತನ ರೋಗವಿಮುಕ್ತಿಕಾಲ, ಅನುಸರಿಸಬೇಕಾದ ವಿಧಾನ, ವ್ಯಾಧಿಗುಣ ಆಗುವ ಅಥವಾ ಉಲ್ಬಣಿಸುವ ವಿಚಾರ ಇತ್ಯಾದಿ ಕೂಡಾ, ಜನನಕಾಲದ ಗ್ರಹಸ್ಥಿತಿ ಮತ್ತು ತಾತ್ಕಾಲಿಕ ದಶಾಭುಕ್ತಿ, ಗೋಚರದ ಗ್ರಹಸ್ಥಿತಿ, ಇತ್ಯಾದಿಗಳಿಂದ ನಿರ್ಣಯಿಸಬೇಕು.

ದೃಢಕಾಯನೂ, ನಿರೋಗಿಯು, ಆದ ವ್ಯಕ್ತಿಯು ಅಕಸ್ಮಾತ್ ವ್ಯಾಧಿಪೀಡಿತನು ಆಗಲು ಕಾರಣವೇನು? ಎಂದು ಚಿಂತಿಸುವಾಗ, ಪೂರ್ವಾರ್ಜಿತ ಕರ್ಮದೋಷವು ಕಾರಣ ಆಗಿರಬಹುದು ಎಂದು ತಿಳಿಯ ಬೇಕಾಗುತ್ತದೆ.

ಜನ್ಮಾಂತರಕೃತಂ ಪಾಪಂ ವ್ಯಾಧಿರೂಪೇಣ ಜಾಯತೇ ,
ತಚ್ಛಾಂತಿರೌಷಧೈರ್ದಾನೈರ್ಜಪ ಹೋಮಾರ್ಚನಾದಿಭಿ: ॥

ಪೂರ್ವಜನ್ಮಗಳ ಅಶುಭಕರ್ಮಫಲವನ್ನು ಮನುಷ್ಯನು, ಈ ಜನ್ಮದಲ್ಲಿ ವ್ಯಾಧಿರೂಪವಾಗಿ ಅನುಭವಿಸುತ್ತಾನೆ. ಗ್ರಹರಿಂದ ಸೂಚಿತ, ಈ ಕರ್ಮಜ ದೋಷ ಪರಿ

ಹಾರ ಆಗಲು ಜಪ, ಹೋಮ, ದೇವತಾ ಅರ್ಚನೆ, ಮೊದಲಾದ ಸೂಕ್ತ ಪರಿಹಾರ ಮಾಡಬೇಕು. ಶಾರೀರಿಕ ಪೀಡೆಯ ಶಮನಕ್ಕೆ ಸೂಕ್ತ ಔಷಧಾದಿ ಉಪಚಾರಗಳಿಂದ ಪ್ರಯತ್ನಿಸಬೇಕು.

ಪಾಪಾ ಲಾಭತೃತೀಯಗಾಃ ಸಹಜವೈರ್ಯಂತ್ಯಾಷ್ಟಮೋಭ್ಯೋನ್ಯಗಾಃ
ಸೌಮ್ಯಾ ಮಾಂದಿರಪಿ ತ್ರಿಕೋಣಮೃತಿಕೇಂದ್ರೇಭ್ಯೋಪರತ್ರ ಸ್ಥಿತಃ ।
ಸರ್ವೇಮೀ ಕಥಯಂತ್ಯನಾಮಯತನುಂ ಪ್ರಷ್ಟಾರಮೇವಂ ಸ್ಥಿತಾ
ರೋಗಗ್ರಸ್ತಕಳೇವರಂ ಚ ಕಥಿತೇಭ್ಯೋನ್ಯತ್ರ ತೇ ಸಂಸ್ಥಿತಾಃ ॥

ಆರೋಗ್ಯ ಪ್ರಶ್ನೆಃ-ಪ್ರಶ್ನಮಾರ್ಗಮತ,

ಪಾಪಗ್ರಹರು ಲಾಭ ಮತ್ತು ತೃತೀಯದಲ್ಲಿ ಇರಬೇಕು. ಶುಭಗ್ರಹರು ಲಗ್ನ, ದ್ವಿತೀಯ, ಚತುರ್ಥ, ಪಂಚಮ, ಸಪ್ತಮ, ನವಮ, ದಶಮ ಮತ್ತು ಏಕಾದಶದಲ್ಲಿರಬೇಕು, ಮತ್ತು ಮಾಂದಿಯು ದ್ವಿತೀಯ. ತೃತೀಯ, ಷಷ್ಠ, ಲಾಭ ಮತ್ತು ವ್ಯಯದಲ್ಲಿ ಇರಬೇಕು, ಈ ಯೋಗದಲ್ಲಿ ಜನಿಸಿದವನು ಉತ್ತಮ ಆರೋಗ್ಯ ಉಳ್ಳವನು ಆಗುತ್ತಾನೆ. ಇನ್ನಿತರ ಸ್ಥಾನಗಳಲ್ಲಿರುವ ಗ್ರಹಸ್ಥಿತಿಯು ರೋಗವನ್ನು ಸೂಚಿಸುತ್ತದೆ.

"**ಹೋರಾಸ್ವಾಮಿ ಗುರುಜ್ಞ ವೀಕ್ಷಿತಯುತಾ**" ಎಂಬಂತೆ ಲಗ್ನವು ಬಲಿಷ್ಠವಾಗಿರಬೇಕು. ಲಗ್ನಾಧಿಪತಿ, ಗುರು ಮತ್ತು ಬುಧನು ಲಗ್ನವನ್ನು ನೋಡುವುದು ಅಥವಾ ಲಗ್ನದಲ್ಲಿ ಇರುವುದು, ಲಗ್ನದ ಬಲವನ್ನು ಸೂಚಿಸುತ್ತದೆ. ಇದು ಉತ್ತಮ ಆರೋಗ್ಯ ಮತ್ತು ದೀರ್ಘಾಯುಸ್ಸು ನೀಡುತ್ತದೆ. ಶುಭಗ್ರಹರು ಕೇಂದ್ರ-ತ್ರಿಕೋಣಗಳಲ್ಲಿರುವುದು, ಪಾಪಗ್ರಹರು ತೃತೀಯ-ಏಕಾದಶದಲ್ಲಿ ಇರುವುದು ಕೂಡಾ ಆಯುಷ್ಯ ಮತ್ತು ಆರೋಗ್ಯಕ್ಕೆ ಉತ್ತಮ.

ಅಂಗಾಧೀಶಃ ಸ್ವಗೇಹೇ ಬುಧಗುರು ಕವಿಭಿಃ ಸಂಯುತಃ ಕೇಂದ್ರಗೋ ವಾ ಸ್ವೀಯೋ ತುಂಗೇ ಸ್ವಮಿತ್ರೇ ಯದಿಶುಭಭವನೇ ವೀಕ್ಷಿತಃ ಶಸ್ತ್ರ ರೂಪಃ । ಸ್ಯಾನ್ನೂನಂ ಪುಣ್ಯಶೀಲಃ ಸಕಲಜನಮತಃ ಸರ್ವಸಂನ್ನಿಧಾನಂ ಜ್ಞಾನೀ ಮಂತ್ರೀ ಚಮೂಪಃ ಸುರುಚಿರನಯನೋ ಮಾನವೋ ಮಾನವಾನಾಮ್ ॥

1.ಲಗ್ನಾಧಿಪತಿಯು, ಬುಧ, ಗುರು ಅಥವಾ ಶುಕ್ರನ ಯುತಿಯಲ್ಲಿ ಲಗ್ನ ಅಥವಾ ಕೇಂದ್ರದಲ್ಲಿ ಇದ್ದರೆ, 2.ಸ್ವಕ್ಷೇತ್ರ, ಉಚ್ಚ, ಮಿತ್ರಕ್ಷೇತ್ರ ಅಥವಾ ಶುಭಕ್ಷೇತ್ರದಲ್ಲಿ ಇದ್ದರೆ, 3.ಶುಭಗ್ರಹರಿಂದ ನೋಡಲ್ಪಟ್ಟರೆ, ಜಾತಕನು ಉತ್ತಮ ಆರೋಗ್ಯವಂತನು, ಸಾತ್ವಿಕಗುಣದಿಂದ ಕೂಡಿದವನು, ಪುಣ್ಯವಂತನು, ಸಕಲಜನರಿಂದ ಮಾನಿಸಲ್ಪಟ್ಟವನು, ಸಕಲಸಂಪತ್ತಿನಿಂದ ಕೂಡಿದವನು, ಜ್ಞಾನವಂತನು, ಸೇನಾಧಿಪತಿಯು ಮಂತ್ರಿಯು, ಆಕರ್ಷಕ ಕಣ್ಣು ಉಳ್ಳವನು. ಸಮಾಜದಲ್ಲಿ ಶ್ರೇಷ್ಠವ್ಯಕ್ತಿಯು ಆಗುತ್ತಾನೆ.

ಬಲಹೀನರಾದ ಪಾಪಗ್ರಹರು ಲಗ್ನ, ಚತುರ್ಥ, ಪಂಚಮ, ಷಷ್ಠ, ಸಪ್ತಮ ಅಷ್ಟಮ, ನವಮ ಮತ್ತು ದ್ವಾದಶದಲ್ಲಿ ಇದ್ದರೆ, ಮತ್ತು ಬಲಹೀನ ಶುಭಗ್ರಹರು ದುಸ್ಥಾನಗಳಲ್ಲಿ ರೋಗಕಾರಕರು ಆಗುತ್ತಾರೆ. ಇಂಥಹ ಗ್ರಹರನ್ನು **ದುಸ್ಥ**ರು ಎಂದು ಕರೆಯುತ್ತಾರೆ. ತೃತೀಯದ ಶುಭಗ್ರಹರು ದೂಷಿತರಾದರೆ ರೋಗಕಾರಕರು ಆಗುತ್ತಾರೆ. ಇನ್ನಿತರ ಭಾವಗಳಲ್ಲಿರುವ ಗ್ರಹರು ಆರೋಗ್ಯವನ್ನು ಕಾಪಾಡುವುದರಿಂದ, ಅವರನ್ನು ಸುಸ್ಥರು ಎಂದು ಕರೆಯುತ್ತಾರೆ.

ದುಸ್ಥಗ್ರಹರು ತಮ್ಮ ದಶಾ-ಭುಕ್ತಿಕಾಲದಲ್ಲಿ, ಗೋಚರದ ಗ್ರಹಸ್ಥಿತಿಯು, ಅಶುಭಫಲವನ್ನು ಸೂಚಿಸುವಾಗ, ಅಥವಾ ಅಷ್ಟಕವರ್ಗದಲ್ಲಿ ಕಮ್ಮಿ ಬಿಂದು ಇರುವ ರಾಶಿಗಳಲ್ಲಿ ರೋಗಕಾರಕಗ್ರಹರು ಸಂಚರಿಸುವ ಕಾಲದಲ್ಲಿ ವ್ಯಾಧಿಯನ್ನು ನೀಡುತ್ತಾರೆ. ರೋಗವಿಚಾರವನ್ನು ದುಸ್ಥಾನಗಳಿಂದ ಚಿಂತಿಸಬೇಕು.

ರೋಗಾಸ್ತು ದ್ವಿವಿಧಾ ಜ್ಞೇಯಾ ನಿಜಾಗಂತು ವಿಭೇದತಃ ।
ನಿಜಾಶ್ಚಾಗಂತುಕಾಶ್ಚಾಪಿ ಪ್ರತ್ಯೇಕಂ ದ್ವಿವಿಧಾಃ ಪುನಃ ॥

ರೋಗಹೇತುಃ-ರೋಗಹೇತುವು ಎರಡು ವಿಧ ಆಗಿರುತ್ತದೆ. 1.ನಿಜಹೇತು, 2.ಆಗಂತುಕಹೇತು. ಇವುಗಳಲ್ಲಿ ಪುನಃ ಎರಡೆರಡು ಬೇಧಗಳಿವೆ.

ನಿಜಾ ಶರೀರಚಿತ್ತೋತ್ಥ ದೃಷ್ಟಾದೃಷ್ಟನಿಮಿತ್ತಜಾಃ ।
ತಥೈವಾಗಂತುಕಾಶ್ಚೈವಂ ವ್ಯಾಧಯಃ ಸ್ಯುಚತುರ್ವಿಧಾಃ ॥

ನಾಲ್ಕುವಿಧದರೋಗಹೇತುಃ- ನಿಜಹೇತುವಿನಲ್ಲಿ ಎರಡುವಿಧ, 1,ಶಾರೀರಿಕಹೇತು, ಮತ್ತು 2.ಮಾನಸಿಕಹೇತು. ಆಗಂತುಕಹೇತುವಿನಲ್ಲಿ ಎರಡುವಿಧ, 1.ದೃಷ್ಟನಿಮಿತ್ತಜ ಮತ್ತು 2.ಅದೃಷ್ಟ ನಿಮಿತ್ತಜ. ಒಟ್ಟುರೋಗಹೇತು ನಾಲ್ಕುವಿಧ ಆಗುತ್ತದೆ.

ವಾತಪಿತ್ತಕಫೋದ್ ಭೂತಾಃ ಪೃಥಕ್ಸಂಸರ್ಗಜಾಸ್ತಥಾ ।
ಸನ್ನಿಪಾತಭವಾಶ್ಚೈತೇ ಶಾರೀರಾಃ ಕೀರ್ತಿತಾ ಗದಾಃ ॥
ಅಷ್ಟಮೇನ ತದೀಶೇನ ತದ್‌ದೃಷ್ಟ್ಯಾ ತದ್ಗತೇನ ವಾ ।
ವಿಜ್ಞಾತವ್ಯಾಃ ಸ್ಯುರೇತೇಷಾಂ ವೀರ್ಯತಸ್ತತ್ಕೃತಾ ಗದಾಃ ॥

ಶಾರೀರಿಕಹೇತುಃ ರೋಗೋತ್ಪತ್ತಿಗೆ ಕಾರಣವಾದ ತ್ರಿದೋಷಗಳು, 1.ವಾತಪ್ರಕೋಪ, 2.ಪಿತ್ತಪ್ರಕೋಪ, 3.ಕಫಪ್ರಕೋಪ, 4.ತ್ರಿದೋಷಪ್ರಕೋಪ (ವಾತ, ಪಿತ್ತ, ಕಫ), ಸಂಸರ್ಗಜಹೇತು, 5.ವಾತ-ಪಿತ್ತದೋಷ, 6.ವಾತ-ಕಫದೋಷ, 7.ಪಿತ್ತ-ಕಫದೋಷ, ಆಗಿರುತ್ತವೆ. ಶಾರೀರಿಕ ದೋಷಗಳಿಂದ ಸಂಭವಿಸುವ ವ್ಯಾಧಿಗಳನ್ನು, ಅಷ್ಟಮಭಾವ, ಅಷ್ಟಮಾಧಿಪತಿ, ಅಷ್ಟಮವನ್ನು ನೋಡುವಗ್ರಹರಿಂದ ಮತ್ತು ಅಷ್ಟಮಸ್ಥಿತಗ್ರಹರಿಂದ ತಿಳಿಯಬೇಕು. ಅವರಲ್ಲಿ ಬಲಿಷ್ಠನಾದವನು ಸೂಚಿಸುವ ಧಾತು ಪ್ರಕೋಪದಿಂದ ವ್ಯಾಧಿಯು ಉತ್ಪನ್ನ ಆಗುತ್ತದೆ.

ಕ್ರೋಧಸಾಧ್ವಸಶೋಕಾದಿವೇಗಜಾತಾಸ್ತು ಮಾನಸಾಃ ।
ಜ್ಞೇಯಾ ರಂಧ್ರಮನೋನಾಥಮಿಥೋಯೋಗೇ ಕ್ಷಣಾದಿಭಿಃ ॥

ಮಾನಸಿಕಹೇತು:- ಕ್ರೋಧ, ಉದ್ವೇಗ, ಭಯ, ಶೋಕ ಮೊದಲಾದ ಹೇತು ವಿನಿಂದ ಉದ್ಭವಿಸಿದ ರೋಗಗಳು ಮಾನಸಿಕಹೇತು ವ್ಯಾಧಿಗಳಾಗಿರುತ್ತವೆ. ಪಂಚಮಾಧಿಪತಿಗೆ, ಅಷ್ಟಮಾಧಿಪತಿಯಯೋಗ, ದೃಷ್ಟಿ, ಕೇಂದ್ರಾದಿಸ್ಥಿತಿಯಿಂದ, ಮಾನಸಿಕ ವ್ಯಾಧಿಗಳು ಸಂಭವಿಸುತ್ತದೆ.

> **ಶಾಪಾಭಿಚಾರಘಾತಾದಿಜಾತಾ ದೃಷ್ಟನಿಮಿತ್ತಜಾ: ।**
> **ಜ್ಞೇಯಾ: ಷಷ್ಠತದೀಶಾಭ್ಯಾಂ ತದ್ದೃಷ್ಟ್ಯಾ ತದ್ಗತೇನ ವಾ ॥**
> **ರಂಧ್ರೇಶಷಷ್ಠಸಂಬಂಧೇ ಶಾಪಾದ್ಯಾ: ಪ್ರಬಲಾಶ್ಚ ತೇ ।**
> **ಅದೃಷ್ಟಹೇತುಜಾ ಜ್ಞೇಯಾ ಬಾಧಕಗ್ರಹ ಸಂಭವಾ: ॥ಇತಿ॥**

ದೃಷ್ಟ ಮತ್ತು ಅದೃಷ್ಟ ನಿಮಿತ್ತಜ ಹೇತು:- ಗುರು–ಹಿರಿಯರ ಅಥವಾ ದೇವ ಬ್ರಾಹ್ಮಣರ ಶಾಪ, ಶತ್ರುಗಳಿಂದ ಅಭಿಚಾರ (ಕೃತ್ರಿಮ) ಅಭಿಘಾತ (ಹೊಡೆತ), ಮೊದಲಾದ ಹೇತುವಿನಿಂದ ಉದ್ಭವಿಸುವ ವ್ಯಾಧಿಗಳನ್ನು ದೃಷ್ಟನಿಮಿತ್ತಜವ್ಯಾಧಿ ಎಂದು ಕರೆಯುತ್ತಾರೆ. ಷಷ್ಠಭಾವ, ಷಷ್ಠಾಧಿಪತಿ, ಷಷ್ಠವನ್ನು ನೋಡುವಗ್ರಹ, ಅಥವಾ ಷಷ್ಠಭಾವದಲ್ಲಿರುವ ಗ್ರಹರಿಂದ ಈ ವ್ಯಾಧಿಯು ಉತ್ಪನ್ನ ಆಗುತ್ತದೆ. ಅಷ್ಟಮಾಧಿಪತಿಯ, ಯೋಗ, ದೃಷ್ಟಿ ಇತ್ಯಾದಿ ಸಂಬಂಧ ಇದ್ದರೆ ಈ ಶಾಪಾದಿವ್ಯಾಧಿಗಳು ಪ್ರಬಲ ಆಗುತ್ತದೆ. ಕ್ಷುದ್ರಗ್ರಹಪೀಡೆಯಿಂದ ಸಂಭವಿಸುವ ವ್ಯಾಧಿಗಳನ್ನು ಅದೃಷ್ಟನಿಮಿತ್ತಜ (ಪ್ರಾರಬ್ಧಕರ್ಮಹೇತು) ವ್ಯಾಧಿ ಎಂದು ಕರೆಯುತ್ತಾರೆ.

ಆಯುರ್ಬಲ ಶೇಷ ಇದ್ದರೆ ನಿಜರೋಗಗಳನ್ನು ವೈದ್ಯಕೀಯ ಚಿಕಿತ್ಸೆಗಳಿಂದ ಗುಣಪಡಿಸಬಹುದು. ಆಗಂತುಕ, ದೃಷ್ಟನಿಮಿತ್ತಜ ರೋಗಗಳನ್ನು ಶಸ್ತ್ರಚಿಕಿತ್ಸೆಯಿಂದ ನಿವಾರಿಸಬಹುದು. ಶಾಪ, ಅಭಿಚಾರಾದಿಗಳಿಂದ ಜನಿತ ಮತ್ತು ಅದೃಷ್ಟನಿಮಿತ್ತಜ ವ್ಯಾಧಿಗಳನ್ನು ಜಪ, ದೇವತಾರ್ಚನೆ, ಬ್ರಾಹ್ಮಣಪೂಜೆ, ಗ್ರಹಶಾಂತಿ, ಹೋಮ ಇತ್ಯಾದಿ ಕರ್ಮಾಂಗ ವಿಧಾನಗಳಿಂದ ಹಾಗೂ ಶೂಲಬಲಿ ಇತ್ಯಾದಿಗಳಿಂದ ನಿಯಂತ್ರಿಸಲು ಪ್ರಯತ್ನಿಸಬೇಕು.

> **ನಿಜಜನ್ಮನಿ ಯಸ್ಮಿನ್ ಭೇ ಗುಳಿಕಸ್ತತ್ರಗೇ ವಿಧೌ ।**
> **ರೋಗಾರಂಭಸ್ತದಸ್ತಸ್ಥೇ ಮರಣಂ ಪೃಥಮಾದಿಶೇತ್ ॥**

ರೋಗಾರಂಭಕಾಲ:- ಗೋಚರದ ಚಂದ್ರನು ಮಾಂದಿಸ್ಥಿತ ರಾಶಿಯಲ್ಲಿ ಸಂಚರಿಸುವಾಗ ರೋಗದ ಉದ್ಭವ ಆಗುತ್ತದೆ. (ರೋಗಕಾರಕ ಗ್ರಹನ ದಶಾ-ಭುಕ್ತಿ ನಡೆಯುವಾಗ), ಅಲ್ಲಿಂದ ಸಪ್ತಮದಲ್ಲಿ ಚಂದ್ರನ ಸಂಚಾರಕಾಲವು (ಆಯುರ್ದಾಯದ ಅಂತ್ಯಕಾಲ ಆದರೆ), ಮರಣ ಸೂಚಕ ಆಗಿರುತ್ತದೆ.

॥ ಶ್ರೀ ಗಣೇಶಾಯ ನಮಃ ॥

ಮಂತ್ರೇಶ್ವರಕೃತ

ಫಲದೀಪಿಕಾ

ದ್ವಿತೀಯ ಭಾಗ

ರೋಗ, ಮರಣ, ಪೂರ್ವ-ಭವಿಷ್ಯಜನ್ಮಚಿಂತಾಧ್ಯಾಯ-೧೪

ರೋಗಸ್ಯ ಚಿಂತನಮಪಿ ರೋಗಭಾವಸ್ಥಿತೈರ್ಗ್ರಹೈರ್ವಾ ವ್ಯಯ-ಮೃತ್ಯುಸಂಸ್ಥೈಃ । ರೋಗೇಶ್ವರೇಣಾಪಿ ತದನ್ವಿತೈರ್ವಾ ದ್ವಿತ್ರ್ಯಾದಿ ಸಂವಾದ ವಶಾದ್ವದಂತು ॥೧॥

ರೋಗವಿಚಾರ:- 1.ರೋಗಸ್ಥಾನವಾದ ಷಷ್ಠಭಾವದಲ್ಲಿರುವ ಗ್ರಹರಿಂದ, 2.ವ್ಯಯ ಮತ್ತು ಅಷ್ಟಮ ಭಾವಸ್ಥಿತ ಗ್ರಹರಿಂದ, 3.ರೋಗೇಶ್ವರ ಅಂದರೆ ಷಷ್ಠ ಭಾವಾಧಿಪತಿಯಿಂದ, ಮತ್ತು 4.ಷಷ್ಠಾಧಿಪತಿಯ ಯುತಿಯಲ್ಲಿರುವ ಗ್ರಹರಿಂದ ರೋಗವಿಚಾರ ಚಿಂತಿಸಬೇಕು. ಇವುಗಳಲ್ಲಿ ಎರಡು, ಮೂರು ಅಥವಾ ಹೆಚ್ಚುಗ್ರಹ ಸಂಬಂಧ(ದಶಾಕಾಲ, ಚಾರ ಇತ್ಯಾದಿ) ಇದ್ದರೆ ಆ ಕಾಲದಲ್ಲಿ ಆಯಾಗ್ರಹರು ಸೂಚಿತ ರೋಗ ಸಂಭವಿಸುತ್ತದೆ.

ದೇಹಾಧೀಶಃ ಸಪಾಪೋ ವ್ಯಯರಿಪುಮೃತಿಗಶ್ಚೇತ್ತದಾ ದೇಹಸೌಖ್ಯಂ ನ ಸ್ಯಾಜ್ಜಂತೋರ್ನಿಜರ್ಕ್ಷೇ ವ್ಯಯರಿಪುಮೃತಿಪಸ್ತತ್ಫಲಸ್ಯೈವಕರ್ತಾ । ಮೂರ್ತೌ ಚೇತ್ ಕ್ರೂರ ಖೇಟಸ್ತದನುತನುಪತಿಃ ಸ್ವೀಯವೀರ್ಯೇಣ ಹೀನೋ ನಾ ನಾತಂಕಾಕುಲಃ ಸ್ಯಾದ್ವ್ರಜತಿ ಹಿ ಮನುಜಾ ವ್ಯಾಧಿಮಾಧಿಪ್ರಕೋಪಮ್ ॥

1.ಲಗ್ನಾಧಿಪತಿಯು ವ್ಯಯ, ಷಷ್ಠ ಅಥವಾ ಅಷ್ಟಮದಲ್ಲಿ ಪಾಪಗ್ರಹನ ಯುತಿಯಲ್ಲಿ ಇದ್ದರೆ ದೇಹಸೌಖ್ಯ (ಆರೋಗ್ಯ) ಉತ್ತಮ ಇರುವುದಿಲ್ಲ. 2.ವ್ಯಯಾಧಿಪತಿ, ಷಷ್ಠಾಧಿಪತಿ ಮತ್ತು ಅಷ್ಟಮಾಧಿಪತಿಯು ಸ್ವಕ್ಷೇತ್ರದಲ್ಲಿ ಇದ್ದರೂ ಇದೇಫಲ ನೀಡುತ್ತಾರೆ. 3.ಪಾಪಗ್ರಹನು ಲಗ್ನದಲ್ಲಿದ್ದು ಲಗ್ನಾಧಿಪತಿಯು ಬಲಹೀನನಾಗಿ ಇದ್ದರೆ ಜಾತಕನು ಶಾರೀರಿಕ ಹಾಗೂ ಮಾನಸಿಕ ವ್ಯಾಧಿಯಿಂದ ಪೀಡಿಸಲ್ಪಡುತ್ತಾನೆ.

"ಪ್ರಾಲೇಯಾಂಶೌ ರಿಪುಸ್ಥೇ ಖಲಖಗಸಹಿತೇ ಮಾನವೋ ರೋಗವಾನ್ ಸ್ಯಾತ್" ಚಂದ್ರನು ಪಾಪಗ್ರಹನಯುತಿಯಲ್ಲಿ ಷಷ್ಠದಲ್ಲಿ ಇದ್ದರೆ ಅನಾರೋಗ್ಯದಿಂದ ಬಳಲುತ್ತಾನೆ.

"ಕ್ರೂರೈರ್ನಿಷ್ಪೀಡಿತಶ್ಚೇತ್ತನುಸದನಗತಃ ಶೀತರಶ್ಮಿಸ್ತದಾನೀಮ್" ಲಗ್ನಸ್ಥಿತ ಚಂದ್ರನು ಪಾಪಗ್ರಹನಯುತಿ ಅಥವಾ ದೃಷ್ಟಿಯಲ್ಲಿ ಇದ್ದರೆ ಅನಾರೋಗ್ಯದಿಂದ ಪೀಡಿತನು ಆಗುತ್ತಾನೆ.

ಪಿತ್ತೋಷ್ಣಜ್ವರತಾಪದೇಹಪತನಾಪಸ್ಮಾರ ಹೃತ್ಕ್ರೋಡಜವ್ಯಾಧೀನ್ವಕ್ತಿ ರವಿರ್ದೃಗಾರ್ತ್ಯರಿಭಯಂ ತ್ವಗ್ದೋಷಮಸ್ಥಿಸ್ರುತಿಮ್ । ಕಾಷ್ಠಾಗ್ನ್ಯ-

ಸ್ತ್ರೀಷಾರ್ತಿದಾಹ ತನಯುವ್ಯಾಪಚ್ಚತುಷ್ಪಾದ್ಭಯಮ್ ಚೋರಕ್ಷ್ಮಾ ಪತಿಧರ್ಮದೇವಫಣಭೃದ್ಭೂತೇಶಭೂತಾದ್ ಭಯಮ್ ॥೨॥

ರವಿಯಿಂದ ಸೂಚಿತ ರೋಗಗಳು:- 1.ಪಿತ್ತೋಷ್ಣಜ್ವರ, 2.ಶಾರೀರಿಕತಾಪ, 3.ಅಪಸ್ಮಾರ, 4.ಹೃದಯರೋಗ, 5.ಉದರವ್ಯಾಧಿ, 6.ಕಣ್ಣಿನವ್ಯಾಧಿ, 7,ಶತ್ರು ಭಯ, 8.ಚರ್ಮವ್ಯಾಧಿ, 9.ಅಸ್ಥಿಸ್ರುತಿ (ಅಸ್ಥಿಭಂಗ, ಅಸ್ಥಿಸ್ರಾವ ಇತ್ಯಾದಿ ಎಲುಬಿನ ವ್ಯಾಧಿಗಳು) 10.ಮರದ ಕೊರಡಿನಿಂದ ಹೊಡೆತ, 11.ಬೆಂಕಿಯಿಂದ ಹಾನಿ, 12.ಶಸ್ತ್ರದಿಂದ ಘಾಯ, 13.ವಿಷದಿಂದ ಪೀಡೆ, 14.ಹೆಂಡತಿ ಮಕ್ಕಳಿಗೆ ಆಪತ್ತು, 15.ಚತುಷ್ಪಾದ ಪ್ರಾಣಿಗಳಿಂದ ಭಯ, 16,ಕಳ್ಳರಿಂದ ಮತ್ತು ರಾಜರಿಂದ ಭಯ, 17.ಧರ್ಮದೇವತೆ, ನಾಗ ಮತ್ತು ಈಶ್ವರಭಯ, ಇವುಗಳನ್ನು ರವಿಯು ರೋಗಕಾರಕನು ಆದಾಗ ನೀಡುತ್ತಾನೆ.

"ಅತ್ಯಗ್ನಿಂ ವೇದನಾಮಂತರ್ಜ್ವರಂ ಚಾರ್ಕೋ" ರವಿಯು ಅತೀ ಹೆಚ್ಚಾದ ಅಥವಾ ತೀವ್ರವಾದ ಉಷ್ಣಪೀಡೆಯಿಂದ ವೇದನೆಯನ್ನು, ಅಂತರ್ಜ್ವರ, ದೇಹದ ಒಳಗೆ ಜ್ವರದಿಂದ ಪೀಡೆಯನ್ನು ನೀಡುತ್ತಾನೆ.

ನಿದ್ರಾಲಸ್ಯ ಕಫಾತಿಸಾರಪಿಟಕಾಃ ಶೀತಜ್ವರಂ ಚಂದ್ರಮಾಃ ಶೃಂಗ್ಯಬ್ಜಾಹತಿಮಗ್ನಿಮಾಂದ್ಯಮರುಚಿಂಯೋಷಿದ್ವ್ಯಥಾಕಾಮಿಲಾಃ । ಚೇತಃ ಶ್ರಾಂತಿಮಸೃಗ್ವಿಕಾರಮುದಕಾದ್ಭೀತಿಂ ಚ ಬಾಲಗ್ರಹಾದ್ ದುರ್ಗಾಕಿನ್ನರ ಧರ್ಮದೈವಫಣಭೃದ್ಯಕ್ಷ್ಮೀಚ್ಚ ಭೀತಿಂ ವದೇತ್ ॥೩॥

ಚಂದ್ರನಿಂದ ಸೂಚಿತ ರೋಗಗಳು:-1.ಅತಿನಿದ್ರೆ ಮತ್ತು ಆಲಸ್ಯ, 2.ಕಫರೋಗ, 3.ಅತಿಸಾರ, 4.ಪಿಟಕ (ಬೊಕ್ಕೆ, ಭಗಂದರ), 5.ಶೀತಜ್ವರ, 6.ಕೊಂಬುಗಳು ಉಳ್ಳ ಮತ್ತು ಜಲಜನ್ಯ ಪ್ರಾಣಿ ಅಥವಾ ಜೀವಿಗಳಿಂದ ಹಾನಿ, 7.ಅಗ್ನಿಮಾಂದ್ಯ, 8.ಅರುಚಿ, 9.ಸ್ತ್ರೀಯರಿಂದ ವ್ಯಥೆ, 10.ಕಾಮಲೆರೋಗ, 11.ಮಾನಸಿಕ ಅಶಾಂತಿ, 12.ರಕ್ತ ವಿಕಾರ, 13.ಜಲಭಯ, 14.ಬಾಲಗ್ರಹಪೀಡೆ, 15.ದುರ್ಗಾದೇವಿಯ ಕೋಪ, 16.ಕಿನ್ನರ, ಧರ್ಮದೇವತೆ, ನಾಗ ಮತ್ತು ಯಕ್ಷಿಣಿ ಮೊದಲಾದವರ ಪೀಡೆ, ಇವುಗಳನ್ನು ಚಂದ್ರನು ರೋಗಕಾರಕನಾದಾಗ ನೀಡುತ್ತಾನೆ.

"ಚಂದ್ರಮಾಃ ಛರ್ದಿಮೂರ್ಧ್ವಾನನೇ ತಿರ್ಯಗ್ವಕ್ತ್ರೇ ಮೂತ್ರಾದಿಬಂಧನಮ್ । ಅತಿಸಾರಂ ತೃಷಂ ಚಾಧೋವಕ್ತ್ರೇ ಶೋಫಂ ತು ಸರ್ವಗಃ ।" ಚಂದ್ರನು ಊರ್ಧ್ವ ಮುಖರಾಶಿ (ರವಿಯು ನಿರ್ಗಮಿಸಿದರಾಶಿ ಮತ್ತು ಅದರ ಕೇಂದ್ರರಾಶಿಗಳು, ಅಂದರೆ ರವಿಸ್ಥಿತರಾಶಿಯಿಂದ ದ್ವಾದಶ, ತೃತೀಯ, ಷಷ್ಠ ಮತ್ತು ನವಮ ರಾಶಿ)ಯಲ್ಲಿ ಇದ್ದರೆ ವಾಂತಿ ಸಂಭವಿಸುತ್ತದೆ. ಚಂದ್ರನು ತಿರ್ಯಂಙ ಮುಖರಾಶಿ (ರವಿಯು ಮುಂದಕ್ಕೆ ಹೋಗುವರಾಶಿ ಮತ್ತು ಅದರ ಕೇಂದ್ರರಾಶಿಗಳು ಅಂದರೆ ರವಿಸ್ಥಿತರಾಶಿಯಿಂದ ದ್ವಿತೀಯ, ಪಂಚಮ, ಅಷ್ಟಮ, ಮತ್ತು ಹನ್ನೊಂದನೇ ರಾಶಿ)ಯಲ್ಲಿ ಇದ್ದರೆ ಮೂತ್ರ

ಕೃಛ್ರ, ಇತ್ಯಾದಿ ಮೂತ್ರಕ್ಕೆ ಸಂಬಂಧಪಟ್ಟ ಕಾಯಿಲೆಗಳನ್ನು ನೀಡುತ್ತಾನೆ. ಚಂದ್ರನು ಅಧೋಮುಖರಾಶಿಯಲ್ಲಿ ಇದ್ದರೆ(ರವಿಸ್ಥಿತರಾಶಿ ಮತ್ತು ಅದರ ಕೇಂದ್ರರಾಶಿಗಳು ಅಂದರೆ ರವಿಸ್ಥಿತರಾಶಿ, ಮತ್ತು ಆ ರಾಶಿಯಿಂದ ಚತುರ್ಥ, ಸಪ್ತಮ ಮತ್ತು ದಶಮರಾಶಿ), ಅತಿಸಾರ ಮತ್ತು ಬಾಯಾರಿಕೆಯನ್ನು ನೀಡುತ್ತಾನೆ. ಚಂದ್ರನು ಸಕಲರಾಶಿಗಳಲ್ಲಿಯೂ ಶೋಫರೋಗ(ಬಾವು, ಊತ) ನೀಡುತ್ತಾನೆ.

ತೃಷ್ಣಾಸೃಕ್ಕೋಪಪಿತ್ತಜ್ವರ ಮನಲವಿಷಾಸ್ತ್ರಾರ್ತಿಕುಷ್ಠಾಕ್ಷಿರೋಗಾನ್
ಗುಲ್ಮಾಪಸ್ಮಾರಮಜ್ಜಾ ವಿಹತಿಪರುಷತಾಪಾಮಿಕಾದೇಹಭಂಗಾನ್ ।
ಭೂಪಾರಿಸ್ತೇನ ಪೀಡಾಂ ಸಹಜಸುತಸುಹೃದ್ವೈರಿ ಯುದ್ಧಂ ವಿಧತ್ತೇ-
ರಕ್ತೋಃ ಗಂಧರ್ವಘೋರಗ್ರಹಭಯಮವನೀಸೂನುರೂರ್ಧ್ವಾಂಗ
ರೋಗವಮ್ ॥೪॥

ಕುಜನಿಂದಸೂಚಿತರೋಗಗಳು:- 1.ಬಾಯಾರಿಕೆ, 2.ರಕ್ತವಿಕಾರ, 3.ಪಿತ್ತಜ್ವರ, 4.ಬೆಂಕಿ, 5,ವಿಷ ಮತ್ತು 6,ಆಯುಧದಿಂದ ಉದ್ಭವಿಸಿದರೋಗ, 7.ಕುಷ್ಠರೋಗ, 8.ಕಣ್ಣಿನ ವ್ಯಾಧಿಗಳು, 9.ಗುಲ್ಮರೋಗ, 10.ಅಪಸ್ಮಾರ, 11.ಮಜ್ಜಾಧಾತುವಿನ (ಅಸ್ಥಿಸಾರ) ವ್ಯಾಧಿ, 12.ನಿಷ್ಠುರತ್ವ, 13, ಬಾವು, ಜೊಕ್ಕೆ, 14.ಶಾರೀರಿಕ ನ್ಯೂನತೆ ಅಥವಾ ಭಂಗ, 15.ರಾಜರಿಂದ, ಶತ್ರುಗಳಿಂದ ಮತ್ತು ಕಳ್ಳರಿಂದ ಹಾನಿ, 16,ಸಹೋದರ, ಪುತ್ರ ಮತ್ತು ಮಿತ್ರರೊಂದಿಗೆ ಕಲಹ, 17.ಶತ್ರುಗಳೊಂದಿಗೆ ಯುದ್ಧ, 18.ದುಷ್ಟಶಕ್ತಿ, ಗಂಧರ್ವ ಮತ್ತು ಘೋರರಾಕ್ಷಸಭಯ, 19.ಊರ್ಧ್ವಾಂಗರೋಗ, ಇವುಗಳನ್ನು ಕುಜನು ರೋಗಕಾರಕನು ಆದಾಗ ನೀಡುತ್ತಾನೆ.

"ಉಷ್ಣಪ್ರಸರಣಂ ದಾಹಂ ರಕ್ತಕ್ಷೋಭಭವ ವ್ರಣಮ್। ಭೂಮಿ ಜೋಥ" ಕುಜನು ಉಷ್ಣವಿಕಾರಗಳನ್ನು, ದಾಹ, ರಕ್ತದೋಷ, ವ್ರಣಾದಿ ಪೀಡೆಗಳನ್ನು ನೀಡುತ್ತಾನೆ.

ಭ್ರಾಂತಿಂ ದುರ್ವಚನಂ ದೃಗಾಮಯಗಳ ಘ್ರಾಣೋತ್ಥರೋಗಂ ಜ್ವರಂ
ಪಿತ್ತಶ್ಲೇಷ್ಮಸಮೀರಜಂ ವಿಷಮಪಿ ತ್ವಗ್ದೋಷಪಾಂಡ್ವಾಮಯಾನ್ ।
ದುಃಸ್ವಪ್ನಂ ಚ ವಿಚರ್ಚಿಕಾಗ್ನಿಪತನೇ ಪಾರುಷ್ಯ ಬಂಧಶ್ರಮಾನ್
ಗಂಧರ್ವಕ್ಷಿತಿಹರ್ಮ್ಯವಾಸಿಭಿರಪಿ ಜ್ಞೋ ವಕ್ತಿ ಪೀಡಾಂ ಖಗೈಃ ॥೫॥

ಬುಧನಿಂದ ಸೂಚಿತ ರೋಗಗಳು:-1.ಚಿತ್ತಭ್ರಮೆ. 2.ವಾಗ್ದೋಷ, 3,ಕಣ್ಣಿನ ವ್ಯಾಧಿ. 4.ಕುತ್ತಿಗೆ ಅಥವಾ ಗಂಟಲಿನ ವ್ಯಾಧಿಗಳು, 5.ಮೂಗಿನವ್ಯಾಧಿಗಳು, 6.ಜ್ವರ 7.ಪಿತ್ತ, ಕಫ ಮತ್ತು ವಾತಜನಿತ (ತ್ರಿದೋಷಜ) ವ್ಯಾಧಿಗಳು. 8.ವಿಷದಿಂದ, 9.ಚರ್ಮವ್ಯಾಧಿ. 10.ಪಾಂಡುರೋಗ, 11.ದುಃಸ್ವಪ್ನ. 12.ತುರಿಸುವಿಕೆ, 13.ಬೆಂಕಿಯಿಂದ, 14.ಬಂಧನ ಮತ್ತು ಗಲಭೆಯಿಂದ, 15.ಗಂಧರ್ವಾದಿ ಪೀಡೆ, ಇವುಗಳನ್ನು ಬುಧನು ರೋಗಕಾರಕನು ಆದಾಗ ನೀಡುತ್ತಾನೆ.

"ಬುಧಃ ಕುರ್ಯಾಚ್ಛೀತಜ್ವರಮತಿಭ್ರಮೌ। ಸನ್ನಿಪಾತರುಜಂ" ಬುಧನು ಶೀತಜ್ವರ, ಮತಿಭ್ರಂಶ ಅಥವಾ ಚಿತ್ತಭ್ರಮೆ ಮತ್ತು ಸನ್ನಿಪಾತಜ್ವರ ನೀಡುತ್ತಾನೆ.

ಗುಲ್ಮಾಂತ್ರಜ್ವರ ಶೋಕ ಮೋಹಕಫಜಾನ್ ಶ್ರೋತ್ರಾರ್ತಿಮೋಹಾ-
ಮಯಾನ್ ದೇವಸ್ಥಾನ ನಿಧಿ ಪ್ರಪೀಡನ ಮಹೀದೇವೇಶಶಾಪೋ-
ದ್ಭವಮ್ । ರೋಗಂ ಕಿನ್ನರಯಕ್ಷದೇವಫಣಭೃದ್ವಿದ್ಯಾಧರಾದ್ಯು-
ದ್ಭವಮ್ ಜೀವಃ ಸೂಚಯತಿ ಸ್ವಯಂ ಬುಧಗುರೂತ್ಕೃಷ್ಟಾಪಚಾ-
ರೋದ್ಭವಮ್ ॥೬॥

ಗುರುವಿನಿಂದ ಸೂಚಿತ ರೋಗಗಳು:- 1.ಗುಲ್ಮರೋಗ, 2.ಅಂತ್ರವೃದ್ಧಿ ಮತ್ತು ಅದರ ಹೇತುವಿನಿಂದ ಜ್ವರ, 3.ಶೋಕದಿಂದ ಉದ್ಭವಿಸುವ ವ್ಯಾಧಿ, 4.ಮೋಹ, 5.ಕಫವ್ಯಾಧಿಗಳು, 6.ಕಿವಿರೋಗಗಳು, 7.ಮೂರ್ಛಾರೋಗ, 8.ದೇವಸ್ಥಾನದ ಸಂಪತ್ತಿನ ದುರುಪಯೋಗದಿಂದ ಉದ್ಭವಿಸಿದವ್ಯಾಧಿ, 9.ನಿಧಿ ಹೇತುವಿನಿಂದ ವ್ಯಾಧಿ, 10.ದೇವ-ಬ್ರಾಹ್ಮಣರ ಶಾಪಜನಿತ ವ್ಯಾಧಿ, 11.ಕಿನ್ನರ, ಯಕ್ಷ, ದೇವತೆ, ನಾಗ, ವಿದ್ಯಾಧರ ಆದಿ ಶಕ್ತಿಗಳಿಂದ ಉದ್ಭವಿಸಿದ ಪೀಡೆ, 12.ಬುದ್ಧಿವಂತರಿಗೆ ಗುರುಹಿರಿಯರಿಗೆ ಅಪಚಾರ, ಕಷ್ಟ ನೀಡಿದ್ದರಿಂದ ಸಂಭವಿಸುವ ವ್ಯಾಧಿಗಳು, ಇವುಗಳನ್ನು ಗುರುವು ರೋಗಕಾರಕನಾದಾಗ ನೀಡುತ್ತಾನೆ.

"ಗುರುರ್ಬುದ್ಧೇರನುರ್ಜವಮ್" ಗುರುವು ಬುದ್ಧಿಮಂದತೆಯನ್ನು ನೀಡುತ್ತಾನೆ.

ಪಾಂಡುಶ್ಲೇಷ್ಮಮರುತ್ಪ್ರಕೋಪನಯನವ್ಯಾಪತ್ಪ್ರಮೇಹಾಮಯಾನ್
ಗುಹ್ಯಸ್ಯಾಮಯ ಮೂತ್ರಕೃಚ್ಛ್ರಮದನವ್ಯಾಪತ್ತಿಶುಕ್ಲಸ್ರುತಿಮ್ ।
ವಾರಸ್ತ್ರೀಕೃತದೇಹಕಾಂತಿವಿಹತಿಂ ಶೋಷಾಮಯಂಯೋಗಿನೀಯಕ್ಷೀ
ಮಾತೃಗಣಾದ್ಭವಂ ಪ್ರಿಯಾಸುಹೃದ್ಭಂಗಂ ಸಿತಃ ಸೂಚಯೇತ್ ॥೭॥

ಶುಕ್ರನಿಂದ ಸೂಚಿತ ರೋಗಗಳು:- 1.ಪಾಂಡುರೋಗ, 2.ಕಫ-ವಾತಜನಿತರೋಗಗಳು, 3.ಕಣ್ಣಿನವ್ಯಾಧಿ, 4.ಮೂತ್ರಾಶಯರೋಗ, 5.ಪ್ರಮೇಹ (ಬಹುಮೂತ್ರಾದಿ) ರೋಗ, 6.ಗುಪ್ತರೋಗಗಳು, 7.ಮೂತ್ರಕೃಛ್ರರೋಗ, 8.ಸಂಭೋಗದಲ್ಲಿ ತಡೆ ಅಥವಾ ತೊಂದರೆ, 9.ವೀರ್ಯಸ್ರಾವ, 10,ವೇಶ್ಯೆಯರ ಸಹವಾಸದಿಂದ ಶರೀರದಲ್ಲಿ ಕಾಂತಿಹೀನತೆ, 11.ಶೋಷರೋಗ,(ಕ್ಷಯ) 12.ಯೋಗಿನಿ, ಯಕ್ಷಿಣೀ, ಸ್ತ್ರೀದೇವತಾ ಗಣಗಳಿಂದ ಭಯ, 13.ಪ್ರೀತಿ ಅಥವಾ ಮಿತ್ರತ್ವಭಂಗ, ಇವುಗಳನ್ನು ಶುಕ್ರನು ರೋಗಕಾರಕನಾದಾಗ ನೀಡುತ್ತಾನೆ.

"ಅಜೀರ್ತಿಂ ಶ್ವಯಥುಂ ಚಾಥ ದಾಹಂ ಮೋಹಂ ಚ ಭಾರ್ಗವ ।" ಶುಕ್ರನು ಅಜೀರ್ಣ, ತಲೆತಿರುಗುವಿಕೆ, ದಾಹ(ಅಧಿಕ ಉಷ್ಣದಿಂದ ದೇಹದಲ್ಲಿ ಉರಿ), ವ್ಯಾಮೋಹ, ಇತ್ಯಾದಿ ಶುಕ್ರನು ನೀಡುತ್ತಾನೆ.

ವಾತಶ್ಲೇಷ್ಮವಿಕಾರಪಾದವಿಹತಿಂ ಚಾಪತ್ತಿತಂದ್ರಾಶ್ರಮಾನ್ ಭ್ರಾಂತಿ
ಕುಕ್ಷಿರುಗಂತರುಷ್ಣಭೃತಕಧ್ವಂಸಂ ಚ ಪಾರ್ಶ್ವಾರ್ಹತಿಮ್ । ಭಾರ್ಯಾ-
ಪುತ್ರವಿಪತ್ತಿಮಂಗವಿಹತಿಂ ಹೃತ್ತಾಪ ಮರ್ಕಾತ್ಮಜೋ ವೃಕ್ಷಾಶ್ಮಕ್ಷತಿ-
ಮಾಹ ಕಶ್ಮಲಗಣೈಃ ಪೀಡಾಂ ಪಿಶಾಚಾದಿಭಿಃ ॥೮॥

ಶನಿಯಿಂದ ಸೂಚಿತ ರೋಗಗಳು:- 1. ವಾತರೋಗ, ಕಫವಿಕಾರ. 2 .ಕಾಲಿಗೆ ವಾತವ್ಯಾಧಿ, 3.ವಿಪತ್ತು, 4.ಅತಿನಿದ್ರೆ. 5.ಅತ್ಯಂತಶ್ರಮದಿಂದ ಆಯಾಸ, 6.ಚಿತ್ತ ಭ್ರಮೆ, 7.ಉದರವ್ಯಾಧಿ, 8.ದೇಹದ ಒಳಗೆ ಉಷ್ಣ, 9.ಸೇವಕರನಾಶ, 10.ಪಾರ್ಶ್ವ ಪೀಡೆ, 11.ಹೆಂಡತಿ-ಮಕ್ಕಳಿಗೆ ವಿಪತ್ತು, 12.ಅಂಗ ಅಥವಾ ಪಾದಚ್ಛೇದನ, 13.ಹೃದಯದಲ್ಲಿ ಪರಿತಾಪ, 14.ಕಲ್ಲು-ಕಾಷ್ಠಗಳ ಹೊಡೆತ, 15.ಪಿಶಾಚ ಇತ್ಯಾದಿ ದುಷ್ಟಶಕ್ತಿಗಳ ಪೀಡೆ, ಇವುಗಳನ್ನು ಶನಿಯು ರೋಗಕಾರಕನಾದಾಗ ನೀಡುತ್ತಾನೆ.

"ತೃಷ್ಣಾ ರುಚಿಸಮಸ್ತಾಙ್ಗತೋ ದಾಂಸ್ತರಣೇನಂದನ: ।" ಶನಿಯು ಬಾಯಾರಿಕೆ, ಅರುಚಿ, ದೇಹದ ಸಕಲ ಅಂಗಗಳಲ್ಲಿ ವೇದನೆ, ವಾತಪೀಡೆ ಅಥವಾ ವಾಯು ಪ್ರಕೋಪ ನೀಡುತ್ತಾನೆ.

ಸ್ವರ್ಭಾನುರ್ಹೃದಿ ತಾಪಕುಷ್ಠವಿಷಮವ್ಯಾಧೀನ್ ವಿಷಂಕೃತ್ರಿಮಮ್ ಪಾದಾರ್ತಿಂ ಚ ಪಿಶಾಚಪನ್ನಗಭಯಂ ಭಾರ್ಯಾತನೂಜಾಪದಮ್ । ಬ್ರಹ್ಮಕ್ಷತ್ರವಿರೋಧಶತ್ರುಜಭಯಂ ಕೇತುಸ್ತು ಸಂಸೂಚಯೇತ್ ಪ್ರೇತೋತ್ಥಂ ಚ ಭಯಂ ವಿಷಂ ಚ ಗುಲಿಕೋ ದೇಹಾರ್ತಿಮಾಶೌಚಜಮ್ ॥೯॥

ರಾಹುವಿನಿಂದ ಸೂಚಿತ ರೋಗಗಳು: 1.ಹೃದಯರೋಗ, 2.ಕುಷ್ಠರೋಗ, 3.ವಿಷಮಜ್ವರ, 4.ವಿಷಹೇತು, 5.ಕಾಲುನೋವು, 6.ಪಿಶಾಚ ಮತ್ತು ಸರ್ಪಭಯ, 7.ಹೆಂಡತಿ ಮತ್ತು ಮಕ್ಕಳಿಗೆ ಅನಾರೋಗ್ಯ ಇವುಗಳನ್ನು ರಾಹುವು ರೋಗಕಾರಕನಾದಾಗ ನೀಡುತ್ತಾನೆ.

"ವಾಯು ಕ್ಷೋಭಮಹಿ" ರಾಹುವು ವಾತಪ್ರಕೋಪ, ಕ್ಷೋಭೆ, ಇತ್ಯಾದಿ ನೀಡುತ್ತಾನೆ.

ಕೇತುವಿನಿಂದ ಸೂಚಿತ ರೋಗಗಳು:-1.ಬ್ರಾಹ್ಮಣರ ಮತ್ತು ಕ್ಷತ್ರಿಯರ ವಿರೋಧದಿಂದ ತೊಂದರೆಗಳು, 2.ಶತ್ರುಭಯ, ಇವುಗಳನ್ನು ಕೇತುವು ಸೂಚಿಸುತ್ತಾನೆ.

ಗುಳಿಕನಿಂದ ಸೂಚಿತ ರೋಗಗಳು: 1.ಪ್ರೇತಬಾಧೆ, ಮತ್ತು ಭಯ 2.ವಿಷಹೇತು, 3,ಶಾರೀರಿಕ ಪೀಡೆ, 4.ಮರಣದಿಂದ ಉಂಟಾದ ಅಶೌಚ, ಇವುಗಳನ್ನು ಗುಳಿಕನು ಸೂಚಿಸುತ್ತಾನೆ.

"ಮಾಂದಿರ್ಹಿಕ್ಕಾಮಪಿ ಸಿರೋದ್ಗಮಮ್" ಮಾಂದಿಯು ಬಿಕ್ಕಳಿಕೆ ಮತ್ತು ನರಗಳಲ್ಲಿ ರೋಗದ ಉತ್ಪತ್ತಿಯನ್ನು ನೀಡುತ್ತಾನೆ.

ರಾಶಿಯಿಂದ ಸೂಚಿತ ವ್ಯಾಧಿಗಳು:-"ಸಿಂಹೇ ಕುಕ್ಷ್ಯಕ್ಷಿಜೋ ವ್ಯಾಧಿರಾತ್ಮಪೀಡೋಷ್ಣರುಕ್ತಥಾ ।" ಸಿಂಹರಾಶಿಯು ಉದರ ವ್ಯಾಧಿ, ಕಣ್ಣಿನರೋಗ, ಆತ್ಮಪೀಡೆ ಮತ್ತು ಉಷ್ಣಜನಿತ ವ್ಯಾಧಿಯನ್ನು ನೀಡುತ್ತದೆ.

"ವಕ್ಷೋಜಿಹ್ವಾಸ್ಯರೋಗೋರುಚ್ಯಂಬುರೋಗಾಸ್ತು ಕರ್ಕಟೇ "ಕರ್ಕಟಕರಾಶಿಯು ವಕ್ಷಸ್ಥಳ(ಎದೆ), ನಾಲಗೆ, ಮುಖ, ಇವುಗಳ ರೋಗಗಳನ್ನು, ಅರುಚಿ ಮತ್ತು ಜಲಜನ್ಯ ವ್ಯಾಧಿಗಳನ್ನು ನೀಡುತ್ತದೆ.

"ಶಿರೋನೇತ್ರಭವ್ಯಾಧಿಜ್ವರವ್ರಣ ವಿಚರ್ಚಿಕಾಃ । ಭೌಮಭೇ" ಕುಜಕ್ಷೇತ್ರಗಳಾದ ಮೇಷ ಮತ್ತು ವೃಶ್ಚಿಕರಾಶಿಯು ಶಿರಸ್ಸಿನ ಮತ್ತು ಕಣ್ಣಿನವ್ಯಾಧಿ, ಜ್ವರ, ವ್ರಣ ಮತ್ತು ವಿಚರ್ಚಿಕಾ ರೋಗಗಳನ್ನು ನೀಡುತ್ತದೆ. ಇಲ್ಲಿ ಮೇಷವು ಕಾಲಪುರುಷನ ಶಿರಸ್ಸನ್ನು ಸೂಚಿಸುವುದರಿಂದ, ಶಿರೋವ್ಯಾಧಿಗಳನ್ನು ಮೇಷರಾಶಿಯು, ದೇಹದ ಒಳಗಿನವ್ಯಾಧಿ ಮೂಲವ್ಯಾಧಿ ಮತ್ತು ಭಗಂದರ ಇತ್ಯಾದಿ ವೃಶ್ಚಿಕರಾಶಿಯು ಸೂಚಿಸುತ್ತದೆ.

"ಬುಧಭೇ ವಾಯುರೋಧನಾಸಾತ್ವಗಾಮಯಾಃ ॥" ಬುಧಕ್ಷೇತ್ರಗಳಾದ ಮಿಥುನ ಮತ್ತು ಕನ್ಯಾರಾಶಿಯು, ಶ್ವಾಸೋಚ್ಛ್ವಾಸದಲ್ಲಿ ತಡೆ, ಮೂಗಿನವ್ಯಾಧಿ, ಮತ್ತು ಚರ್ಮರೋಗಗಳನ್ನು ನೀಡುತ್ತದೆ.

"ಜೀವಭೇ ಬುದ್ಧಿಭ್ರಮಕರ್ಣಾಮಯಾದಯಃ ।" ಗುರುಕ್ಷೇತ್ರಗಳಾದ ಧನು ಮತ್ತು ಮೀನರಾಶಿಯು ಬುದ್ಧಿಮಂದತೆ ಅಥವಾ ಚಿತ್ತಭ್ರಮೆ, ಮತ್ತು ಕಿವಿರೋಗಗಳನ್ನು ನೀಡುತ್ತದೆ

"ಶುಕ್ರಭೇ ವ್ಯಂಜನೋತ್ಥಾ ರುಗರುಚಿಶ್ಚಾಂಬುಜೋ ಗದಃ ॥" ಶುಕ್ರಕ್ಷೇತ್ರಗಳಾದ ತುಲೆ ಮತ್ತು ವೃಷಭವು ಜನನೇಂದ್ರಿಯವ್ಯಾಧಿ, ಅರುಚಿ ಮತ್ತು ಜಲಜನ್ಯವ್ಯಾಧಿಗಳನ್ನು ನೀಡುತ್ತದೆ.

"ಬುದ್ಧಿಭ್ರಮೋಙ್ಗಸಾದಶ್ಚ ಮಲಯಾ ನ ಹತಿಃ ಶನೇಃ । ವಿಚರ್ಚಿಕಾಂ ಚ ಕಂಡೂತಿಂ ಬ್ರೂಯಾತ್ಸರ್ಪಾನ್ವಿತೇಕ್ಷಿತೇ ॥" ಶನಿಯ ಕ್ಷೇತ್ರಗಳಾದ ಮಕರ ಮತ್ತು ಕುಂಭರಾಶಿಯು ಬುದ್ಧಿಭ್ರಮೆ, ಶಾರೀರಿಕ ಅಶಕ್ತತೆ, ಅಜೀರ್ಣ, ಚಲಿಸುವಸಾಮರ್ಥ್ಯ ಇಲ್ಲದಿರುವಿಕೆ ನೀಡುತ್ತದೆ. ಲಗ್ನದಲ್ಲಿ ರಾಹು ಇದ್ದರೆ ವಿಚರ್ಚಿಕಾ, ತುರಿಸುವಿಕೆ, ವ್ರಣ ನೀಡುತ್ತಾನೆ. ಆಯಾರಾಶಿಗಳಲ್ಲಿ ಪಾಪಗ್ರಹರಿದ್ದರೆ ಮೇಲೆ ಹೇಳಿದ ಪೀಡೆಗಳು, (ಆಯಾಗ್ರಹರ ದಶಾಭುಕ್ತಿಕಾಲದಲ್ಲಿ, ಗೋಚರದಲ್ಲಿ). ಸಂಭವಿಸುತ್ತದೆ. ಈ ಫಲಗಳನ್ನು ರೋಗ ಪ್ರಶ್ನೆಯಲ್ಲಿ ಕೂಡಾ ಚಿಂತಿಸಬೇಕು.

ಮಂದಾರಾನ್ವಿತವೀಕ್ಷಿತೇ ವ್ಯಯಧನೇ ಚಂದ್ರಾರುಣೌ ಚಾಕ್ಷಿರುಕ್
ಶೌರ್ಯಾಯಾಂಗಿರಸೋ ಯುವಾರಸಹಿತಾ ದೃಷ್ಟ್ಯಾಯದಿ ಶ್ರೋತ್ರ-
ರುಕ್ । ಸೋಗ್ರೇ ಪಂಚಮಭೇ ಭವೇದುದರರುಗ್ರಂಧ್ರಾರಿನಾಥಾನ್ವಿ
-ತೇ ತದ್ವತ್ಸಪ್ತಮನೈಧನೇ ಸಗುದರುಕ್ಛುಕ್ರೇ ಚ ಗುಹ್ಯಾಮಯಃ ॥೧೦॥

ಕಣ್ಣಿನವ್ಯಾಧಿಃ-ದ್ವಾದಶ ಮತ್ತು ದ್ವಿತೀಯಭಾವದಲ್ಲಿ ಚಂದ್ರ ಮತ್ತು ರವಿಯು, ಶನಿ ಮತ್ತು ಕುಜನ, ದೃಷ್ಟಿ ಅಥವಾ ಯುತಿಯಲ್ಲಿ ಇದ್ದರೆ ಕಣ್ಣಿನರೋಗಗಳು ಉಂಟಾಗುತ್ತವೆ.

ವರಾಹಮತಃ- "ನಿಧನಾರಿಧನವ್ಯಯಸ್ಥಿತಾ ರವಿಚಂದ್ರಾರಯಮಾ ಯಥಾತಥಾ ಬಲವದ್ಗ್ರಹದೋಷಕಾರಣಾನ್ಮನುಜಾನಾಂ ಜನಯಂತ್ಯನೇತ್ರತಾಮ್ ॥" ಅಷ್ಟಮದಲ್ಲಿ ರವಿ, ಷಷ್ಠದಲ್ಲಿ ಚಂದ್ರ, ದ್ವಿತೀಯದಲ್ಲಿ ಕುಜ ಮತ್ತು ವ್ಯಯದಲ್ಲಿ ಶನಿ ಇದ್ದರೆ, ಬಲಿಷ್ಠ

ಗ್ರಹನ ದೋಷದಿಂದ ಜಾತಕನು ಕುರುಡನು ಆಗುತ್ತಾನೆ. ಇಲ್ಲಿ ದ್ವಿತೀಯದಿಂದ ಬಲ ಕಣ್ಣಿನದೋಷನ್ನು ಮತ್ತು ದ್ವಾದಶದಿಂದ ಎಡಕಣ್ಣಿನದೋಷವನ್ನು ಚಿಂತಿಸಬೇಕು. "ನವಮ ಸುತಗೇ ಪಾಪೈರ್ದಷ್ಟೇರವಾವದೃಷ್ಟೇಕ್ಷಣೋ" ನವಮ ಮತ್ತು ಪಂಚಮಭಾವದಲ್ಲಿ ಪಾಪಗ್ರಹರಿಂದ ನೋಡಲ್ಪಟ್ಟ ಸೂರ್ಯನು ಇದ್ದರೆ ದೃಷ್ಠಿದೋಷ ಉಳ್ಳವನು ಆಗುತ್ತಾನೆ.

"ಸ್ವಾಂತ್ಯಾಧೀಶೌ ತ್ರಿಕಸ್ಥೌ ಕವಿತನುಪಯುತೌ ಸ್ಯಾತ್ತದಾ ನೇತ್ರಹೀನಶ್ಚಂದ್ರ: ಪಾಪೇನ ಯುಕ್ತೋ ಧನಭವನಗತ: ಶುಕ್ರಯುಙ್ ನೇತ್ರಹೀನ: ।" 1.ಲಗ್ನಾಧಿಪತಿ ಮತ್ತು ಶುಕ್ರನು ಧನಾಧಿಪತಿ ಮತ್ತು ವ್ಯಯಾಧಿಪತಿಯು ಯುತಿಯಲ್ಲಿ ದು:ಸ್ಥಾನದಲ್ಲಿ (6, 8, 12,) ಇದ್ದರೆ ಜಾತಕನು ನೇತ್ರಹೀನನು (ಕುರುಡನು) ಆಗುತ್ತಾನೆ. 2.ಪಾಪ ಗ್ರಹನಿಂದ ಯುತನಾದ ಚಂದ್ರನು, ಧನಸ್ಥಾನದಲ್ಲಿ ಶುಕ್ರನೊಂದಿಗೆ ಇದ್ದರೆ ನೇತ್ರಹೀನನು ಆಗುತ್ತಾನೆ.

ರಾತ್ರಿ ಕುರುಡುತನ ಯೋಗ:- "ಶುಕ್ರ: ಸೇಂದುಸ್ತ್ರಿಕಸ್ಥೋ ಜನುಷಿ ನಿಶಿ ನರ: ಪ್ರಾಪ್ನುಯಾದಂಧಕತ್ವಂ ಜನ್ಮಾಂಧ: ಸಾರ್ಕಶುಕ್ರಸ್ತನುಭವನಪತಿ: ಸ್ಯಾತ್ತದಾನೀಂ ಮನುಷ್ಯ:" ಶುಕ್ರನು ಚಂದ್ರನಯುತಿಯಲ್ಲಿ ದು:ಸ್ಥಾನದಲ್ಲಿ (6, 8, 12,) ಇದ್ದರೆ ಜಾತಕನಿಗೆ ರಾತ್ರಿಯಲ್ಲಿ ಕುರುಡುತನ ಇರುತ್ತದೆ.

ಜನ್ಮಾಂಧಯೋಗ:- ಲಗ್ನಾಧಿಪತಿಯು ರವಿ ಮತ್ತು ಶುಕ್ರನ ಯುತಿಯಲ್ಲಿ ದು:ಸ್ಥಾನದಲ್ಲಿ ಇದ್ದರೆ ಜಾತಕನು ಹುಟ್ಟು ಕುರುಡನು ಆಗುತ್ತಾನೆ.

ಕಿವಿರೋಗ:-ತೃತೀಯ, ಮತ್ತು ಏಕಾದಶದಲ್ಲಿ ಗುರುವು, ಶನಿ ಮತ್ತು ಕುಜರ ಯುತಿ ಅಥವಾ ದೃಷ್ಟಿಯಲ್ಲಿ ಇದ್ದರೆ ಕಿವಿರೋಗಗಳು ಉಂಟಾಗುತ್ತವೆ.

ವರಾಹಮತ:"ನವಮಾಯ ತೃತೀಯಧೀಯುತಾ ನ ಚ ಸೌಮ್ಯೈರಶುಭಾ ನಿರೀಕ್ಷಿತಾ: । ನಿಯಮಾಚ್ಛ್ರವಣೋಪಘಾತದಾ" ನವಮ, ಏಕಾದಶ, ತೃತೀಯ, ಮತ್ತು ಪಂಚಮ ಭಾವದಲ್ಲಿ ಶುಭಗ್ರಹರಿಂದ ನೋಡಲ್ಪಡದ ಪಾಪಗ್ರಹರು ಇರಬೇಕು. ಈ ಯೋಗದಲ್ಲಿ ಜನಿಸಿದವನಿಗೆ ಕಿವಿರೋಗಗಳು ಸಂಭವಿಸುತ್ತದೆ. ಇಲ್ಲಿ ತೃತೀಯದ ಪಾಪಗ್ರಹರು ಬಲಕಿವಿಯನ್ನು ಏಕಾದಶದ ಗ್ರಹರು ಎಡಕಿವಿಯನ್ನು ಸೂಚಿಸುತ್ತಾರೆ.

ಉದರರೋಗ:- ಪಂಚಮಭಾವದಲ್ಲಿ ಪಾಪಗ್ರಹನು ಇದ್ದು, ಷಷ್ಠಾಧಿಪತಿ ಅಥವಾ ಅಷ್ಟಮಾಧಿಪತಿಯು ಯುತಿಯಲ್ಲಿ ಇದ್ದರೆ ಉದರ ವ್ಯಾಧಿಗಳು ಉಂಟಾಗುತ್ತವೆ.

ಗುದರೋಗ :-ಅಷ್ಟಮಾಧಿಪತಿ ಮತ್ತು ಷಷ್ಠಾಧಿಪತಿಯು ಸಪ್ತಮ ಮತ್ತು ಅಷ್ಟಮ ದಲ್ಲಿ ಪಾಪಗ್ರಹನ ಯುತಿಯಲ್ಲಿ ಇದ್ದರೆ ಗುದರೋಗ ಉಂಟಾಗುತ್ತದೆ.

ಗುಹ್ಯರೋಗ:- ಅಷ್ಟಮಾಧಿಪತಿ, ಷಷ್ಠಾಧಿಪತಿ ಮತ್ತು ಶುಕ್ರನು ಪಾಪಗ್ರಹನ ಯುತಿಯಲ್ಲಿ ಸಪ್ತಮ ಮತ್ತು ಅಷ್ಟಮದಲ್ಲಿ ಇದ್ದರೆ ಗುಹ್ಯರೋಗಗಳು ಉಂಟಾಗುತ್ತವೆ.

ಷಷ್ಠೇSಕೇSಪ್ಯಥವಾಷ್ಟಮೇಜ್ವರಭಯಂ ಭೌಮೇ ಚ ಕೇತೌ ವ್ರಣಂ
ಶುಕ್ರೇ ಗುಹ್ಯರುಜಂ ಕ್ಷಯಂ ಸುರಗುರೌ ಮಂದೇ ಚ ವಾತಾಮಯಮ್ ।
ರಾಹೌ ಭೌಮನಿರೀಕ್ಷಿತೇ ಚ ಪಿಟಕಾಂ ಸೇಂದೌ ಶನೌ ಗುಲ್ಮಜಮ್ ಕ್ಷೀ-
ಣೇಂದೌ ಜಲಭೇಷು ಪಾಪಸಹಿತೇ ತತ್ಸ್ಥೇSಂಬುರೋಗಂ ಕ್ಷಯಮ್ ॥೧೧॥

ಜ್ವರಃ- ಷಷ್ಠ ಅಥವಾ ಅಷ್ಟಮದಲ್ಲಿ ರವಿ ಇದ್ದರೆ ಜ್ವರ ಪೀಡೆಯ ಭೀತಿ ಇರುತ್ತದೆ.
ವ್ರಣಃ- ಕುಜ ಅಥವಾ ಕೇತುವು ಷಷ್ಠ ಅಥವಾ ಅಷ್ಟಮದಲ್ಲಿ ಇದ್ದರೆ ವ್ರಣ ಉಂಟಾಗುತ್ತದೆ.

ಪರಾಶರ ಮತಃ- "ಷಷ್ಠಾಧಿಪಃ ಸ್ವಗೇಹೇ ವಾ ದೇಹೇ ವಾಪ್ಯಷ್ಟಮೇ ಸ್ಥಿತಃ । ತದಾ ವ್ರಣೋ ಭವೇದ್ದೇಹೇ ಷಷ್ಠರಾಶಿಸಮಾಶ್ರಿತೇ ॥" ಷಷ್ಠಾಧಿಪತಿಯು ಸ್ವಕ್ಷೇತ್ರ, ಲಗ್ನ ಅಥವಾ ಅಷ್ಟಮದಲ್ಲಿ ಇದ್ದರೆ ವ್ರಣ ಉಂಟಾಗುತ್ತದೆ. ಈ ವ್ರಣವು ಷಷ್ಠರಾಶಿ ಸೂಚಿಸುವ ದೇಹದ ಅಂಗದಲ್ಲಿ ಆಗುತ್ತದೆ. "ಆದಿತ್ಯೇನ ಶಿರೋ ವ್ರಣಮ್" ಈ ವ್ರಣಕಾರಕ ಗ್ರಹನು ರವಿಯಾದರೆ ಶಿರಸ್ಸಿನಲ್ಲಿ ವ್ರಣ ನೀಡುತ್ತಾನೆ. "ಇಂದುನಾಚ ಮುಖೇ" ಚಂದ್ರನಿಂದ ಮುಖದಲ್ಲಿ, "ಕಂಠೇ ಭೌಮೇನ" ಕುಜನಿಂದ ಕುತ್ತಿಗೆಯಲ್ಲಿ. "ಜ್ಞೇನ ನಾಭಿಷು" ಬುಧನಿಂದ ನಾಭಿಯಲ್ಲಿ, "ಗುರುಣಾ ನಾಸಿಕಾಯಾಂ" ಗುರುವಿನಿಂದ ಮೂಗಿನಲ್ಲಿ, "ಭೃಗುಣಾ ನಯನೇ" ಶುಕ್ರನಿಂದ ಕಣ್ಣಿನಲ್ಲಿ, "ಪದೇ ಶನಿನಾ" ಶನಿಯಿಂದ ಕಾಲುಗಳಲ್ಲಿ, "ರಾಹುಣಾ ಕುಕ್ಷೌ ಕೇತುನಾ ಚ" ರಾಹು ಅಥವಾ ಕೇತುವು ವ್ರಣಕಾರಕರು ಆದಾಗ, ಉದರದಲ್ಲಿ ವ್ರಣ ಸಂಭವಿಸುತ್ತದೆ.

"ಷಷ್ಠೇಶೇ ಪಾಪಯುಕ್ತೇ ತನುನಿಧನಗತೇನುಃ ಶರೀರೇ ವ್ರಣಾಃ ಸ್ಯು" ಷಷ್ಠಾಧಿಪತಿಯು ಪಾಪಗ್ರಹರಿಂದ ಕೂಡಿ ಲಗ್ನ ಅಥವಾ ಅಷ್ಟಮದಲ್ಲಿ ಇದ್ದರೆ ದೇಹದಲ್ಲಿ ವ್ರಣ ಉಂಟಾಗುತ್ತದೆ.

"ತನು ನಿಧನಪತೀ ಭಾನುಪುತ್ರೇಣಯುಕ್ತೌ ಸ್ಯಾತಾಂ ಸ್ವರ್ಭಾನುನಾ ಚೇತ್ತದನು ಚ ಶಿಖಿನಾ ತದ್ದಶಾಯಾಂ ವ್ರಣಾಃ ಸ್ಯುः" ಲಗ್ನಾಧಿಪತಿ ಮತ್ತು ಅಷ್ಟಮಾಧಿಪತಿಯು ಶನಿ, ರಾಹು ಅಥವಾ ಕೇತುವಿನ ಯುತಿಯಲ್ಲಿ, ಷಷ್ಠದಲ್ಲಿ ಇದ್ದರೆ, ತಮ್ಮ ದಶಾಕಾಲದಲ್ಲಿ ವ್ರಣವನ್ನು ನೀಡುತ್ತಾರೆ.

"ಭೂಮಿ ಮಾರ್ತಂಡಪುತ್ರೌ ವ್ಯಯಭವನಗತೌ ಶತ್ರುಗೌ ವಾ ವ್ರಣೀ ಸ್ಯಾತ್" ಕುಜ ಮತ್ತು ಶನಿಯು ವ್ಯಯ ಅಥವಾ ಷಷ್ಠಭಾವದಲ್ಲಿ ಇದ್ದರೆ ವ್ರಣದಿಂದ ಪೀಡಿತನು ಆಗುತ್ತಾನೆ.

ಗುಹ್ಯಸ್ಥಳದಲ್ಲಿ ಪೀಡೆಃ- ಷಷ್ಠ ಅಥವಾ ಅಷ್ಟಮದಲ್ಲಿ ಶುಕ್ರನು ಇದ್ದರೆ ಗುಹ್ಯಸ್ಥಳದಲ್ಲಿ ಪೀಡೆ ಸಂಭವಿಸುತ್ತದೆ.

ವರಾಹಮತಃ- "ಚಂದ್ರೇ ಕರ್ಕಟವೃಶ್ಚಿಕಾಂಶಗತೇ ಪಾಪೈರ್ಯುತೇ ಗುಹ್ಯರುಕ್" ಚಂದ್ರನು ಕರ್ಕಾಟಕ ರಾಶ್ಯಂಶ(ಸ್ವಾಂಶ) ಅಥವಾ ವೃಶ್ಚಿಕರಾಶ್ಯಂಶ(ನೀಚಾಂಶ)ದಲ್ಲಿ ಇದ್ದು ಪಾಪಗ್ರಹನಿಂದ ಯುತನಾದರೆ ಗುಹ್ಯರೋಗಗಳು ಸಂಭವಿಸುತ್ತದೆ.

ವೃಶ್ಚಿಕ ರಾಶಿಯು ಗುಹೆ, ಬಿಲ, ಮೂಲೆ ಇತ್ಯಾದಿ ಗುಪ್ತಸ್ಥಾನಗಳನ್ನು ಸೂಚಿಸುವುದರಿಂದ ದೇಹದ ಒಳಗೆ ಅಥವಾ ಗುಪ್ತಸ್ಥಾನಗಳಲ್ಲಿ, ವ್ಯಾಧಿಗಳು, ಕುರು ಅಥವಾ ಹೊಟ್ಟೆಯ ಒಳಗೆ ವ್ರಣ ಇತ್ಯಾದಿ ಸಂಭವಿಸಬಹುದು.

ಕ್ಷಯರೋಗ:- ಷಷ್ಠ ಅಥವಾ ಅಷ್ಟಮದಲ್ಲಿ ಗುರುವು ಇದ್ದರೆ ಕ್ಷಯರೋಗ ಸಂಭವಿಸುತ್ತದೆ.

ವರಾಹಮತ:- "ಪರಸ್ಪರಗೃಹಾಂಶಗಯೋ ರವೀಂದ್ವೋ: ಕ್ಷೇತ್ರೇಽಥವಾ ಯುಗಪದೇವ ತಯೋಃ ಕೃಶೋ ವಾ" 1. ಕರ್ಕಟಕದಲ್ಲಿ ರವಿ ಮತ್ತು ಸಿಂಹದಲ್ಲಿ ಚಂದ್ರನು ಇದ್ದರೆ, 2. ರವಿಯು ಚಂದ್ರನ ನವಾಂಶದಲ್ಲಿ ಮತ್ತು ಚಂದ್ರನು ರವಿಯ ನವಾಂಶದಲ್ಲಿ ಇದ್ದರೆ, 3. ಕರ್ಕಟಕದಲ್ಲಿ ರವಿ-ಚಂದ್ರರು ಇದ್ದರೆ, 4. ಸಿಂಹರಾಶಿಯಲ್ಲಿ ರವಿ-ಚಂದ್ರರು ಇದ್ದರೆ, ಈ ನಾಲ್ಕು ಯೋಗಗಳಲ್ಲಿ ಜನಿಸಿದವರು ಕ್ಷಯರೋಗದಿಂದ ಪೀಡಿಸಲ್ಪಡುತ್ತಾರೆ, ಅಥವಾ ಕೃಶವಾದ ಶರೀರ ಉಳ್ಳವರು ಆಗುತ್ತಾರೆ.

ವಾತರೋಗ:- ಷಷ್ಠ ಅಥವಾ ಅಷ್ಟಮದಲ್ಲಿ ಶನಿ ಇದ್ದರೆ ವಾತರೋಗ ಸಂಭವಿಸುತ್ತದೆ.

ವರಾಹಮತ:- "ಪಾಪಾಲೋಕಿತಯೋಃ ಸಿತಾವನಿಜಯೋರಸ್ತಸ್ಥಯೋರ್ವಾತರುಕ್" ಶುಕ್ರ ಮತ್ತು ಕುಜನು ಪಾಪಗ್ರಹನಿಂದ ನೋಡಲ್ಪಟ್ಟು ಸಪ್ತಮಭಾವದಲ್ಲಿ ಇದ್ದರೆ ವಾತರೋಗದಿಂದ ಪೀಡಿಸಲ್ಪಡುತ್ತಾನೆ. ಶುಕ್ರನು ಕಫ-ವಾತವನ್ನು, ಕುಜನು ಪಿತ್ತವನ್ನು, ಇಬ್ಬರೂ ಶನಿಯಿಂದ ನೋಡಲ್ಪಟ್ಟರೆ ರಕ್ತವಾತ ರೋಗವನ್ನು ಸೂಚಿಸುತ್ತಾರೆ. "ಸಂಸೃಷ್ಟ: ಪವನೇನ ಮಂದಗಯುತೇ ದ್ಯೂನೇ ವಿಲಗ್ನೇ ಗುರೌ" ಸಪ್ತಮದಲ್ಲಿ ಶನಿಯಿದ್ದು ಲಗ್ನದಲ್ಲಿ ಗುರು ಇದ್ದರೆ ವಾತರೋಗದಿಂದ ಪೀಡಿತನು ಆಗುತ್ತಾನೆ.

ಪಿಟಕರೋಗ:- ಷಷ್ಠ ಅಥವಾ ಅಷ್ಟಮದಲ್ಲಿ ರಾಹುವು ಇದ್ದು ಕುಜನಿಂದ ನೋಡಲ್ಪಟ್ಟರೆ ವ್ರಣ, ಬೊಕ್ಕೆ, ಬಾವು ಇತ್ಯಾದಿ ಉಂಟಾಗುತ್ತದೆ.

ಗುಲ್ಮರೋಗ:- ಷಷ್ಠ ಅಥವಾ ಅಷ್ಟಮದಲ್ಲಿ ಶನಿ ಮತ್ತು ಚಂದ್ರನು ಇದ್ದರೆ ಗುಲ್ಮರೋಗ ಸಂಭವಿಸುತ್ತದೆ.

ವರಾಹಮತ:- "ಅಂತಶ್ಶಶಿನ್ಯಶುಭಯೋರ್ಮೃಗೇ ಪತಂಗೇ ಶ್ವಾಸಕ್ಷಯ ಪ್ಲೀಹಕವಿದ್ರಧಿ ಗುಲ್ಮಭಾಜ:" ಚಂದ್ರನು ಪಾಪಮಧ್ಯನಾಗಿರಬೇಕು ಮತ್ತು ರವಿಯು ಸಪ್ತಮದಲ್ಲಿ ಇರಬೇಕು. ಈ ಯೋಗದಲ್ಲಿ ಜನಿಸಿದವನು ಶ್ವಾಸರೋಗ(ಕೆಮ್ಮು, ಉಬ್ಬಸ), ಕ್ಷಯರೋಗ, ಪ್ಲೀಹದ ವ್ಯಾಧಿ, ವಿದ್ರಧಿ(ಗುಳ್ಳೆ, ಕುರು ಇತ್ಯಾದಿ) ಅಥವಾ ಗುಲ್ಮರೋಗದಿಂದ ಪೀಡಿಸಲ್ಪಡುತ್ತಾನೆ.

ರವಿಯು ಸಪ್ತಮದಲ್ಲಿ ಇದ್ದಾಗ ಚಂದ್ರನು ಪಾಪಮಧ್ಯನಾಗಿ 1. ಶನಿಕ್ಷೇತ್ರದಲ್ಲಿ ಇದ್ದರೆ ಶ್ವಾಸರೋಗ, 2. ಗುರು ಕ್ಷೇತ್ರದಲ್ಲಿ ಇದ್ದರೆ ಕ್ಷಯರೋಗ, 3. ಬುಧ ಕ್ಷೇತ್ರದಲ್ಲಿ ಇದ್ದರೆ ಪ್ಲೀಹರೋಗ, 4. ಕುಜಕ್ಷೇತ್ರದಲ್ಲಿ ಇದ್ದರೆ ವಿದ್ರಧಿರೋಗ, 5. ಶುಕ್ರಕ್ಷೇತ್ರದಲ್ಲಿ ಇದ್ದರೆ ಗುಲ್ಮರೋಗ ಸಂಭವಿಸುತ್ತದೆ, ಎಂದು ರಾಶಿ ವಿಶೇಷದಿಂದ ತಿಳಿಯಬೇಕು. ಇದು ರುದ್ರಮತ ಆಗಿರುತ್ತದೆ.

ಜಲರೋಗ ಮತ್ತು ಕ್ಷಯರೋಗ:- ಜಲರಾಶಿಸ್ಥಿತ ಚಂದ್ರನು ಷಷ್ಠ ಅಥವಾ ಅಷ್ಟಮದಲ್ಲಿ ಪಾಪಗ್ರಹನ ಯುತಿಯಲ್ಲಿ ಇದ್ದರೆ ಜಲಜನ್ಯರೋಗಗಳು ಅಥವಾ ಕ್ಷಯ ರೋಗ ಉಂಟಾಗುತ್ತದೆ.

ಕರ್ಕಟಕ, ಮಕರರಾಶಿಯ ಉತ್ತರಾರ್ಧ ಮತ್ತು ಮೀನರಾಶಿಯು ಜಲರಾಶಿ ಆಗಿರುತ್ತದೆ. ಕುಂಭರಾಶಿಯನ್ನು ಕೂಡಾ ಜಲರಾಶಿ ಎಂದು ಕರೆಯುತ್ತಾರೆ.

ವರಾಹಮತ:- "ಮಂದೇ ಕರ್ಕಟಕೇ ಜಲೋದರಕೃತೋ ಮೃತ್ಯುರ್ಮೃಗಾಂಕೇ ಮೃಗೇ" ಶನಿಯು ಕರ್ಕಟಕರಾಶಿಯಲ್ಲಿದ್ದು ಚಂದ್ರನು ಮಕರರಾಶಿಯಲ್ಲಿ ಇದ್ದರೆ ಜಲೋದರದಿಂದ ಮರಣ ಸಂಭವಿಸುತ್ತದೆ.

ಜಾತೋ ಗಚ್ಛತಿ ಯೇನಕೇನ ಮರಣಂ ವಕ್ಷ್ಯೇಽಥ ತತ್ಕಾರಣಂ ರಂಧ್ರಸ್ಥೈ-ಸ್ತದವೇಕ್ಷಕೈರ್ಬಲವತಾ ತಸ್ಯೋಕ್ತ ರೋಗೈರ್ಮೃತಿ:। ರಂಧ್ರಕೈರ್ನೇಕ್ಷಿತೇ ಜಾಥವಾ ಮೃತಪತಿ ಪ್ರಾಪ್ತರ್ಕ್ಷದೋಷೇಣ ವಾ ರಂಧ್ರೇಶೇನ ಖರತ್ರಿಭಾಗ ಪತಿನಾ ಮೃತ್ಯುಂ ವದೇನ್ನಿಶ್ಚಿತಮ್ ॥೧೨॥

ನಿಯರ್ಾಣಗ್ರಹ:- 1. ಅಷ್ಟಮಭಾವಸ್ಥಿತ ಅಥವಾ ಅಷ್ಟಮಭಾವವನ್ನು ನೋಡುವ ಗ್ರಹರಲ್ಲಿ ಬಲಿಷ್ಠನಾದವನು ಸೂಚಿಸುವ ರೋಗಹೇತುವಿನಿಂದ ಮರಣ ಸಂಭವಿಸುತ್ತದೆ. ಅಥವಾ 2. ಅಷ್ಟಮಭಾವದಲ್ಲಿ ಗ್ರಹರು ಇಲ್ಲದಿದ್ದರೆ, ಅಥವಾ ಅಷ್ಟಮಭಾವವನ್ನು ಗ್ರಹರು ನೋಡದಿದ್ದರೆ ಅಷ್ಟಮ ರಾಶಿಗೆ ಹೇಳಿದ ಅಥವಾ ಅಷ್ಟಮಾಧಿಪತಿಸ್ಥಿತ ರಾಶಿಗೆ ಹೇಳಿದ ವ್ಯಾಧಿಗಳಿಂದ ಮರಣ ಸಂಭವಿಸುತ್ತದೆ. ಅಥವಾ 3. ಅಷ್ಟಮಾಧಿಪತಿ ಅಥವಾ ಖರದ್ರೇಕ್ಕಾಣಾಧಿಪತಿ (22ನೇ ದ್ರೇಕ್ಕಾಣಾಧಿಪತಿ)ಯು ಮರಣಕಾರಕನು ಆಗುತ್ತಾನೆ.

ಗ್ರಹೇಣ ಯುಕ್ತೇ ನಿಧನೇ ತದುಕ್ತರೋಗೈರ್ಮೃತಿರ್ವಾಥ ತದೀಕ್ಷಕಸ್ಯ ।
ಗ್ರಹೈರ್ವಿಮುಕ್ತೇ ನಿಧನೇಽಥ ತಸ್ಯ ರಾಶೇ: ಸ್ವಭಾವೋದಿತದೋಷ ಜಾತಾ ॥

ನಿಯರ್ಾಣಹೇತು:- 1. ಅಷ್ಟಮಭಾವಸ್ಥಿತಗ್ರಹ ಅಥವಾ ಅಷ್ಟಮಭಾವವನ್ನು ನೋಡುವಗ್ರಹನು ನೀಡುವ ವ್ಯಾಧಿಯಿಂದ ಮರಣಸಂಭವಿಸುತ್ತದೆ. 2. ಅಷ್ಟಮ ಭಾವದಲ್ಲಿ ಗ್ರಹರು ಇಲ್ಲದಿದ್ದರೆ ಅಥವಾ ಅಷ್ಟಮಭಾವವನ್ನು ಗ್ರಹರು ನೋಡದಿದ್ದರೆ, ಅಷ್ಟಮ ಭಾವದಲ್ಲಿರುವ ರಾಶಿ ಸ್ವಭಾವತುಲ್ಯ ದೋಷಗಳಿಂದ ಮರಣಸಂಭವಿಸುತ್ತದೆ.

ಅಗ್ನ್ಯುಷ್ಣಜ್ವರಪಿತ್ತಶಸ್ತ್ರಜನಿತಶ್ಚಂದ್ರೋ ವಿಷೂಚ್ಯಂಬುರುಗ್ಯಕ್ಷ್ಮಾದಿ ಕ್ಷಿತಿಜೋಽಸೃಜಾ ಚ ದಹನ ಕ್ಷುದ್ರಾಭಿಚಾರಾಯುಧೈ: । ಪಾಂಡ್ವಾದಿ ಭ್ರಮಜಂ ಬುಧೋ ಗುರುರನಾಯಾಸೇನ ಮೃತ್ಯುಂ ಕಫಾತ್ ಸ್ತ್ರೀ ಸಂಗೋತ್ಥರುಜಂ ಕವಿಸ್ತು ಮರುತಾ ವಾ ಸಂನಿಪಾತೈ: ಶನಿ: ॥೧೪॥

ಕುಷ್ಠೇನ ವಾ ಕೃತ್ರಿಮಭಕ್ಷಣಾದ್ವಾ ರಾಹುರ್ವಿಷಾದ್ವಾಥ ಮಸೂರಿಕಾದ್ಯೈ: ಕುರ್ಯಾಚ್ಛಿಖೀ ದುರ್ಮರಣಂ ನರಾಣಾಂ ರಿಪುರ್ನಿರೋಧಾದಪಿ ಕೀಟ-ಕಾದ್ಯೈ: ॥೧೫॥

ಗ್ರಹಲಿಂದ ಸೂಚಿತ ಅವಸಾನ ಹೇತು:- 1. ರವಿಯು ಮರಣಕಾರಕನಾದಾಗ ಬೆಂಕಿಯಿಂದ, ಅಧಿಕ ಉಷ್ಣ, ಜ್ವರ, ಪಿತ್ತಪ್ರಕೋಪ ಮತ್ತು ಶಸ್ತ್ರ ಹೇತುವಿನಿಂದ ಮರಣ ಸಂಭವಿಸುತ್ತದೆ. 2. ಚಂದ್ರನು ಮರಣಕಾರಕನು ಆದಾಗ ಕೋಲೆರಾ, ಜಲ ಹೇತು, ಜಲೋದರ ಅಥವಾ ಜಲಜನ್ಯ ವ್ಯಾಧಿಗಳಿಂದ ಮರಣ ಸಂಭವಿಸುತ್ತದೆ. 3. ಕುಜನು ಮರಣಕಾರಕನು ಆದಾಗ ಬೆಂಕಿ, ಕ್ಷುದ್ರ ಅಭಿಚಾರ ಮತ್ತು ಆಯುಧ ಹೇತುವಿನಿಂದ ಮರಣ ಸಂಭವಿಸುತ್ತದೆ. 4. ಬುಧನುಮರಣಕಾರಕನು ಆದಾಗ ಪಾಂಡುರೋಗ ಮತ್ತು ಚಿತ್ತಭ್ರಮೆಯಿಂದ ಮರಣ ಸಂಭವಿಸುತ್ತದೆ. 5. ಗುರುವು ಮರಣಕಾರಕನು ಆದಾಗ ಅನಾಯಾಸ ಮರಣ ಅಥವಾ ಕಫಜನ್ಯರೋಗಗಳಿಂದ ಮರಣ ಸಂಭವಿಸುತ್ತದೆ. 6, ಶುಕ್ರನು ಮರಣಕಾರಕನು ಆದಾಗ ಸ್ತ್ರೀಸಂಗದಿಂದ ಉಂಟಾದ ರೋಗಗಳಿಂದ ಮರಣ ಸಂಭವಿಸುತ್ತದೆ. 7. ಶನಿಯು ಮರಣಕಾರಕನು ಆದಾಗ ವಾತರೋಗ ಅಥವಾ ಸನ್ನಿಪಾತದಿಂದ ಮರಣ ಸಂಭವಿಸುತ್ತದೆ. 8. ರಾಹುವು ಮರಣಕಾರಕನು ಆದಾಗ ಕುಷ್ಠರೋಗ, ವಿಷಭಕ್ಷಣದಿಂದ, ವಿಷಜಂತುಗಳಿಂದ ಮತ್ತು ಸಿಡುಬು ರೋಗದಿಂದ ಮರಣ ಸಂಭವಿಸುತ್ತದೆ. 9. ಕೇತುವು ಮರಣಕಾರಕನು ಆದಾಗ ದುರ್ಮರಣ, ಶತ್ರುಗಳ ದ್ವೇಷದಿಂದ ಕೊಲೆ, ಅಥವಾ ಕೀಟಗಳಿಂದ ಮರಣ ಸಂಭವಿಸುತ್ತದೆ.

ಲಗ್ನಾದಷ್ಟಮರಾಶೇಃ ಸ್ವಭಾವದೋಷೋದ್ಭವಂ ವದೇನ್ಮೃತ್ಯುಮ್ ।
ನಿಧನೇಶಸ್ಯ ನವಾಂಶಸ್ಥಿತರಾಶಿ ನಿಮಿತ್ತ ದೋಷಜನಿತಂ ವಾ ॥೧೬॥

ನಿರ್ಯಾಣ ವಿಚಾರ:- ಲಗ್ನಭಾವದಿಂದ ಅಷ್ಟಮರಾಶಿ ಸ್ವಭಾವ ಮತ್ತು ದೋಷ ಜನಿತ ಹೇತುವಿನಿಂದ ಮರಣ ವಿಚಾರ ಚಿಂತಿಸಬೇಕು. ಅಥವಾ ಅಷ್ಟಮಾಧಿಪತಿಸ್ಥಿತ ನವಾಂಶ ರಾಶಿಗೆ ಅನುಗುಣವಾದ ದೋಷಜನಿತ ಹೇತುವಿನಿಂದ ಮರಣ ವಿಚಾರ ಚಿಂತಿಸಬೇಕು.

ಪೈತ್ತ್ಯಜ್ವರೋಷ್ಣೈರ್ಜಠರಾಗ್ನಿನಾಜೇ ವೃಷೇತ್ರಿದೋಷೈರ್ದಹನಾಚ್ಚ
ಶಸ್ತ್ರಾತ್ । ಯುಗ್ಮೇತು ಕಾಲಶ್ವಸನೋಷ್ಣ ಶೂಲೈರುನ್ಮಾದ ವಾತಾ-
ರುಚಿಭಿಃ ಕುಲಿರೇ ॥೧೭॥ ಮೃಗಜ್ವರಸ್ಫೋಟಜ ಶತ್ರುಜಂ ಹರೌ
ಸ್ತ್ರೀಯಾಂಸ್ತ್ರೀಯಾಗುಹ್ಯರುಜಾ ಪ್ರಪಾತನಾತ್ । ತುಲಾಧರೇಧೀ-
ಜ್ವರಸಂನಿಪಾತಜಂ ಪ್ಲೀಹಾಲಿಪಾಂಡುಗ್ರಹಣೀರುಜಾಲಿನಿ ॥೧೮॥
ವೃಕ್ಷಾಂಬುಕಾಷ್ಠಾಯುಧಜಂ ಹಯಾಂಗೇ ಮೃಗೇ ತು ಶೂಲಾ-
ರುಚಿಧೀಭ್ರಮಾದ್ಯೈಃ । ಕುಂಭೇ ತು ಕಾಸಜ್ವರಯಕ್ಷ್ಮರೋಗೈ-
ರ್ಜಲೇ ವಿಷದ್ವಾ ಜಲರೋಗತೋಽಂತ್ಯೇ ॥೧೯॥

ಮರಣಹೇತು ರಾಶಿ:- 1. ಮೇಷ ರಾಶಿಯಾದರೆ ಪಿತ್ತಜ್ವರ, ಉಷ್ಣಪ್ರಕೋಪ, ಜಠರರೋಗ(ಅಗ್ನಿಮಾಂದ್ಯ ಇತ್ಯಾದಿ)ಗಳಿಂದ ಮರಣ ಸಂಭವಿಸುತ್ತದೆ. 2. ವೃಷಭ ರಾಶಿಯಾದರೆ ತ್ರಿದೋಷ ಪ್ರಕೋಪದಿಂದ, ಬೆಂಕಿಯಿಂದ, ಆಯುಧದಿಂದ ಮರಣ

ಸಂಭವಿಸುತ್ತದೆ. 3. ಮಿಥುನ ರಾಶಿಯಾದರೆ ಉಬ್ಬಸ, ಉಷ್ಣದಿಂದ, ಶೂಲ ರೋಗದಿಂದ ಮರಣ ಸಂಭವಿಸುತ್ತದೆ. 4. ಕರ್ಕಟಕ ರಾಶಿಯಾದರೆ ಉನ್ಮಾದ, ವಾತ ಮತ್ತು ಅರುಚಿಯಿಂದ ಮರಣ ಸಂಭವಿಸುತ್ತದೆ. 5. ಸಿಂಹರಾಶಿಯಾದರೆ ಪ್ರಾಣಿಗಳಿಂದ, ಜ್ವರದಿಂದ, ಕುರು, ಬಾವು, ಶತ್ರುಗಳಿಂದ ಮರಣ ಸಂಭವಿಸುತ್ತದೆ. 6. ಕನ್ಯಾ ರಾಶಿಯಾದರೆ ಸ್ತ್ರೀಹೇತು, ಗುಹ್ಯರೋಗಗಳಿಂದ, ಎತ್ತರದಿಂದ ಬಿದ್ದು ಮರಣ ಸಂಭವಿಸುತ್ತದೆ. 7. ತುಲಾ ರಾಶಿಯಾದರೆ ಮೆದುಳಿನ ಜ್ವರ, ಸನ್ನಿಪಾತಜ ವ್ಯಾಧಿಯಿಂದ ಮರಣ ಸಂಭವಿಸುತ್ತದೆ. 8. ವೃಶ್ಚಿಕರಾಶಿಯಾದರೆ ಪ್ಲೀಹದಲ್ಲಿ ಉದ್ಭವಿಸಿದ ವ್ಯಾಧಿ, ಪಾಂಡುರೋಗ, ಗ್ರಹಣೀರೋಗ, ಇವುಗಳಿಂದ ಮರಣ ಸಂಭವಿಸುತ್ತದೆ. 9. ಧನುರಾಶಿಯಾದರೆ ಮರ, ನೀರು, ಕಾಷ್ಠ, ಆಯುಧ ಹೇತುವಿನಿಂದ ಮರಣ ಸಂಭವಿಸುತ್ತದೆ. 10. ಮಕರರಾಶಿಯಾದರೆ ಶೂಲರೋಗ, ಅರುಚಿ, ಚಿತ್ತ ಭ್ರಮೆಯಿಂದ ಮರಣ ಸಂಭವಿಸುತ್ತದೆ. 11. ಕುಂಭರಾಶಿಯಾದರೆ ಕೆಮ್ಮು, ಕಫ, ಜ್ವರ, ಕ್ಷಯರೋಗದಿಂದ ಮರಣ ಸಂಭವಿಸುತ್ತದೆ. 12. ಮೀನರಾಶಿಯಾದರೆ ಜಲ ಅಪಘಾತ, ಅಥವಾ ಜಲರೋಗದಿಂದ ಮರಣ ಸಂಭವಿಸುತ್ತದೆ.

ಪಾಪರ್ಕ್ಷಯುಕ್ತೇ ನಿಧನೇ ಸಪಾಪೇ ಶಸ್ತ್ರಾನಲಂವ್ಯಾಘ್ರ ಭುಜಂಗಪೀಡಾ । ಅನ್ಯೋನ್ಯದೃಷ್ಟೌ ದ್ವ್ಯಶುಭೌ ಸಕೇಂದ್ರೌ ಕೋಪಾತ್ತ್ರ ಭೋಃ ಶಸ್ತ್ರವಿಷಾಗ್ನಿಜೈರ್ವಾ ॥೨೦॥

ದುರ್ಮರಣಃ ಅಷ್ಟಮಭಾವವು ಪಾಪಗ್ರಹನ ಕ್ಷೇತ್ರವಾಗಿ, ಪಾಪಗ್ರಹನಿಂದ ಕೂಡಿ ಇದ್ದರೆ, ಆಯುಧದಿಂದ, ಬೆಂಕಿಯಿಂದ, ಹುಲಿಯಿಂದ, ಅಥವಾ ಸರ್ಪದಿಂದ ಪೀಡಿಸಲ್ಪಟ್ಟು ಮರಣ ಹೊಂದುತ್ತಾನೆ. ಇಬ್ಬರು ಪಾಪಗ್ರಹರು ಕೇಂದ್ರಗತರಾಗಿ ಪರಸ್ಪರ ದೃಷ್ಟರು ಆದರೆ, ರಾಜಕೋಪ, ಆಯುಧದಿಂದ, ವಿಷದಿಂದ ಅಥವಾ ಬೆಂಕಿಯಿಂದ ಮರಣ ಸಂಭವಿಸುತ್ತದೆ.

ಸೌಮ್ಯಾಂಶಕೇ ಸೌಮ್ಯಗ್ರಹೇಽಥ ಸೌಮ್ಯಸಂಭಧಗೇ ವಾ ಕ್ಷಯಭೇ ಕ್ಷಯೇಶೇ । ಅಕ್ಲೇಶಜಾತಂ ಮರಣಂ ನರಾಣಾಂ ವ್ಯಸ್ತೇ ತದಾ ಕ್ರೂರಮೃತಿಂ ವದಂತಿ ॥೨೧॥

ಅನಾಯಾಸಮರಣಃ-ಜನನ ಕಾಲದಲ್ಲಿ ವ್ಯಯಭಾವವು ಅಥವಾ ವ್ಯಯಾಧಿಪತಿಯು ಶುಭಗ್ರಹರ ನವಾಂಶ ಅಥವಾ ರಾಶಿಯಲ್ಲಿ ಇದ್ದರೆ, ಅಥವಾ ಶುಭಸಂಬಂಧದಲ್ಲಿ ಇದ್ದರೆ, ಜಾತಕನಿಗೆ ಅನಾಯಾಸ ಮರಣ ಆಗುತ್ತದೆ. ವ್ಯತ್ಯಯ ಆದ್ದಲ್ಲಿ ಕ್ರೂರರೀತಿಯಲ್ಲಿ ಅವಸಾನ ಆಗುತ್ತದೆ.

ಸ್ವೋಚ್ಚೇ ಸ್ವಮಿತ್ರೇ ಸತಿ ಸೌಮ್ಯವರ್ಗೇ ವ್ಯಯಾಧಿಪೇ ಚೋರ್ಧ್ವಗತಿಂ ಸಸೌಮ್ಯೇ । ವಿಪರ್ಯಯೇಽಧೋಗತಿಮೇವ ಕೇಚಿದೂರ್ಧ್ವಾಸ್ಯ ಶೀರ್ಷೋದಯರಾಶಿ ಭೇದಾತ್ ॥೨೨॥

ಸ್ವರ್ಗಲೋಕಪ್ರಾಪ್ತಿ:-ವ್ಯಯಾಧಿಪತಿಯು ತನ್ನ ಉಚ್ಚರಾಶಿ, ಮಿತ್ರಕ್ಷೇತ್ರ ಅಥವಾ ಶುಭಗ್ರಹರ ವರ್ಗದಲ್ಲಿ ಇದ್ದರೆ ಅಥವಾ ಶುಭಗ್ರಹರ ಯುತಿಯಲ್ಲಿ ಇದ್ದರೆ ಮರಣ ಹೊಂದಿದ ಜೀವಿಗೆ ಸ್ವರ್ಗಲೋಕ ಪ್ರಾಪ್ತಿ ಆಗುತ್ತದೆ. ಕೆಲವರು ಶೀರ್ಷೋದಯ ರಾಶಿಯು ವ್ಯಯಭಾವ ಆದರೆ ಸ್ವರ್ಗಲೋಕ ಪ್ರಾಪ್ತಿ ಎಂದು ರಾಶಿಭೇದದಿಂದ ಹೇಳುತ್ತಾರೆ.

ಕೈಲಾಸಂ ರವಿಶೀತಗೂ ಭೃಗುಸುತಃ ಸ್ವರ್ಗಂ ಮಹೀಜೋ ಮಹೀಂ ವೈಕುಂಠಂ ಶಶಿಜೋ ಯಮೋ ಯಮಪುರಂ ಸದ್ಬ್ರಹ್ಮಲೋಕಂ ಗುರುಃ ದ್ವೀಪಾನ್ ಭೋಗಿವರಃ ಶಿಖೀ ತು ನಿರಯಂ ಸಂಪ್ರಾಪಯೇತ್ಪ್ರಾಣಿನಃ ಸಂಬಂಧಾದ್ವ್ಯಯನಾಯಕಸ್ಯ ಕಥಯೇ ತ್ತತ್ರಾಂತ್ಯರಾಶ್ಯಂಶತಃ ॥೨೩॥

ಮರಣನಂತರ ಲೋಕಪ್ರಾಪ್ತಿ ವಿಚಾರ:- ವ್ಯಯಾಧಿಪತಿಯು ಯುತಿಯಲ್ಲಿರುವ ಗ್ರಹ, ಅಥವಾ ವ್ಯಯಭಾವದಲ್ಲಿರುವಗ್ರಹ, ವ್ಯಯಭಾವದ ನವಾಂಶದಲ್ಲಿರುವ ಗ್ರಹನು, 1.ರವಿ ಅಥವಾ ಚಂದ್ರನಾದರೆ ಸತ್ತವನಿಗೆ ಕೈಲಾಸ ಪ್ರಾಪ್ತಿ ಆಗುತ್ತದೆ. 2.ಶುಕ್ರನಾದರೆ ಸ್ವರ್ಗಲೋಕ, 3.ಕುಜನಾದರೆ ಭೂಲೋಕ, 4.ಬುಧನಾದರೆ ವೈಕುಂಠ, 5.ಶನಿಯಾದರೆ ಯಮಲೋಕ, 6.ಗುರುವಾದರೆ ಬ್ರಹ್ಮಲೋಕ, 7.ರಾಹುವಾದರೆ ದ್ವೀಪ, 8.ಕೇತುವಾದರೆ ನರಕಲೋಕ ಪ್ರಾಪ್ತಿ ಆಗುತ್ತದೆ.

**ಧರ್ಮೇಶ್ವರೇಣೈವ ಹಿ ಪೂರ್ವಜನ್ಮವೃತ್ತಂ ಭವಿಷ್ಯಜ್ಜನನಂ ಸುತೇಶಾತ್ ।
ತದೀಶಜಾತಿಂ ತದಧೀಷ್ಟಿತರ್ಕ್ಷದಿಶಂ ಹಿ ತತ್ರೈವ ತದೀಶದೇಶಮ್ ॥೨೪॥**

ಹಿಂದಿನ ಮತ್ತು ಮುಂದಿನಜನ್ಮ ವಿಚಾರ: 1.ನವಮಾಧಿಪತಿಯಿಂದ ಪೂರ್ವಜನ್ಮ ವಿಚಾರ ತಿಳಿಯಬೇಕು. 2.ಪಂಚಮಾಧಿಪತಿಯಿಂದ ಮುಂದಿನ ಜನ್ಮ ವಿಚಾರ ತಿಳಿಯಬೇಕು. 3.ನವಮಾಧಿಪತಿಗೆ ಸೂಕ್ತ ಜಾತಿಯು ಹಿಂದಿನ ಜನ್ಮದ ಜಾತಿಯನ್ನು ಸೂಚಿಸುತ್ತದೆ. 4.ಪಂಚಮಾಧಿಪತಿಗೆ ಸೂಕ್ತಜಾತಿಯು ಮುಂದಿನ ಜನ್ಮದ ಜಾತಿಯನ್ನು ಸೂಚಿಸುತ್ತದೆ. 5.ನವಮಾಧಿಪತಿ ಸ್ಥಿತರಾಶಿಯು ಸೂಚಿಸುವ ದಿಕ್ಕಿನಿಂದ ಮತ್ತು ನವಮಾಧಿಪತಿ ತುಲ್ಯ ದೇಶ ಅಥವಾ ಲೋಕವು, ಪೂರ್ವಜನ್ಮದಲ್ಲಿದ್ದ ಸ್ಥಳ ಆಗಿರುತ್ತದೆ. 6.ಪಂಚಮಾಧಿಪತಿಸ್ಥಿತ ರಾಶಿಯು ಸೂಚಿಸುವ ದಿಕ್ಕಿನಿಂದ ಮತ್ತು ಪಂಚಮಾಧಿಪತಿ ತುಲ್ಯ ದೇಶ ಅಥವಾ ಲೋಕವು ಆಗಾಮಿ ಜನ್ಮ ಸಂಬಂಧ ಸೂಚಿಸುತ್ತದೆ.

**ಸ್ವೋಚ್ಚೇ ತದೀಶೇ ಸತಿ ದೇವಭೂಮಿಂ ದ್ವೀಪಾಂತರಂ ನೀಚರಿಪುಸ್ಥಲಸ್ಥೇ ।
ಸ್ವಕ್ಷೇ ಸುಹೃದ್ಭೇ ಸಮಭೇ ಸ್ಥಿತೇ ವಾ ಸಂಪ್ರಾಪ್ನುಯಾದ್ಭಾರತವರ್ಷಮೇವ ॥೨೫॥**

ಪೂರ್ವಾಪರ ಜನ್ಮಭೂಮಿ:- 1.ಮೇಲೆ ಹೇಳಿದ ನವಮಾಧಿಪತಿ ಅಥವಾ ಪಂಚಮಾಧಿಪತಿಯು ಉಚ್ಚಕ್ಷೇತ್ರದಲ್ಲಿ ಇದ್ದರೆ ಸೂಕ್ತ ಸ್ಥಳವು ದೇವಭೂಮಿ ಎಂದು ಹೇಳಬೇಕು. 2.ಇವರು ನೀಚ ಅಥವಾ ಶತ್ರುಕ್ಷೇತ್ರದಲ್ಲಿ ಇದ್ದರೆ ತುಲ್ಯದೇಶವು ದ್ವೀಪ ಎಂದು ಹೇಳಬೇಕು. 3.ಇವರು ಸ್ವಕ್ಷೇತ್ರ ಮಿತ್ರಕ್ಷೇತ್ರ ಅಥವಾ ಸಮಕ್ಷೇತ್ರದಲ್ಲಿ

ಇದ್ದರೆ ತುಲ್ಯದೇಶ (ನವಮಾಧಿಪತಿಯಿಂದ ಪೂರ್ವಜನ್ಮದೇಶ ಮತ್ತು ಪಂಚಮಾಧಿಪತಿಯಿಂದ ಆಗಾಮಿ ಜನ್ಮಸ್ಥಳ) ಭಾರತದೇಶವೇ ಎಂದು ತಿಳಿಯಬೇಕು.

ಆರ್ಯಾವರ್ತಂ ಗೀಷ್ಪತೇಃ ಪುಣ್ಯನದ್ಯಃ ಕಾವ್ಯೇಂದ್ವೋಶ್ಚ ಜ್ಞಸ್ಯ ಪುಣ್ಯಸ್ಥಲಾನಿ । ಪಂಗೋರ್ನಿಂದ್ಯಾ ಮ್ಲೇಚ್ಛಭೂಸ್ತೀಕ್ಷ್ಣಭಾನೋಃ ಶೈಲಾರಣ್ಯಂ ಕೀಕಟಂ ಭೂಮಿಜಸ್ಯ ॥೨೬॥

ಗ್ರಹರಿಂದ ಸೂಚಿತ ಜನ್ಮಭೂಮಿ:- 1.ಗುರುವು ಆರ್ಯಾವರ್ತವನ್ನು, 2.ಶುಕ್ರ ಮತ್ತು ಚಂದ್ರನು ನದಿಯದಡದ ಹತ್ತಿರ ಇರುವ ಪುಣ್ಯಕ್ಷೇತ್ರವನ್ನು, 3.ಬುಧನು ಸಕಲ ಪುಣ್ಯಕ್ಷೇತ್ರಗಳನ್ನು, 4.ಶನಿಯು ನಿಂದಿತ, ಹೀನ, ಅಥವಾ ಮ್ಲೇಂಛಭೂಮಿಯನ್ನು, 5.ಸೂರ್ಯನು ಗುಡ್ಡ-ಪರ್ವತ, ಅರಣ್ಯವನ್ನು, 6.ಕುಜನು ಕೀಕಟ ದೇಶವನ್ನು ಸೂಚಿಸುತ್ತಾನೆ.

ಸ್ಥಿರೇ ಸ್ಥಿರಾಂಶಾಧಿಗತಃ ಸಪಾಪಃ ಪೃಷ್ಠೋದಯೇಽಧೋಮುಖಭೇ ಚ ಸಂಸ್ಥಃ । ತದೀಶ್ವರೋ ವೃಕ್ಷಲತಾದಿಜನ್ಮ ಸ್ಯಾದನ್ಯಥಾ ಜೀವಯುತಃ ಶರೀರೀ ॥೨೭॥

ಮರ, ಬಳ್ಳಿ ಇತ್ಯಾದಿ ಜನ್ಮ:- 1.ನವಮಾಧಿಪತಿ ಅಥವಾ ಪಂಚಮಾಧಿಪತಿಯು ಸ್ಥಿರರಾಶಿ ಅಥವಾ ಸ್ಥಿರರಾಶ್ಯಂಶದಲ್ಲಿ, ಪೃಷ್ಠೋದಯ ಹಾಗೂ ಅಧೋಮುಖ ರಾಶಿಯಲ್ಲಿ ಪಾಪಗ್ರಹನಯುತಿಯಲ್ಲಿ ಇದ್ದರೆ ಮರ, ಬಳ್ಳಿ, ಇತ್ಯಾದಿ ಜನ್ಮ ಎಂದು ತಿಳಿಯಬೇಕು. (ನವಮಾಧಿಪತಿಯಿಂದ ಪೂರ್ವಜನ್ಮವನ್ನು ಮತ್ತು ಪಂಚಮಾಧಿಪತಿಯಿಂದ ಆಗಾಮಿಜನ್ಮ ವಿಚಾರ) 2.ವ್ಯತ್ಯಯವಾದ್ದಲ್ಲಿ ಪ್ರಾಣಿಜನ್ಮ ಎಂದು ತಿಳಿಯಬೇಕು.

ಲಗ್ನೇಶೇತುಃ ಸ್ವೋಚ್ಚಸುಹೃತ್ಸ್ವಗೇಹಾನ್ ತದೀಶ್ವರೋ ಯಾತಿ ಮನುಷ್ಯಜನ್ಮ । ಸಮೇ ಮೃಗಾಃ ಸ್ಯುರ್ವಿಹಗಾಃ ಪರಸ್ಮಿನ್ ದ್ರೇಕ್ಕಾಣರೂಪೈರಪಿ ಚಿಂತನೀಯಮ್ ॥೨೮॥

ಪೂರ್ವಾಪರ ಜನ್ಮವಿಚಾರ: 1. ನವಮಾಧಿಪತಿ ಅಥವಾ ಪಂಚಮಾಧಿಪತಿಯು, ಲಗ್ನಾಧಿಪತಿಯ ಉಚ್ಚ, ಸ್ವಕ್ಷೇತ್ರ ಅಥವಾ ಲಗ್ನಾಧಿಪತಿಯ ಮಿತ್ರಕ್ಷೇತ್ರದಲ್ಲಿ ಇದ್ದರೆ ಜಾತಕನ ಪೂರ್ವ ಅಥವಾ ಆಗಾಮಿಜನ್ಮವು ಮನುಷ್ಯಜನ್ಮ ಆಗಿರುತ್ತದೆ. 2.ಇವರು (9ಮತ್ತು 5)ಸ್ಥಿತರಾಶಿಯು ಲಗ್ನಾಧಿಪತಿಯ ಸಮಕ್ಷೇತ್ರವಾದರೆ ಪೂರ್ವ ಅಥವಾ ಆಗಾಮಿ ಜನನವು ಪ್ರಾಣಿಜನನ ಆಗಿರುತ್ತದೆ. ಇವರು ಸ್ಥಿತರಾಶಿಯು ಲಗ್ನಾಧಿಪತಿಯ ನೀಚ ಅಥವಾ ಶತ್ರುಕ್ಷೇತ್ರವಾದರೆ ಪೂರ್ವ ಅಥವಾ ಆಗಾಮಿಜನನವು ಪಕ್ಷಿಜನನ ಆಗಿರುತ್ತದೆ. ಇವೆಲ್ಲ ಫಲಗಳನ್ನು, ನವಮಾಧಿಪತಿ(ಪೂರ್ವಜನ್ಮ ವಿಚಾರ) ಅಥವಾಪಂಚಮಾಧಿಪತಿ (ಆಗಾಮಿ ಜನ್ಮ ವಿಚಾರ)ಸ್ಥಿತದ್ರೇಕ್ಕಾಣ ಸ್ವರೂಪದಿಂದಲೂ ಚಿಂತಿಸಬೇಕು.

ತಾವೇಕರಾಶೌ ಜನನಂ ಸ್ವದೇಶೇ ತೌ ತುಲ್ಯವೀರ್ಯಾಯದಿ ತುಲ್ಯಜಾತೌ। ವರ್ಣಾ ಗುಣಸ್ತಸ್ಯ ಖಗಸ್ಯ ತುಲ್ಯಃ ಸಂಜ್ಞೋದಿತೈರೇವ ವದೇ ವದೇತ್ತ್ವಮುಸ್ತಮ್ ॥೨೯॥

ಜನ್ಮಭೂಮಿ ಮತ್ತು ಜಾತಿ ವಿಚಾರ:- ನವಮಾಧಿಪತಿ ಮತ್ತು ಪಂಚಮಾಧಿಪತಿಯು ಏಕರಾಶಿಯಲ್ಲಿ ಇದ್ದರೆ ಜಾತಕನು ಸ್ವದೇಶದಲ್ಲಿಯೇ ಜನಿಸಿರುತ್ತಾನೆ. ಈ ಇಬ್ಬರು ಸಮಬಲ ಉಳ್ಳವರು ಆದರೆ ತನ್ನ ಪೂರ್ವಜನ್ಮದ ಜಾತಿಯಲ್ಲಿಯೇ ಜನಿಸಿರುತ್ತಾನೆ. ವರ್ಣ ಮತ್ತು ಗುಣವು ಆ ಗ್ರಹತುಲ್ಯ ಆಗಿರುತ್ತದೆ. ಇತರ ವಿಚಾರಗಳನ್ನು ಸಂಜ್ಞಾಧ್ಯಾಯದಲ್ಲಿ ಹೇಳಿದಂತೆ ಆ ಗ್ರಹರಿಂದ ಚಿಂತಿಸಬೇಕು.

ಭಾವಚಿಂತಾ-ಅಧ್ಯಾಯ-೧೫

ಭಾವಾಃ ಸರ್ವೇ ಶುಭಪತಿಯುತಾ ವೀಕ್ಷಿತಾ ವಾ ಶುಭೈಶ್ಚೈಸ್ತತ್ತದ್ಭಾವಾಃ ಸಕಲಫಲದಾಃ ಪಾಪದೃಗ್ಯೋಗಹೀನಾಃ। ಪಾಪಾಃ ಸರ್ವೇ ಭವನಪತಯಶ್ಚೇದಿಹಾಹುಸ್ತಥೈವ ಖೇಟೈಃಸರ್ವೈಃ ಶುಭಫಲಮಿದಂ ನೀಚಮೂಢಾರಿಹೀನೈಃ ॥೧॥

ಭಾವಫಲ ಪೂರ್ಣಪ್ರಾಪ್ತಿ ವಿಚಾರ:- ಸಕಲ ಭಾವಗಳು 1.ಶುಭಗ್ರಹರಿಂದ ದೃಷ್ಟ ಅಥವಾ ಯುತವಾದರೆ, ಅಥವಾ 2.ಭಾವಾಧಿಪತಿಯಿಂದ ದೃಷ್ಟ ಅಥವಾ ಯುತವಾದರೆ, ಅಥವಾ 3.ಭಾಗ್ಯಾಧಿಪತಿಯಿಂದ ಯುತ ಅಥವಾ ದೃಷ್ಟವಾದರೆ, ಆ ಭಾವಗಳು ಪೂರ್ಣ ಶುಭಫಲಗಳನ್ನು ನೀಡುತ್ತವೆ, 4.ಪಾಪಗ್ರಹರು ಭಾವಾಧಿಪತಿಗಳಾಗಿ ಆಯಾ ಭಾವಗಳಲ್ಲಿ ಮೇಲೆ ಹೇಳಿದಂತೆ ದೃಷ್ಟ ಅಥವಾ ಯುತರಾಗಿ ಇದ್ದರೆ ಶುಭಫಲ ನೀಡುತ್ತಾರೆ. 5.ಶುಭಫಲ ನೀಡುವ ಈ ಗ್ರಹರು ನೀಚ, ಅಸ್ತ ಅಥವಾ ಶತ್ರುಕ್ಷೇತ್ರಗಳಲ್ಲಿ ಇರಬಾರದು.

ತತ್ತದ್ಭಾವಾತ್ ತ್ರಿಕೋಣೇ ಸ್ವಸುಖ ಮದನಭೇಚಾಸ್ಪದೇ ಸೌಮ್ಯಯುಕ್ತೇ ಪಾಪಾನಾಂ ದೃಷ್ಟಿಹೀನೇ ಭವನಪಸಹಿತೇ ಪಾಪಖೇಟೈರಯುಕ್ತೇ। ಭಾವಾನಾಂ ಪುಷ್ಟಿಮಾಹುಃ ಸಕಲ ಶುಭಕರೀ ಮನ್ಯಥಾ ಚೇತ್ಪ್ರಣಾಶಂ ಮಿಶ್ರಂ ಮಿಶ್ರೈರ್ಗ್ರಹೇಂದ್ರೈಃ ಸಕಲಮಪಿ ತಥಾ ಮೂರ್ತಿ ಭಾವಾದಿಕಾನಾಮ್ ॥

ಭಾವಬಲ:- ಲಗ್ನಾದಿಭಾವಗಳ ಬಲವನ್ನು ನಿರ್ಣಯಿಸಲು 1.ಚಿಂತಿತಭಾವದಿಂದ ತ್ರಿಕೋಣ(5,9), ದ್ವಿತೀಯ, ಚತುರ್ಥ, ಸಪ್ತಮ ಮತ್ತು ದಶಮಭಾವದಲ್ಲಿ ಶುಭಗ್ರಹರು ಇರಬೇಕು. 2.ಚಿಂತಿತಭಾವಾಧಿಪತಿಯು ಪಾಪಗ್ರಹರ ದೃಷ್ಟಿ ಅಥವಾ ಯುತಿಯಲ್ಲಿ ಇರಬಾರದು. ಈ ಯೋಗಗಳು ಭಾವಪುಷ್ಟಿಯನ್ನು ನೀಡುತ್ತದೆ. 3.ಮೇಲೆ ಹೇಳಿದ ನಿಯಮಗಳಿಗೆ ವ್ಯತ್ಯಯ ಆದಲ್ಲಿ ಭಾವಫಲನಾಶ ಸಂಭವಿಸುತ್ತದೆ. 4.ಚಿಂತಿತಭಾವವು ಶುಭಾಶುಭ ಮಿಶ್ರಗ್ರಹರಿಂದ ಕೂಡಿದ್ದರೆ ಭಾವಫಲಗಳು ಮಿಶ್ರವಾಗಿ ಲಭಿಸುತ್ತವೆ.

ನಾಶಸ್ಥಾನಗತೋ: ದಿವಾಕರಕರೈರ್ಲುಪ್ತಸ್ತು ಯದ್ಭಾವಪೋ ನೀಚಾರಾತಿಗೃಹಂ ಗತೋಽಯದಿಭವೇತ್ಸೌಮ್ಯೈರಯುಕ್ತೇಕ್ಷಿತಃ। ತದ್ಭಾವಸ್ಯ ವಿನಾಶನಂ ವಿತನುತೇ ತಾದೃಗ್ವಿಧೋಽನ್ಯೋಽಸ್ತಿ ಚೇತ್ ತದ್ಭಾವೋಽಪಿ ಫಲಪ್ರದೋ ನ ಹಿ ಶುಭಶ್ಚೇನ್ನಾಶ ಮುಗ್ರಗ್ರಹಃ ॥೩॥

ಭಾವಾಧಿಪತಿಯ ಶುಭಾಶುಭಫಲ:- ಲಗ್ನಾದಿಭಾವಾಧಿಪತಿಗಳು 1.ಅಷ್ಟಮ ಭಾವದಲ್ಲಿ ಇದ್ದರೆ, ಅಥವಾ 2.ಅಸ್ತರಾದರೆ, ಅಥವಾ 3.ನೀಚಕ್ಷೇತ್ರದಲ್ಲಿ ಇದ್ದರೆ, ಅಥವಾ 4.ಶತ್ರುಕ್ಷೇತ್ರದಲ್ಲಿ ಇದ್ದರೆ ಹಾಗೂ ಶುಭಗ್ರಹರಿಂದ ದೃಷ್ಟ ಅಥವಾ ಯುತನು ಆಗದಿದ್ದರೆ ಆ ಭಾವಫಲನಾಶ ಆಗುತ್ತದೆ. ಭಾವಸ್ಥಿತಗ್ರಹನು ಪಾಪಗ್ರಹನಾಗಿ ದೂಷಿತ ನಾದರೆ ಭಾವಫಲದ ಹಾನಿ ಸಂಭವಿಸುತ್ತದೆ.

ಲಗ್ನಾಧಿಭಾವಾದ್ರಿಪುರಂಧ್ರರಿ:ಫೇ ಪಾಪಗ್ರಹಾಸ್ತದ್ಭವನಾದಿನಾಶವಮ್ । ಸೌವ್ಯಾಸ್ತು ನಾತ್ಯಂತ ಫಲಪ್ರದಾ: ಸ್ಯುರ್ಭಾವಾದಿಕಾನಾಂ ಫಲಮೇವ ಮಾಹು: ॥೪॥

ದು:ಸ್ಥಾನದ ಗ್ರಹಫಲ:- 1.ಲಗ್ನಾಧಿಭಾವಗಳಿಂದ, ಷಷ್ಠ, ಅಷ್ಟಮ ಮತ್ತು ದ್ವಾದಶದಲ್ಲಿ ಪಾಪಗ್ರಹರು ಇದ್ದರೆ ಚಿಂತಿತಭಾವದ ನಾಶ ಸಂಭವಿಸುತ್ತದೆ. 2.ಲಗ್ನಾದಿ ಭಾವಗಳಿಂದ ಷಷ್ಠ, ಅಷ್ಟಮ ಮತ್ತು ದ್ವಾದಶದಲ್ಲಿ ಶುಭಗ್ರಹರು ಇದ್ದರೆ, ಚಿಂತಿತ ಭಾವದ ಅಭಿವೃದ್ಧಿಗೆ ಅವರು ಅಧಿಕ ಫಲಪ್ರದರು ಆಗಿರುವುದಿಲ್ಲ ಎಂದು ಹೇಳುತ್ತಾರೆ.

ಯದ್ಭಾವನಾಥೋ ರಿಪುರಂಧ್ರರಿ:ಫೇ ದು:ಸ್ಥಾನಪೋ ಯದ್ಭವನಸ್ಥಿತೋ ವಾ । ತದ್ಭಾವನಾಶಂ ಕಥಯಂತಿ ತಜ್ಞಾ: ಶುಭೇಕ್ಷಿತಸ್ತದ್ಭವನಸ್ಯ ಸೌಖ್ಯಮ್ ॥೫॥

ಭಾವಾಧಿಪನ ಫಲ:- 1.ಚಿಂತಿತ ಭಾವಾಧಿಪತಿಯು ಷಷ್ಠ, ಅಷ್ಟಮ ಅಥವಾ ದ್ವಾದಶದಲ್ಲಿ ಇದ್ದರೆ, ಅಥವಾ 2.ದುಸ್ಥಾನಾಧಿಪತಿಗಳಲ್ಲಿ ಒಬ್ಬನು ಚಿಂತಿತಭಾವದಲ್ಲಿ ಇದ್ದರೆ ಆ ಭಾವದಫಲ ನಾಶ ಆಗುತ್ತದೆ. 3.ಈ ಚಿಂತಿತಭಾವವನ್ನು(ದುಸ್ಥಾನಾಧಿಪತಿ ಇದ್ದ) ಶುಭಗ್ರಹನು ನೋಡಿದರೆ ಆ ಭಾವಫಲವು ಶುಭ ಆಗುತ್ತದೆ, ಎಂದು ತಜ್ಞರು ಹೇಳುತ್ತಾರೆ.

ಭಾವಾಧೀಶೇ ಚ ಭಾವೇ ಸತಿ ಬಲರಹಿತೇ ಚ ಗ್ರಹೇ ಕಾರಕಾಖ್ಯೇ-ಪಾಪಾಂ-ತ:ಸ್ಥೇ ಚ ಪಾಪೈರರಿಭಿರಪಿಸಮೇತೇಕ್ಷಿತೇನಾನ್ಯಖೇಟೈ: । ಪಾಪೈಸ್ತದ್ಬಂಧುಮೃತ್ಯು ವ್ಯಯಭವನಗತೈಸ್ತ್ರಿಕೋಣಸ್ಥಿತೈರ್ವಾ ಪಾಚ್ಯ ತದ್ಭಾವಹಾನಿ: ಸ್ಫುಟಮಿಹಭವತಿ ದ್ವಿತ್ರಿಸಂಪಾದಭಾವಾತ್ ॥೬॥

ಭಾವಹಾನಿ ವಿಚಾರ:-1. ಭಾವಾಧಿಪತಿಯು ಬಲಹೀನನು ಆಗಬೇಕು, 2.ಭಾವವು ಬಲಹೀನ ಆಗಬೇಕು, 3.ಭಾವಕಾರಕನು ಬಲಹೀನನು ಆಗಬೇಕು, 4.ಭಾವ, ಭಾವಾಧಿಪತಿ ಅಥವಾ ಭಾವಕಾರಕನು ಶತ್ರುಗ್ರಹನ ಯುತಿ ಅಥವಾ ದೃಷ್ಟಿಯಲ್ಲಿ ಇರುವುದು, ಮತ್ತು ಶುಭಗ್ರಹನಿಂದ ನೋಡಲ್ಪಡದೇ ಅಥವಾ ಯುತನಾಗದೇ ಇರುವುದು. 5.ಭಾವ, ಭಾವಾಧಿಪತಿ ಅಥವಾ ಭಾವಕಾರಕನಿಂದ ಚತುರ್ಥ, ಅಷ್ಟಮ ಮತ್ತು ದ್ವಾದಶದಲ್ಲಿ ಪಾಪಗ್ರಹನು ಇರುವುದು. 6.ಭಾವ, ಭಾವಾಧಿಪತಿ ಅಥವಾ ಭಾವಕಾರಕನಿಂದ ಪಂಚಮ ಮತ್ತು ನವಮದಲ್ಲಿ ಪಾಪಗ್ರಹರು ಇರುವುದು. ಈ ರೀತಿ ಚಿಂತಿತ ಭಾವದಿಂದ ಗ್ರಹಸ್ಥಿತಿ ಇದ್ದರೆ ಭಾವದ ಹಾನಿ ಸಂಭವಿಸುತ್ತದೆ. ಇವುಗಳಲ್ಲಿ ಎರಡು ಅಥವಾ

ಮೂರು ಲಕ್ಷಣಗಳು ಕಂಡುಬಂದರೆ ಭಾವಫಲದ ನಾಶ ಸಂಭವಿಸುತ್ತದೆ.

ತತ್ತದ್ಭಾವ ಪರಾಭವೇಶ್ವರ ಖರದ್ರೇಕ್ಕಾಣ ಪಾ ದುರ್ಬಲಾ ಭಾವಾರ್ಯ-ಷ್ಟಮುಕಾಮಗಾ ನಿಜದಶಾಯಾಂ ಭಾವನಾಶಪ್ರದಾಃ । ಪಾಪಾಭಾವ-ಗೃಹಾತ್ ತ್ರಿಶತ್ರುಭವಗಾಃ ಕೇಂದ್ರತ್ರಿಕೋಣಗೇ ಶುಭಾಃ ವೀರ್ಯಾಢ್ಯಾಃ ಖಲುಭಾವನಾಥಸುಹೃದೋ ಭಾವಸ್ಯ ಸಿದ್ಧಿಪ್ರದಾಃ ॥೭॥

ದಶಾಫಲ ಹಾನಿ ವಿಚಾರಃ- ಚಿಂತಿತಭಾವದಿಂದ 1.ಅಷ್ಟಮಾಧಿಪತಿ, 2.ಖರದ್ರೇಕ್ಕಾಣಾಧಿಪತಿ(೨೨ನೇ ದ್ರೇಕ್ಕಾಣಾಧಿಪತಿ), 3.ಷಷ್ಠದಲ್ಲಿ ಸ್ಥಿತಬಲಹೀನಗ್ರಹ, 4.ಸಪ್ತಮದಲ್ಲಿ ಸ್ಥಿತ ಬಲಹೀನ ಗ್ರಹ, 5.ಅಷ್ಟಮದಲ್ಲಿ ಸ್ಥಿತ ಬಲಹೀನಗ್ರಹ, ಇವರೆಲ್ಲ ತಮ್ಮ ದಶಾಕಾಲದಲ್ಲಿ ಚಿಂತಿತಭಾವದ ಹಾನಿ ಮಾಡುತ್ತಾರೆ. 6.ಚಿಂತಿತಭಾವದಿಂದ ತೃತೀಯ, ಷಷ್ಠ ಮತ್ತು ಏಕಾದಶಸ್ಥಿತ ಪಾಪಗ್ರಹರು ಮತ್ತು ಕೇಂದ್ರ-ತ್ರಿಕೋಣಸ್ಥಿತ ಶುಭಗ್ರಹರು, ಆ ಭಾವಾಧಿಪತಿಯ ಮಿತ್ರನಾಗಿ ಬಲಿಷ್ಠನಾದರೆ ಚಿಂತಿತಭಾವಫಲ ಲಭಿಸುತ್ತದೆ.

ರಾಶ್ಯೋರ್ಜನ್ಮವಿಲಗ್ನಯೋರ್ಧೃತಿಪತಿರ್ನ್ಯೃತ್ಯಸ್ಥತದ್ವೀಕ್ಷಕೌ ಮಂದಃ ಕ್ರೂರದೃಗಾಣಪೋಗುಳಿಕಪಸ್ತ್ರ್ಯರ್ಯುಕ್ತರಾಶ್ಯಂಶಪಾಃ । ರಾಹುಶ್ಚೈಷ ಸುದುರ್ಬಲಃ ಸ ಜನನೇ ಭಾವಾನಭೀಷ್ಟಸ್ಥಿತಃ ಪಾಪಾಲೋಕಿತ ಸಂಯುತೋ ನಿಜದಶಾಯಾಂ ಭಾವನಾಶಾವಹಾಃ ॥೮॥

ದಶಾಕಾಲದಲ್ಲಿ ಭಾವಹಾನಿಃ- ಲಗ್ನ ಅಥವಾ ಚಂದ್ರನಿಂದ, 1.ತೃತೀಯಾಧಿಪತಿ, 2,ಅಷ್ಟಮಾಧಿಪತಿ ಅಥವಾ ಅಷ್ಟಮವನ್ನು ನೋಡುವಗ್ರಹ, 3.ಶನಿ, 4.ಇಪ್ಪತ್ತೆರಡನೇ ದ್ರೇಕ್ಕಾಣಾಧಿಪತಿ, 4.ಮಾಂದಿ ಸ್ಥಿತರಾಶ್ಯಾಧಿಪತಿ ಮತ್ತು ನವಾಂಶಾಧಿಪತಿಗಳು, 6,ಈ ಗ್ರಹರು ಸ್ಥಿತರಾಶ್ಯಾಧಿಪತಿ ಮತ್ತು ನವಾಂಶಾಧಿಪತಿಗಳು, 7.ಬಲಹೀನನಾದ ರಾಹು, ಇವರೆಲ್ಲ ತಮ್ಮ ದಶಾಕಾಲದಲ್ಲಿ ಭಾವಹಾನಿ ಮಾಡುತ್ತಾರೆ.

ಭಾವಸ್ಯೋದಯ ಪಾಶ್ರಿತಸ್ಯ ಕುಶಲಂ ಯದ್ಭಾವಪೇನೋದಯ ಸ್ವಾಮಿಯೋತಿಷ್ಠತಿ ಸಂಯುತೋಽಪಿ ಕಲಯೇತ್ತದ್ಭಾವಜಾತಂ ಫಲಮ್। ದುಃಸ್ಥಾನೇ ವಿಪರೀತಮೇತದುದಿತಂ ಭಾವೇಶ್ವರೇ ದುರ್ಬಲೇ ದೋಷೋಽತೀವ ಭವೇದ್ಬಲೇನ ಸಹಿತೇ ದೋಷಾಲ್ಪತಾ ಜಲ್ಪಿತಾ ॥೯॥

ಲಗ್ನಾಧಿಪನ ಸ್ಥಿತಿಯಿಂಡ ಭಾವಫಲಃ- 1.ಲಗ್ನಾಧಿಪತಿಯು ಸ್ಥಿತಭಾವದ ಫಲ ವೃದ್ಧಿ ಆಗುತ್ತದೆ. 3.ಲಗಾಧಿಪತಿಸ್ಥಿತಭಾವಾಧಿಪತಿ, 2,ಲಗ್ನಾಧಿಪತಿಯ ಯುತಿಯಲ್ಲಿದ್ದ ಗ್ರಹರ ಫಲವನ್ನು ಲಗ್ನಾಧಿಪತಿಯು ವೃದ್ಧಿಗೊಳಿಸುತ್ತಾನೆ. 4.ದುಸ್ಥಾನಸ್ಥಿತ ಭಾವಾಧಿಪತಿ ಬಲಹೀನನಾದರೆ ಅವನ ಭಾವಫಲ ಅತ್ಯಂತ ದೋಷಕರ ಆಗುತ್ತದೆ. 5.ದುಸ್ಥಾನಸ್ಥಿತ ಗ್ರಹನು ಬಲಿಷ್ಠನಾದರೆ ಅವನ ಭಾವಫಲ ದೋಷ ಕ್ಷೀಣಿಸುತ್ತದೆ.

ಯದ್ಭಾವೇಷ್ವಶುಭೋಽಪಿ ವೋದಯಪತಿಸ್ತದ್ಭಾವವೃದ್ಧಿಂ ದಿಶೇದ್ದುಃಸ್ಥಾನಾಧಿಪತಿಃ ಸ ಚೇದ್ಯದಿ ತನೋಃ ಪ್ರಾಬಲ್ಯಮಸ್ಯ ನ। ಅತ್ರೋದಾಹರಣಂ ಕುಜೇ ಸುತಗತೇ ಸಿಂಹೇ ಝುಷೇ ವಾ ಸ್ಥಿತೇ ಪುತ್ರಾಪ್ತಿಂ ವದಂತ್ಯುತ್ತಮಾಃ ॥೧೦॥

ಲಗ್ನಾಧಿಪನಿಂದ ಭಾವಫಲವೃದ್ಧಿ 1.ಲಗ್ನಾಧಿಪತಿಯು ಪಾಪಗ್ರಹನಾದರೂ ತಾನು ಸ್ಥಿತ ಭಾವಫಲವನ್ನು ವೃದ್ಧಿಮಾಡುತ್ತಾನೆ. 2.ಲಗ್ನಾಧಿಪತಿಯು ದುಸ್ಥಾನಾಧಿಪತಿ ಕೂಡಾ ಆದರೂ (6, 8, 12), ಲಗ್ನಾಧಿಪತ್ಯಫಲವೇ ಪ್ರಾಮುಖ್ಯ ಹಾಗೂ ಪ್ರಬಲ ಆಗಿರುತ್ತದೆ. ಮೇಷ ಮತ್ತು ತುಲಾ ಲಗ್ನಕ್ಕೆ ಲಗ್ನಾಧಿಪತಿ ಕುಜ ಮತ್ತು ಶುಕ್ರನೇ ಅಷ್ಟಮಾಧಿಪತಿಗಳು ಆಗಿರುತ್ತಾರೆ. ಮತ್ತು ವೃಶ್ಚಿಕ ಲಗ್ನಕ್ಕೆ ಲಗ್ನಾಧಿಪತಿ ಶುಕ್ರ ಮತ್ತು ಕುಜನೇ ಷಷ್ಠಾಧಿಪತಿಗಳು ಆಗಿರುತ್ತಾರೆ. ಕುಂಭ ಲಗ್ನಕ್ಕೆ ಲಗ್ನಾಧಿಪತಿ ಶನಿಯೇ ವ್ಯಯಾಧಿಪತಿ ಆಗಿರುತ್ತಾನೆ. ಆದ್ದರಿಂದ ಕುಜ, ಶುಕ್ರ ಮತ್ತು ಶನಿಯು ಲಗ್ನಾಧಿಪತಿಗಳಾದಾಗ, ದುಸ್ಥಾನಾಧಿಪತ್ಯಫಲವನ್ನು ಕ್ಷೀಣಿಸಿ, ಲಗ್ನಾಧಿಪತ್ಯಫಲವನ್ನೇ ಅಧಿಕ ನೀಡುತ್ತಾರೆ. ಉದಾ:-ಲಗ್ನಾಧಿಪತಿ **ಕುಜನು** ಸಿಂಹ ಅಥವಾ ಮೀನರಾಶಿಯಲ್ಲಿ ಪಂಚಮ ಭಾವದಲ್ಲಿ ಇದ್ದು ಶುಭದೃಷ್ಟನಾದರೆ ಸಂತಾನ ಸುಖ ಲಭಿಸುತ್ತದೆ.

ದ್ವಿಸ್ಥಾನಾಧಿಪತಿತ್ವಮಸ್ತಿ ಯದಿ ಚೇನ್ಮುಖ್ಯಂ ತ್ರಿಕೋಣರ್ಕ್ಷಜಂ ತಸ್ಯಾ-ರ್ಧಂ ಸ್ವಗೃಹೇಽಥ ಪೂರ್ವಮುಭಯೋರ್ಯತ್ತದ್ದಶಾದೌ ವದೇತ್। ಪಶ್ಚಾ-ದ್ಭಾವವಿಹಾಪರಾರ್ಧಸಮಯೇ ಯುಗ್ಮೇ ಗೃಹೇ ಯುಗ್ಮಜಂ ತ್ವೋಜಸ್ಥೇ ಸತಿ ಚೌಜಭಾವಜಫಲಂ ಶಂಸಂತಿ ಕೇಚಿಜ್ಜನಾಃ ॥೧೧॥

ಎರಡು ಭಾವಾಧಿಪತ್ಯ ಉಳ್ಳಗ್ರಹಫಲ ವಿಚಾರ 1.ಒಬ್ಬಗ್ರಹನಿಗೆ ಎರಡು ಭಾವಾಧಿಪತ್ಯಗಳು ಇದ್ದಾಗ ಅವನ ಮೂಲತ್ರಿಕೋಣರಾಶಿಯ ಭಾವಫಲವು ಪ್ರಬಲ ಹಾಗೂ ಪ್ರಧಾನ ಆಗಿರುತ್ತದೆ, ಮತ್ತು ಸ್ವಕ್ಷೇತ್ರಫಲವು ಮೂಲತ್ರಿಕೋಣಫಲದ ಅರ್ಧ ಆಗಿರುತ್ತದೆ. ಕುಜಾದಿ ಐದು ತಾರಾಗ್ರಹರಿಗೆ ಎರಡೆರಡು ಭಾವಗಳ ಅಧಿಪತ್ಯ ಇರುತ್ತದೆ. ಕುಜನಿಗೆ-ಮೇಷ, ಬುಧ-ಕನ್ಯಾ, ಗುರು-ಧನು, ಶುಕ್ರ-ತುಲಾ ಮತ್ತು ಶನಿಗೆ ಕುಂಭರಾಶಿ ಮೂಲತ್ರಿಕೋಣ ಆಗಿರುತ್ತದೆ. 2,ಎರಡು ಭಾವಗಳ ಅಧಿಪತ್ಯ ಉಳ್ಳಗ್ರಹನು ಮೊದಲು (ಲಗ್ನದಿಂದ) ಬರುವ ಆಧಿಪತ್ಯದ ಫಲವನ್ನು ತನ್ನದಶಾಕಾಲದ ಪ್ರಥಮಾರ್ಧದಲ್ಲಿ ನೀಡುತ್ತಾನೆ. ಅನಂತರ ಬರುವ ಭಾವಾಧಿಪತ್ಯದ ಫಲವನ್ನು ತನ್ನ ದಶಾಕಾಲದ ದ್ವಿತಿಯಾರ್ಧದಲ್ಲಿ ನೀಡುತ್ತಾನೆಂದು ಕೆಲವರ ಮತ ಆಗಿರುತ್ತದೆ. 3.ಭಾವಸ್ಥಿತ ಗ್ರಹನು ಯುಗ್ಮರಾಶಿಯಲ್ಲಿ ಇದ್ದರೆ ಮೊದಲು ತನ್ನ ಯುಗ್ಮರಾಶಿ ಭಾವಫಲವನ್ನು ನೀಡಿ ಅನಂತರ ತನ್ನ ವಿಷಮರಾಶಿಫಲವನ್ನು ನೀಡುತ್ತಾನೆ. 4.ಭಾವಸ್ಥಿತಗ್ರಹನು ವಿಷಮ ರಾಶಿಯಲ್ಲಿ ಇದ್ದರೆ, ಮೊದಲು ತನ್ನ ವಿಷಮರಾಶಿ ಭಾವಫಲವನ್ನು ನೀಡಿ ಅನಂತರ ಯುಗ್ಮರಾಶಿ ಭಾವಫಲವನ್ನು ನೀಡುತ್ತಾನೆ, ಎಂದು ಇನ್ನು ಕೆಲವರು ಹೇಳುತ್ತಾರೆ.

ಯದ್ಭಾವೇಶಸ್ಯಾಧಿಶತ್ರುಗ್ರಹೋ ವಾ ಯೋ ವಾ ಖೇಟೋ ಬಿಂದು ಶೂನ್ಯ-ರ್ಕ್ಷಯುಕ್ತಃ। ತತ್ತತ್ಪಾಕೇ ಮೂರ್ತಿಭಾವಾದಿಕಾನಾಂ ನಾಶಂ ಬ್ರೂಯಾದ್ದೈ-ವವಿತ್ಪ್ರಾಶ್ನಿಕಾಯ ॥೧೨॥

ಪ್ರಶ್ನೆಯಲ್ಲಿ ಭಾವಫಲ ಚಿಂತನೆ ಪ್ರಶ್ನಕಾಲದಲ್ಲಿ ಪ್ರಚ್ಛಕನಿಗೆ ಲಗ್ನಾಧಿಭಾವಾಧಿಪತಿಯ ಅತಿಶತ್ರುವಿನ ದಶಾಕಾಲದಲ್ಲಿ ಅಥವಾ ಅಷ್ಟಕವರ್ಗದಲ್ಲಿ ಶೂನ್ಯಬಿಂದು ಇರುವ ರಾಶಿಸ್ಥಿತ ಗ್ರಹನ ದಶಾಕಾಲದಲ್ಲಿ ಸೂಕ್ತಭಾವಫಲದ ಹಾನಿಯನ್ನು ಹೇಳಬೇಕು.

ಸ್ವೋಚ್ಚೇ ಸುಹೃತ್ಕ್ಷೇತ್ರಗತೋ ಗ್ರಹೇಂದ್ರಃ ಷಡ್ಭಿರ್ಬಲೈರ್ಮುಖ್ಯ ಬಲಾನ್ವಿತೋಽಪಿ । ಸಂಧೌಸ್ಥಿತಃ ಸನ್ನಫಲಪ್ರದಃ ಸ್ಯಾದೇವಂ ವಿಚಿಂತ್ಯಾತ್ರವದೇದ್ವಿಪಾಕೇ ॥೧೩॥

ಭಾವಸಂಧಿಸ್ಥಿತಗ್ರಹಫಲ–ಉಚ್ಚ, ಅಥವಾ **ಮಿತ್ರ**ಕ್ಷೇತ್ರಸ್ಥಿತಗ್ರಹನು ಷಡ್ಬಲಗಳಲ್ಲಿ ಬಲಿಷ್ಠನಾಗಿದ್ದರೂ, ಭಾವಸಂಧಿಯಲ್ಲಿ ಇದ್ದರೆ **ಅಫಲನು** ಆಗುತ್ತಾನೆ. ಈ ವಿಚಾರವನ್ನು ದಶಾ-ಭುಕ್ತಿಫಲ ನಿರ್ಣಯಿಸುವಾಗ **ಚಿಂತಿಸಬೇಕು.**

ಭಾವಸಂಧಿ ವಿಚಾರ ಶ್ರೀಪತಿಮತಃ-"**ವದಂತಿ ಭಾವೈಕ್ಯದಲಂ** ಹಿ ಸಂಧಿ ತತ್ರಸ್ಥಿತಃ ಸ್ಯಾದಫಲೋ ಗ್ರಹೇಂದ್ರಃ" ಎರಡು ಭಾವಗಳ **ಅರ್ಧಾಂಶ** (ಭಾವಮಧ್ಯದಿಂದ) ಕೂಡುವ ಬಿಂದುವು ಭಾವಸಂಧಿ ಆಗಿರುತ್ತದೆ. **ಭಾವಸಂಧಿಯಲ್ಲಿರುವ** ಗ್ರಹನು ಅಫಲನು, ಅಂದರೆ ಶುಭಾಶುಭಫಲವನ್ನು ನೀಡಲು **ಅಸಮರ್ಥನು** ಆಗುತ್ತಾನೆ.

ಭಾವೇಷು ಭಾವಸ್ಫುಟತುಲ್ಯಭಾಗಸ್ತದ್ಭಾವಜಂ ಪೂರ್ಣಫಲಂ ವಿಧತ್ತೇ । ಸಂಧೌಫಲಂನಾಸ್ತಿ ತದಂತರಾಲೇ ಚಿಂತ್ಯೋಽನುಪಾತಃ ಖಲುಖೇಚರಾಣಾಮ್ ॥೧೪॥

ಭಾವಮಧ್ಯ ಮತ್ತು ಸಂಧಿಸ್ಥಿತ ಗ್ರಹಫಲ- ಸಕಲ ಭಾವಗಳಲ್ಲಿ ಭಾವಮಧ್ಯಸ್ಥಿತ ಗ್ರಹನು, ಆ ಭಾವಫಲವನ್ನು ಪೂರ್ಣವಾಗಿ ನೀಡುತ್ತಾನೆ. ಭಾವಸಂಧಿಯಲ್ಲಿರುವ ಗ್ರಹನು ಫಲವನ್ನು ನೀಡುವುದಿಲ್ಲ. ಭಾವಮಧ್ಯದಿಂದ ಭಾವಸಂಧಿಯ ನಡುವೆ ಇರುವ ಗ್ರಹನ ಫಲವನ್ನು ತ್ರೈರಾಶಿಕ ಕ್ರಮದಿಂದ ಕಂಡು ಹಿಡಿಯಬೇಕು.

ಸೂರ್ಯಾದಾತ್ಮ ಪಿತೃ ಪ್ರಭಾವನಿರುಜಾಂ ಶಕ್ತಿಂ ಶ್ರಿಯಂ ಚಿಂತಯೇತ್ । ಚೇತೋಬುದ್ಧಿನೃಪಪ್ರಸಾದಜನನೀ ಸಂಪತ್ಕರಶ್ಚಂದ್ರಮಾಃ ।ಸತ್ವಂರೋಗಗುಣಾನುಜಾವನಿರಿಪುಜ್ಞಾತೀಂಧರಾಸೂನುನಾ ವಿದ್ಯಾಬಂಧು ವಿವೇಕಮಾತುಲಸುಹೃದ್ವಾಕ್ಕರ್ಮಕೃದ್ಬೋಧನಃ ॥೧೫॥ ಪ್ರಜ್ಞಾ ವಿತ್ತಶರೀರಪುಷ್ಟಿತನಯಜ್ಞಾನಾನಿ ವಾಗೀಶ್ವರಾತ್ ಪತ್ನೀವಾಹನಭೂಷಣಾನಿ ಮದನವ್ಯಾಪಾರ ಸೌಖ್ಯಂಭೃಗೋಃ। ಆಯುರ್ಜೀವನ ಮೃತ್ಯುಕಾರಣವಿಪದ್ಭೃತ್ಯಾಂಶ್ಚ ಮಂದಾದ್ವದೇತ್ ಸರ್ಪೇಣೈವ ಪಿತಾಮಹಂ ತು ಶಿಖಿನಾ ಮಾತಾಮಹಂ ಚಿಂತಯೇತ್ ॥೧೬॥

ಸೂರ್ಯನಿಂದ ಚಿಂತಿಸಬೇಕಾದ ವಿಚಾರ:-ಆತ್ಮ, ತಂದೆ, ಪ್ರಭಾವ, ಆರೋಗ್ಯ ಶಕ್ತಿ, ಶ್ರೇಯಸ್ಸು, ಇವುಗಳನ್ನು ಸೂರ್ಯನಿಂದ ಚಿಂತಿಸಬೇಕು.

ಚಂದ್ರನಿಂದ ಚಿಂತಿಸಬೇಕಾದ ವಿಚಾರ:- ಚೇತನ, ಬುದ್ಧಿ, ರಾಜಕೃಪೆ, ತಾಯಿ, ಶ್ರೇಯೋಭಿವೃದ್ಧಿ ಇವುಗಳನ್ನು ಚಂದ್ರನಿಂದ ಚಿಂತಿಸಬೇಕು.

ಕುಜನಿಂದ ಚಿಂತಿಸಬೇಕಾದ ವಿಚಾರ:- ಸತ್ವ, ರೋಗ, ಗುಣ, ಕಿರಿಯಸಹೋದರ, ಭೂಮಿ, ಶತ್ರು, ರಕ್ತಸಂಬಂಧಿಗಳು, ಇವರನ್ನು ಕುಜನಿಂದ ಚಿಂತಿಸಬೇಕು.

ಬುಧನಿಂದ ಚಿಂತಿಸಬೇಕಾದ ವಿಚಾರ:- ವಿದ್ಯೆ, ಬಂಧುಬಾಂಧವರು, ವಿವೇಕತೆ, ಸೋದರಮಾವ, ಮಿತ್ರರು, ಮಾತು ಮತ್ತು ಕರ್ಮ ವಿಚಾರ ಬುಧನಿಂದ ಚಿಂತಿಸಬೇಕು.

ಗುರುವಿನಿಂದ ಚಿಂತಿಸಬೇಕಾದ ವಿಚಾರ:- ಮೇಧಾವಿತನ, ಸಂಪತ್ತು, ದೇಹ ಪುಷ್ಟತೆ, ಸಂತಾನ, ಜ್ಞಾನ ವಿಚಾರಗಳನ್ನು ಗುರುವಿನಿಂದ ಚಿಂತಿಸಬೇಕು.

ಶುಕ್ರನಿಂದ ಚಿಂತಿಸಬೇಕಾದ ವಿಚಾರ:- ಪತ್ನಿ, ವಾಹನ, ಆಭರಣ, ಕಾಮ-ಪ್ರೇಮ, ಸುಖ, ಇವುಗಳನ್ನು ಶುಕ್ರನಿಂದ ಚಿಂತಿಸಬೇಕು.

ಶನಿಯಿಂದ ಚಿಂತಿಸಬೇಕಾದ ವಿಚಾರ:- ಆಯುಷ್ಯ, ಜೀವನೋಪಾಯ, ಮರಣ ಹೇತು, ವಿಪತ್ತು ಸೇವಕರು ಇತ್ಯಾದಿ ಶನಿಯಿಂದ ಚಿಂತಿಸಬೇಕು.

ರಾಹುವಿನಿಂದ ಪಿತಾಮಹ ಮತ್ತು ಕೇತುವಿನಿಂದ ಮಾತಾಮಹನನ್ನು ಚಿಂತಿಸಬೇಕು.

ದ್ಯುಮಣಿರಮರಮಂತ್ರೀ ಭೂಸುತಃ ಸೋಮಸೌಮ್ಯೌ ಗುರುರಿನತನಯಾರೌ ಭಾರ್ಗವೋ ಭಾನುಪುತ್ರಃ । ದಿನಕರದಿವಿಜೇಜ್ಯೌ ಜೀವಭಾನುಜ್ಞಮಂದಾಃ ಸುರಗುರುರಿನಸೂನುಃ ಕಾರಕಾಃ ಸ್ಯುರ್ವಿಲಗ್ನಾತ್ ॥೧೭॥

ಲಗ್ನಾದಿಭಾವ ಕಾರಕರು:- ಕ್ರಮವಾಗಿ 1.ರವಿ, 2.ಗುರು, 3.ಕುಜ, 4.ಚಂದ್ರ ಮತ್ತು ಬುಧ, 5.ಗುರು, 6.ಶನಿ ಮತ್ತು ಕುಜ, 7.ಶುಕ್ರ, 8.ಶನಿ, 9.ರವಿ ಮತ್ತು ಗುರು, 10.ಗುರು, ರವಿ, ಬುಧ ಮತ್ತು ಶನಿ, 11.ಗುರು ಮತ್ತು 12.ಶನಿ ಇವರು ಭಾವಕಾರಕರು ಆಗುತ್ತಾರೆ.

ಸುಹೃದರಿಪರಕೀಯಸ್ವರ್ಕ್ಷತುಂಗಸ್ಥಿತಾನಾಂ ಫಲಮನು ಪರಿಚಿಂತ್ಯಂ ಲಗ್ನದೇಹಾದಿಭಾವೈಃ । ಸಮುಪಚಯವಿಪತ್ತೀ ಸೌಮ್ಯಪಾಪೇಷು ಸತ್ಯಃ ಕಥಯತಿ ವಿಪರೀತಂ ರಿಃಫಷಷ್ಠಾಷ್ಟಮೇಷು ॥೧೮॥

ಲಗ್ನಾದಿಭಾವಸ್ಥಿತ ಗ್ರಹರ ಫಲಚಿಂತನೆಯಲ್ಲಿ ಅವರು ಸ್ಥಿತರಾಶಿಯು, ಮಿತ್ರ, ಶತ್ರು, ಸಮ, ಸ್ವಕ್ಷೇತ್ರ ಅಥವಾ ಉಚ್ಚರಾಶಿಯೋ ಎಂದು ತಿಳಿದು ತುಲ್ಯ ಭಾವಫಲವನ್ನು ನಿರ್ಣಯಿಸಬೇಕು. ಶುಭಗ್ರಹರು ತಾವು ಸ್ಥಿತಭಾವಫಲದ ವೃದ್ಧಿಯನ್ನು, ಪಾಪ ಗ್ರಹರು ಭಾವಫಲದಹಾನಿಯನ್ನು ಮಾಡುತ್ತಾರೆ. ಆದರೆ ಷಷ್ಠ, ಅಷ್ಟಮ ಮತ್ತು ದ್ವಾದಶಸ್ಥಿತ ಗ್ರಹರು ವಿರುದ್ಧಫಲ ನೀಡುತ್ತಾರೆ, ಎಂದು ಸತ್ಯಾಚಾರ್ಯರ ಮತ ಆಗಿರುತ್ತದೆ.

ಪಾಪಗ್ರಹಾಃ ಷಷ್ಠವ್ಯತಿವ್ಯಯಸ್ಥಾಸ್ತದ್ಭಾವವೃದ್ಧಿಂ ಕಲಯಂತಿ ದೋಷೈಃ । ಶುಭಾಸ್ತು ತದ್ಭಾವಲಯಂ ಹಿ ತಸ್ಮಾಚ್ಛತ್ರ್ವಾದಿಭಾವೋತ್ಥಫಲಪ್ರಣಾಶಃ ॥

ದುಃಸ್ಥಾನಸ್ಥಿತ ಶುಭಾಶುಭ ಗ್ರಹಫಲ:-ಷಷ್ಠ, ಅಷ್ಟಮ ಮತ್ತು ದ್ವಾದಶಸ್ಥಿತ ಪಾಪ ಗ್ರಹರು ಆ ಭಾವದ ಅಶುಭಫಲವನ್ನು ವೃದ್ಧಿ ಮಾಡುತ್ತಾರೆ. ಶುಭಗ್ರಹರು ಆ ಭಾವಗಳು ಸೂಚಿಸುವ ಶತ್ರುತ್ವಾದಿ ಅಶುಭಫಲಗಳನ್ನು ನಾಶ ಮಾಡುತ್ತಾರೆ.

ಭಾವಸ್ಯ ಯಸ್ಯೈವ ಫಲಂ ವಿಚಿಂತ್ಯಂ ಭಾವಂ ಚ ತಂ ಲಗ್ನಮಿತಿ ಪ್ರಕಲ್ಪ್ಯ।
ತಸ್ಮಾದ್ವದೇದ್ದ್ವಾದಶಭಾವಜಾನಿ ಫಲಾನಿ ತದ್ರೂಪಧನಾದಿಕಾನಿ ॥೨೦॥

ಯಾವುದಾದರೂ ಭಾವದ ಫಲಚಿಂತನೆಯಲ್ಲಿ ಆ ಭಾವವನ್ನು ಲಗ್ನವೆಂದು ಕಲ್ಪಿಸಿ ಅಲ್ಲಿಂದ ಲಗ್ನ, ಧನಾದಿ, ದ್ವಾದಶಭಾವಗಳಾಗಿ ಫಲಹೇಳಬೇಕು.

ಏವಂ ಹಿ ತತ್ಕಾರಕತೋ ವಿಚಿಂತ್ಯಂ ಪಿತುಶ್ಚಮಾತುಶ್ಚ ಸಹೋದರಸ್ಯ ।
ತನ್ಮಾತುಲಸ್ಯಾಪಿ ಸುತಸ್ಯ ಪತ್ಯುರ್ಭೃತ್ಯಸ್ಯ ಸೂರ್ಯಾದಿಖಗಸ್ಥಿತರ್ಕ್ಷಾತ್॥

ಇದೇ ರೀತಿ ಕಾರಕಗ್ರಹನು ಸ್ಥಿತರಾಶಿಯನ್ನು ಲಗ್ನವೆಂದು ತಿಳಿದು ತಂದೆ, ತಾಯಿ, ಸಹೋದರ, ಸೋದರಮಾವ, ಮಕ್ಕಳು, ಪತಿ ಮತ್ತು ಸೇವಕನೆಂದು ಸೂರ್ಯಾದಿ ಗ್ರಹರಿಂದ ಕ್ರಮವಾಗಿ ಚಿಂತಿಸಬೇಕು.

ಸೂರ್ಯಸ್ಥಿತರ್ಕ್ಷಾಜ್ಜನಕಸ್ವರೂಪಂ ವೃದ್ಧಿಂ ದ್ವಿತೀಯೇನ ತು ತತ್ರ ಕಾಶಮ್ । ತದ್ಭ್ರಾತರಂತಸ್ಯ ಗುಣಂ ತೃತೀಯಾತ್ತನ್ಮಾತರಂ ಚಾಪಿಸುಖಂ ಚತುರ್ಥಾತ್ ॥೨೧॥ ಬುದ್ಧಿಪ್ರಸಾದಂ ಸುತಭಾಚ್ಚ ಷಷ್ಠಾತ್ಪೀಡಾಂಪಿತೋ ದೋಷಮರಿಂ ಚ ರೋಗಮ್ । ಕಾಮಂ ಮದಂ ತಸ್ಯ ತು ಸಪ್ತಮೇನ ದುಃಖಂ ಮೃತಿಂ ಮೃತ್ಯುಗೃಹಾತ್ತದಾಯುಃ ॥೨೨॥

ರವಿಸ್ಥಿತ ರಾಶಿಯನ್ನು ತಿಳಿದು, ಅಲ್ಲಿಂದ ತಂದೆಯ ಸ್ವರೂಪಾದಿ ವಿಚಾರ, ಆ ರಾಶಿಯ ದ್ವಿತೀಯದಿಂದ ತಂದೆಯ ಅಭಿವೃದ್ಧಿ ಮತ್ತು ಸ್ಥಾನಾದಿವಿಚಾರ, ತೃತೀಯ ದಿಂದ ತಂದೆಯ ಸಹೋದರ ಮತ್ತು ಗುಣಶೀಲವಿಚಾರ. ರವಿಸ್ಥಿತರಾಶಿಯ ಚತುರ್ಥ ದಿಂದ ತಂದೆಯ ತಾಯಿಯ ವಿಚಾರ, ಮತ್ತು ಸುಖವಿಚಾರ ಚಿಂತಿಸಬೇಕು.

ಸೂರ್ಯಲಗ್ನದ ಪಂಚಮದಿಂದ ತಂದೆಯ ಬುದ್ಧಿ ಮತ್ತು ಪ್ರಸನ್ನತೆ, ಷಷ್ಠ ದಿಂದ ಅವನು ಅನುಭವಿಸುವ ಸಂಕಷ್ಟಗಳು ಶತ್ರು ಮತ್ತು ರೋಗವಿಚಾರ ಚಿಂತಿಸಬೇಕು. ಕಾಮ, ಅಹಂಕಾರ, ಹರ್ಷವಿಚಾರ ಸಪ್ತಮದಿಂದ, ದುಃಖ, ಮರಣ ಮತ್ತು ಆಯುಷ್ಯವಿಚಾರ ರವಿಯ ಅಷ್ಟಮದಿಂದ ಚಿಂತಿಸಬೇಕು.

ಪುಣ್ಯಂ ಶುಭಂ ತತ್ಪಿತರಂ ಶುಭೇನ ವ್ಯಾಪಾರಮಸ್ಯೈವ ಹಿ ಕರ್ಮಭಾವಾತ್ । ಲಾಭಂ ಹ್ಯುಪಾಂತ್ಯಾತ್ ಕ್ಷಯಮಂತ್ಯಭಾವಾಚ್ಚಂದ್ರಾದಿಕಾನಾಂ ಫಲಮೇವಮಾಹುಃ ॥೨೩॥

ತಂದೆಯ ಪುಣ್ಯ, ಭಾಗ್ಯ ಮತ್ತು ಅವನ ತಂದೆಯ ವಿಚಾರ (ಅಜ್ಜ) ವನ್ನು ರವಿಯ ನವಮದಿಂದ, ಅವನ ಕರ್ಮವಿಚಾರ ದಶಮದಿಂದ, ಅವನ ಲಾಭಾಲಾಭ ವಿಚಾರ ಏಕಾದಶದಿಂದ, ಮತ್ತು ಅವನ ವ್ಯಯ ಅಥವಾ ನಷ್ಟವನ್ನು ದ್ವಾದಶದಿಂದ ಚಿಂತಿಸಬೇಕು. ಸೂರ್ಯಲಗ್ನದಿಂದ ತಂದೆಯ ವಿಚಾರ ಚಿಂತಿಸುವಂತೆ, ಚಂದ್ರ, ಕುಜಾದಿ ಗ್ರಹರಿಂದ, ತಾಯಿ, ಸಹೋದರರ ದ್ವಾದಶಭಾವವಿಚಾರ ತಿಳಿಯಬೇಕು.

ತತ್ತದ್ಭಾವಾತ್ಕಾರಕಾದೇವಮೂಹ್ಯಂ ತತ್ತನ್ಮಾತೃಭ್ರಾತೃಪಿತ್ರಾತ್ಮಜಾ.

ದ್ಯನಮ್ । ತಸ್ಮಿನ್ ಭಾವೇ ಕಾರಕೇ ಭಾವನಾಥೇ ವೀರ್ಯೋಪೇತೇ ತಸ್ಯ ಭಾವಸ್ಯ ಸೌಖ್ಯಮ್ ॥೨೫॥

ಸೂರ್ಯಲಗ್ನದಿಂದ ಪಿತೃವಿಚಾರ ಚಿಂತಿಸುವಂತೆ ಆಯಾಭಾವಕಾರಕರಿಂದ ತಾಯಿ, ಸಹೋದರ, ತಂದೆ, ಮಗ, ಮೊದಲಾದವರ ವಿಚಾರವನ್ನು ಊಹಿಸಬೇಕು. ಆಯಾಭಾವಕಾರಕರು ಮತ್ತು ಭಾವಾಧಿಪತಿಯು ಬಲಿಷ್ಠರಾದರೆ ಆಯಾಭಾವ ಫಲಗಳು ಪೂರ್ಣವಾಗಿ ಲಭಿಸುತ್ತದೆ.

ಧರ್ಮೇ ಸೂರ್ಯಃ ಶೀತಗುರ್ಬಂಧುಭಾವೇ ಶೌರ್ಯೇ ಭೌಮಃ ಪಂಚಮೇ ದೇವಮಂತ್ರೀ । ಕಾಮೇ ಶುಕ್ರಶ್ಚಾಷ್ಟಮೇ ಭಾನುಪುತ್ರಃ ಕುರ್ಯಾತ್ತಸ್ಯ ಕ್ಲೇಶಮಿತ್ಯಾಹುರನ್ಯೇ ॥೨೬॥

ನವಮಭಾವಸ್ಥಿತ-ಸೂರ್ಯ, ಚತುರ್ಥದ-ಚಂದ್ರ, ತೃತೀಯದ-ಕುಜ, ಪಂಚಮದ-ಗುರು, ಸಪ್ತಮದ-ಶುಕ್ರ, ಮತ್ತು ಅಷ್ಟಮದಲ್ಲಿ-ಶನಿಯು (ಆಯಾಭಾವಕಾರಕರು ಆಗಿರುವುದರಿಂದ) ಇದ್ದರೆ ಆ ಭಾವಫಲದ ಹಾನಿ ಅಥವಾ ದುಃಖ ನೀಡುತ್ತಾರೆ.

ಲಗ್ನೇಶ್ವರೋ ಯದ್ಭವನೇಶಯುಕ್ತೋ ಯದ್ಭಾವಗಸ್ತಸ್ಯ ಫಲಂ ದದಾತಿ ಭಾವೇತದೀಶೇ ಬಲಭಾಜಿತೇನ ಭಾವೇನ ಸೌಖ್ಯಂ ವ್ಯಸನಂ ಬಲೋನೇ ॥

1.ಲಗ್ನಾಧಿಪನ ಯುತಿಯಲ್ಲಿದ್ದ ಭಾವಾಧಿಪನು ನೀಡುವ ಭಾವಫಲವನ್ನು ಲಗ್ನಾಧಿಪತಿಯು ನೀಡುತ್ತಾನೆ. 2.ಲಗ್ನಾಧಿಪತಿಯುಸ್ಥಿತ ಭಾವದ ಫಲವನ್ನು ನೀಡುತ್ತಾನೆ. 3.ಲಗ್ನಾಧಿಪನ ಯುತಿಯಲ್ಲಿದ್ದ ಭಾವಾಧಿಪನು ಅಥವಾ ಲಗ್ನಾಧಿಪತಿಸ್ಥಿತ ಭಾವಾಧಿಪನು ಬಲಿಷ್ಠನಾಗಿದ್ದರೆ ಆ ಭಾವದ ಶುಭಫಲವು, ಬಲಹೀನನಾದರೆ ಅಶುಭ ಫಲವು, ಲಭಿಸುತ್ತದೆ.

ಯದಿ ಭಾವಪ್ರಭುಣಾ ಯುತೋ ಬಲವತಾ ಮುಖ್ಯಾಂಗಗೋ ಲಗ್ನಪಸ್ತದ್ಭಾವಾನುಭವಂ ಶುಭಂ ವಿತನುತೇ ಯದ್ಭಾವಗಸ್ತಸ್ಯ ಚ । ಸಂಯುಕ್ತೋ ಬಲಹೀನಭಾವಪತಿನಾ ನಿಂದ್ಯಾಂಗಭಾಜಾಂ ಫಲಮ್ ಕುರ್ಯಾತ್ತದ್ವಿಪರೀತಮೇವ ಗದಿತಂ ಸರ್ವೇಷು ಭಾವೇಷ್ವಪಿ ॥೨೭॥

ಲಗ್ನಾಧಿಪತಿಯು ಲಗ್ನದಲ್ಲಿ ಇರಬೇಕು. ಮತ್ತು ಭಾವಾಧಿಪತಿಯು ಸ್ವ ಭಾವದಲ್ಲಿ ಬಲಿಷ್ಠನಾಗಿ ಇದ್ದರೆ ಆ ಭಾವಫಲವು ಶುಭವಾಗಿ ಅನುಭವಕ್ಕೆ ಬರುತ್ತದೆ. ಭಾವಾಧಿಪತಿಯು ಬಲಹೀನನಾಗಿ ಭಾವದಲ್ಲಿ ಇದ್ದರೆ ಅಶುಭಫಲಗಳು ಲಭಿಸುತ್ತವೆ. ಈ ರೀತಿ ಸಕಲ ಭಾವಫಲಗಳನ್ನು ಚಿಂತಿಸಬೇಕು.

ದುಃಸ್ಥಾನಪಸ್ತದಿತರಸ್ವಗೃಹಸ್ಥಿತಶ್ಚೇತ್ ಸ್ವಕ್ಷೇತ್ರಭಾವಫಲಮೇವ ಕರೋತಿ ನಾನ್ಯತ್ । ಮಂದೋ ವ್ಯಯೇ ಸುತಗೃಹೇ ಯದಿ ಪುತ್ರಸಿದ್ಧಿಃ ಷಷ್ಠಾಧಿಪತ್ಯಕೃತದೋಷಫಲಂ ಚ ನಾತ್ರ ॥೨೮॥

ದುಃಸ್ಥಾನಾಧಿಪತಿಯು ತನ್ನ ಇನ್ನೊಂದು ಕ್ಷೇತ್ರದಲ್ಲಿ ನಿಂತಾಗ ಅವನು ದುಸ್ಥಾನಾಧಿಪತ್ಯದ ಫಲವನ್ನು ನೀಡದೆ ತಾನು ಸ್ಥಿತಭಾವದ ಶುಭಫಲವನ್ನೇ ನೀಡುತ್ತಾನೆ.

ಶನಿಯು ಮಕರ ರಾಶಿಯಲ್ಲಿ ಪಂಚಮಭಾವವಾಗಿ ಇದ್ದಾಗ (ಕನ್ಯಾಲಗ್ನ) ಸಂತಾನ ಸುಖ ನೀಡುತ್ತಾನೆ. ಮತ್ತು ಷಷ್ಠಾಧಿಪತಿಯಾಗಿ ನೀಡುವ ಅಶುಭ ಫಲಗಳು ಸಂಭವಿಸುವುದಿಲ್ಲ.

ರಾಶೌ ಸ್ಥಿತಿರ್ವಿನಿಮಯೋ ಯೋಗೋ ದೃಷ್ಟಿ: ಕೇಂದ್ರೇಷು ಸಂಸ್ಥಿತಿ: ।
ತ್ರಿಕೋಣೇ ವಾ ಸ್ಥಿತಿ: ಪಂಚಪ್ರಕಾರೋ ಬಂಧ ಈರಿತ: ॥೩೦॥

ಐದು ವಿಧದ ಗ್ರಹಸಂಬಂಧ:- 1.ಪರಿವರ್ತನ (ಪರಸ್ಪರ ಕ್ಷೇತ್ರಗಳನ್ನು ಬದಲಾಯಿಸಿ ಇರುವುದು). 2.ಯುತಿ, 3.ದೃಷ್ಟಿ, 4.ಪರಸ್ಪರ ಕೇಂದ್ರಸ್ಥಿತಿ, ಮತ್ತು 5.ಪರಸ್ಪರ ತ್ರಿಕೋಣಗತರು ಆಗಿರುವುದು. ಇವು ಐದು ವಿಧದ ಸಂಬಂಧಗಳು ಆಗಿರುತ್ತವೆ.

ಲಗ್ನಾದಿ ದ್ವಾದಶಭಾವಫಲಾಧ್ಯಾಯ-೧೬

ಲಗ್ನನವಾಂಶಪತುಲ್ಯ ತನು: ಸ್ಯಾದ್ವೀರ್ಯಯುತಗ್ರಹತುಲ್ಯತನುರ್ವಾ ।
ಚಂದ್ರಸಮೇತನವಾಂಶಪವರ್ಣ: ಕಾದಿವಿಲಗ್ನವಿಭಕ್ತಭಗಾತ್ರ: ॥೧॥

ಜನ್ಮಲಗ್ನ ನವಾಂಶಾಧಿಪತಿಗೆ ಅನುಗುಣವಾಗಿ ಅಥವಾ ಬಲಿಷ್ಠ ಗ್ರಹತುಲ್ಯ ದೇಹ ಇರುತ್ತದೆ. ಚಂದ್ರರಾಶ್ಯಾಧಿಪನು ಸ್ಥಿತ ನವಾಂಶಾಧಿಪತುಲ್ಯ ವರ್ಣ ಇರುತ್ತದೆ. ಶರೀರದ ಅವಯವಗಳ ಗಾತ್ರವು ಲಗ್ನಾದಿರಾಶಿ ಪರಿಮಾಣತುಲ್ಯ ಇರುತ್ತದೆ.

ಲಗ್ನೇಶೇ ಕೇಂದ್ರಕೋಣೇ ಸ್ಫುಟಕರನಿಕರೇ ಸ್ವೋಚ್ಚಭೇ ವಾ ಸ್ವಭೇ ವಾ ಕೇಂದ್ರಾದನ್ಯತ್ರಸಂಸ್ಥೇ ನಿಧನಭವನಪೇ ಸೌಮ್ಯಯುಕ್ತೇ ವಿಲಗ್ನೇ । ದೀರ್ಘಾಯುಷ್ಮಾಂಧನಾಢ್ಯೋ ಮಹಿತಗುಣಯುತೋ ಭೂಮಿಪಾಲಪ್ರಶಸ್ತೋ ಲಕ್ಷ್ಮೀವಾನ್ ಸುಂದರಾಂಗೋ ದೃಢತನುರಭಯೋ ಧಾರ್ಮಿಕ: ಸತ್ಕುಟುಂಬೀ ॥೨॥

ದೀರ್ಘಾಯು, ಮತ್ತು ಧನ-ಸಂಪತ್ತು ಯೋಗ:- ಲಗ್ನಾಧಿಪತಿಯು ಅಸ್ತನಾಗದೆ ಕೇಂದ್ರ-ತ್ರಿಕೋಣಗಳಲ್ಲಿ, ಉಚ್ಚ ಅಥವಾ ಸ್ವಕ್ಷೇತ್ರದಲ್ಲಿ ಇರಬೇಕು. ಅಷ್ಟಮಾಧಿಪತಿಯು ಕೇಂದ್ರಹೊರತು ಇತರ ಭಾವಗಳಲ್ಲಿ ಇರಬೇಕು. ಮತ್ತು ಲಗ್ನದಲ್ಲಿ ಶುಭಗ್ರಹನು ಇರಬೇಕು. ಈ ಯೋಗದಲ್ಲಿ ಜನಿಸಿದವನು ದೀರ್ಘಾಯುವು, ಧನಾಢ್ಯನು, ಶ್ರೇಷ್ಠಗುಣಗಳಿಂದ ಕೂಡಿದವನು. ರಾಜರಿಂದ ಹೊಗಳಲ್ಪಟ್ಟವನು. ಭಾಗ್ಯವಂತನು, ಸುಂದರವಾದ ಮತ್ತು ಧೃಢವಾದ ಶರೀರ ಉಳ್ಳವನು, ಧಾರ್ಮಿಕನು ಮತ್ತು ಉತ್ತಮ ಕುಟುಂಬ ಉಳ್ಳವನು ಆಗುತ್ತಾನೆ.

ಸತ್ಸಂಬಂಧಯುತೇ ಕಲೇಬರಪತೌ ಸದ್ಭಾವ ವಾಸೋಽಥವಾ ಸತ್ಸಂಜ್ಞಂ ಪ್ರಬಲಗ್ರಹೇಣ ಸಹಿತೇ ವಿಖ್ಯಾತಭೂಪಾಶ್ರಯ: । ಸ್ವೋಚ್ಚಸ್ಥೇ ನೃಪತಿ: ಸ್ವಯಂ ಸ್ವಗೃಹಗೇ ತಜ್ಜನ್ಮಭೂಮೌಸ್ಥಿತಿ: ಸಂಚಾರರ್ಕ್ಷಭೇ ಸ್ಥಿತಿ: ಸ್ಥಿರಗೃಹೇ ದ್ವಂದ್ವಂ ದ್ವಿರೂಪಂ ಫಲಮ್ ॥೩॥

ತನುಭಾವ:-1.ಲಗ್ನಾಧಿಪತಿಯು ಶುಭಗ್ರಹರಯುತಿಯಲ್ಲಿ ಇದ್ದರೆ ಉತ್ತಮಗ್ರಾಮದಲ್ಲಿ ಅಥವಾ ಸತ್ಸಂಗದಿಂದ ಕೂಡಿದವನಾಗಿ ವಾಸಿಸುತ್ತಾನೆ. 2.ಲಗ್ನಾಧಿಪತಿಯು ಯುತಿಯಲ್ಲಿದ್ದ ಗ್ರಹನು ಬಲಿಷ್ಠನಾದರೆ ವಿಖ್ಯಾತರಾಜಾಶ್ರಯದಲ್ಲಿ ವಾಸಿಸುತ್ತಾನೆ. 3.ಲಗ್ನಾಧಿಪತಿಯು ಯುತಿಯಲ್ಲಿದ್ದ ಗ್ರಹನು ತನ್ನ ಉಚ್ಚರಾಶಿಯಲ್ಲಿ ಇದ್ದರೆ ಜಾತಕನು ರಾಜನು ಆಗುತ್ತಾನೆ. 4.ಲಗ್ನಾಧಿಪತಿಯ ಯುತಿಯಲ್ಲಿದ್ದ ಗ್ರಹನು ತನ್ನ ಸ್ವಕ್ಷೇತ್ರದಲ್ಲಿ ಇದ್ದರೆ ತನ್ನ ಜನ್ಮಸ್ಥಳದಲ್ಲಿಯೇ ವಾಸಿಸುತ್ತಾನೆ. 5.ಲಗ್ನಾಧಿಪತಿಯು ಯುತಿಯಲ್ಲಿದ್ದ ಗ್ರಹನು ಚರರಾಶಿಯಲ್ಲಿ ಇದ್ದರೆ ಯಾವಾಗಲೂ ಸಂಚಾರದಲ್ಲಿ ಇರುತ್ತಾನೆ. 6.ಲಗ್ನಾಧಿಪತಿಯು ಯುತಿಯಲ್ಲಿದ್ದ ಗ್ರಹನು ಸ್ಥಿರರಾಶಿಯಲ್ಲಿ ಇದ್ದರೆ ತನ್ನ ಮನೆಯಲ್ಲಿಯೇ ವಾಸಿಸುತ್ತಾನೆ. 7.ಲಗ್ನಾಧಿಪತಿಯು ಉಭಯ ರಾಶಿಯಲ್ಲಿ ಇದ್ದರೆ ಮಿಶ್ರಫಲ ಅಂದರೆ ಕೆಲವೊಮ್ಮೆ ಊರಿನಲ್ಲಿಯೂ. ಕೆಲವೊಮ್ಮೆ ಸಂಚಾರದಲ್ಲಿಯೂ ಇರುತ್ತಾನೆ, ಅಥವಾ ಕೆಲವುಕಾಲ ಊರಿನಲ್ಲಿ ವಾಸ ಮತ್ತು ಕೆಲವುಕಾಲ ಪರಊರಿನಲ್ಲಿ ವಾಸ ಸಂಭವಿಸುತ್ತದೆ.

ವಿಖ್ಯಾತಃ ಕಿರಣೋಜ್ಜ್ವಲೇ ತನುಪತೌ ಸುಸ್ಥೇ ಸುಖೀ ವರ್ಧನೋ ದುಃಸ್ಥೇ ದುಃಖ್ಯಸದೃಕ್ಷನೀಚಭವನೇ ವಾಸೋ ನಿಕೃಷ್ಟಸ್ಥಲೇ । ಸ್ವಸ್ಥೋ ಜೀವತಿ ಶಕ್ತಿಮತ್ಯುದಯಭೇ ವರ್ದ್ಧಿಷ್ಣುರೂರ್ಜಸ್ವಲೋ ನಿಃಶಕ್ತೌ ನಿಹತೋ ವಿಪದ್ಭಿರಸಕೃತ್ಖಿನ್ನೋ ಭವೇದಾತುರಃ । ೪॥

1.ಲಗ್ನಾಧಿಪತಿಯು ಉಜ್ವಲಕಾಂತಿಯುತನು ಆಗಿದ್ದರೆ ಜಾತಕನು ವಿಖ್ಯಾತನು ಆಗುತ್ತಾನೆ. 2.ಲಗ್ನಾಧಿಪತಿಯು ಸುಸ್ಥಾನಗಳಲ್ಲಿ ಇದ್ದರೆ ಸುಖವಂತನು ಆಗುತ್ತಾನೆ. 3.ಲಗ್ನಾಧಿಪತಿಯು ದುಃಸ್ಥಾನ, ಪಾಪಕ್ಷೇತ್ರ, ಶತ್ರುಕ್ಷೇತ್ರ ಅಥವಾ ನೀಚರಾಶಿಯಲ್ಲಿ ಇದ್ದರೆ ಜಾತಕನು ದುಃಖಿನು, ನಿಕೃಷ್ಟಸ್ಥಳದಲ್ಲಿ ವಾಸಿಸುವವನು ಆಗುತ್ತಾನೆ. 4.ಲಗ್ನವು ಬಲಿಷ್ಠವಾಗಿದ್ದಲ್ಲಿ ಜಾತಕನು ಸುಖವಂತನು. ತನ್ನ ಪರಾಕ್ರಮದಿಂದ, ಅಧಿಕಾರ ಮತ್ತು ಉನ್ನತಿಯನ್ನು ಹೊಂದುತ್ತಾನೆ. 5.ಲಗ್ನವು ಬಲಹೀನ ಆದ್ದಲ್ಲಿ ವಿಪತ್ತು, ದುಃಖ ಮತ್ತು ಅನಾರೋಗ್ಯದಿಂದ ಪೀಡಿತನು ಆಗುತ್ತಾನೆ.

ಅರ್ಥಸ್ವಾಮಿನಿ ಮುಖ್ಯಭಾವಸಹಿತೇ ಸತ್ಸ್ವರ್ಥಗೇ ಕುಟುಂಬಶ್ರಿಯಾ ಸರ್ವೋತ್ಕೃಷ್ಟಗುಣೋ ಧನೀ ಚ ಸುಮುಖೀ ಸ್ಯಾದ್ದೂರದರ್ಶೀ ನರಃ । ಸಂಬಂಧೇ ಸವಿತುರ್ದ್ವಿತೀಯಪತಿನಾ ಲೋಕೋಪಕಾರಕ್ಷಮಾಂ ವಿದ್ಯಾಮರ್ಥಮವಾಪ್ನುಯಾದಥ ಶನೇಃ ಕ್ಷುದ್ರಾಲ್ಪವಿದ್ಯಾರತಃ ॥೫॥

ಧನಭಾವ:-1.ಧನಾಧಿಪತಿಯು ಲಗ್ನದಲ್ಲಿ ಮತ್ತು ಶುಭಗ್ರಹರು ದ್ವಿತೀಯದಲ್ಲಿ ಇದ್ದರೆ ಜಾತಕನು ಶ್ರೀಮಂತ ಕುಟುಂಬ ಉಳ್ಳವನು, ಉತ್ತಮ ಗುಣ ಮತ್ತು ಮುಖ ಉಳ್ಳವನು, ದೂರದೃಷ್ಟಿ ಉಳ್ಳವನು ಆಗುತ್ತಾನೆ. 2.ಧನಾಧಿಪತಿಯು ರವಿಯ ಸಂಬಂಧದಲ್ಲಿ ಇದ್ದರೆ ವಿದ್ಯೆ, ಜ್ಞಾನ ಮತ್ತು ಧನವನ್ನು ಲೋಕೋಪಕಾರಕ್ಕೋಸ್ಕರ ಉಪಯೋಗಿಸುತ್ತಾನೆ. 3.ಧನಾಧಿಪತಿಯು ಶನಿಯ ಸಂಬಂಧದಲ್ಲಿ ಇದ್ದರೆ ಕ್ಷುದ್ರ ವಿದ್ಯೆಗಳನ್ನು ಬಲ್ಲವನು, ಅಲ್ಪವಿದ್ಯಾವಂತನು ಆಗುತ್ತಾನೆ.

ಜೈವೇ ವೈದಿಕಧರ್ಮಶಾಸ್ತ್ರನಿಪುಣೋ ಬೌಧೇಽರ್ಥಶಾಸ್ತ್ರೇ ಪಟುಃ ಶೃಂಗಾ-ರೋಕ್ತಿಪಟುರ್ಭೃಗೋರ್ಹಿಮರುಚೇಃ ಕಿಂಚಿತ್ಕಲಾ ವಿದ್ಭವೇತ್ । ಕುಜೇ ಕ್ರೂರಕಲಾಪಟುಶ್ಚ ಪಿಶುನೋ ರಾಹೌಸ್ಥಿತೇ ಲೋಹಲಃ ಕೇತೌ ಭೃಶ್ಯದ-ಲೀಕವಾಗ್ಘನಗತೈಃ ಪಾಪೈಶ್ಚ ಮೂಢೋಽಧನಃ ॥೬॥

ಧನಾಧಿಪನೊಂದಿಗೆ ಗ್ರಹಯುತಿಫಲ:-1.ಧನಾಧಿಪತಿಯು ಗುರುವಿನಯುತಿಯಲ್ಲಿ ಇದ್ದರೆ ವೈದಿಕವೃತ್ತಿ, ಕರ್ಮಾಂಗ, ಧರ್ಮಶಾಸ್ತ್ರ ಇತ್ಯಾದಿಗಳಲ್ಲಿ ನಿಪುಣನು ಆಗುತ್ತಾನೆ. 2.ಧನಾಧಿಪತಿಯು ಬುಧನಯುತಿಯಲ್ಲಿ ಇದ್ದರೆ ಅರ್ಥಶಾಸ್ತ್ರದಲ್ಲಿ ನಿಪುಣನು ಆಗುತ್ತಾನೆ. 3.ಧನಾಧಿಪತಿಯು ಶುಕ್ರನ ಯುತಿಯಲ್ಲಿ ಇದ್ದರೆ ಶೃಂಗಾರ ಮತ್ತು ರಸಭರಿತ ಮಾತು ಗಳಲ್ಲಿ ನುರಿತವನು ಆಗುತ್ತಾನೆ. 4.ಧನಾಧಿಪತಿಯು ಚಂದ್ರನ ಯುತಿಯಲ್ಲಿ ಇದ್ದರೆ ಅಲ್ಪಸ್ವಲ್ಪ ಕಲೆಗಳನ್ನು ಬಲ್ಲವನು ಆಗುತ್ತಾನೆ. 5.ಧನಾಧಿಪತಿಯು ಕುಜನಯುತಿಯಲ್ಲಿ ಇದ್ದರೆ ಕ್ರೂರಕಲೆ (ಯಾಂತ್ರಿಕ ಕಲೆ) ಗಳಲ್ಲಿ ನುರಿತವನು, ಕ್ರೂರ ಅಥವಾ ದುಷ್ಟಸ್ವಭಾವದವನು ಆಗುತ್ತಾನೆ. 6.ರಾಹುವು ಧನಾಧಿಪತಿಯ ಯುತಿಯಲ್ಲಿ ಇದ್ದರೆ ವ್ಯಂಗ್ಯ ಅಥವಾ ಅವ್ಯಕ್ತ ಮಾತುಗಳನ್ನು ಆಡುವವನು ಆಗುತ್ತಾನೆ. 7.ಕೇತುವು ಧನಾಧಿಪತಿಯ ಯುತಿಯಲ್ಲಿ ಇದ್ದರೆ ಮಾತನಾಡುವಾಗ ತಡೆ ಉಳ್ಳವನು ಮತ್ತು ಸುಳ್ಳುಹೇಳುವವನು ಆಗುತ್ತಾನೆ. 8.ದ್ವಿತೀಯದಲ್ಲಿ ಪಾಪಗ್ರಹಗಳು ಇದ್ದರೆ ಜಾತಕನು ಮೂಢನು, ಧನ ಇಲ್ಲದವನು ಆಗುತ್ತಾನೆ.

ಬಂಧೋ ಯದಿ ಸ್ಯಾತ್ತನುಶೌರ್ಯನಾಥಯೋ ರನ್ಯೋನ್ಯರಾಶಿಸ್ಥಿತಯೋ-ರ್ಬಲಾಢ್ಯೋಃ । ಧೈರ್ಯಂ ಚ ಶೌರ್ಯಂ ಸಹಜಾನುಕೂಲತಾಂ ಪ್ರಾಪ್ನೋ-ತ್ಯಯಂ ಸಾಹಸಕಾರ್ಯಕರ್ತೃತಾಮ್ ॥೭॥

ತೃತೀಯಭಾವ: ಲಗ್ನಾಧಿಪತಿ ಮತ್ತು ತೃತೀಯಾಧಿಪತಿಯು ಬಲಿಷ್ಠರಾಗಿ, ಪರಿವರ್ತನದಲ್ಲಿ ಇದ್ದರೆ ಧೈರ್ಯವಂತನು, ಸಹೋದರರಿಗೆ ಅನುಕೂಲನಾಗಿ ಉಳ್ಳವನು ಮತ್ತು ಸಾಹಸ ಕಾರ್ಯಗಳನ್ನು ಮಾಡುವವನು ಆಗುತ್ತಾನೆ.

ಶೌರ್ಯಪೇ ಬಲಿನಿ ಸದ್ಗ್ರಹಯುಕ್ತೇ ಕಾರಕೇಽಪಿ ಶುಭಭಾವಮುಪೇತೇ । ಭ್ರಾತೃವೃದ್ಧಿರಥವೀರ್ಯವಿಹೀನೇ ದುಃಸ್ಥಿತೇ ಭವತಿ ಸೋದರನಾಶಃ ॥೮॥

ಸಹೋದರ ವಿಚಾರ:-ತೃತೀಯಾಧಿಪತಿಯು ಬಲಿಷ್ಠನಾಗಿ ಶುಭಗ್ರಹನಿಂದ ಕೂಡಿರಬೇಕು ಮತ್ತು ಈ ಭಾವಕಾರಕನಾದ ಕುಜನು ಕೂಡಾ ಬಲಿಷ್ಠನಾಗಿ ಶುಭಭಾವದಲ್ಲಿ ಇದ್ದರೆ ಸಹೋದರರ ಅಭಿವೃದ್ಧಿ ಆಗುತ್ತದೆ. ಕುಜನು ಬಲಹೀನನಾಗಿ ದುಃಸ್ಥಿತಿಯಲ್ಲಿ ಇದ್ದರೆ ಸಹೋದರನಾಶ ಸಂಭವಿಸುತ್ತದೆ.

ಅಯುಗ್ಮರಾಶೌ ಯದಿ ಕಾರಕೇಶೌ ಗುರ್ವರ್ಕಭೂಸೂನುನಿರೀಕ್ಷಿತೌ-ಚೇತ್ । ಓಜೋ ಗೃಹಃ ಸ್ಯಾದದಿ ವಿಕ್ರಮಾಖ್ಯಃ ಪುಂಭ್ರಾತರರತಂ ವಶಾದ್ಭವೇಯುಃ ॥೯॥

ಸಹೋದರ ಸಂಖ್ಯೆ:- ತೃತೀಯಭಾವವು ವಿಷಮರಾಶಿಯಾಗಿ, ತೃತೀಯ ಭಾವಾಧಿಪತಿ ಮತ್ತು ಕಾರಕ ಕುಜನು ವಿಷಮರಾಶಿಗಳಲ್ಲಿ ಇದ್ದು ಗುರು, ರವಿ ಮತ್ತು ಕುಜನಿಂದ ನೋಡಲ್ಪಟ್ಟರೆ ಜಾತಕನಿಗೆ, ತೃತೀಯಾಧಿಪತಿ ಮತ್ತು ಕುಜನ ನವಾಂಶತುಲ್ಯ ಸಂಖ್ಯೆಯಷ್ಟು ಸಹೋದರರು ಇರುತ್ತಾರೆ.

ದುಃಸ್ಥಾನೇ ಸುಖಪೇ ಶಶಿನ್ಯಪಿ ಸತಾಂ ಯೋಗೇಕ್ಷಣೈರ್ವರ್ಜಿತೇ ಪಾಪಾಂತಃಸ್ಥಿತಿಮತ್ಯಸದ್ಗ್ರಹಯುತೇ ದೃಷ್ಟೇ ಜನನ್ಯಾಮೃತಿಃ । ಏತೌದ್ವಾವಪಿ ವೀರ್ಯಗೌ ಶುಭಯುತೌ ದೃಷ್ಟೌ ಶುಭೈರ್ಬಂಧುಗೈರ್ಮಾತುಃ ಸೌಖ್ಯಕರೌ ವಿಧೋಃಪ್ಯ ಸುಭಗೈಃ ಸೌಮ್ಯೈರ್ವದೇತ್ತತ್ಸುಖಮ್ ॥೧೦।

ಮಾತೃಮರಣಯೋಗಃ ಚತುರ್ಥಾಧಿಪತಿ ಮತ್ತು ಚಂದ್ರನು ಶುಭಗ್ರಹರ ಯುತಿ ಅಥವಾ ದೃಷ್ಟಿ ಇಲ್ಲದೆ ಪಾಪಮಧ್ಯಗತರಾದರೆ ಅಥವಾ ಪಾಪಗ್ರಹರ ಯುತಿಯಲ್ಲಿ ಇದ್ದರೆ, ಪಾಪಗ್ರಹರಿಂದ ನೋಡಲ್ಪಟ್ಟರೆ ತಾಯಿಯ ಮರಣ ಸಂಭವಿಸುತ್ತದೆ.

ಮಾತೃಸುಖಯೋಗಃ- ಚತುರ್ಥಾಧಿಪತಿ ಮತ್ತು ಚಂದ್ರನು ಬಲಿಷ್ಠರಾಗಿ, ಶುಭಗ್ರಹರಿಂದ ಯುತ ಅಥವಾ ದೃಷ್ಟರಾದರೆ ಅಥವಾ ಶುಭಗ್ರಹರು ಚತುರ್ಥಭಾವದಲ್ಲಿ ಇದ್ದರೆ ಮಾತೃಸುಖ ಲಭಿಸುತ್ತದೆ. ಚಂದ್ರನಿಂದ ಶುಭಭಾವಗಳಲ್ಲಿ ಶುಭಗ್ರಹಗಳು ಇದ್ದರೆ ಮಾತೃಸುಖ ಲಭಿಸುತ್ತದೆ.

ಲಗ್ನೇಶೇ ಸುಖಗೇಽಥವಾ ಸುಖಪತೌ ಲಗ್ನೇ ತಯೋರೀಕ್ಷಣೇ ಯೋಗೇ ವಾ ಶಶಿನಸ್ತಥಾ ಯದಿ ಕರೋತ್ಯಂತ್ಯಾಂ ಸ್ವಮಾತುಃ ಕ್ರಿಯಾಮ್ । ಅನ್ಯೋನ್ಯಂ ಯದಿ ಶತ್ರುನೀಚಭವನೇ ಷಷ್ಠಾಷ್ಟಮೋ ವಾ ತಯೋರ್ಮಾತುರ್ನೋಪಕರೋತಿ ನಾಶಸಮಯೇ ಬಂಧಸ್ತಯೋರ್ವಾ ನ ಚೇತ್ ॥೧೧॥

ತಾಯಿಯ ಕ್ರಿಯಾಕರ್ಮ ವಿಚಾರ:- 1.ಲಗ್ನಾಧಿಪತಿಯು ಚತುರ್ಥದಲ್ಲಿ ಇದ್ದರೆ, ಅಥವಾ 2.ಚತುರ್ಥಾಧಿಪತಿಯು ಲಗ್ನದಲ್ಲಿ ಇದ್ದರೆ, ಅಥವಾ 3.ಲಗ್ನಾಧಿಪತಿ ಮತ್ತು ಚತುರ್ಥಾಧಿಪತಿಯು ದೃಷ್ಟ ಅಥವಾ ಯುತರಾದರೆ, 4.ಚಂದ್ರನು ಇವರ ಯುತಿ ಅಥವಾ ದೃಷ್ಟಿಯಲ್ಲಿ ಇದ್ದರೆ, ಜಾತಕನು ತನ್ನ ತಾಯಿಯ ಕ್ರಿಯಾಕರ್ಮಗಳನ್ನು ನೆರವೇರಿಸುತ್ತಾನೆ. ೫.ಚತುರ್ಥಾಧಿಪ ಮತ್ತು ಲಗ್ನಾಧಿಪತಿಯು ಶತ್ರುಕ್ಷೇತ್ರ ಅಥವಾ ನೀಚರಾಶಿಸ್ಥಿತರು ಅಥವಾ ಷಷ್ಠಾಷ್ಟಮ ಗತರಾದರೆ ತಾಯಿಯ ಅವಸಾನ ಕಾಲದಲ್ಲಿ ಜಾತಕನು ಉಪಸ್ಥಿತನಿರುವುದಿಲ್ಲ. ಅಥವಾ ಬಂಧನದಲ್ಲಿ ಇರುತ್ತಾನೆ.

ಮಾತೃಭಾವೋಕ್ತವದ್ವಾಚ್ಯಂ ಪಿತೃಭ್ರಾತೃಸುತಾದಿಷು । ಭಾವಕಾರಕಭಾವೇಶಲಗ್ನಲಗ್ನೇಶ್ವರೈರ್ವದೇತ್ ॥೧೨॥

ಚತುರ್ಥಭಾವದಿಂದ ಮಾತೃವಿಚಾರವನ್ನು ತಿಳಿಯಲು ಹೇಳಿದ ರೀತಿಯಲ್ಲಿಯೇ, ತಂದೆ, ಸಹೋದರ ಮತ್ತು ಮಕ್ಕಳ ವಿಚಾರವನ್ನು ಆಯಾಭಾವಕಾರಕ ಮತ್ತು ಭಾವಾಧಿಪತಿಗೆ, ಲಗ್ನ ಮತ್ತು ಲಗ್ನಾಧಿಪತಿಯ ಸಂಬಂಧದಿಂದ ತಿಳಿಯಬೇಕು.

ಸುಸ್ಥೌ ಸುಖೇಶಭೃಗುಜೌ ತನುಬಂಧುಯುಕ್ತೌ ವಾಂದೋಲಿಕಾಂ ಜನಪತೇಶ್ಚರತಾಂ ವಿಧತ್ತಃ। ಸ್ವರ್ಣಾದ್ಯನರ್ಘ್ಯಮಣಿಭೂಷಣಪಟ್ಟಶಯ್ಯಾ ಕಾಮೋಪಭೋಗ ಕರಣಾನಿ ಚ ಗೋಗಜಾಶ್ವಾನ್ ॥೧೩॥

ವಾಹನಸುಖ:-ಚತುರ್ಥಾಧಿಪತಿ ಮತ್ತು ಶುಕ್ರನು ಸುಸ್ಥಿತಿಯಲ್ಲಿ ಲಗ್ನ ಅಥವಾ ಚತುರ್ಥದಲ್ಲಿ ಇದ್ದರೆ ಜಾತಕನಿಗೆ ಪಲ್ಲಕಿ (ವಾಹನ ಸುಖ), ಜನನಾಯಕತ್ವ ಲಭಿಸುತ್ತದೆ. ಬಂಗಾರ, ಮಣಿ, ಆಭರಣ, ಶಯನಾದಿ ಕಾಮೋಪಭೋಗ ಉಪಕರಣಗಳು ಪಶು, ಆನೆ ಮತ್ತು ಕುದುರೆ ಇತ್ಯಾದಿ ಲಭಿಸುತ್ತದೆ.

ದುಃಸ್ಥೇ ಸುಖೇಶೇ ಕುಜಸೂರ್ಯಯುಕ್ತೇ ಸುಖೇಽಪಿ ವಾ ಜನ್ಮಗೃಹಂ ಪ್ರದಗ್ಧಮ್। ಜೀರ್ಣಂ ತಮೋಮಂದಯುತೇಽರಿಯುಕ್ತೇ ಪರೈರ್ಹೃತಂ ಗೋಕ್ಷಿತಿವಾಹನಾದ್ಯಮ್ ॥೧೪॥

ಗೃಹವಿಚಾರ:-ಚತುರ್ಥಾಧಿಪತಿಯು ದುಃಸ್ಥಾನದಲ್ಲಿ ಇದ್ದರೆ ಅಥವಾ ಕುಜ ಸೂರ್ಯರ ಯುತಿಯಲ್ಲಿ ಇದ್ದರೆ ಅಥವಾ ಕುಜ-ಸೂರ್ಯರು ಚತುರ್ಥದಲ್ಲಿ ಇದ್ದರೆ ಜಾತಕನ ಜನ್ಮ ಗ್ರಹವು ಬೆಂಕಿಯಿಂದ ಸುಡಲ್ಪಡುತ್ತದೆ. ಚತುರ್ಥದಲ್ಲಿ ರಾಹು-ಶನಿಗಳು ಇದ್ದರೆ ಜಾತಕನ ಮನೆಯು ಹಳತು ಆಗಿರುತ್ತದೆ. ಚತುರ್ಥಾಧಿಪತಿಯು ಶತ್ರುಗ್ರಹನ ಯುತಿಯಲ್ಲಿ ಇದ್ದರೆ ಜಾತಕನ ಪಶು, ಭೂಮಿ, ವಾಹನಾದಿ ಸಂಪತ್ತು ಶತ್ರುಗಳಿಂದ ಅಪಹರಿಸಲ್ಪಡುತ್ತದೆ.

ಸೌಮ್ಯರ್ಕ್ಷಾಂಶೇ ಸೌಮ್ಯಯುಕ್ತೇ ಪಂಚಮೇ ವಾ ತದೀಶ್ವರೇ ವೈಶೇಷಿಕಾಂಶೇ ಸದ್ಭಾವೇ ಧೀಮಾನ್ನಿಷ್ಕಪಟೀ ಭವೇತ್ ॥೧೫॥

ಸಂತಾನಭಾವ-: 1.ಪಂಚಮಭಾವವು ಶುಭಗ್ರಹರ ಅಂಶ ಅಥವಾ ರಾಶಿಯಲ್ಲಿದ್ದರೆ ಅಥವಾ 2.ಶುಭಗ್ರಹನು ಪಂಚಮಭಾವದಲ್ಲಿದ್ದರೆ 3.ಪಂಚಮಾಧಿಪತಿಯು ವೈಶೇಷಿಕಾಂಶದಲ್ಲಿ ಇದ್ದರೆ ಜಾತಕನು ನಿಷ್ಕಪಟಿಯೂ, ಮೇಧಾವಿಯೂ ಆಗುತ್ತಾನೆ.

ಸ್ಥಿತಃ ಪಾಪಾನಾಂ ವಾ ದ್ವಿಷತಿ ಬಲಯುಕ್ತಾರಿಪತಿನಾ ಯುತೋ ವಾ ದೃಷ್ಟೋ ವಾ ಯದಿರಿಪುಗೃಹೇ ವಾ ತನುಪತಿಃ। ಅರೀಶಃ ಕೇಂದ್ರೇ ವಾಽಪ್ಯಶುಭಖಗ ಸಂವೀಕ್ಷಿತಯುತೋ ರಿಪೂಣಾಂ ಪೀಡಾಂ ಪ್ರಾಗ್ಭ್ರಮನುಪರಿಹಾರ್ಯಾಂ ವಿತನುತೇ ॥೧೬॥

ಶತ್ರುವಿಚಾರ:-1.ಷಷ್ಠಭಾವಸ್ಥಿತಪಾಪಗ್ರಹರು, 2.ಷಷ್ಠಾಧಿಪತಿಯು ಬಲಿಷ್ಠನಾಗಿ ಲಗ್ನಾಧಿಪತಿಯ ಯುತಿ ಅಥವಾ ದೃಷ್ಟಿಯಲ್ಲಿ ಇದ್ದರೆ, 3.ಲಗ್ನಾಧಿಪತಿಯು ಷಷ್ಠದಲ್ಲಿ ಇದ್ದರೆ. 4.ಷಷ್ಠಾಧಿಪತಿಯು ಕೇಂದ್ರದಲ್ಲಿ ಇದ್ದರೆ, 5.ಷಷ್ಠಾಧಿಪತಿಯು ಪಾಪಗ್ರಹರ ಯುತಿ ಅಥವಾ ದೃಷ್ಟಿಯಲ್ಲಿ ಇದ್ದರೆ, ಶತ್ರುಗಳಿಂದ ಆಗ್ಗಾಗ್ಗೆ ಪೀಡೆ ಮತ್ತು ಹಾನಿ ಸಂಭವಿಸುತ್ತದೆ.

ಷಷ್ಠೇಶ್ವರಾದತಿಬಲಿನ್ಯುದಯಾಧಿನಾಥೇ ಸೌಮ್ಯಗ್ರಹಾಂಶಸಹಿತೇ ಶುಭದೃಷ್ಟಿಯುಕ್ತೇ । ಸೌಖ್ಯೇಶ್ವರೇಽಪಿ ಸಬಲೇ ಯದಿ ಕೇಂದ್ರಕೋಣೇಷ್ವಾರೋಗ್ಯಭಾಗ್ಯಸಹಿತೋ ದೃಢಗಾತ್ರಯುಕ್ತಃ ॥೧೭॥

ಆರೋಗ್ಯವಿಚಾರಃ ಲಗ್ನಾಧಿಪತಿಯು ಷಷ್ಠಾಧಿಪತಿಗಿಂತ ಬಲಿಷ್ಠನಾಗಿ, ಶುಭಗ್ರಹರ ನವಾಂಶದಲ್ಲಿ ಇದ್ದು, ಶುಭಗ್ರಹರಿಂದ ನೋಡಲ್ಪಡಬೇಕು, ಮತ್ತು ಚತುರ್ಥಾಧಿಪತಿಯು ಬಲಿಷ್ಠನಾಗಿ ಕೇಂದ್ರ ಅಥವಾ ತ್ರಿಕೋಣದಲ್ಲಿ ಇದ್ದರೆ ಜಾತಕನು ಹೃಷ್ಟ-ಪುಷ್ಟ ಅಂಗಾಂಗಗಳಿಂದ ಕೂಡಿದವನು, ಆರೋಗ್ಯಭಾಗ್ಯ ಉಳ್ಳವನು ಆಗುತ್ತಾನೆ.

ಶತ್ರುನಾಥೇ ತು ದುಃಸ್ಥಾನೇ ನೀಚಮೂಢಾರಿ ಸಂಯುತೇ । ತಸ್ಮಾದ್ಬಲಾಢ್ಯೇ ಲಗ್ನೇಶೇ ಶತ್ರುನಾಶಂ ರವೌ ಶುಭೇ ॥೧೮॥

ಶತ್ರುನಾಶಃ-ಜನನಕಾಲದಲ್ಲಿ ಷಷ್ಠಾಧಿಪತಿಯು ದುಃಸ್ಥಾನದಲ್ಲಿ (6, 8, 12) ನೀಚ ರಾಶಿ, ಶತ್ರುರಾಶಿ ಅಥವಾ ಅಸ್ತನಾಗಿ ಇರಬೇಕು, ಮತ್ತು ಲಗ್ನಾಧಿಪತಿಯು ಷಷ್ಠಾಧಿಪತಿಗಿಂತ ಬಲಿಷ್ಠನಾಗಿರಬೇಕು, ಮತ್ತು ನವಮಭಾವದಲ್ಲಿ ರವಿ ಇದ್ದರೆ ಜಾತಕನ ಶತ್ರುನಾಶ ಸಂಭವಿಸುತ್ತದೆ.

ಯದ್ಭಾವೇಶಯುತೋ ವೈರಿನಾಥೋ ಯದ್ಭಾವಸಂಶ್ರಿತಃ । ಷಷ್ಠಸ್ಥಿತೋ ಯದ್ಭಾವೇ ಶಸ್ತೇ ಭಾವಾಃ ಶತ್ರುತಾಂ ಯಯುಃ ॥೧೯॥

ಶತ್ರುತ್ವವಿಚಾರಃ-1.ಷಷ್ಠಾಧಿಪತಿಯು ಯುತಿಯುಳ್ಳಿದ್ದ ಗ್ರಹನ ಆಧಿಪತ್ಯದಲ್ಲಿರುವ ಭಾವಗಳು. 2.ಷಷ್ಠಾಧಿಪತಿಸ್ಥಿತಭಾವ 3.ಷಷ್ಠಭಾವಸ್ಥಿತಗ್ರಹನ ಆಧಿಪತ್ಯದಲ್ಲಿರುವ ಭಾವಫಲಗಳು ಜಾತಕನಿಗೆ ಶತ್ರುತ್ವ ನೀಡುತ್ತದೆ.

ಸತ್ಸಂಬಂಧಯುತೇ ಸಪ್ತಕ್ಷೇತ್ರೇ ತದೀಶೇ ಬಲಾನ್ವಿತೇ । ಪತಿಪುತ್ರವತೀ ಸಾಧ್ವೀ ಭಾರ್ಯಾಸರ್ವಗುಣೈರ್ವೃತಾ ॥೨೦॥

ಪತ್ನಿವಿಚಾರಃ-ಸಪ್ತಮಭಾವವು ಶುಭಗ್ರಹರ ಸಂಬಂಧದಲ್ಲಿ ಇದ್ದರೆ ಅಥವಾ ಸಪ್ತಮಾಧಿಪತಿಯು ಬಲಿಷ್ಠನಾಗಿದ್ದರೆ ಜಾತಕನ ಪತ್ನಿಯು ಸಕಲ ಸದ್ಗುಣಗಳಿಂದ ಕೂಡಿದವಳು. ಸಾಧ್ವಿಯೂ ಆಗಿ ಪತಿಪುತ್ರರೊಂದಿಗೆ ಬಾಳುತ್ತಾಳೆ.

ಕೇಂದ್ರಾದನ್ಯತ್ರ ರಂಧ್ರೇಶೇ ಲಗ್ನೇಶಾದ್ದುರ್ಬಲೇ ಸತಿ । ನಾಧಿರ್ನ ಪೀಡಾ ನ ಕ್ಲೇಶೋ ನೃಣಾಮಾಯುಶ್ಚಿರಂ ಭವೇತ್ ॥೨೧॥

ಅಷ್ಟಮಭಾವಃ- ಜನನಕಾಲದಲ್ಲಿ ಅಷ್ಟಮಾಧಿಪತಿಯು ಕೇಂದ್ರದಲ್ಲಿ ಇರದೆ (1,4.7 ಮತ್ತು 10) ಲಗ್ನಾಧಿಪತಿಗಿಂತ ಬಲಹೀನನಾಗಿ ಇದ್ದರೆ ಜಾತಕನು ದೀರ್ಘಾಯುಷಿಯಾಗಿ ಚಿಂತೆ, ವಿಘ್ನ, ಕ್ಲೇಶಗಳಿಲ್ಲದೆ ಬಾಳುತ್ತಾನೆ.

ಧರ್ಮೇ ಕುಜೇ ವಾ ಸೂರ್ಯೇ ವಾ ದುಃಸ್ಥೇ ತನ್ನಾಯಕೇ ಸತಿ । ಪಾಪಮಧ್ಯಗತೇ ವಾಽಪಿ ಪಿತುರ್ಮರಣಮಾದಿಶೇತ್ ॥೨೨॥

ತಂದೆಯ ಅವಸಾನಃ-ನವಮಭಾವದಲ್ಲಿ ಕುಜ ಅಥವಾ ರವಿ ಇದ್ದು, ನವಮಾಧಿಪತಿಯು

ದುಃಸ್ಥಾನದಲ್ಲಿ ಇದ್ದರೆ, ಅಥವಾ ಪಾಪಮಧ್ಯನಾದರೆ ಜಾತಕನ ತಂದೆಯು ಶೀಘ್ರವಾಗಿ ಮರಣಹೊಂದುತ್ತಾನೆ.

ದಿವಾ ಸೂರ್ಯೇ ನಿಶಾ ಮಂದೇ ಸುಸ್ಥೇ ಶುಭನಿರೀಕ್ಷಿತೇ ।
ಧರ್ಮೇಶೇ ಬಲಸಂಯುಕ್ತೇ ಚಿರಂ ಜೀವತಿ ತತ್ಪಿತಾ ॥೨೨॥

ತಂದೆಯ ದೀರ್ಘಾಯುಷ್ಯ ವಿಚಾರಃ. ಹಗಲು ಜನಿಸಿದವರಿಗೆ ಸೂರ್ಯನು, ರಾತ್ರಿ ಜನಿಸಿದವರಿಗೆ ಶನಿಯು ಸುಸ್ಥಾನದಲ್ಲಿ ಇದ್ದು ಶುಭಗ್ರಹನಿಂದ ನೋಡಲ್ಪಡಬೇಕು. ನವಮಾಧಿಪತಿಯು ಬಲಿಷ್ಠನಾಗಿರಬೇಕು. ಈ ಯೋಗದಲ್ಲಿ ಜನಿಸಿದವನ ತಂದೆಯು ದೀರ್ಘಾಯುವು ಆಗುತ್ತಾನೆ.

ಮಂದಾರಯೋಃ ಶೀತರುಚೌ ಚ ಸೂರ್ಯೇ ತ್ರಿಕೋಣಗೇ ತಜ್ಜನನೀಪಿತೃಭ್ಯಾಮ್ ।
ತ್ಯಕ್ತೋ ಭವೇಚ್ಛಕ್ರಪುರೋಹಿತೇನ ದೃಷ್ಟೇ ತನೂಜೋಽಸ್ತಿ ಸುಖೀ ಚಿರಾಯುಃ ॥೨೪॥

ಶನಿರ್ಭಾಗ್ಯಾಧಿಪಃ ಸ್ಯಾಚ್ಚೇಚ್ಚರಸ್ಥೋ ನ ಶುಭೇಕ್ಷಿತಃ ।
ಸೂರ್ಯೇ ದುಃಸ್ಥಾನಗೇಽಪ್ಯನ್ಯಪಿತರಂಪ್ಯುಪಜೀವತಿ ॥೨೫॥

ಹೆತ್ತವರಿಂದ ತ್ಯಜಿಸಿಲ್ಪಟ್ಟ ಶಿಶುವಿಚಾರಃ.-ಸೂರ್ಯ ಮತ್ತು ಚಂದ್ರನ ತ್ರಿಕೋಣದಲ್ಲಿ ಶನಿ-ಕುಜರು ಇದ್ದರೆ ಶಿಶುವು ಹೆತ್ತವರಿಂದ ತ್ಯಜಿಸಲ್ಪಡುತ್ತದೆ. ಶನಿ-ಕುಜರು ಗುರುವಿನಿಂದ ನೋಡಲ್ಪಟ್ಟರೆ ಶಿಶುವು ದೀರ್ಘಾಯುಷ್ಯ ಉಳ್ಳದಾಗಿ ಸುಖದಿಂದ ಬಾಳುತ್ತದೆ.

ಶನಿಯು ಭಾಗ್ಯಾಧಿಪತಿಯಾಗಿ, ಶುಭಗ್ರಹರಿಂದ ನೋಡಲ್ಪಡದೆ ಚರರಾಶಿಯಲ್ಲಿದ್ದು, ಸೂರ್ಯನು ದುಸ್ಥಾನದಲ್ಲಿ ಇದ್ದರೆ ಶಿಶುವು ಅನ್ಯರಿಂದ ಪೋಷಿಸಲ್ಪಡುತ್ತದೆ.

ಧರ್ಮೇ ತದೀಶೇ ವಾ ಮಂದಯುಕ್ತೇ ದೃಷ್ಟೇಽಪಿ ವಾ ಚರೇ ।
ಜಾತೋ ದತ್ತೋ ಭವೇನ್ನೂನಂ ವ್ಯಯೇಶೇ ಬಲಶಾಲಿನಿ ॥೨೬॥

ದತ್ತಪುತ್ರಯೋಗಃ.-ನವಮಭಾವ ಅಥವಾ ನವಮಾಧಿಪತಿ ಶನಿಯದೃಷ್ಟಿ ಅಥವಾ ಯುತಿಯಲ್ಲಿ ಇರಬೇಕು. ಮತ್ತು ವ್ಯಯಾಧಿಪತಿಯು ಬಲಿಷ್ಠನಾಗಿದ್ದರೆ ಶಿಶುವಿಗೆ ದತ್ತಪುತ್ರಯೋಗ ಆಗುತ್ತದೆ.

ನಭಸಿ ಶುಭಖಗೇ ವಾ ತತ್ಪತೌ ಕೇಂದ್ರಕೋಣೇ ಬಲಿನಿ ನಿಜಗೃಹೋಚ್ಚೇ
ಕರ್ಮಗೇ ಲಗ್ನಪೇ ವಾ । ಮಹಿತಪೃಥುಯಶಾಃ ಸ್ಯಾದ್ಧರ್ಮಕರ್ಮಪ್ರವೃತ್ತಿಃ
ನೃಪತಿಸದೃಶಭಾಗ್ಯಂದೀರ್ಘಮಾಯುಶ್ಚ ತಸ್ಯ ॥೨೭॥

ಕರ್ಮಭಾವಃ.-1.ದಶಮಭಾವದಲ್ಲಿ ಶುಭಗ್ರಹನಿದ್ದರೆ, ಅಥವಾ 2.ದಶಮಾಧಿಪತಿಯು ಕೇಂದ್ರ-ತ್ರಿಕೋಣಗಳಲ್ಲಿ ಬಲಿಷ್ಠನಾಗಿ, ತನ್ನ ಉಚ್ಚ ಅಥವಾ ಸ್ವಕ್ಷೇತ್ರದಲ್ಲಿ ಇದ್ದರೆ, ಅಥವಾ 3.ಲಗ್ನಾಧಿಪತಿಯು ಕರ್ಮದಲ್ಲಿ ಇದ್ದರೆ ಜಾತಕನು ಧಾರ್ಮಿಕ ಪ್ರವೃತ್ತಿ ಉಳ್ಳವನಾಗಿ ಅತ್ಯಂತ ಪ್ರಸಿದ್ಧ ವ್ಯಕ್ತಿಯು, ರಾಜನಂತೆ ಭಾಗ್ಯಉಳ್ಳವನು, ಮತ್ತು ದೀರ್ಘಾಯುವು ಆಗುತ್ತಾನೆ.

ಊರ್ಜಸ್ವೀ ಜನವಲ್ಲಭೋ ದಶಮಗೇ ಸೂರ್ಯೇ ಕುಜೇ ವಾ ದಶೇ
ಕಾರ್ಯಂ ಸಾಧಯತೀ ಪ್ರತಾಪಬಹುಲೋ ಮೇಶಸ್ತು ಸುಸ್ಥೋ ಯದಿ । ಸದ್ವ್ಯಾ-
ಪಾರವಶಿಂಕ್ರಮಾಣಾಂ ವಿಹಸುತೇ ಸೌಮ್ಯೇಷು ಸಶ್ಲಾಘಿತಾಂ ಕರ್ಮಸ್ಥೇ-
ಷ್ವಹಿಮಂದ ಕೇತುಷು ಭವೇದ್ದುಷ್ಕರ್ಮಕಾರೀ ನರ: ॥೨೮॥

ದಶಮಸ್ಥಿತಗ್ರಹ:-ರವಿ ಅಥವಾ ಕುಜನು ದಶಮದಲ್ಲಿ ಇದ್ದರೆ ಪ್ರಸಿದ್ಧ ವ್ಯಕ್ತಿಯೂ, ಜನನಾಯಕನೂ ಆಗುತ್ತಾನೆ. 2.ದಶಮಾಧಿಪತಿಯು ಸುಸ್ಥಿತಿಯಲ್ಲಿ ಇದ್ದರೆ ಪ್ರತಾಪವಂತನೂ, ಕೈಕೊಂಡಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುವವನೂ, ಆಗುತ್ತಾನೆ. 3.ಶುಭಗ್ರಹಗಳು ದಶಮಭಾವದಲ್ಲಿ ಇದ್ದರೆ ಸದ್ವ್ಯವಹಾರ ಮಾಡುವವನು ಮತ್ತು ಬೃಹತ್ ಉದ್ಯಮಗಳನ್ನು ಯಶಸ್ವಿಯಾಗಿ ನೆರವೇರಿಸಿ ಶ್ಲಾಘಿಸಲ್ಪಡುತ್ತಾನೆ. 4.ದಶಮದಲ್ಲಿ ರಾಹು, ಶನಿ ಅಥವಾ ಕೇತು ಇದ್ದರೆ ದುಷ್ಕರ್ಮಗಳನ್ನು ಮಾಡುತ್ತಾನೆ.

ಲಾಭೇಶೇ ಯದ್ಭಾವನಾಥಯುಕ್ತೇ ಯದ್ಭಾವಗೇಽಪಿ ವಾ ।
ಭಾವಂ ತದನುರೂಪಸ್ಯ ವಸ್ತುನೋ ಲಾಭಗೈರಪಿ ॥೨೯॥

ಲಾಭಭಾವ:-1.ಲಾಭಾಧಿಪತಿಯು ಯುತಿಯಲ್ಲಿದ್ದ ಗ್ರಹದ, ಅಥವಾ 2.ಲಾಭಾಧಿಪತಿಸ್ಥಿತ ಭಾವಾಧಿಪತಿಯ ಭಾವಗಳನ್ನು ಶೋಧಿಸಿ. ಆ ಭಾವಗಳು ಸೂಚಿಸುವ ಅಥವಾ ಆ ಭಾವಕ್ಕೆ ಸಂಬಂಧಪಟ್ಟ ದ್ರವ್ಯ ಲಭಿಸುತ್ತದೆ. 3.ಹಾಗೆಯೇ ಲಾಭಸ್ಥಿತಗ್ರಹನಿಂದ ಅವರ ಭಾವಸೂಚಿತ ದ್ರವ್ಯಾದಿ ಲಭಿಸುತ್ತದೆ.

ವ್ಯಯಸ್ಥಿತೋ ಯದ್ಭಾವೇಶೋ ವ್ಯಯೇಶೋ ಯತ್ರ ತಿಷ್ಠತಿ ।
ತಸ್ಯ ಭಾವಸ್ಯಾನುರೂಪವಸ್ತುನೋ ನಾಶಮಾದಿಶೇತ್ ॥೩೦॥

ವ್ಯಯಭಾವ:-1.ವ್ಯಯಭಾವಸ್ಥಿತಗ್ರಹನ ಅಧೀನದಲ್ಲಿರುವ ಭಾವ ಮತ್ತು 2.ವ್ಯಯಾಧಿಪತಿಸ್ಥಿತ ಭಾವಕ್ಕೆ ಸಂಬಂಧಪಟ್ಟ ಫಲದ ನಾಶ ಆಗುತ್ತದೆ.

ಭಾವೇಶಸ್ಥಿತಭಾಂಶಕೋಣಮಪಿ ವಾ ಭಾವಂ ತು ವಾ ಲಗ್ನಪೋ ಲಗ್ನೇಶ-
ಸ್ಥಿತಭಾಂಶ ಕೋಣ ಮುದಯಂ ಪ್ರಾಯಾತಿ ಭಾವಾಧಿಪ: । ಸಂಯೋಗೇಽಪಿ
ವಿಲೋಕನೇಽಪಿ ಚ ತಯೋಸ್ತದ್ಭಾವಸಿದ್ಧಿಂ ತದಾ ಬ್ರೂಯಾತ್ಕಾರ-
ಕಯೋಗತಸ್ತು ಸುಪತೇರ್ಲಗ್ನಾಚ್ಚ ಚಂದ್ರಾದಪಿ ॥೩೧॥

ಭಾವಫಲಸಿದ್ಧಿ ಕಾಲ:-1.ಚಿಂತಿತ ಭಾವಾಧಿಪತಿಯು ಸ್ಥಿತರಾಶಿ ಅಥವಾ ನವಾಂಶದ ತ್ರಿಕೋಣರಾಶಿಯಲ್ಲಿ ಲಗ್ನಾಧಿಪತಿಯು ಚಾರದಲ್ಲಿ ಸಂಚರಿಸುವಕಾಲ ಅಥವಾ 2.ಚಿಂತಿತ ಭಾವದಲ್ಲಿ ಲಗ್ನಾಧಿಪತಿ ಸಂಚರಿಸುವಕಾಲ ಅಥವಾ 3.ಚಿಂತಿತ ಭಾವಾಧಿಪತಿಯು ಲಗ್ನಾಧಿಪತಿಸ್ಥಿತರಾಶಿ ಅಥವಾ ಅಂಶದ ತ್ರಿಕೋಣರಾಶಿಯಲ್ಲಿ ಸಂಚರಿಸುವಕಾಲದಲ್ಲಿ ಅಥವಾ 4.ಚಿಂತಿತ ಭಾವಾಧಿಪತಿಯು ಲಗ್ನದಲ್ಲಿ ಸಂಚರಿಸುವಕಾಲ ಅಥವಾ 5.ಭಾವಾಧಿಪತಿ ಲಗ್ನಾಧಿಪತಿಯು ಯುತ ಅಥವಾ ದೃಷ್ಟರು ಆದಾಗ, 6.ಚಿಂತಿತ ಭಾವಕಾರಕನು ಲಗ್ನಾಧಿಪತಿಯ ಅಥವಾ ಚಂದ್ರರಾಶ್ಯಾಧಿಪತಿಯ ಯುತಿ ಆಗುವ ಕಾಲದಲ್ಲಿ ಚಿಂತಿತ ಭಾವಫಲ ಪ್ರಾಪ್ತಿ ಆಗುತ್ತದೆ.

ಯದ್ಭಾವೇಶಸ್ಥಿತರಾಶಿ ತ್ರಿಕೋಣಸ್ಥೋ ಗುರುರ್ಯದಾ ।
ಗೋಚರೇ ತಸ್ಯ ಭಾವಸ್ಯ ಫಲಪ್ರಾಪ್ತಿಂ ವಿನಿರ್ದಿಶೇತ್ ॥೩೨॥

ಭಾವಫಲ ಅನುಭವಕಾಲ:- ಚಿಂತಿತ ಭಾವದ ಅಧಿಪತಿ ಸ್ಥಿತರಾಶಿ ಅಥವಾ ಅದರ ತ್ರಿಕೋಣದಲ್ಲಿ ಗೋಚರದ ಗುರುವು ಸಂಚರಿಸುವ ಕಾಲದಲ್ಲಿ ಆ ಭಾವ ಫಲವು ಅನುಭವಕ್ಕೆ ಬರುತ್ತದೆ.

ಲಗ್ನಾಧಿನಾಥಯೋಗೇ ತು ಲಗ್ನೇಶಾದ್ಬಲಿನೋ ರಿಪೋ ।
ತದಾ ತದ್ವಶಗ: ಶತ್ರೋರ್ವಿಪರೀತಮತೋಽನ್ಯಥಾ ॥೩೩॥

ಶತ್ರುವಶಯೋಗ: ಗೋಚರದಲ್ಲಿ ಷಷ್ಠಾಧಿಪತಿಯು ಲಗ್ನಾಧಿಪತಿಗಿಂತ ಬಲಹೀನನಾಗಿದ್ದು, ಇವರಿಬ್ಬರು ಯುತರಾದಾಗ ಶತ್ರುವು ವಶನಾಗುತ್ತಾನೆ. ವಿಪರೀತವಾದಲ್ಲಿ ಶತ್ರುವಶನಾಗುತ್ತಾನೆ.

ಯದ್ಭಾವಪಸ್ಯ ತನುಪಸ್ಯ ಭವತ್ಯರಿತ್ವಂ ತತ್ಕಾಲ ಶತ್ರುವಶತೋಽಥವಾ ಪ್ರಕೃತಿಸ್ಥಿತೇರ್ವಾ ।
ಸ್ವಧ್ವಾನಂ ತದಾ ವದತು ತೇನ ಚ ಗೋಚರಸ್ಥ ಸ್ವಸ್ಥತ್ವ ಸ್ವತ್ವಮುತ ಸಂಯುತಿಮೈತ್ರತಸ್ತು ॥

ಶತ್ರುತ್ವವಿಚಾರ:- 1.ಚಿಂತಿತ ಭಾವಾಧಿಪತಿ ಮತ್ತು ಲಗ್ನಾಧಿಪತಿ ನೈಸರ್ಗಿಕವಾಗಿ ಅಥವಾ ತಾತ್ಕಾಲಿಕವಾಗಿ ಶತ್ರುಗಳಾದರೆ ಅಥವಾ 2.ಪರಸ್ಪರ ಷಷ್ಠಾಷ್ಟಮಗತರಾದರೆ ಭಾವಕ್ಕೆ ಸಂಬಂಧಪಟ್ಟ ಗೋಚರಕಾಲದಲ್ಲಿ ವಿರೋಧ, ಶತ್ರುತ್ವ ಇತ್ಯಾದಿ ಸಂಭವಿಸುತ್ತದೆ. 3.ಭಾವಾಧಿಪತಿ ಮತ್ತು ಲಗ್ನಾಧಿಪತಿಗೆ ನೈಸರ್ಗಿಕವಾಗಿ ಅಥವಾ ತಾತ್ಕಾಲಿಕವಾಗಿ ಮಿತ್ರತ್ವ ಇದ್ದರೆ ಹೊಸ ಮಿತ್ರತ್ವಾದಿ ಅವರ ಚಾರಕಾಲದಲ್ಲಿ ಲಭಿಸುತ್ತದೆ.

ಲಗ್ನೇಶಯದ್ಭಾವಪಯೋಸ್ತು ಯೋಗೋ ಯದಾ ತದಾ ತತ್ಫಲಸಿದ್ಧಿಕಾಲ: ।
ಭಾವೇಶವೀರ್ಯೇಣ ಶುಭಮನ್ಯಥಾನ್ಯಲ್ಲಗ್ನಾಚ್ಚ ಚಂದ್ರಾದಪಿ ಚಿಂತನೀಯಮ್ ॥೩೪॥

ಭಾವಫಲಪ್ರಾಪ್ತಿ ಕಾಲ:- ಲಗ್ನಾಧಿಪತಿಯು ಗೋಚರದಲ್ಲಿ ಚಿಂತಿತಭಾವಾಧಿಪತಿಯು ಯುತಿಮಾಡುವಾಗ ಆ ಭಾವಫಲ ಪ್ರಾಪ್ತಿಕಾಲ ಆಗುತ್ತದೆ. ಭಾವಾಧಿಪತಿಯು ಬಲಿಷ್ಠನಾದರೆ ಶುಭಫಲಗಳೂ, ಬಲಹೀನನಾದರೆ ಅಶುಭಫಲಗಳೂ ಲಭಿಸುತ್ತವೆ. ಲಗ್ನಕ್ಕೆ ಹೇಳಿದ ಈ ಗೋಚರಫಲಗಳನ್ನು ಚಂದ್ರನಿಂದಲೂ ಚಿಂತಿಸಬೇಕು.

ನಿರ್ಯಾಣ ಪ್ರಕರಣಾಧ್ಯಾಯ-೧೭

ತತ್ತದ್ಭಾವಾಧಿಪಸಂಸ್ಥಿತಾಂಶೇ ತತ್ತ್ರಿಕೋಣಗೇ ।
ವ್ಯಯಸ್ಥಿತಭಾಂಶೇ ವಾ ಮಂದೇ ತದ್ಭಾವನಾಶನಮ್ ॥೧॥

ಭಾವಫಲಚಿಂತನೆಯಲ್ಲಿ:- ಆಯಾಭಾವದಿಂದ ಅಷ್ಟಮಾಧಿಪತಿ ಅಥವಾ ವ್ಯಯಾಧಿಪತಿ ಸ್ಥಿತರಾಶಿ ಅಥವಾ ನವಾಂಶ ರಾಶಿಯಲ್ಲಿ ಮತ್ತು ಅವುಗಳ ತ್ರಿಕೋಣರಾಶಿಯಲ್ಲಿ ಚಾರಕಾಲದಲ್ಲಿ ಆ ಭಾವಫಲಗಳ ಹಾನಿ ಅಥವಾ ನಾಶ ಸಂಭವಿಸುತ್ತದೆ.

ರಂಧ್ರೇಶೋ ಗುಳಿಕೋ ಮಂದ: ಖರದ್ರೇಕ್ಕಾಣಪೋಽಪಿ ವಾ ।
ಯತ್ರ ತಿಷ್ಠತಿ ತದ್ಭಾಂಶತ್ರಿಕೋಣೇ ರವಿಜೇ ಮೃತಿ: ॥೨॥

ನಿರ್ಯಾಣ ಶನಿ:- ಅಷ್ಟಮಾಧಿಪತಿ, ಗುಳಿಕ (ಮಾಂದಿ) ಶನಿ ಮತ್ತು ಖರದ್ರೇಕ್ಕಾಣಾಧಿಪತಿ (೨೨ನೇ ದ್ರೇಕ್ಕಾಣಾಧಿಪತಿ), ಇವರು 1.ನಿಂತರಾಶಿ, 2.ಅವರ ನವಾಂಶರಾಶಿ, 3.ಈ ರಾಶಿ ಮತ್ತು ಅಂಶರಾಶಿಯ ತ್ರಿಕೋಣರಾಶಿಗಳಲ್ಲಿ ಗೋಚರದ ಶನಿ ಸಂಚಾರ ಕಾಲದಲ್ಲಿ ಮರಣ ಸಂಭವಿಸಬಹುದು.

ಉದ್ಯದ್ದೃಗಾಣನಾಥಸ್ಯ ತಥಾ ರಂಧ್ರಾಧಿಪಸ್ಯ ಚ ।
ರಂಧ್ರದ್ರೇಕ್ಕಾಣಪಸ್ಯಾಪಿ ಭಾಂಶಕೋಣೇ ಗುರೌ ಮೃತಿಃ ॥೩॥

ನಿರ್ಯಾಣ ಗುರು:- 1.ಲಗ್ನದಲ್ಲಿ ಉದಿತದ್ರೇಕ್ಕಾಣಾಧಿಪತಿ, 2.ಅಷ್ಟಮಾಧಿಪತಿ, 3.ಇಪ್ಪತ್ತೆರಡನೇ ದ್ರೇಕ್ಕಾಣಾಧಿಪತಿ ಈ ಮೂವರು ಸ್ಥಿತರಾಶಿ ಅಥವಾ ನವಾಂಶರಾಶಿ, ಮತ್ತು ಅವುಗಳ ತ್ರಿಕೋಣರಾಶಿಯಲ್ಲಿ ಗುರುಸಂಚಾರಕಾಲ ಮರಣ ಸಂಭವಿಸಬಹುದು.

ಸ್ವಸ್ಫುಟದ್ವಾದಶಾಂಶೇ ವಾ ರಂಧ್ರೇಶಸ್ಥನವಾಂಶಕೇ ।
ಲಗ್ನೇಶಸ್ಥನವಾಂಶೇಽರ್ಕೇ ತತ್ತ್ರಿಕೋಣೇಽಪಿ ವಾ ಮೃತಿ: ॥೪॥

ನಿರ್ಯಾಣ ರವಿ:-1.ಜನನಕಾಲದ ಸೂರ್ಯನು ಸ್ಥಿತರಾಶಿ, 2.ಅಷ್ಟಮಾಧಿಪತಿಸ್ಥಿತ ನವಾಂಶಧಿಪತಿಯ ರಾಶಿ, 3.ಲಗ್ನಾಧಿಪತಿಸ್ಥಿತ ನವಾಂಶಧಿಪತಿಯರಾಶಿ, ಮತ್ತು ಇವುಗಳ ತ್ರಿಕೋಣರಾಶಿಯಲ್ಲಿ ರವಿ ಸಂಚಾರಕಾಲ ಮರಣ ಸಂಭವಿಸಬಹುದು.

ರಂಧ್ರಪ್ರಭೋರ್ವಾ ಭಾನೋರ್ವಾ ಭಾಂಶಕೋಣಂ ಗತೇ ವಿಧೌ ।
ಮೃತಿಂ ವದೇತ್ಸರ್ವಮೇತಲ್ಲಗ್ನಾಚ್ಚಂದ್ರಾಚ್ಚ ಚಿಂತಯೇತ್ ॥೫।

ನಿರ್ಯಾಣ ಚಂದ್ರ:-1.ಅಷ್ಟಮಾಧಿಪತಿ ಮತ್ತು ರವಿ ಇವರಿಬ್ಬರು ಸ್ಥಿತರಾಶಿ ಅಥವಾ ನವಾಂಶರಾಶಿ ಅಥವಾ ಅವುಗಳ ತ್ರಿಕೋಣ ರಾಶಿಯಲ್ಲಿ ಚಂದ್ರನು ಸಂಚರಿಸುವಕಾಲದಲ್ಲಿ ಮರಣ ಸಂಭವಿಸಬಹುದು. ಮರಣಕಾಲ ನಿರ್ಣಯಕ್ಕೆ ಈ ವರೆಗೆ ಹೇಳಿದ ಫಲಗಳನ್ನು ಲಗ್ನ ಮತ್ತು ಚಂದ್ರನಿಂದಲೂ ಚಿಂತಿಸಬೇಕು.

ಲಗ್ನೇಶಹೀನಯಮಕಂಟಕಭಾಂಶಕೋಣಮ್ ಪ್ರಾಪ್ತೇಽಥವಾ ಶನಿವಿಹೀನ
ಹಿಮಾಂಶುಭಾಂಶಮ್ । ಯಾತೇ ಗುರೌ ಸ್ವಮರಣನ್ತ್ವಥ ರಾಹುಹೀನ
ಭೂಸೂನುಭಾಂಶಕಗುರೌ ಸಹಜಪ್ರಣಾಶ: ॥೬॥

ಮರಣಕಾಲ:-1.ಲಗ್ನಾಧಿಪನ ಸ್ಫುಟದಿಂದ ಯಮಕಂಟಕನ ಸ್ಫುಟವನ್ನು ಕಳೆಯಬೇಕು, 2.ಶನಿಸ್ಫುಟದಿಂದ ಚಂದ್ರಸ್ಫುಟವನ್ನು ಕಳೆಯಬೇಕು. ಈ ಎರಡು ಲಬ್ಧಸ್ಫುಟ ತುಲ್ಯರಾಶಿ ಮತ್ತು ನವಾಂಶರಾಶಿ ಮತ್ತು ಅವುಗಳ ತ್ರಿಕೋಣರಾಶಿಯಲ್ಲಿ ಗುರುಸಂಚಾರ ಕಾಲ ಮರಣ ಸಂಭವಿಸಬಹುದು.

ಸಹೋದರ ಮರಣ ಕಾಲ:- ರಾಹುಸ್ಫುಟದಿಂದ ಕುಜಸ್ಫುಟವನ್ನು ಕಳೆದು, ಲಬ್ಧ ಸ್ಫುಟತುಲ್ಯ ರಾಶಿ ಅಥವಾ ನವಾಂಶದಲ್ಲಿ ಗುರು ಸಂಚಾರಕಾಲ ಸಹೋದರನ ಮರಣ ಸಂಭವಿಸಬಹುದು.

ಭಾನೋಃ ಕಂಟಕವರ್ಜಿತಸ್ಯ ಭವನಾಂಶೇ ವಾ ತ್ರಿಕೋಣೇ ಗುರೌ ತಾತೋ
ನಶ್ಯತಿ ಕಂಟಕೋನಗುಲಿಕಕ್ಷ್ಮಾಂಶತ್ರಿಕೋಣೇ ಶನೌ । ಅರ್ಕೋನೇಂದು
ಗೃಹಾಂಶ ಕೋಣಗಗುರೌ ಚಂದ್ರೋನಮಂದಾತ್ಮಜ ಕ್ಷೇತ್ರೇಂಶೇಽಪ್ಯಥವಾ
ತ್ರಿಕೋಣಗೃಹಗೇ ಮಂದೇ ಜನನ್ಯಾ ಮೃತಿಃ ॥೭॥

ತಂದೆಯ ಅವಸಾನ ಕಾಲಃ- 1.ರವಿಸ್ಫುಟದಿಂದ ಯಮಕಂಟಕ ಸ್ಫುಟವನ್ನು ಕಳೆದು ಲಬ್ಧ ಸ್ಫುಟತುಲ್ಯ ರಾಶಿ ಅಥವಾ ನವಾಂಶರಾಶಿ ಅಥವಾ ಅವುಗಳ ತ್ರಿಕೋಣರಾಶಿಯಲ್ಲಿ ಗುರುಸಂಚಾರಕಾಲ, 2.ಯಮಕಂಟಕ ಸ್ಫುಟದಿಂದ ಮಾಂದಿಸ್ಫುಟವನ್ನು ಕಳೆದು ಲಬ್ಧ ಸ್ಫುಟತುಲ್ಯ, ರಾಶಿ ಅಥವಾ ನವಾಂಶರಾಶಿ ಅಥವಾ ಅವುಗಳ ತ್ರಿಕೋಣರಾಶಿಯಲ್ಲಿ ಶನಿಸಂಚಾರಕಾಲ ತಂದೆಯ ಅವಸಾನ ಸಂಭವಿಸಬಹುದು.

ತಾಯಿಯಅವಸಾನಕಾಲಃ- 1.ರವಿಸ್ಫುಟದಿಂದ ಚಂದ್ರಸ್ಫುಟವನ್ನು ಕಳೆದು ಲಬ್ಧ ಸ್ಫುಟತುಲ್ಯ ರಾಶಿ ಅಥವಾ ನವಾಂಶರಾಶಿ ಅಥವಾ ಅವುಗಳ ತ್ರಿಕೋಣ ರಾಶಿಯಲ್ಲಿ ಗುರುಸಂಚಾರಕಾಲ ತಾಯಿಯ ಅವಸಾನ ಸಂಭವಿಸಬಹುದು. 2.ಚಂದ್ರಸ್ಫುಟದಿಂದ ಮಾಂದಿಸ್ಫುಟವನ್ನು ಕಳೆದು ಲಬ್ಧಸ್ಫುಟತುಲ್ಯ ರಾಶಿ ಅಥವಾ ನವಾಂಶರಾಶಿ ಅಥವಾ ಅವುಗಳ ತ್ರಿಕೋಣರಾಶಿಯಲ್ಲಿ ಶನಿ ಸಂಚಾರಕಾಲ ತಾಯಿಯ ಅವಸಾನ ಸಂಭವಿಸ ಬಹುದು.

ಪದೇತ್ಪ್ರತ್ಯರನಕ್ಷತ್ರನಾಥಾಚ್ಚ ಯಮಕಂಟಕಮ್ ।
ತ್ಯಕ್ತ್ವಾ ತದ್ಭವನೇ ಕೋಣೇ ಗುರೌ ಪುತ್ರವಿನಾಶನಮ್ ॥೮॥

ಮಕ್ಕಳಮರಣಃ- ಜನ್ಮನಕ್ಷತ್ರದಿಂದ ಐದನೇನಕ್ಷತ್ರದ (ಪ್ರತ್ಯರತಾರೆ) ಅಧಿಪತಿಯ ಸ್ಫುಟದಿಂದ ಯಮಕಂಟಕನ ಸ್ಫುಟವನ್ನು ಕಳೆದು ಲಬ್ಧಸ್ಫುಟತುಲ್ಯ ರಾಶಿಯಲ್ಲಿ ಗುರು ಸಂಚಾರಕಾಲ ಪುತ್ರನಾಶ ಸಂಭವಿಸಬಹುದು.

ಲಗ್ನಾರ್ಕಮಾಂದಿಸ್ಫುಟಯೋಗರಾಶೇರಧೀಶ್ವರೋ ಯದ್ಭವನೋಪಗಸ್ತು ।
ತದ್ರಾಶಿಸಂಸ್ಥೇ ಪುರುಹೂತವಂದ್ಯೇ ತತ್ಕೋಣಗೇ ವಾ ಮೃತಿಮೇತಿ ಜಾತಃ ॥೯॥

ಸ್ವಮರಣನಿರ್ಣಯಃ- ಲಗ್ನ, ರವಿ ಮತ್ತು ಗುಳಿಕ ಈ ಮೂರರ ಸ್ಫುಟಗಳನ್ನು ಕೂಡಿಸಿ ಲಬ್ಧರಾಶ್ಯಾಧಿಪನನ್ನು ಶೋಧಿಸಿ, ಅವನು ಸ್ಥಿತರಾಶಿ ಅಥವಾ ಆ ರಾಶಿಯ ತ್ರಿಕೋಣರಾಶಿಯಲ್ಲಿ ಗುರು ಸಂಚಾರಕಾಲ ಜಾತಕನ ಅವಸಾನ ಆಗುತ್ತದೆ.

ಮಾಂದಿಸ್ಫುಟೇ ಭಾನುಸುತಂ ವಿಶೋಧ್ಯ ರಾಶ್ಯಂಶಕೋಣೇ ರವಿಜೇ ಮೃತಿಃಸ್ಯಾತ್ ।
ಧೂಮಾದಿಪಂಚಗ್ರಹಯೋಗರಾಶಿದ್ರೇಕ್ಕಾಣಯಾತೇಽರ್ಕಸುತೇ ಚ ಮೃತ್ಯುಃ ॥೧೦॥

ಅವಸಾನಕಾಲಃ- 1.ಮಾಂದಿಸ್ಫುಟದಿಂದ ಶನಿಸ್ಫುಟವನ್ನು ಕಳೆದು ಲಬ್ಧಸ್ಫುಟತುಲ್ಯ ರಾಶಿ ಅಥವಾ ನವಾಂಶರಾಶಿ ಅಥವಾ ಅವುಗಳ ತ್ರಿಕೋಣರಾಶಿಯಲ್ಲಿ ಶನಿಸಂಚಾರಕಾಲ ದಲ್ಲಿ ಜಾತಕನ ಅವಸಾನ ಆಗುತ್ತದೆ. 2.ಧೂಮಾದಿ ಪಂಚ ಉಪಗ್ರಹಗಳ ಸ್ಫುಟವನ್ನು ಕೂಡಿಸಿ ಲಬ್ಧದ್ರೇಕ್ಕಾಣದಲ್ಲಿ ಶನಿಸಂಚಾರಕಾಲ ಜಾತಕನ ಅವಸಾನ ಆಗುತ್ತದೆ.

ವಿಲಗ್ನಮಾಂದಿಸ್ಫುಟಯೋಗಧಾಮಂ ನಿರ್ಯಾಣಭಾನುಂ ಪ್ರವದಂತಿ ತಜ್ಞಾಃ ।
ನಿರ್ಯಾಣಚಂದ್ರೋ ಗುಳಿಕೇಂದುಯೋಗೋ ಲಗ್ನಂ ವಿಲಗ್ನಾಹಿಮಗೂಮಾಂದಿ-
ಯೋಗಃ ॥೧೧॥

ನಿರ್ಯಾಣರವಿ:- ಲಗ್ನ ಮತ್ತು ಮಾಂದಿ ಸ್ಫುಟವನ್ನು ಕೂಡಿಸಿ ತುಲ್ಯಸ್ಫುಟದಲ್ಲಿ ರವಿಚಾರ ಮರಣಸಂಭವಿಸುತ್ತದೆ.

ನಿರ್ಯಾಣಚಂದ್ರ:- ಚಂದ್ರ ಮತ್ತು ಮಾಂದಿ ಸ್ಫುಟವನ್ನು ಕೂಡಿಸಿ ತುಲ್ಯಸ್ಫುಟದಲ್ಲಿ ನಿರ್ಯಾಣಕಾಲದ ಚಂದ್ರನು ಇರುತ್ತಾನೆ.

ನಿರ್ಯಾಣಲಗ್ನ:- ಲಗ್ನ, ಚಂದ್ರ ಮತ್ತು ಮಾಂದಿಸ್ಫುಟ (ಇದನ್ನು ತ್ರಿಸ್ಫುಟ ಎಂದು ಕರೆಯುತ್ತಾರೆ.) ತುಲ್ಯಸ್ಫುಟವು ನಿರ್ಯಾಣ ಲಗ್ನ ಆಗಿರುತ್ತದೆ.

ಮಾಂದಿಸ್ಥಿತೋ ದಿನನವಾಂಶಗತೋऽಮರೇಡ್ಯೋ ಇದಾ ದ್ವಾದಶಾಂಶಸಹಿತೇ
ದಿನನಾಥಸೂನೌ । ದ್ರೇಕ್ಕಾಣಕೋಣಭವನೇ ದಿನಪೇ ಚ ಮೃತ್ಯುರ್ಲಗ್ನೇಂದು
ಮಾಂದಿಯುತಭೇ ಶಶಿತೋದಯೇ ಸ್ಯಾತ್ ॥೧೨॥

ನಿರ್ಯಾಣಗುರು:- 1.ಜನನಕಾಲದ ಮಾಂದಿಸ್ಥಿತ ನವಾಂಶದಲ್ಲಿ ಗುರುಚಾರ. 2. ನಿರ್ಯಾಣಶನಿ:- ಮಾಂದಿಸ್ಥಿತ ದ್ವಾದಶಾಂಶದಲ್ಲಿ ಶನಿಚಾರ. 3. ನಿರ್ಯಾಣ ರವಿ:- ಮಾಂದಿಸ್ಥಿತದ್ರೇಕ್ಕಾಣ ಅಥವಾ ಅದರ ತ್ರಿಕೋಣದ್ರೇಕ್ಕಾಣದಲ್ಲಿ ರವಿ ಸಂಚಾರ ಕಾಲ. 4.ನಿರ್ಯಾಣಲಗ್ನ:- ಲಗ್ನ, ಚಂದ್ರ ಮತ್ತು ಮಾಂದಿಸ್ಫುಟವನ್ನು ಕೂಡಿಸಿ ತುಲ್ಯರಾಶ್ಯಾಧಿಪನು ಸ್ಥಿತರಾಶಿಯು ನಿರ್ಯಾಣಲಗ್ನ ಆಗಿರುತ್ತದೆ.

ಗುಳಿಕಂ ರವಿಸೂನುಂ ಚ ಗುಣಿತ್ವಾ ನವಸಂಖ್ಯಯಾ ।
ಬುಧಯೋರೈಕ್ಯರಾಶ್ಯಂಶಗ್ರಹಗೇ ರವಿಜೇ ಮೃತಿಃ ॥೧೩॥

ನಿರ್ಯಾಣಶನಿ:- ಮಾಂದಿಸ್ಫುಟ ಮತ್ತು ಶನಿಸ್ಫುಟವನ್ನು ಒಂಭತ್ತರಿಂದ ಗುಣಿಸಿ ಬಂದ ಮೊತ್ತವನ್ನು ಕೂಡಿಸಿ, ತುಲ್ಯ ರಾಶಿ ಅಥವಾ ನವಾಂಶದಲ್ಲಿ ನಿರ್ಯಾಣಕಾಲದ ಶನಿ ಇರುತ್ತಾನೆ.

ಸ್ಫುಟೇ ವಿಲಗ್ನನಾಥಸ್ಯ ಯುತೋऽಥ್ಯ ಯಮಕಂಟಕಸ್ ।
ತದ್ರಾಶಿನವಭಾಗಸ್ಥೇ ಜೀವೇ ಮೃತ್ಯುರ್ನ ಸಂಶಯಃ ॥೧೪॥

ನಿರ್ಯಾಣಗುರು:- ಲಗ್ನಾಧಿಪತಿಯ ಸ್ಫುಟದಿಂದ ಯಮಕಂಟಕನ ಸ್ಫುಟವನ್ನು ಕೂಡು ತುಲ್ಯರಾಶ್ಯಂಶದಲ್ಲಿ ಗುರುಸಂಚಾರಕಾಲ ಮರಣ ಸೂಚಕ ಆಗಿರುತ್ತದೆ.

ಷಷ್ಠ್ಯಾವಸಾನರಂಧ್ರೇಶಸ್ಫುಟೈಕ್ಯಭವನಂ ಗತೇ ।
ತತ್ ತ್ರಿಕೋಣೋಪಗೇ ವಾಪಿ ಮಂದೇ ಮೃತ್ಯುಭಯಂ ನೃಣಾಮ್ ॥೧೫॥

ಉದ್ಯದ್ದೃಗಾಣಪರಿಯಾತೇ ಸುರೇಡ್ಯೇ ತಸ್ಯ ತ್ರಿಕೋಣಮಪಿ ಗಚ್ಛತಿ ವಾ ವಿನಾಶಮ್ । ರಂಧ್ರತ್ರಿಭಾಗಪತಿಮಂದಿರಗೇऽಥ ಮಂದೇ ಪ್ರಾಪ್ತೇ ತ್ರಿಕೋಣಭಾವಮಸ್ಯ ವದಂತಿ ಮೃತ್ಯುಮ್ ॥೧೬॥

ಮರಣಭಯಃ. 1.ಷಷ್ಠ, ಅಷ್ಟಮ ಮತ್ತು ವ್ಯಯಾಧಿಪತಿಯ ಸ್ಫುಟದ ಮೊತ್ತ ವನ್ನು ಶೋಧಿಸಿ ಲಬ್ಧರಾಶಿ ಅಥವಾ ಅದರ ತ್ರಿಕೋಣರಾಶಿಗಳಲ್ಲಿ ಶನಿ ಸಂಚಾರಕಾಲ, ಜಾತಕನಿಗೆ ಮರಣಭಯ ಉಂಟಾಗುತ್ತದೆ. 2.ಲಗ್ನದ್ರೇಕ್ಕಾಣಾಧಿಪತಿಯು ಸ್ಥಿತರಾಶಿ ಅಥವಾ ಅದರ ತ್ರಿಕೋಣರಾಶಿಯಲ್ಲಿ ಗುರು ಸಂಚಾರಕಾಲ ಮರಣಭಯ ಉಂಟಾಗು ತ್ತದೆ. 3.ಖರದ್ರೇಕ್ಕಾಣಾಧಿಪತಿ (೨೨ನೇ ದ್ರೇಕ್ಕಾಣ) ಸ್ಥಿತರಾಶಿ ಅಥವಾ ಅದರ ತ್ರಿಕೋಣರಾಶಿಯಲ್ಲಿ ಶನಿಸಂಚಾರ ಕಾಲ ಮರಣಭಯ ಉಂಟಾಗುತ್ತದೆ.

ವಿಲಗ್ನಜನ್ಮಾಷ್ಟಮರಾಶಿನಾಥಯೋಃ ಖರತ್ರಿಭಾಗೇಶ್ವರಯೋಸ್ತಯೋರಪಿ। ಶಶಾಂಕಮಾಂದ್ಯೋರಪಿ ದುರ್ಬಲಾಂಶಕತ್ರಿಕೋಣಗೇ ಸೂರ್ಯಸುತೇ ಮೃತಿರ್ಭವೇತ್ ॥೧೭॥ ಲಗ್ನಾಧಿಪಸ್ಥಿತನವಾಂಶಕರಾಶಿ ತುಲ್ಯಂ ರಂಧ್ರಾಧಿಪಸ್ಯ ಗೃಹಮಾಪತಿತೇ ಘಟೇಶೇ। ತಸ್ಮಿನ್ನದೇನ್ಮರಣಂಯೋಗಮನೇಕ ಶಾಸ್ತ್ರಸಂಕ್ಷುಣ್ಣಖಿನ್ನಮತಿಭಿಃ ಪರಿಕೀರ್ತಿತಂ ತತ್ ॥೧೮॥

ನಿರ್ಯಾಣ ಶನಿ:-1.ಲಗ್ನಾಧಿಪತಿ ಮತ್ತು ಅಷ್ಟಮಾಧಿಪತಿ, 2.ಲಗ್ನದಿಂದ ಮತ್ತು ಚಂದ್ರನಿಂದ ೨೨ನೇ ದ್ರೇಕ್ಕಾಣಾಧಿಪತಿ, 3.ಚಂದ್ರ ಮತ್ತು ಮಾಂದಿ, ಈ ಮೂರರಲ್ಲಿ ನಿರ್ಬಲನಾದವನ ನವಾಂಶರಾಶಿಯ ತ್ರಿಕೋಣದಲ್ಲಿ ಶನಿಸಂಚಾರಕಾಲ ಮರಣಸಂಭವಿಸ ಬಹುದು. 4.ಲಗ್ನಾಧಿಪತಿಯ ನವಾಂಶರಾಶಿಗೆ ಮೇಷರಾಶಿಯಿಂದ ಇರುವ ಅಂತರ ವನ್ನು ತಿಳಿದು, ಅಷ್ಟಮಾಧಿಪತಿಯಿಂದ ಅಷ್ಟೇ ಅಂತರ ದೂರದಲ್ಲಿ ಶನಿಸಂಚಾರಕಾಲ ಮರಣ ಸಂಭವಿಸಬಹುದು.

ಶಶಾಂಕಸಂಯುಕ್ತದೃಗಾಣಪೂರ್ವತಃ ಖರತ್ರಿಭಾಗೇಶಗೃಹಂ ಗತೇಽಪಿ ವಾ।
ತ್ರಿಕೋಣಗೇ ವಾ ಮರಣಂ ಶರೀರಿಣಾಂ ಶಶಿನ್ಯಥ ಸ್ಯಾತ್ತನುರುಧ್ರರಿಃಫಗೇ

ನಿರ್ಯಾಣಚಂದ್ರಃ- 1.ಜನನಕಾಲದ ಚಂದ್ರನ ದ್ರೇಕ್ಕಾಣದಿಂದ ೨೨ನೇ ದ್ರೇಕ್ಕಾಣಾ ಧಿಪತಿಯು ಸ್ಥಿತರಾಶಿ ಅಥವಾ ಅದರ ತ್ರಿಕೋಣರಾಶಿಯಲ್ಲಿ ಅಥವಾ ಲಗ್ನ, ಅಷ್ಟಮ ಮತ್ತು ವ್ಯಯ ಭಾವದಲ್ಲಿ ಚಂದ್ರನು ಸಂಚರಿಸುವಕಾಲ ಮರಣ ಸಂಭವಿಸಬಹುದು.

ನಿಧನೇಶ್ವರಗತರಾಶೌ ಭಾನಾವಿಂದೌ ತು ಭಾನುಗತರಾಶೌ ।
ನಿಧನಾಧಿಪಸಂಯುಕ್ತೇ ನಕ್ಷತ್ರೇ ನಿರ್ದಿಶೇನ್ಮರಣಮ್ ॥೨೦॥

ನಿರ್ಯಾಣ ರವಿ ಚಂದ್ರ:- 1.ಅಷ್ಟಮಾಧಿಪತಿಸ್ಥಿತ ರಾಶಿಯಲ್ಲಿ ರವಿ ಸಂಚರಿಸುವ ಕಾಲ, 2.ರವಿಸ್ಥಿತರಾಶಿ ಮತ್ತು ಅಷ್ಟಮಾಧಿಪತಿ ಸ್ಥಿತನಕ್ಷತ್ರದಲ್ಲಿ ಚಂದ್ರನು ಸಂಚರಿಸುವ ಕಾಲ ಮರಣ ಸೂಚಕ ಆಗಿರುತ್ತದೆ.

ಯೋ ರಾಶಿರ್ಗುಲಿಕೋಪೇತಃ ತತ್ತ್ರಿಕೋಣಗತೇ ಶನೌ ।
ಮರಣಂ ನಿಶಿಜಾತಾನಾಂ ದಿವಿಜಾನಾಂ ತದಸ್ತಕೇ ॥೨೧॥

ದಿವಾ-ರಾತ್ರಿ ಜನನಕ್ಕೆ ನಿರ್ಯಾಣ ಶನಿ:- ಗುಳಿಕಸ್ಥಿತರಾಶಿಯ ತ್ರಿಕೋಣದಲ್ಲಿ ಶನಿ ಸಂಚರಿಸುವಕಾಲ ರಾತ್ರಿ ಜನಿಸಿದವರಿಗೆ, ಮತ್ತು ಆ ರಾಶಿಗಳ ಸಪ್ತಮದಲ್ಲಿ ಶನಿ ಸಂಚರಿ ಸುವಕಾಲ ಹಗಲು ಜನಿಸಿದವರಿಗೆ ಮರಣಸೂಚಕ ಆಗಿರುತ್ತದೆ.

ಗುರುರಾಹುಸ್ಫುಟೈಕ್ಯಸ್ಯ ರಾಶಿಂ ಯಾತೋ ಗುರುರ್ಯದಾ ।
ತದಾ ತು ನಿಧನಂ ವಿದ್ಯಾತ್ತತ್ತ್ರಿಕೋಣಗತೋಽಥವಾ ॥೨೨॥

ನಿರ್ಯಾಣ ಗುರು:- ಗುರು ಮತ್ತು ರಾಹು ಸ್ಫುಟಗಳನ್ನು ಕೂಡಿಸಿ ಲಬ್ಧರಾಶಿ ಅಥವಾ ಅದರ ತ್ರಿಕೋಣರಾಶಿಯಲ್ಲಿ ಗುರು ಸಂಚಾರಕಾಲ ಮರಣ ಸಂಭವಿಸಬಹುದು.

ಅಷ್ಟಮಸ್ಯ ತ್ರಿಭಾಗಾಂಶಪತಿಸ್ಥಿತಗೃಹಂ ಶನೌ ।
ತದೀಶನವಭಾಗರ್ಕ್ಷಂ ಗತೇ ವಾ ಮರಣಂ ಭವೇತ್ ॥೨೩॥

ಜನ್ಮಕಾಲೇ ಶನೌ ಯಸ್ಯ ಜನ್ಮಾಷ್ಟಮಪತೇರಪಿ । ರಾಶೇರಂಶಕರಾಶೇರ್ವಾ ತ್ರಿಕೋಣಸ್ಥೇ ಶನೌ ಮೃತಿ: ॥೨೪॥ ನಿಶೀಂದುರಾಶೌ ಚೇಜ್ಜನ್ಮ ಮಾಂದಿಭೇಂಽಶೇ ಶನೌ ಮೃತಿ: । ದಿವಾರ್ಕಭೇ ಚೇತ್ತದ್ದ್ಯೂನತ್ರಿಕೋಣೇ ವಾ ಶನೌ ಮೃತಿ: ॥೨೫॥ ರಂಧ್ರೇಶ್ವರಾದ್ಯಾವತಿ ಭೇ ಮಾಂದಿಸ್ಥಾವತಿ ಭೇ ತತ: । ಶನಿಸ್ಥೇ ಮರಣಂ ಬ್ರೂಯಾದಿತಿ ಸದ್ಗುರುಭಾಷಿತಮ್

ನಿರ್ಯಾಣ ಶನಿ:- 1.ಲಗ್ನದಿಂದ ೨೨ನೇ ದ್ರೇಕ್ಕಾಣಾಧಿಪತಿಸ್ಥಿತ ರಾಶಿ ಅಥವಾ ಅಷ್ಟಮಾಧಿಪತಿಸ್ಥಿತ ನವಾಂಶಾಧಿಪತಿಯ ರಾಶಿಯಲ್ಲಿ 2.ಜನನಕಾಲದ ಶನಿಸ್ಥಿತ, ರಾಶಿಯಾ ಅಂಶಕರಾಶಿ, 3.ಚಂದ್ರರಾಶ್ಯಾಧಿಪನುಸ್ಥಿತ, ರಾಶಿ ಯಾ ಅಂಶಕರಾಶಿ, 4.ಅಷ್ಟಮಭಾವ 5.ರಾತ್ರಿಜನಿಸಿದವರಿಗೆ, ಚಂದ್ರಸ್ಥಿತರಾಶಿ, ಅಥವಾ ಮಾಂದಿನವಾಂಶ ರಾಶಿ. 6.ಹಗಲು ಜನಿಸಿದವರಿಗೆ, ರವಿಸ್ಥಿತರಾಶಿ, ಸಪ್ತಮಭಾವ ಅಥವಾ ತ್ರಿಕೋಣ (5-9), 7.ಅಷ್ಟಮಾಧಿಪತಿಯಿಂದ ಮಾಂದಿಯ ವರೆಗೆ ಇರುವ ಅಂತರವನ್ನು ಮಾಂದಿಯಿಂದ ಅಷ್ಟೇ ಮುಂದೆ ಇರುವಲ್ಲಿ, ಈ ಏಳರಲ್ಲಿ ಶನಿಸಂಚಾರಕಾಲ ಅವಸಾನ ಸೂಚಿಸುತ್ತದೆ.

ಜನ್ಮಕಾಲೀನಭೃಗುಜಾತ್ಕಾಮಶತ್ರುವ್ಯಯೇ ರವೌ ।
ಮರಣಂ ನಿಶ್ಚಿತಂ ಬ್ರೂಯಾದಿತಿ ಸದ್ಗುರುಭಾಷಿತಮ್ ॥೨೭॥

ನಿರ್ಯಾಣ ರವಿ:- ಜನನಕಾಲದ ಶುಕ್ರನಿಂದ ಷಷ್ಠ, ಸಪ್ತಮ ಮತ್ತು ದ್ವಾದಶದಲ್ಲಿ ರವಿಸಂಚಾರಕಾಲ ನಿಶ್ಚಯವಾಗಿ ಮರಣ ಸಂಭವಿಸುತ್ತದೆ ಎಂದು ಸದ್ಗುರುಗಳಿಂದ ಹೇಳಲ್ಪಟ್ಟಿದೆ.

ತ್ರಿಷ್ವಂತ್ಯಷ್ಟಮರಿ:ಫ ಷಷ್ಠಪತಯೋ ರಂಧ್ರತ್ರಿಭಾಗೇಶ್ವರೋ ಮಾಂದಿರ್ಯದ್ಭವನೇಷು ತೇಷ್ವಪಿ ಗೃಹೇಷ್ವಾರ್ಕೀಡ್ಯಸೂರ್ಯೇಂದವ: । ಸರ್ವೇ ಚಾರವಶಾತ್ಪ್ರಯಾಂತಿ ಹಿ ಯದಾ ಮೃತ್ಯುಸ್ತದಾ ಸ್ಯಾನ್ನೃಣಾಂ ತೇಷಾಮಂಶವಶಾದ್ವದಂತು ನಿಧನಂ ತತ್ತತ್ ತ್ರಿಕೋಣೇಽಪಿ ವಾ ॥೨೮॥

ನಿರ್ಯಾಣ ಗ್ರಹರು:-ಜನನಕಾಲದ 1.ಅಷ್ಟಮಾಧಿಪತಿ, 2.ವ್ಯಯಾಧಿಪತಿ, 3.ಷಷ್ಠಾಧಿಪತಿ, 4.ಇಪ್ಪತ್ತೆರಡನೇ ದ್ರೇಕ್ಕಾಣಾಧಿಪತಿ, 5.ಮಾಂದಿ, ಈ ಗ್ರಹರ ಮೇಲಿಂದ ಅಥವಾ ಈ ಗ್ರಹರ ನವಾಂಶರಾಶಿಯಲ್ಲಿ, ಅಥವಾ ಆ ಗ್ರಹ ಮತ್ತು ರಾಶಿಯ ತ್ರಿಕೋಣದಲ್ಲಿ ಗೋಚರದ ಶನಿ, ಗುರು, ರವಿ ಮತ್ತು ಚಂದ್ರನು ಸಂಚರಿಸುವಾಗ ಮರಣ ಸಂಭವಿಸಬಹುದು.

ಚಂದ್ರಸ್ತು ನಿಧನಂ ಪ್ರಾಪ್ತ: ಸಪ್ತಮಂ ಬುಧಲೋಹಿತೌ । ದ್ವಾದಶಂ ಭಾಸ್ಕರಃ ಷಷ್ಠಂ ಭೃಗುಪುತ್ರ: ಸಮಾಶ್ರಿತ: ॥ ತೃತೀಯಂ ದೇವಮಂತ್ರೀ ಚ ರಾಹುಕೇತು ಶನೈಶ್ಚರಾ: । ಜನ್ಮಸ್ಥಾ: ಪ್ರಾಣಸಂದೇಹಂ ಕುರ್ವನ್ತ್ಯೇತೇ ನ ಸಂಶಯ: ॥

ಮರಣಕಾಲದ ಗ್ರಹಸ್ಥಿತಿ-ಪ್ರಶ್ನಮಾರ್ಗಮತ:- ಗೋಚರ ಗ್ರಹರಲ್ಲಿ 1.ಅಷ್ಟಮದಲ್ಲಿ ಚಂದ್ರ, 2.ಬುಧ ಮತ್ತು ಕುಜ ಸಪ್ತಮದಲ್ಲಿ 3.ದ್ವಾದಶದಲ್ಲಿ ರವಿ, 4.ಷಷ್ಠದಲ್ಲಿ ಶುಕ್ರ, 5.ತೃತಿಯದಲ್ಲಿ ಗುರು ಮತ್ತು 6.ಜನ್ಮರಾಶಿಯಲ್ಲಿ ರಾಹು, ಕೇತು ಮತ್ತು ಶನಿ ಇದ್ದರೆ, ಮರಣಸೂಚಿಸುತ್ತದೆ. ಇವುಗಳಲ್ಲಿ ಮೂರು ಅಥವಾ ಹೆಚ್ಚು ಗ್ರಹರು ಆಯಾಸ್ಥಾನದಲ್ಲಿ ಇದ್ದರೆ ಆಯುರ್ದಾಯದ ಅಂತ್ಯಕಾಲದಲ್ಲಿ ಮರಣ ಸಂಭವಿಸುತ್ತದೆ.

ದ್ವಿಗ್ರಹಯೋಗಾಧ್ಯಾಯ-೧೪

ತಿಗ್ಮಾಂಶುರ್ಜನಯತ್ಯುಷೇಶಸಹಿತೋ ಯಂತ್ರಾಶ್ಮಕಾರಂ ನರಂ ಭೌಮೇನಾಘರತಂ ಬುಧೇನ ನಿಪುಣಂ ಧೀಕೀರ್ತಿಸೌಖ್ಯಾನ್ವಿತಮ್ । ಕ್ರೂರಂ ವಾಕ್ಪತಿನಾನ್ಯಕಾರ್ಯನಿರತಂ ಶುಕ್ರೇಣ ರಂಗಾಯುಧೈರ್ಲಬ್ಧಸ್ವಂ ರವಿಜೇನಧಾತುಕುಶಲಂ ಭಾಣ್ಡಪ್ರಕಾರೇಷು ವಾ ॥೧॥

1.ರವಿ-ಚಂದ್ರಯುತಿ:- ಈ ಯುತಿಯು ಅಮಾವಾಸ್ಯೆಯಂದು ಸಂಭವಿಸುತ್ತದೆ. ಈ ಯುತಿಯಲ್ಲಿ ಜನಿಸಿದವರು, ಯಂತ್ರದ ತಯಾರಿ, ಅಥವಾ ಯಾಂತ್ರಿಕ ಉದ್ಯಮ, ಕಲ್ಲು, ಶಿಲೆ ಮೊದಲಾದವುಗಳ ಕೆತ್ತನೆ, ಅಥವಾ ವ್ಯಾಪಾರ ವ್ಯವಹಾರಗಳ ಕರ್ಮ ನಿರ್ವಹಿಸುತ್ತಾರೆ. 2.ರವಿ-ಕುಜಯುತಿ ಯಲ್ಲಿ ಜನಿಸಿದವರು ಕ್ರೂರಸ್ವಭಾವದವರು ಅಥವಾ ಕ್ರೂರಕರ್ಮಗಳಲ್ಲಿ ಆಸಕ್ತಿ ಉಳ್ಳವರು ಆಗುತ್ತಾರೆ. 3.ರವಿ-ಬುಧಯುತಿ ಯಲ್ಲಿ ಜನಿಸಿದವರು ನಿಪುಣತೆ ಉಳ್ಳವರು, ಬುದ್ಧಿವಂತರು, ಕೀರ್ತಿವಂತರು, ಸುಖವಂತರು ಆಗುತ್ತಾರೆ. ಈ ಯುತಿಯಲ್ಲಿ ಬುಧನು ಅಸ್ತನಾದರೂ, ಯೋಗಫಲದಿಂದ ಈ ಶುಭಫಲಗಳು ಲಭಿಸುತ್ತವೆ. 4.ರವಿ-ಗುರುಯುತಿ ಯಲ್ಲಿ ಜನಿಸಿದವರು ಕ್ರೂರಸ್ವಭಾವದವರು, ಪರಕಾರ್ಯ ಮಾಡುವವರು ಆಗುತ್ತಾರೆ. 5.ರವಿ-ಶುಕ್ರಯುತಿ ಯಲ್ಲಿ ಜನಿಸಿದವರು ನಾಟಕ, ಆಯುಧ ಅಥವಾ ನಾಟಕಾದಿಗಳಿಗೆ ಉಪಯುಕ್ತ ಆಯುಧಾದಿ ಸಲಕರಣೆಗಳ ವ್ಯಾಪಾರ-ವ್ಯವಹಾರಗಳಿಂದ ಧನಗಳಿಸುತ್ತಾರೆ. 6.ರವಿ-ಶನಿಯುತಿ ಯಲ್ಲಿ ಜನಿಸಿದವರು ಅದುರು, ಕಬ್ಬಿಣ, ಲೋಹ ಇತ್ಯಾದಿ ಧಾತುಗಳ ಎರಕಹೊಯ್ಯುವುದು, ತಯಾರಿಕೆ, ಸಂಸ್ಕರಿಸುವುದು, ಅಥವಾ ಮಡಕೆ, ಪಾತ್ರೆ ಇತ್ಯಾದಿ ತಯಾರಿಸುವುದು, ಮೊದಲಾದ ಕರ್ಮನಿರ್ವಹಿಸುತ್ತಾರೆ.

ಕೂಟಸ್ತ್ರ್ಯಾಸವಕುಂಭಪಣ್ಯಮಶಿವಂ ಮಾತು: ಸವಕ್ರ: ಶಶೀ ಸಜ್ಞ: ಪ್ರಶ್ರಿತವಾಕ್ಯಮರ್ಥನಿಪುಣಂ ಸೌಭಾಗ್ಯಕೀರ್ತ್ಯಾನ್ವಿತಮ್ । ವಿಕ್ರಾಂತಂ ಕುಲಮುಖ್ಯಮಸ್ಥಿರಮತಿಂ ವಿತ್ತೇಶ್ವರಂ ಸಾಂಗಿರಾ ವಸ್ತ್ರಣಾಂ ಸಸಿತ: ಕ್ರಿಯಾದಿಕುಶಲಂ ಸಾರ್ಕಿ: ಪುನರ್ಭೂಸುತಮ್ ॥೨॥

ಚಂದ್ರ-ಕುಜಯುತಿ ಯನ್ನು ಶಶಿಮಂಗಳಯುತಿ ಎಂದು ಕರೆಯುತ್ತಾರೆ. ಈ ಯುತಿಯಲ್ಲಿ ಜನಿಸಿದವರು ಲೋಹದ ಉದ್ಯೋಗ, ಗುಪ್ತಕಾರ್ಯ, ಅಸತ್ಯಸಾಧಿಸುವವನು

ರಹಸ್ಯ. ಶಾಸ್ತ್ರಗಳ ಗೂಢಾರ್ಥ ಬಲ್ಲವ, ಕೃತ್ರಿಮ ಮೊದಲಾದ ವಾಮಾಚಾರದಲ್ಲಿ ನುರಿತವನು ಆಗುತ್ತಾನೆ. ಆಸವ ಅಥವಾ ಮದ್ಯ ಮೊದಲಾದವನ್ನು ಕುಂಭದಲ್ಲಿ ತುಂಬಿಸಿ ವ್ಯಾಪಾರ ಮಾಡುವವ, ಮತ್ತು ತಾಯಿಗೆ ವ್ಯಸನವನ್ನು ಉಂಟುಮಾಡುವವ ಆಗುತ್ತಾನೆ.

ಚಂದ್ರ-ಬುಧಯುತಿಯಲ್ಲಿ ಜನಿಸಿದವರ ಮಾತುಗಳಲ್ಲಿ ನಿಪುಣತೆ ಮತ್ತು ಅರ್ಥ ಬಾಹುಳ್ಯ ಇರುತ್ತದೆ. ಭಾಗ್ಯವಂತನು, ಕೀರ್ತಿವಂತನು ಆಗುತ್ತಾನೆ. **ಚಂದ್ರ-ಗುರುಯುತಿ** ಗಜಕೇಸರಿಯೋಗ ಆಗುತ್ತದೆ. ಈ ಯುತಿಯಲ್ಲಿ ಜನಿಸಿದವನು ತೇಜಸ್ವಿಯು, ಪ್ರತಾಪವಂತನು, ತನ್ನ ಕುಲದಲ್ಲಿ ಪ್ರಮುಖನು, ಚಂಚಲ ಬುದ್ಧಿಯವನು, ಹೇರಳವಾದ ಸಂಪತ್ತು ಉಳ್ಳವನು ಆಗುತ್ತಾನೆ. **ಚಂದ್ರ ಶುಕ್ರ ಯುತಿ** ಯಲ್ಲಿ ಜನಿಸಿದವನು ವಸ್ತ್ರದ ವ್ಯಾಪಾರ ವ್ಯವಹಾರಗಳಲ್ಲಿ ಕುಶಲನು ಆಗುತ್ತಾನೆ. **ಚಂದ್ರ-ಶನಿಯುತಿಯು** ಜನ್ಮಸಾಡೇಸಾತಿ ಆಗಿರುತ್ತದೆ. ಈ ಯುತಿಯಲ್ಲಿ ಜನಿಸಿದವನು ಪುನರ್ಭೂ (ದ್ವಿತೀಯ ವಿವಾಹ ಆದವಳು) ಪುತ್ರನು ಆಗುತ್ತಾನೆ.

ಮೂಲಾದಿಸ್ನೇಹಕೂಟೈರ್ವ್ಯವಹರತಿ ವಣಿಗ್ಬಾಹುಯೋದ್ಧಾ ಸಸೌಮ್ಯೇ ಪುರ್ಯಧ್ಯಕ್ಷ:
ಸಜೀವೇ ಭವತಿ ನರಪತಿ: ಪ್ರಾಪ್ತವಿತ್ತೋ ದ್ವಿಜೋ ವಾ । ಗೋಪೋ ಮಲ್ಲೋಽಥ ದಕ್ಷ:
ಪರಯುವತಿರತೋ ದ್ಯೂತಕೃತ್ಸಾಸುರೇಜ್ಯೇ ದುಃಖಾರ್ತೋಽಸತ್ಯಸಂಧ: ಸಸವಿತೃತನಯೇ
ಭೂಮಿಜೇ ನಿಂದಿತಶ್ಚ ॥೩॥

ಕುಜ-ಬುಧಯುತಿ ಯಲ್ಲಿ ಜನಿಸಿದವರು ಬೇರು, ಕಾಂಡ, ಎಲೆ, ಪುಷ್ಪ, ಫಲ, ಅಂಟು, ತೊಗಟೆ ಇತ್ಯಾದಿ ಗಿಡ-ಮರಗಳ ಉತ್ಪತ್ತಿ, ತೈಲ, ತುಪ್ಪ, ಕೊಬ್ಬು ಇತ್ಯಾದಿಗಳ ವ್ಯಾಪಾರ-ವ್ಯವಹಾರ, ಹಾಗೂ ಮಲ್ಲಯುದ್ಧ ಮಾಡುವವನು ಆಗುತ್ತಾನೆ. **ಕುಜ-ಗುರುಯುತಿ** ಯಲ್ಲಿ ಜನಿಸಿದವನಿಗೆ ರಾಜರಿಂದ ಅಥವಾ ಬ್ರಾಹ್ಮಣರಿಂದ ಧನ ಲಭಿಸುತ್ತದೆ. **ಕುಜ-ಶುಕ್ರಯುತಿಯಲ್ಲಿ** ಜನಿಸಿದವನು ಗೊಲ್ಲನು, ಕುಸ್ತಿ ಪಟುವು, ನಿಪುಣನು ಕುಶಲತೆಯಿಂದ ಕಾರ್ಯನಿರ್ವಹಿಸುವವನು, ಪರಸ್ತ್ರೀಯಲ್ಲಿ ಆಸಕ್ತಿ ಉಳ್ಳವನು, ಸಟ್ಟಾ ಜೂಜಾಡುವವನು ಆಗುತ್ತಾನೆ. **ಕುಜ-ಶನಿಯುತಿ** ಯಲ್ಲಿ ಜನಿಸಿದವನು ದುಃಖಿತನು, ಅಸತ್ಯವನ್ನು ಸಾಧಿಸುವವನು, ನಿಂದಿತನು ಆಗುತ್ತಾನೆ.

ಸೌಮ್ಯೇ ರಙ್ಗಚರೋ ಬೃಹಸ್ಪತಿಯುತೇ ಗೀತಪ್ರಿಯೋ ನೃತ್ಯವಿದ್ ವಾಗ್ಮೀ ಭೂಗಣಪ:
ಸಿತೇನ ಮೃದುನಾ ಮಾಯಾಪಟುರ್ಲಙ್ಘಕ: । ಸದ್ವಿದ್ಯೋ ಧನದಾರವಾನ್ ಬಹುಗುಣ:
ಶುಕ್ರೇಣ ಯುಕ್ತೇ ಗುರೌ ಜ್ಞೇಯ: ಶ್ಮಶ್ರುಕರೋಽಸಿತೇನ ಘಟಕೃದ್ದಾತಾಽನ್ನ-
ಕಾರೋಽಪಿ ವಾ ॥೪॥

ಬುಧ-ಗುರುಯುತಿಯಲ್ಲಿ ಜನಿಸಿದವನು ನಾಟಕಗಳಲ್ಲಿ ಅಭಿನಯಿಸುವವನು, ಸಂಗೀತ, ಗಾಯನ ಇತ್ಯಾದಿಗಳಲ್ಲಿ ಪ್ರೇಮಉಳ್ಳವನು, ಮತ್ತು ನಾಟ್ಯಕಲೆ ಬಲ್ಲವನು ಆಗುತ್ತಾನೆ. **ಬುಧ-ಶುಕ್ರಯುತಿಯಲ್ಲಿ** ಜನಿಸಿದವನು ವಾಕ್ಚಾತುರ್ಯ ಉಳ್ಳವನು, ವ್ಯವಹಾರ ಕುಶಲನು, ಭೂಮಿ, ಗದ್ದೆ, ಜನಸಮೂಹ ಇವುಗಳ ಒಡೆಯನು, ಯಾ ರಕ್ಷಕನು, ಅಥವಾ ಕೃಷಿಕಾರ್ಯಗಳನ್ನು ಮಾಡಿ ಜೀವಿಸುವವನು, ಆಗುತ್ತಾನೆ. **ಬುಧ-ಶನಿಯುತಿ**

ಯಲ್ಲಿ ಜನಿಸಿದವನು ಮಾಯಾವಿದ್ಯೆ, ಇಂದ್ರಜಾಲ, ಮಂತ್ರ ಮೋಡಿ, ಕಣ್ಕಟ್ಟು ಮೊದಲಾದವಿದ್ಯೆಗಳಲ್ಲಿ ನುರಿತವನು, ಲಂಘಕನು (ಶಾಸ್ತ್ರಾದಿಗಳನ್ನು ಅತಿಕ್ರಮಿಸುವವನು ಆಗುತ್ತಾನೆ.) ಗುರು-ಶುಕ್ರಯುತಿಯಲ್ಲಿ ಜನಿಸಿದವನು ಉತ್ತಮವಿದ್ಯೆಗಳನ್ನು ಬಲ್ಲವನು, ಧನ ಮತ್ತು ಪತ್ನಿಉಳ್ಳವನು, ಅನೇಕ ಸದ್ಗುಣಗಳಿಂದ ಕೂಡಿದವನು ಆಗುತ್ತಾನೆ. ಗುರು-ಶನಿಯುತಿಯಲ್ಲಿ ಜನಿಸಿದವನು ಕ್ಷೌರಿಕನು, ಕುಂಬಾರನು ಅಥವಾ ಅವುಗಳ ವ್ಯವಹಾರಕುಶಲನು, ಉದಾರನು, ದಾನವಂತನು ಅಥವಾ ಅನ್ನದಾನ ಮಾಡುವವನು ಆಗುತ್ತಾನೆ. ಗುರು-ಶನಿಯುತಿಯು ಶುಭಾಶುಭಫಲ ನೀಡುತ್ತದೆ.

ಅಸಿತಸಿತಸಮಾಗಮೇಽಲ್ಪಚಕ್ಷುರ್ಯುವತಿಜನಾಶ್ರಯ ಸಂಪ್ರವೃದ್ಧವಿತ್ತಃ ।
ಭವತಿ ಚ ಲಿಪಿಪುಸ್ತಕಚಿತ್ರವೇತ್ತಾ ಕಥಿತಫಲೈಃ ಪರತೋಽಪರೇ ವಿಕಲ್ಪ್ಯಾಃ ॥

ಶುಕ್ರ-ಶನಿಯುತಿಯಲ್ಲಿ ಜನಿಸಿದವನು ಅಲ್ಪದೃಷ್ಟಿ (ದೃಷ್ಟಿದೋಷ) ಉಳ್ಳವನು, ಸ್ತ್ರೀಯರಿಂದ ಅಥವಾ ಸ್ತ್ರೀಯರನ್ನು ಆಶ್ರಯಿಸಿ ಧನಗಳಿಸುತ್ತಾನೆ. ಲಿಪಿ, ಪುಸ್ತಕ ಲೇಖನ, ಚಿತ್ರಕಲೆ ಮೊದಲಾದವುಗಳಲ್ಲಿ ನುರಿತವನು ಆಗುತ್ತಾನೆ. ಎರಡಕ್ಕಿಂತ ಹೆಚ್ಚು ಗ್ರಹಯುತಿ ಇದ್ದರೆ ಆಯಾಗ್ರಹಯುತಿ ಫಲಗಳನ್ನು ಹೊಂದಿಸಿ ತಿಳಿಯಬೇಕು.

ಭೂಪೋ ವಿದ್ವಾನ್ ಭೂಪತಿರ್ಭೂಪತುಲ್ಯಶ್ಚಂದ್ರೇ ಮೇಷೇ ಮೋಷಕೋನಿರ್ಧನಶ್ಚ ।
ನಿಸ್ವಃ ಸ್ತೇನೋ ಲೋಕಮಾನ್ಯೋ ಮಹೀಶಃ ಸ್ವಾಢ್ಯಃ ಪ್ರೇಷ್ಯಶ್ಚಾಪಿ ದೃಷ್ಟೇ ಕುಜಾದ್ಯೈಃ

ಮೇಷದ ಚಂದ್ರನ ದೃಷ್ಟಿಫಲ:- ಮೇಷರಾಶಿಸ್ಥಿತ ಚಂದ್ರನನ್ನು ಕುಜನು ನೋಡಿದರೆ ರಾಜನು, ಬುಧ-ವಿದ್ಯಾವಂತನು, ಗುರು-ರಾಜನು, ಶುಕ್ರ-ರಾಜತುಲ್ಯನು, ಶನಿ-ಕಳ್ಳನು ಮತ್ತು ರವಿ-ನಿರ್ಧನನು ಆಗುತ್ತಾನೆ.

ವೃಷಭದ ಚಂದ್ರನ ದೃಷ್ಟಿಫಲ:- ವೃಷಭದ ಚಂದ್ರನನ್ನು ಕುಜನು ನೋಡಿದರೆ ಬಡವನು, ಬುಧ-ಕಳ್ಳನು, ಗುರು-ಸಕಲಜನರಿಂದ ಪೂಜಿತನು, ಶುಕ್ರ-ರಾಜ, ಶನಿ-ಧನವಂತನು ಮತ್ತು ರವಿ-ಸೇವಕನು ಆಗುತ್ತಾನೆ.

ಯುಗ್ಮಸ್ಥೇಽಯೋಜೀವಿಭೂಪಜ್ಞಧೃಷ್ಟಾಶ್ಚಂದ್ರೇ ದೃಷ್ಟೇ ತಂತುವಾಯೋಽಧನೀ ಚ
ಸ್ವಕ್ಷೇ ಯೋಧಪ್ರಾಜ್ಞಸೂರಿಕ್ಷಿತೀಶಾ ಲೋಹಾಜೀವೋನೇತ್ರರೋಗೀ ಕ್ರಮೇಣ॥

ಮಿಥುನದ ಚಂದ್ರನ ದೃಷ್ಟಿಫಲ:- ಮಿಥುನದ ಚಂದ್ರನನ್ನು ಕುಜನು ನೋಡಿದರೆ ಕಬ್ಬಿಣದ ವ್ಯಾಪಾರದಿಂದ ಜೀವಿಸುವವನು, ಬುಧ-ರಾಜನು, ಗುರು-ಮೇಧಾವಿಯು, ಶುಕ್ರ-ಭಯವಿಲ್ಲದವನು, ಶನಿ-ನೇಕಾರನು ಮತ್ತು ರವಿ-ಅಧನನು ಆಗುತ್ತಾನೆ.

ಕರ್ಕಟಕದ ಚಂದ್ರನದೃಷ್ಟಿಫಲ:- ಸ್ವಕ್ಷೇತ್ರದ ಚಂದ್ರನನ್ನು ಕುಜನು ನೋಡಿದರೆ ಯೋಧನು, ಬುಧ-ಪ್ರಾಜ್ಞ, ಗುರು-ಬುದ್ಧಿವಂತ, ಶುಕ್ರ-ರಾಜ, ಶನಿ-ಲೋಹದ ವ್ಯವಹಾರದಿಂದ ಜೀವಿಸುವವನು, ರವಿ-ಕಣ್ಣಿನ ವ್ಯಾಧಿಯಿಂದ ಪೀಡಿತನು ಆಗುತ್ತಾನೆ.

ರಾಜಾಜ್ಯೋತಿರ್ವಿದ್ಧನಾಢ್ಯೋ ನರೇಂದ್ರಃ ಸಿಂಹೇ ಚಂದ್ರೇ ನಾಪಿತಃಪಾರ್ಥಿವೇಂದ್ರಃ
ದಕ್ಷೋ ಭೂಪಃ ಸೈನ್ಯಪಃ ಕನ್ಯಕಾಯಾಂ ನಿಷ್ಣಾತಃ ಸ್ಯಾದ್‌ಭೂಮಿನಾಥಶ್ಚ ಭೂಪಃ

ಸಿಂಹ ಚಂದ್ರನ ದೃಷ್ಟಿಫಲ:- ಸಿಂಹದ ಚಂದ್ರನನ್ನು ಕುಜನು ನೋಡಿದರೆ ರಾಜನು, ಬುಧ-ಜ್ಯೋತಿಷ್ಕನು, ಗುರು-ಧನಾಢ್ಯನು, ಶುಕ್ರ-ರಾಜನು, ಶನಿ-ನಾಪಿತನು ಮತ್ತು ರವಿ-ರಾಜನು ಆಗುತ್ತಾನೆ.

ಕನ್ಯಾಚಂದ್ರನ ದೃಷ್ಟಿಫಲ:- ಕನ್ಯೆಯಚಂದ್ರನನ್ನು ಕುಜನು ನೋಡಿದರೆ ನಿಪುಣನು, ಬುಧ-ರಾಜನು, ಗುರು-ಸೇನಾಧಿಪತಿ, ಶುಕ್ರ-ಯಾವುದಾದರೂ ವಿಷಯದಲ್ಲಿ ಚತುರನು ಅಥವಾ ಶ್ರೇಷ್ಠನು. ಶನಿ-ಜನಿಯನುದಾರನು ಮತ್ತು ರವಿ-ರಾಜನು ಆಗುತ್ತಾನೆ.

ಶಠೋ ನೃಪಸ್ತ್ರೌಲಿನಿ ರುಕ್ಮಕಾರಶ್ಚಂದ್ರೇ ವಣಿಕ್ ಸ್ಯಾತ್ಪಿಶುನ: ಖಲಶ್ಚ । ಕೀಟೇ
ನೃಪೋ ಯುಗ್ಮಪಿತಾ ಮಹೀಶ: ಸ್ಯಾದ್ವಸ್ತ್ರಜೀವೀ ವಿಕೃತಾಙ್ಗವಿತ್ತ: ॥೯॥

ತುಲಾಚಂದ್ರನ ದೃಷ್ಟಿಫಲ:- ತುಲಾಚಂದ್ರನನ್ನು ಕುಜನು ನೋಡಿದರೆ ಧೂರ್ತನು, ಬುಧ-ರಾಜನು, ಗುರು-ಅಕ್ಕಸಾಲಿಗನು, ಶುಕ್ರ-ವ್ಯಾಪಾರಿಯು. ಶನಿ-ಪಿಶುನನು ಮತ್ತು ರವಿ-ದುಷ್ಟನು ಆಗುತ್ತಾನೆ.

ವೃಶ್ಚಿಕ ಚಂದ್ರನ ದೃಷ್ಟಿಫಲ:- ವೃಶ್ಚಿಕದ ಚಂದ್ರನನ್ನು ಕುಜನು ನೋಡಿದರೆ ರಾಜನು, ಬುಧ-ಅವಳಿ ಜವಳಿ ಮಕ್ಕಳ ತಂದೆ, ಗುರು-ರಾಜ, ಶುಕ್ರ-ವಸ್ತ್ರದ ವ್ಯವಹಾರದಿಂದ ಜೀವಿಸುವವನು, ಶನಿ-ಅಂಗ ವೈಕಲ್ಯ ಉಳ್ಳವನು ಮತ್ತು ರವಿ-ಸಂಪತ್ತಿಲ್ಲದವನು ಆಗುತ್ತಾನೆ.

ಧೂರ್ತೋ ಹಯಾಂಗೇ ಸ್ವಜನಂ ಜನೇಶಂ ನರೌಘಮಾಶ್ರಿತ್ಯ ಶಠ: ಸದಂಭ: ।
ಭೂಪೋ ನರೇಶ: ಕ್ಷಿತಿಪೋ ವಿಪಶ್ಚಿದ್ಧನೀ ದರಿದ್ರೋ ಮಕರೇ ಹಿಮಾಂಶೌ॥೧೦॥

ಧನು ಚಂದ್ರನ ದೃಷ್ಟಿಫಲ:- ಧನುವಿನ ಚಂದ್ರನನ್ನು ಕುಜನು ನೋಡಿದರೆ ಧೂರ್ತನು, ಬುಧ-ಸ್ವಜನಪಾಲಕನು, ಗುರು-ರಾಜನು. ಶುಕ್ರ-ಹಲವುಜನರಿಗೆ ಆಶ್ರಯದಾತನು, ಶನಿ-ವಂಚಕನು ಮತ್ತು ರವಿ-ಢಾಂಭಿಕತನ ಉಳ್ಳವನು ಆಗುತ್ತಾನೆ.

ಮಕರ ಚಂದ್ರ ದೃಷ್ಟಿಫಲ:- ಮಕರದ ಚಂದ್ರನನ್ನು ಕುಜನು ನೋಡಿದರೆ ಭೂಪತಿ, ಬುಧ-ನರೇಶ, ಗುರು-ಕ್ಷಿತಿಪಾಲ, ಶುಕ್ರ-ವಿದ್ಯಾವಂತನು, ಶನಿ-ಧನವಂತನು, ಮತ್ತು ರವಿ-ದರಿದ್ರನು ಆಗುತ್ತಾನೆ.

ಕುಂಭೇಽನ್ಯದಾರನಿರತ: ಕ್ಷಿತಿಪೋ ನರೇಂದ್ರೋ ವೇಶ್ಯಾಪತಿರ್ನೃಪವರೋ ಹಿಮಗೌ ನೃಮಾನ್ಯ:। ಅಂತ್ಯೇಽಘಕೃತ್ಪಟುಮತಿರ್ನೃಪತಿಶ್ಚ ವಿದ್ವಾನ್ ದೋಷೈಕದೃಗ್ದುರಿತ-ಕೃಚ್ಚ ಕುಜಾದಿದೃಷ್ಟೇ ॥೧೧॥

ಕುಂಭಚಂದ್ರನ ದೃಷ್ಟಿಫಲ:- ಕುಂಭದ ಚಂದ್ರನನ್ನು ಕುಜನು ನೋಡಿದರೆ ಪರಸ್ತ್ರೀರತನು, ಬುಧ-ರಾಜನು, ಗುರು-ನರೇಂದ್ರ, ಶುಕ್ರ-ವೇಶ್ಯಾಪತಿ, ಶನಿ-ರಾಜಶ್ರೇಷ್ಠ ಮತ್ತು ರವಿ-ಜನರಿಂದ ಪೂಜಿಸಲ್ಪಡುವವನು ಆಗುತ್ತಾನೆ.

ಮೀನಚಂದ್ರ-ದೃಷ್ಟಿಫಲ:- ಮೀನದ ಚಂದ್ರನನ್ನು ಕುಜನು ನೋಡಿದರೆ ಪಾಪಕರ್ಮಮಾಡುವವನು, ಬುಧ-ಮೇಧಾವಿ, ಗುರು-ರಾಜ, ಶುಕ್ರ-ವಿದ್ಯಾವಂತನು, ಶನಿ-ದೋಷಕರಕಾರ್ಯ ಮಾಡುವವನು ಮತ್ತು ರವಿ-ಸಂಕಷ್ಟಉಳ್ಳವನು ಆಗುತ್ತಾನೆ.

ಆರಕ್ಷಕೋ ವಧರುಚಿಃ ಕುಶಲಶ್ಚ ಯುದ್ಧೇ ಭೂಪೋಽರ್ಥವಾನ್ಕಲಹಕೃತ್ ಕ್ಷಿತಿಜಾಂಶ ಸಂಸ್ಥೇ । ಮೂರ್ಖೋಽನ್ಯದಾರನಿರತಃ ಸುಕವಿಃ ಸಿತಾಂಶೇ ಸತ್ಕಾವ್ಯಕೃತ್ಸುಖಪರೋಽ ನ್ಯಕಲತ್ರಗಶ್ಚ ॥೧೨॥

ಕುಜನ ನವಾಂಶಸ್ಥಿತ ಚಂದ್ರನ ದೃಷ್ಟಿಫಲಃ- ಚಂದ್ರನು ಕುಜನ ನವಾಂಶದಲ್ಲಿ ಇರಬೇಕು (ಮೇಷ ಅಥವಾ ವೃಶ್ಚಿಕ) ಚಂದ್ರನನ್ನು ನೋಡುವ ಗ್ರಹನು ರವಿಯಾದರೆ ಆರಕ್ಷಕ, ಕುಜ-ಕೊಲ್ಲುವುದು ಅಥವಾ ನಾಶಮಾಡುವುದರಲ್ಲಿ ಅಭಿರುಚಿ ಉಳ್ಳವನು, ಬುಧ-ಕುಶಲತೆಯಿಂದ ಯುದ್ಧಮಾಡುವವನು, ಗುರು-ರಾಜನು, ಶುಕ್ರ-ಧನವಂತನು, ಶನಿ-ಕಲಹಪ್ರಿಯನು ಆಗುತ್ತಾನೆ.

ಶುಕ್ರನವಾಂಶಸ್ಥಿತ ಚಂದ್ರನ ದೃಷ್ಟಿಫಲಃ ಚಂದ್ರನು ಶುಕ್ರನವಾಂಶದಲ್ಲಿ (ವೃಷಭ ಅಥವಾ ತುಲಾ) ಇರಬೇಕು. ಚಂದ್ರನನ್ನು ನೋಡುವ ಗ್ರಹನು ರವಿಯಾದರೆ ಮೂರ್ಖನು, ಕುಜ-ಪರಸ್ತ್ರೀಯರಲ್ಲಿ ಆಸಕ್ತನು, ಬುಧ-ಶ್ರೇಷ್ಠಕವಿ, ಗುರು-ಉತ್ತಮ ಕಾವ್ಯಾದಿ ಗಳನ್ನು ರಚಿಸುವವನು, ಶುಕ್ರ-ಸುಖವಂತನು, ಶನಿ-ಪರಸ್ತ್ರೀಯರ ಸಹವಾಸ ಉಳ್ಳ ವನು ಆಗುತ್ತಾನೆ.

ಬೌಧೇ ಹಿ ರಂಗಚರಚೋರಕವೀಂದ್ರಮಂತ್ರಿಗೇಯಜ್ಞಶಿಲ್ಪನಿಪುಣಃ ಶಶಿನಿ ಸ್ಥಿತೇಽಂಶೇ ।
ಸ್ವಾಂಶೇಽಲ್ಪಗಾತ್ರಧನಲುಬ್ಧತಪಸ್ವಿಮುಖ್ಯಃಸ್ತ್ರೀಪ್ರೇಷ್ಯಕೃತ್ಯನಿರತಶ್ಚ ನಿರೀಕ್ಷಮಾಣೇ ॥

ಬುಧನವಾಂಶಸ್ಥಿತ ಚಂದ್ರ-ದೃಷ್ಟಿಫಲಃ- ಚಂದ್ರನು ಬುಧನ ನವಾಂಶದಲ್ಲಿ (ಮಿಥುನ ಅಥವಾ ಕನ್ಯಾ), ಇರಬೇಕು. ಈ ಚಂದ್ರನನ್ನು ನೋಡುವ ಗ್ರಹನು ರವಿ ಯಾದರೆ ನಾಟಕಾದಿ ಅಭಿನಯ ಮಾಡುವವನು, ಕುಜ-ಕಳ್ಳನು, ಬುಧ-ಕವೀಂದ್ರ, ಗುರು-ಮಂತ್ರಿ, ಶುಕ್ರ-ಸಂಗೀತ ಅಥವಾ ವಾದ್ಯದಲ್ಲಿ ನುರಿತವನು ಶನಿ-ಶಿಲ್ಪಕಲೆಯಲ್ಲಿ ನಿಪುಣನು ಆಗುತ್ತಾನೆ.

ಸ್ವನವಾಂಶಸ್ಥಿತ ಚಂದ್ರ-ದೃಷ್ಟಿಫಲಃ- ಚಂದ್ರನು ತನ್ನ ನವಾಂಶ (ಕರ್ಕಟಕ) ದಲ್ಲಿ ಇರಬೇಕು. ಈ ಚಂದ್ರನನ್ನು ನೋಡುವ ಗ್ರಹನು ರವಿಯಾದರೆ ಕ್ಷೀಣ ದೇಹದವನು, ಕುಜ-ಕೃಪಣನು, ಬುಧ-ತಪಸ್ವಿಯು, ಗುರು-ಪ್ರಮುಖ ವ್ಯಕ್ತಿ, ಶುಕ್ರ-ಸ್ತ್ರೀಯರ ಸೇವ ಕನು, ಶನಿ-ಸ್ವಕಾರ್ಯತತ್ಪರನು ಆಗುತ್ತಾನೆ.

ಸಕ್ರೋಧೋ ನರಪತಿಸಂಮತೋ ನಿಧೀಶಃ ಸಿಂಹಾಂಶೇ ಪ್ರಭುರಸುತೋಽತಿ ಹಿಂಸ್ರ ಕರ್ಮಾ । ಜೀವಾಂಶೇ ಪ್ರಥಿತಬಲೋ ರಣೋಪದೇಷ್ಟಾ ಹಾಸ್ಯಜ್ಞಃ ಸಚಿವವಿಕಾಮ ವೃದ್ಧಶೀಲಃ ॥೧೪॥

ರವಿನವಾಂಶಸ್ಥಿತ ಚಂದ್ರ-ದೃಷ್ಟಿಫಲಃ- ಚಂದ್ರನು ರವಿನವಾಂಶದಲ್ಲಿ (ಸಿಂಹ) ಇರ ಬೇಕು. ಈ ಚಂದ್ರನನ್ನು ನೋಡುವ ಗ್ರಹನು ರವಿಯಾದರೆ ಕೋಪಿಷ್ಟನು, ಕುಜ-ರಾಜನ ಮಿತ್ರನು, ಬುಧ-ನಿಧೀಶ, ಗುರು-ಅಧಿಕಾರಿ, ಶುಕ್ರ-ಸಂತಾನವಿಲ್ಲದವನು, ಶನಿ-ಹಿಂಸ್ರ ಕಾರ್ಯಮಾಡುವವನು ಆಗುತ್ತಾನೆ.

ಗುರುನವಾಂಶಸ್ಥಿತ ಚಂದ್ರ-ದೃಷ್ಟಿಫಲಃ- ಚಂದ್ರನು ಗುರುನವಾಂಶದಲ್ಲಿ (ಧನು, ಅಥವಾ ಮೀನ) ಇರಬೇಕು. ಈ ಚಂದ್ರನನ್ನು ನೋಡುವಗ್ರಹನು ರವಿಯಾದರೆ ಬಲಿಷ್ಠನೆಂದು ಪ್ರಸಿದ್ಧಿಹೊಂದುವನು. ಕುಜ-ಯುದ್ಧದಲ್ಲಿ ಕುಶಲನು, ಬುಧ-ಹಾಸ್ಯಜ್ಞನು, ಗುರು-ಮಂತ್ರಿಯು, ಶುಕ್ರ-ವಿಷಯಾಭಿಲಾಷೆ ಇಲ್ಲದವನು, ಶನಿ-ಗುಣವಂತನು ಆಗುತ್ತಾನೆ.

ಅಲ್ಪಾಪತ್ಯೋ ದುಃಖಿತಃ ಸತ್ಯಪಿ ಸ್ವೇ ಮಾನಾಸಕ್ತಃ ಕರ್ಮಣಿ ಸ್ವೇಽನುರಕ್ತಃ । ದುಷ್ಟಸ್ತ್ರೀಷ್ಟಃ ಕೋಪನಸ್ಸಾರ್ಕಿಭಾಗೇ ಚಂದ್ರೇ ಭಾನೌ ತದ್ವದಿನಾದ್ಯೈರ್ದೃಷ್ಟೇ ॥೧೬॥

ಶನಿನವಾಂಶಸ್ಥಿತ ಚಂದ್ರನ ದೃಷ್ಟಿಃ- ಚಂದ್ರನು ಶನಿನವಾಂಶ (ಮಕರ ಅಥವಾ ಕುಂಭ)ದಲ್ಲಿ ಇರಬೇಕು. ಈ ಚಂದ್ರನನ್ನು ನೋಡುವ ಗ್ರಹನು ರವಿಯಾದರೆ ಅಲ್ಪಸಂತಾನ, ಕುಜ-ಧನವಂತನಾದರೂ ದುಃಖಿತನು, ಬುಧ-ಮಾನವಂತನು, ಗುರು-ಸ್ವಕರ್ಮನಿರತನು, ಶುಕ್ರ-ದುಷ್ಟ ಸ್ತ್ರೀಯರಲ್ಲಿ ಅನುರಕ್ತನು. ಶನಿ-ಕೋಪಿಷ್ಟನು ಆಗುತ್ತಾನೆ. ಚಂದ್ರನಂತೆಯೇ ರವಿಯ ನವಾಂಶಸ್ಥಿತ ಫಲಗಳನ್ನು ತಿಳಿಯಬೇಕು.

ಸೂರ್ಯಾದಿತೋಽತ್ರಾಂಶಫಲಂ ಪ್ರದಿಷ್ಟಂ ಜ್ಞೇಯಂ ನವಾಂಶಸ್ಯ ಫಲಂ ತದೇವ ।
ರಾಶೀಕ್ಷಣೇ ಯತ್ಫಲಮುಕ್ತಮಿಂದೋಸ್ತದ್ ದ್ವಾದಶಾಂಶಸ್ಯ ಫಲಂ ಹಿ ವಾಚ್ಯಮ್ ॥

ಸೂರ್ಯಾದಿ ಗ್ರಹರ ನವಾಂಶಸ್ಥಿತ ಚಂದ್ರನಿಗೆ ಹೇಳಿದ ಫಲವು ನವಾಂಶ ವಿಭಾಗ ಸೂಚಿಸುವ ಫಲ ಆಗಿರುತ್ತದೆ. ರಾಶಿಸ್ಥಿತ ಚಂದ್ರನ ಮೇಲೆ ರವ್ಯಾದಿಗ್ರಹರ ದೃಷ್ಟಿಫಲವು ದ್ವಾದಶಾಂಶಕ್ಕೂ ಅನ್ವಯಿಸುತ್ತದೆ.

ವರ್ಗೋತ್ತಮಸ್ವಪರಗೇಷು ಶುಭಂ ಯದುಕ್ತಂ ತತ್ಪುಷ್ಟಮಧ್ಯಲಘುತಾಽಶುಭಮುತ್ಕ್ರಮೇಣ । ವೀರ್ಯಾನ್ವಿತೋಽಂಶಕಪತಿರ್ನಿರುಣದ್ಧಿ ಪೂರ್ವಂ ರಾಶೀಕ್ಷಣಸ್ಯ ಫಲಮಂಶಫಲಂ ದದಾತಿ ॥೧೭॥

ಚಂದ್ರನು ವರ್ಗೋತ್ತಮ ನವಾಂಶ, ಸ್ವಾಂಶ, ಅಥವ ಇನ್ನಿತರ ಗ್ರಹರ ನವಾಂಶದಲ್ಲಿ ಇದ್ದರೆ ಹಿಂದೆ ಹೇಳಿದ ಫಲಗಳು ಕ್ರಮವಾಗಿ ಪೂರ್ಣ, ಮಧ್ಯಮ ಅಥವಾ ಅಲ್ಪವಾಗಿ ಲಭಿಸುತ್ತವೆ. ಅಶುಭ ಫಲಗಳನ್ನು ವ್ಯತ್ಯಯವಾಗಿ ತಿಳಿದುಕೊಳ್ಳಬೇಕು. ಅಂದರೆ ಚಂದ್ರನ ನವಾಂಶಸ್ಥಿತ ಫಲವು ಅಶುಭ ಸೂಚಿಸುವುದಾದರೂ ಚಂದ್ರನು ವರ್ಗೋತ್ತಮವಾದಿನವಾಂಶದಲ್ಲಿ ಇದ್ದರೆ ಅಶುಭಫಲಗಳು ಕ್ಷೀಣ, ಮಧ್ಯಮ ಅಥವಾ ಪ್ರಬಲ ಆಗುತ್ತದೆ. ಚಂದ್ರಸ್ಥಿತ ನವಾಂಶಾಧಿಪತಿಯು ಬಲಿಷ್ಠನಾದರೆ, ಹಿಂದೆ ಹೇಳಿದ ದೃಷ್ಟಿಫಲಗಳು ಅನುಭವಕ್ಕೆಬಾರದೆ ಚಂದ್ರನ ನವಾಂಶಫಲವು ಫಲಿಸುತ್ತದೆ.

ದಶಾಫಲ ಅಧ್ಯಾಯ ೧೯

ಭಕ್ತ್ಯಾ ಯೇನ ನವಗ್ರಹಾ ಬಹುವಿಧೈರಾರಾಧಿತಾಸ್ತೇ ಚಿರಂ ಸಂತುಷ್ಟಾಃ ಫಲದೋಽಭವನ್ ತಮದಿಶನ್ಸಾನುಗ್ರಹಂ ನಿರ್ಣಯಮ್ । ಖ್ಯಾತಾಂ ತೇನಪರಾಶರೇಣ ಕಥಿತಾಂ ಸಂಗೃಹ್ಯ ಹೋರಾಗಮಾತ್ ಸಾರಂ ಭೂರಿಪರೀಕ್ಷ್ಯ ಯಾತಿಫಲಿತಾಂ ವಕ್ಷ್ಯೇ ಮಹಾಖ್ಯಾಂ ದಶಾಮ್ ॥

ಪರಾಶರಮುನಿಯು ನವಗ್ರಹರನ್ನು ದೀರ್ಘಕಾಲದವರೆಗೆ ಹಲವು ಪ್ರಕಾರದಿಂದ ಆರಾಧಿಸಿ, ನವಗ್ರಹರ ಅನುಗ್ರಹಕ್ಕೆ ಪಾತ್ರನಾಗಿ, ಗ್ರಹರ ವರಪ್ರಧಾನವಾಗಿ ಪಡೆದ ದಶಾಫಲವಿಚಾರವನ್ನು ರಚಿಸಿರುವನು. ಮಂತ್ರೇಶ್ವರನು ಪರಾಶರೋಕ್ತ ದಶಾಫಲಾದಿಗಳನ್ನು ಸಂಗ್ರಹಿಸಿ, ಅವುಗಳನ್ನು ವಿಮರ್ಶಿಸಿ ಮತ್ತು ಪ್ರತ್ಯಕ್ಷದಲ್ಲಿ ಆ ಮಹಾ ದಶಾಫಲಗಳು ಸರಿಯಾಗಿ ಅನುಭವಕ್ಕೆ ಬರುವುದರಿಂದ, ಅವುಗಳಸಾರವನ್ನು ಈ ಅಧ್ಯಾಯದಲ್ಲಿ ಹೇಳಿರುತ್ತಾನೆ.

ಅಗ್ನ್ಯಾದಿತಾರಪತಯೋ ರವಿಚಂದ್ರಭೌಮಸರ್ಪಾಮರೇಡ್ಯ ಶನಿಚಂದ್ರಜಕೇತುಶುಕ್ರಾ: । ತೇನೇ ನಟ: ಶನಿಜಯಾ ಚತುರ್ಧಾನ್ಯ ಸೌಮ್ಯಸ್ಥಾನೇ ನವಾ ನಿಗದಿತಾ: ಶರದಸ್ತು ತೇಷಾವ್ ॥೨॥

ಕೃತ್ತಿಕಾ ನಕ್ಷತ್ರದಿಂದ ಪ್ರಾರಂಭಿಸಿ ಕ್ರಮವಾಗಿ 9 ನಕ್ಷತ್ರಗಳಿಗೆ ಹಾಗೂ ಅವುಗಳ ತ್ರಿಕೋಣನಕ್ಷತ್ರಗಳಿಗೆ ರವಿ, ಚಂದ್ರ, ಕುಜ, ರಾಹು, ಗುರು, ಶನಿ, ಬುಧ, ಕೇತು ಮತ್ತು ಶುಕ್ರನು ದಶಾಧಿಪತಿಗಳು ಆಗುತ್ತಾರೆ. ಈ ಗ್ರಹರ ದಶೆಗಳು ಕ್ರಮವಾಗಿ 6, 10, 7, 18, 16, 19, 17, 7, ಮತ್ತು 20 ವರ್ಷಗಳು ಆಗಿರುತ್ತವೆ.

ವಿಂಶೋತ್ತರೀ ದಶಾ:- ಶ್ಲೋಕ ೨ರಲ್ಲಿ ಪರಾಶರ ಪ್ರಣೀತ ನಕ್ಷತ್ರ ದಶಾಕ್ರಮ ಮತ್ತು ಕಾಲವನ್ನು ಹೇಳುತ್ತಾನೆ.

ಜನ್ಮನಕ್ಷತ್ರ ಮತ್ತು ದಶಾವರ್ಷ

					ದಶಾವರ್ಷ
ಕೃತ್ತಿಕಾ	ಉತ್ತರಾ	ಉತ್ತರಾಷಾಢಾ	ರವಿ	”	6
ರೋಹಿಣಿ	ಹಸ್ತಾ	ಶ್ರವಣಾ	ಚಂದ್ರ	”	10
ಮೃಗಶಿರಾ	ಚಿತ್ರಾ	ಧನಿಷ್ಠಾ	ಕುಜ	”	7
ಆದ್ರಾ್ರ	ಸ್ವಾತಿ	ಶತಭಿಷಾ	ರಾಹು	”	18
ಪುನರ್ವಸು	ವಿಶಾಖಾ	ಪೂರ್ವಾಭಾದ್ರಾ	ಗುರು	”	16
ಪುಷ್ಯಾ	ಅನುರಾಧಾ	ಉತ್ತರಾಭಾದ್ರಾ	ಶನಿ	”	19
ಆಶ್ಲೇಷಾ	ಜ್ಯೇಷ್ಠಾ	ರೇವತಿ	ಬುಧ	”	17
ಮಘಾ	ಮೂಲಾ	ಅಶ್ವಿನಿ	ಕೇತು	”	7
ಹುಬ್ಬಾ	ಪೂರ್ವಾಷಾಢಾ	ಭರಣಿ	ಶುಕ್ರ	”	20

ಪರಾಶರ ಮುನಿಯಿಂದ ರಚಿತ ಈ ದಶಾಪದ್ಧತಿಯ ಮಹತ್ತಮ ಕಾಲ 120 ವರ್ಷ ಆಗಿರುತ್ತದೆ. ಇದನ್ನು ವಿಂಶೋತ್ತರೀ ದಶಾ ಮತ್ತು ನಕ್ಷತ್ರದಶಾ ಅಥವಾ ಉಡುದಶೆ ಎಂದು ಕರೆಯುತ್ತಾರೆ.

ಋಕ್ಷಸ್ಯ ಗಮ್ಯಾ ಘಟಿಕಾ ದಶಾಬ್ದನಿಘ್ನಾ ನತಾಪ್ತಾ ಸ್ವದಶಾಬ್ದ ಸಂಖ್ಯಾ ।
ರೂಪೈರ್ಸಗ್ಯೈ: ಸಂಗುಣಯೇನ್ನತೇನ ಹೃತಾಸ್ತು ಮಾಸಾ ದಿವಸಾ: ಕ್ರಮೇಣ ॥

ಚಂದ್ರನು ಜನ್ಮನಕ್ಷತ್ರವನ್ನು ದಾಟಲು ಉಳಿದ ಕಾಲವನ್ನು ಘಟಿಗಳಾಗಿ ಪರಿವರ್ತಿಸಿ, ಆ ನಕ್ಷತ್ರಾಧಿಪತಿಯ ದಶಾವರ್ಷದಿಂದ ಗುಣಿಸಿ 60ರಿಂದ ಭಾಗಿಸಿದರೆ ಶಿಷ್ಟದಶಾವರ್ಷ, ಶೇಷವನ್ನು 12ರಿಂದ ಗುಣಿಸಿ 60ರಿಂದ ಭಾಗಿಸಿದರೆ ಶೇಷಮಾಸ ಮತ್ತೂ ಉಳಿದ ಶೇಷವನ್ನು 30ರಿಂದ ಗುಣಿಸಿ 60ರಿಂದ ಭಾಗಿಸಿದರೆ ಶೇಷದಿನಗಳು ಲಭಿಸುತ್ತವೆ.

ದಶೆ ಶೋಧನೆ:- ಚಂದ್ರನಿಗೆ ಒಂದು ನಕ್ಷತ್ರವನ್ನು ದಾಟಲು ತಗಲುವ ಕಾಲವನ್ನು ಪರಮಘಟಿ ಎನ್ನುತ್ತಾರೆ. ಜನನಕಾಲದ ಚಂದ್ರನಿಗೆ ಜನ್ಮನಕ್ಷತ್ರವನ್ನು ದಾಟಲು ಉಳಿದ ಘಟಿಯನ್ನು ಶಿಷ್ಟಘಟಿ ಎನ್ನುತ್ತಾರೆ. ಈ ಶಿಷ್ಟಘಟಿಯನ್ನು ಜನ್ಮನಕ್ಷತ್ರಾಧಿಪನ ದಶಾವರ್ಷದಿಂದ ಗುಣಿಸಿ ಪರಮ ಘಟಿಯಿಂದ ಭಾಗಿಸಿದರೆ ಜನನಕಾಲದಲ್ಲಿ ಸಂದುಳಿದ ದಶಾವರ್ಷಲಭಿಸುತ್ತದೆ. ಅನಂತರ ಶೇಷವನ್ನು 12ರಿಂದ ಗುಣಿಸಿ ಪರಮಘಟಿಯಿಂದ ಭಾಗಿಸಿದರೆ ಸಂದುಳಿದ ತಿಂಗಳು ಲಭಿಸುತ್ತದೆ, ಮತ್ತೂ ಉಳಿದಶೇಷವನ್ನು 30ರಿಂದ ಗುಣಿಸಿ ಪರಮಘಟಿಯಿಂದ ಭಾಗಿಸಿದರೆ, ಸಂದುಳಿದ ದಿನಗಳು ಲಭಿಸುತ್ತದೆ. ಶೋಧಿಸಿದ ಈ ವರ್ಷಮಾಸಾದಿಗಳನ್ನು ಗರ್ಭಶಿಷ್ಟದಶೆ ಎಂದು ಕರೆಯುತ್ತಾರೆ.

ರವಿಸ್ಫುಟಂ ತಜ್ಜನನೇ ಯದಾಸೀತ್ ತಥಾವಿಧಶ್ಚೇತ್ಪ್ರತಿವರ್ಷಮರ್ಕಃ ।
ಆವೃತ್ತಯಃ ಸಂತಿ ದಶಾಬ್ದಕಾನಾಂ ಭಾಗಕ್ರಮಾತ್ತದ್ದಿವಸಾಃ ಪ್ರಕಲ್ಪ್ಯಾಃ ॥

ರವಿವರ್ಷ:- ಜನನಕಾಲದ ರವಿಸ್ಫುಟವನ್ನು ಶೋಧಿಸಬೇಕು. ಪ್ರತಿವರ್ಷ ಗೋಚರದ ರವಿಯು ಜನ್ಮಕಾಲದ ರವಿಸ್ಫುಟದಲ್ಲಿ ಬರುವಕಾಲವನ್ನು ರವಿವರ್ಷ ಎನ್ನುತ್ತಾರೆ. ವಿಂಶೋತ್ತರೀ ದಶಾವರ್ಷ ಗಣನೆಯನ್ನು ರವಿವರ್ಷದಿಂದ ಮಾಡುತ್ತಾರೆ. ಹಾಗೂ ವರ್ಷದ ವಿಭಾಗಾದಿಯಿಂದ ಮಾಸ, ದಿನಾದಿಗಳನ್ನು ತಿಳಿಯುತ್ತಾರೆ.

ಭಾನುಃ ಕರೋತಿ ಕಲಹಂ ಕ್ಷಿತಿಪಾಲಕೋಪಮಾಕಸ್ಮಿಕಂ ಸ್ವಜನರೋಗಪರಿಭ್ರಮಂ ಚ । ಅನ್ಯೋನ್ಯವೈರಮತಿದುಃಸಹಚಿತ್ತಕೋಪಮ್ ಗುಪ್ತ್ಯರ್ಥಧಾನ್ಯಸುತದಾರಕೃಶಾನುಪೀಡಾಮ್ ॥೫॥

ದೂಷಿತ ರವಿ ದಶಾಫಲ:- ರವಿಯು ದೂಷಿತನಾದಾಗ ತನ್ನದಶಾಕಾಲದಲ್ಲಿ ಕಲಹ, ರಾಜಕೋಪ (ಸರಕಾರದಿಂದ ಆಕಸ್ಮಾತ್ ತೊಂದರೆಗಳು), ಸ್ವಜನರಿಗೆ ಅನಾರೋಗ್ಯ, ಅನಾವಶ್ಯಕ ಸಂಚಾರ, ಅನ್ಯೋನ್ಯ ವೈರತ್ವ, ಕೋಪ ಮತ್ತು ದುಃಖ ಅಥವಾ ಉದ್ವೇಗ ಇತ್ಯಾದಿಗಳಿಂದ ಮಾನಸಿಕ ವೇದನೆ, ಗುಪ್ತಧನ ಧಾನ್ಯ ನೀಡುತ್ತಾನೆ. ಹೆಂಡತಿ, ಮಕ್ಕಳು ಮೊದಲಾದವರು ಪೀಡಿಸಲ್ಪಡುತ್ತಾರೆ.

ಕ್ರೌರ್ಯಾಧ್ವಭೂಪೈಃ ಕಲಹೈರ್ಧನಾಪ್ತಿಂ ವನಾದ್ರಿಸಂಚಾರಮತಿ ಪ್ರಸಿದ್ಧಿಮ್ ।
ಕರೋತಿ ಸುಸ್ಥೋ ವಿಜಯಂ ದಿನೇಶಸ್ಸ್ಥೈರ್ಯಂ ಸದೋದ್ಯೋಗರತಿಂ ಸುಖಂ ಚ ॥

ಸುಸ್ಥಾನಸ್ಥಿತ ರವಿದಶಾಫಲ:- ಸೂರ್ಯನು ಸುಸ್ಥಾನದಲ್ಲಿ ಇದ್ದರೆ ತನ್ನ ದಶಾಕಾಲದಲ್ಲಿ ಕ್ರೂರಕಾರ್ಯಗಳಿಂದ, ಸಂಚಾರದಿಂದ, ರಾಜರಿಂದ, ಅಥವಾ ಕಲಹದಿಂದ ಧನ ಪ್ರಾಪ್ತಿ ಆಗುತ್ತದೆ. ವನ ಮತ್ತು ಪರ್ವತ ಸಂಚಾರ, ಅತ್ಯಂತ ಕೀರ್ತಿ, ಕೈಕೊಂಡ

ಕಾರ್ಯಗಳಲ್ಲಿ ಜಯ, ತೀಕ್ಷ್ಣತೆ, ತನ್ನ ಉದ್ಯೋಗದಲ್ಲಿ ನಿರತನಾದವನು ಮತ್ತು ಸುಖಿವಂತನು ಆಗುತ್ತಾನೆ.

ಮನಃ ಪ್ರಸಾದಂ ಪ್ರಕರೋತಿ ಚಂದ್ರಃ ಸರ್ವಾರ್ಥಸಿದ್ಧಿಂ ಸುಖಭೋಜನಂ ಚ ।
ಸ್ತ್ರೀಪುತ್ರಭೂಷಾಂಬರರತ್ನಸಿದ್ಧಿಂ ಗೋಕ್ಷೇತ್ರಲಾಭಂ ದ್ವಿಜಪೂಜನಂ ಚ ॥೭॥

ಚಂದ್ರದಶಾಫಲ:- ಚಂದ್ರನು ತನ್ನ ದಶಾಕಾಲದಲ್ಲಿ ಮಾನಸಿಕ ಸಂತುಷ್ಟಿಯನ್ನು ನೀಡುತ್ತಾನೆ. ಸಕಲ ಅಭೀಷ್ಟಗಳನ್ನು ಪೂರೈಸುತ್ತಾನೆ. ಮೃಷ್ಟಾನ್ನಭೋಜನ, ಪತ್ನಿ, ಪುತ್ರ, ಆಭರಣ, ವಸ್ತ್ರ, ರತ್ನ, ಪಶು, ಭೂಮಿ, ಇತ್ಯಾದಿ ಲಭಿಸುತ್ತದೆ. ಬ್ರಾಹ್ಮಣ ಪೂಜೆ ಮಾಡುತ್ತಾನೆ.

ಬಲೇನ ಸರ್ವಂ ಶಶಿನಸ್ತು ವಾಚ್ಯಂ ಪೂರ್ವೇ ದಶಾಹೇ ಫಲಮಾತ್ರ ಮಧ್ಯಮ್ ।
ಮಧ್ಯೇ ದಶಾಹೇ ಪರಿಪೂರ್ಣವೀರ್ಯಂ ತೃತೀಯಭಾಗೇಽಲ್ಪಫಲಂ ಕ್ರಮೇಣ ॥೮॥

ಚಂದ್ರನಬಲ:- ಚಂದ್ರದಶಾಫಲ ಚಿಂತನೆಯಲ್ಲಿ ಪ್ರಥಮವಾಗಿ ಚಂದ್ರನ ಬಲಾಬಲವನ್ನು ತಿಳಿಯಬೇಕು. 1.ಶುಕ್ಲಪಕ್ಷದ ಚಂದ್ರನು ಮೊದಲಿನ ಹತ್ತುದಿನ (ಶುಕ್ಲ ಪಾಡ್ಯದಿಂದ ಶುಕ್ಲದಶಮಿ ವರೆಗೆ) ಮಧ್ಯಮ ಬಲಿಷ್ಠನು, 2.ನಂತರ ಹತ್ತುದಿನ (ಶುಕ್ಲ ಏಕಾದಶಿಯಿಂದ ಬಹುಳ ಪಂಚಮಿಯ ವರೆಗೆ) ಪೂರ್ಣ ಬಲಿಷ್ಠನು, 3.ನಂತರ ಹತ್ತುದಿನ (ಬಹುಳ ಷಷ್ಠಿಯಿಂದ ಅಮಾವಾಸ್ಯೆ ವರೆಗೆ) ಕ್ಷೀಣಬಲನು ಆಗುತ್ತಾನೆ.

ಭೌಮಸ್ಯ ಸ್ವದಶಾಫಲಾನಿ ಹುತಭುಗ್ಭೂಪಾಹವಾದ್ಯೈರ್ಧನಮ್ ಭೈಷಜ್ಯಾನೃತವಂಚನೈಶ್ಚ ವಿವಿಧೈಃ ಕ್ರೌರ್ಯೈರ್ಧನಸ್ಯಾಗಮಃ। ಪಿತ್ತಾಸೃಗ್ಜ್ವರಬಾಧಿತಶ್ಚ ಸತತಂ ನೀಚಾಂಗನಾಸೇವನಮ್ ವಿದ್ವೇಷಃ ಸುತದಾರಬಂಧುಗುರುಭಿಃ ಕಷ್ಟೋಽನ್ಯಭಾಗ್ಯೇ ರತಃ ॥೯॥

ಕುಜದಶಾಫಲ:- ಕುಜದಶಾಕಾಲದಲ್ಲಿ ಬೆಂಕಿಯಿಂದ, ರಾಜರಿಂದ, (ಸರಕಾರ) ಜಗಳ ಅಥವಾ ಯುದ್ಧದಿಂದ, ಧನಗಳಿಸುತ್ತಾನೆ. ಔಷಧ, ಸುಳ್ಳು, ಮೋಸ, ವಂಚನೆ ತರತರದ ಕ್ರೂರಕರ್ಮಗಳಿಂದ ಧನ ಲಭಿಸುತ್ತದೆ. ಪಿತ್ತಬಾಧೆ, ರಕ್ತದೋಷ, ಜ್ವರ, ಇತ್ಯಾದಿಗಳಿಂದ ಪೀಡಿಸಲ್ಪಡುತ್ತಾನೆ. ಯಾವಾಗಲೂ ನೀಚ ಸ್ತ್ರೀಯರ ಸಹವಾಸ ಮಾಡುತ್ತಾನೆ. ತನ್ನ ಪತ್ನಿ, ಪುತ್ರ, ಸಂಬಂಧಿಕರು ಮತ್ತು ಗುರುಹಿರಿಯರನ್ನು ದ್ವೇಷಿಸುತ್ತಾನೆ. ತನ್ನ ಭಾಗ್ಯಪ್ರಾಪ್ತಿಕೋಸ್ಕರ ಅನ್ಯರನ್ನು ಅವಲಂಬಿಸಿ ಕಷ್ಟಕ್ಕೀಡಾಗುತ್ತಾನೆ.

ಸೌಮ್ಯಃ ಕರೋತಿ ಸುಹೃದಾಗಮಮಾತ್ಮಸೌಖ್ಯಮ್ ವಿದ್ವತ್ಪ್ರಶಂಸಿತಯಶಶ್ಚ
ಗುರುಪ್ರಸಾದಮ್ । ಪ್ರಾಗಲ್ಭ್ಯಮುಕ್ತಿವಿಷಯೇಽಪಿ ಪರೋಪಕಾರಂ ಜಾಯಾತ್ಮ-
ಜಾದಿಸುಹೃದಾಂ ಕುಶಲಂ ಮಹತ್ವಮ್ ॥೧೦॥

ಬುಧದಶಾಫಲ:- ಬುಧದಶಾಕಾಲದಲ್ಲಿ ಮಿತ್ರಲಾಭ, ಆತ್ಮಸುಖ, (ತನಗೆ ಸಂಬಂಧಪಟ್ಟ ಆಕಾಂಕ್ಷೆಗಳ ಪೂರೈಕೆ), ವಿದ್ಯಾವಂತರಿಂದ ಪ್ರಶಂಸಿಸಲ್ಪಡುತ್ತಾನೆ. ಯಶಸ್ಸು, ಗುರು-ಹಿರಿಯರ ಅನುಗ್ರಹ, ವಾಕ್‌ಚಾತುರ್ಯ. ಮಾತುಕತೆಯಲ್ಲಿ ಪ್ರಗಲ್ಭತೆ ಪರೋಪಕಾರಬುದ್ಧಿ, ಪತ್ನಿ, ಪುತ್ರ ಮತ್ತು ಮಿತ್ರರಿಗೆ ಸುಖ, ಮತ್ತು ಜಾತಕನು ಮಹಾನ್‌ವ್ಯಕ್ತಿ ಆಗುತ್ತಾನೆ.

ಧರ್ಮಕ್ರಿಯಾಪ್ತಿಮವನೀಂದ್ರಗುರುರ್ವಿಧತ್ತೇ ಸಂತಾನಸಿದ್ಧಿಮವನೀಪತಿಪೂಜನಂ ಚ। ಶ್ಲಾಘ್ಯತ್ವಮುತ್ತಮಜನೇಷು ಗಜಾಶ್ವಯಾನಪ್ರಾಪ್ತಿಂ ವಧೂಸುತಸುಹೃದ್ದ್ಯುತಿಮಿಷ್ಟಸಿದ್ಧಿಮ್ ॥೧೧॥

ಗುರುದಶಾಫಲ: ಗುರುದಶಾಕಾಲದಲ್ಲಿ ಜಾತಕನು ಧಾರ್ಮಿಕಕಾರ್ಯಗಳನ್ನು ಮಾಡುತ್ತಾನೆ ಸಂತಾನಸುಖ, ರಾಜರಿಂದ ಸನ್ಮಾನ, ಆಢ್ಯಮಹನೀಯರಿಂದ ಶ್ಲಾಘ್ಯತೆ, ಆನೆ, ಕುದುರೆ, ಮೊದಲಾದ ವಾಹನ ಸುಖ, ಪತ್ನಿ, ಮಕ್ಕಳು, ಮಿತ್ರರು ಮೊದಲಾದವರಿಂದ ಕೂಡಿದವನು ಮತ್ತು ಜಾತಕನ ಸಕಲ ಬಯಕೆಗಳು ಪೂರೈಸುತ್ತವೆ.

ಕ್ರೀಡಾಸುಖೋಪಕರಣಾನಿ ಸುವಾಹನಾಪ್ತಿಂ ಗೋರತ್ನಭೂಷಣನಿಧಿಪ್ರಮದಾಪ್ರಮೋದಮ್ । ಜ್ಞಾನಕ್ರಿಯಾಂ ಸಲಿಲಯಾನಮುಪೈತಿ ಶೌಕ್ರ್ಯಮ್ ಕಲ್ಯಾಣಕರ್ಮ ಬಹುಮಾನ ಮಿಲಾಧಿನಾಥಾತ್ ॥೧೨॥

ಶುಕ್ರದಶಾಫಲ:- ಶುಕ್ರನು ತನ್ನದಶಾಕಾಲದಲ್ಲಿ ಆಟದ ಸಲಕರಣೆ, ಸುಖ ಸಾಧನ, ಉತ್ತಮವಾಹನ, ಪಶುಸಂಪತ್ತು, ರತ್ನ, ಆಭರಣ, ನಿಧಿ, ಸ್ತ್ರೀಸುಖ-ವಿಲಾಸ, ಜ್ಞಾನ ಸಾಧನೆ, ಜಲಪ್ರಯಾಣ, ಶುಭಸಮಾರಂಭ, ಮತ್ತು ರಾಜರಿಂದ ಬಹುಮಾನ ನೀಡುತ್ತಾನೆ.

ಪಾಕೇSರ್ಕಜಸ್ಯ ನಿಜದಾರಸುತಾತಿರೋಗಾನ್ವಾತೋತ್ಥರಾನ್ಕೃಷಿವಿನಾಶಮಸತ್ಯಲಾಪಮ್ । ಕುಸ್ತ್ರೀರತಿಂ ಪರಿಜನೈರ್ವಿಯುತಿಂ ಪ್ರವಾಸಮಾಕಸ್ಮಿಕಂ ಸ್ವಜನಭೂಮಿಸುಖಾರ್ಥನಾಶಮ್ ॥೧೩॥

ಶನಿದಶಾಫಲ:- ಶನಿಯು ತನ್ನ ದಶಾಕಾಲದಲ್ಲಿ ಹೆಂಡತಿ-ಮಕ್ಕಳಿಗೆ ಅನಾರೋಗ್ಯ, ರೋಗ, ವಾತಪೀಡೆ, ನೀಡುತ್ತಾನೆ. ಕೃಷಿ-ಬೇಸಾಯದಲ್ಲಿ ಹಾನಿ, ಅಸತ್ಯ ಸಾಧಿಸುವುದು, ಕೆಟ್ಟಸ್ತ್ರೀಯರ ಸಹವಾಸ, ಪರಿವಾರದ ಅಥವಾ ಕೈಕೆಳಗಿನವರ ವಿಯೋಗ, ಪ್ರವಾಸ, ಸ್ವಜನರು, ಭೂಮಿ, ಸುಖ ಮತ್ತು ಧನವು ಅಕಸ್ಮಾತ್ ನಾಶ ಆಗುತ್ತದೆ.

ಕುರ್ಯಾದಹಿ: ಕ್ಷಿತಿಪಚೋರವಿಷಾಗ್ನಿಶಸ್ತ್ರಭೀತಿಂ ಸುತಾರ್ತಿಮತಿ ವಿಭ್ರಮಬಂಧುನಾಶಮ್ । ನೀಚಾಪಮಾನಮತಿಕ್ರಮತೋSಪವಾದಮ್ ಸ್ಥಾನಚ್ಯುತಿಂ ಪದಪಂತಿ ಕೃತಕಾರ್ಯಹಾನಿಮ್ ॥೧೪॥

ರಾಹುದಶಾಫಲ:. ರಾಹುವು ತನ್ನದಶಾಕಾಲದಲ್ಲಿ ರಾಜರಿಂದ, ಕಳ್ಳರಿಂದ, ವಿಷ, ಅಗ್ನಿ ಮತ್ತು ಶಸ್ತ್ರದಿಂದ ಹಾನಿ ಅಥವಾ ಭಯ ನೀಡುತ್ತಾನೆ. ಮಕ್ಕಳಿಗೆ ಅನಾರೋಗ್ಯ, ಚಿತ್ತಭ್ರಮೆ, ಬಂಧುನಾಶ, ನೀಚಜನರಿಂದ ಅವಮಾನ, ಆಲೋಚಿಸದೆ ಕಾರ್ಯಮಾಡುವುದರಿಂದ ಅಪವಾದ, ಸ್ಥಾನಚ್ಯುತಿ, ಕಾಲುನೋವು, ಕೈಕೊಂಡ ಕಾರ್ಯಗಳಲ್ಲಿ ಹಾನಿ ನೀಡುತ್ತಾನೆ.

ವಿಧುಂತುದೇ ಶುಭಾನ್ವಿತೇ ಪ್ರಶಸ್ತಭಾವಸಂಯುತೇ ದಶಾ ಶುಭಪ್ರದಾತದಾ ಮಹೀಪತುಲ್ಯಭೂತಿದಾ । ಅಭೀಷ್ಟಕಾರ್ಯಸಿದ್ಧಯೋ ಗೃಹೇ ಸುಖಸ್ಥಿತಿರ್ಭವೇದಚಂಚಲಾರ್ಥಸಂಚಯಾ: ಕ್ಷಿತೌ ಪ್ರಸಿದ್ಧಕೀರ್ತಯ: ॥೧೫॥

ಶುಭಗ್ರಹಯುತ ರಾಹುಫಲ:- ರಾಹುವು ಶುಭಗ್ರಹರೆಯುತಿಯಲ್ಲಿ ಶುಭಭಾವ ದಲ್ಲಿ ಇದ್ದರೆ ತನ್ನದಶಾಕಾಲದಲ್ಲಿ ಶುಭಪ್ರದನು ಆಗುತ್ತಾನೆ. ರಾಜತುಲ್ಯನು, ಸಕಲ ಕಾರ್ಯಗಳಲ್ಲಿ ಯಶಸ್ಸು, ಮನೆಯಲ್ಲಿ ಸುಖ-ಶಾಂತಿ, ಧನಸಂಚಯ, ಪ್ರಸಿದ್ಧವ್ಯಕ್ತಿ ಯಾಗಿ ಕೀರ್ತಿವಂತನು ಆಗುತ್ತಾನೆ.

ಪಾಥೋನಮೀನಾಲಿಗತಸ್ಯ ರಾಹೋರ್ದಶಾವಿಪಾಕೇ ಮಹಿತಂ ಚ ಸೌಖ್ಯಮ್ ।
ದೇಶಾಧಿಪತ್ಯಂ ನರವಾಹನಾಪ್ತಿರ್ದಶಾವಸಾನೇ ಸಕಲಸ್ಯ ನಾಶ: ॥೧೬॥

ಕನ್ಯಾ, ಮೀನ, ಮತ್ತು ವೃಶ್ಚಿಕರಾಶಿಯ ರಾಹುವು ತನ್ನ ದಶಾಕಾಲದಲ್ಲಿ ಮಾನ -ಸನ್ಮಾನ, ಸುಖ, ದೇಶದ ಆಢಳಿತ, ಸೇವಕರು ಮತ್ತು ವಾಹನಸುಖ ನೀಡುತ್ತಾನೆ. ಆದರೆ ದಶಾಂತ್ಯಕಾಲದಲ್ಲಿ ಸಕಲ ಸುಖ-ಸಂಪತ್ತುಗಳನಾಶ ಮಾಡುತ್ತಾನೆ.

ಕೇತೋರ್ದಶಾಯಾಮರಿಚೋರಭೂಪೈ: ಪೀಡಾ ಚ ಶಸ್ತ್ರಕ್ಷತಮುಷ್ಣರೋಗ: ।
ಮಿಥ್ಯಾಪವಾದ: ಕುಲದೂಷಿತತ್ವಂ ವಹ್ನೇರ್ಭಯಂ ಪ್ರೋಷಣಮಾತ್ಮದೇಶಾತ್ ॥೧೭

ಕೇತುದಶಾಫಲ:- ಕೇತುದಶಾಕಾಲದಲ್ಲಿ ಶತ್ರುಗಳಿಂದ, ಕಳ್ಳರಿಂದ ಮತ್ತು ರಾಜರಿಂದ ಪೀಡೆ ಉಂಟಾಗುತ್ತದೆ. ಶಸ್ತ್ರಗಳಿಂದ ಘಾಯ, ಉಷ್ಣವ್ಯಾಧಿಗಳು, ಸುಳ್ಳು ಅಪವಾದ ಗಳು, ತನ್ನಕುಲದ ದೂಷಣೆ, ಅಗ್ನಿಭಯ, ಸ್ವದೇಶವನ್ನು ತ್ಯಜಿಸಿ ವಿದೇಶವಾಸ ಸಂಭ ವಿಸುತ್ತದೆ.

ಅಥ ತರಣಿದಶಾಯಾಂ ಕ್ರೌರ್ಯಭೂಪಾಲಯುದ್ಧೈರ್ಧನಮನಲಚತುಷ್ಪಾ-
ತ್ಪೀಡನಂ ನೇತ್ರತಾಪ: । ಉದರದಶನರೋಗ: ಪುತ್ರದಾರಾರ್ತಿರುಚ್ಚೈರ್ಗುರು
ಜನವಿರಹ: ಸ್ಯಾದ್ಭೃತ್ಯನಾಶೋऽರ್ಥಹಾನಿ: ॥೧೮॥

ರವಿದಶಾಫಲ:- ರವಿದಶಾಕಾಲದಲ್ಲಿ ಕ್ರೂರಕಾರ್ಯಗಳಿಂದ, ರಾಜರಿಂದ, ಮತ್ತು ಯುದ್ಧ ಅಥವಾ ಜಗಳದಿಂದ ಧನಪ್ರಾಪ್ತಿ. ಬೆಂಕಿ ಮತ್ತು ಚತುಷ್ಪಾದ ಪ್ರಾಣಿಗಳಿಂದ ಪೀಡೆಸಂಭವಿಸುತ್ತದೆ. ಕಣ್ಣಿನ ವ್ಯಾಧಿ, ಹೊಟ್ಟೆನೋವು, ಹಲ್ಲಿನವ್ಯಾಧಿ, ಮಕ್ಕಳಿಗೆ, ಹೆಂಡತಿಗೆ ತೊಂದರೆ, ಗುರು-ಹಿರಿಯರ ವಿಯೋಗ, ಸೇವಕರ ಮತ್ತು ಸಂಪತ್ತಿನ ನಾಶ ಆಗುತ್ತದೆ.

ಶಿಶಿರಕರದಶಾಯಾಂ ಮಂತ್ರದೇವದ್ವಿಜೋರ್ವೀಪತಿಜನಿತವಿಭೂತಿ: ಸ್ತ್ರೀಧನಕ್ಷೇತ್ರ-
ಸಿದ್ಧಿ: । ಕುಸುಮವಸನಭೂಷಾಗಂಧನಾನಾರಸಾಪ್ತಿರ್ಭವತಿ ಖಲ ವಿರೋಧ:
ಸ್ವಕ್ಷಯೋವಾತರೋಗ: ॥೧೯॥

ಚಂದ್ರದಶಾಫಲ:- ಚಂದ್ರದಶಾಕಾಲದಲ್ಲಿ ಮಂತ್ರ-ಕರ್ಮಾಂಗ, ದೇವ-ಬ್ರಾಹ್ಮಣ ಅಥವಾ ರಾಜರಿಂದ ಲಾಭ ಪಡೆಯುತ್ತಾನೆ. ಸ್ತ್ರೀಯರಿಂದ ಧನ ಲಭಿಸುತ್ತದೆ. ಭೂಮಿ ಲಾಭ, ಪುಷ್ಪ, ವಸ್ತ್ರ, ಆಭರಣ, ಸುಗಂಧ ದ್ರವ್ಯ, ಮತ್ತು ಹಲವು ವಿಧದ ರಸವತ್ತಾದ ವಸ್ತುಗಳ ವ್ಯವಹಾರದಿಂದ ಅಭಿವೃದ್ಧಿ ಹೊಂದುತ್ತಾನೆ. ದುರ್ಜನರ ವಿರೋಧದಿಂದ ಹಾನಿಗೀಡಾಗುತ್ತಾನೆ. ಧನನಾಶ ಮತ್ತು ವಾತರೋಗದಿಂದ ಪೀಡಿಸಲ್ಪಡುತ್ತಾನೆ.

ಕ್ಷಿತಿತನಯದಶಾಯಾಂ ಕ್ಷೇತ್ರವೈರಕ್ಷಿತೀಶಪ್ರತಿಜನಿತವಿಭೂತಿ: ಸ್ಯಾತ್ಪಶುಕ್ಷೇತ್ರಲಾಭ: ।
ಸಹಜತನಯವೈರಂ ದುರ್ಜನಸ್ತ್ರೀಷು ಸಕ್ತಿರ್ದಹನರುಧಿರಪಿತ್ತವ್ಯಾಧಿರರ್ಥೋಪಹಾನಿ:॥

ಕುಜದಶಾಫಲ: ಕುಜದಶಾಕಾಲದಲ್ಲಿ ಭೂವ್ಯವಹಾರದಿಂದ, ವ್ಯಾಜ್ಯ ಅಥವಾ ಶತ್ರುತ್ವದಿಂದ ರಾಜರಿಂದ ಅಥವಾ ರಾಜಕೀಯದಿಂದ ಧನಲಾಭಗಳಿಸುತ್ತಾನೆ. ಪಶು ಸಂಪತ್ತು ಮತ್ತು ಭೂಮಿ ಲಭಿಸುತ್ತದೆ. ಸಹೋದರ ಮತ್ತು ಮಕ್ಕಳೊಂದಿಗೆ ವೈರತ್ವ ಉಂಟಾಗುತ್ತದೆ. ದುಷ್ಟಸ್ತ್ರೀಯರಲ್ಲಿ ಆಸಕ್ತಿ ಇರುತ್ತದೆ. ಬೆಂಕಿಯಿಂದ ಅಥವಾ ಪಿತ್ತಜನಿತವ್ಯಾಧಿ, ರಕ್ತವಿಕಾರ, ಇತ್ಯಾದಿಗಳಿಂದ ಪೀಡಿಸಲ್ಪಡುತ್ತಾನೆ. ಧನಹಾನಿ ಸಂಭವಿಸುತ್ತದೆ.

ಅಸುರವರದಶಾಯಾಂ ದು:ಸ್ವಭಾವೋಽಥವಾ ಸ್ಯಾದತಿಗಹನಗದಾರ್ತ: ಸೂನುನಾರ್ಯೋರ್ವಿನಾಶ: । ವಿಷಭಯಮರಿಪೀಡಾವೀಕ್ಷಣೋರ್ಧ್ವಾಂಗರೋಗ: ಸುಹೃದಿ ಕೃಷಿ ವಿರೋಧೋ ಭೂಪತೇರ್ದ್ವೇಷಲಾಭ: ॥೨೦॥

ರಾಹುದಶಾಫಲ:- ರಾಹುದಶಾಕಾಲದಲ್ಲಿ ಜಾತಕನು ದು:ಸ್ವಭಾವದಿಂದ ಕೂಡಿದವನು ಅಥವಾ ಮಹಾವ್ಯಾಧಿಗಳಿಂದ (ಕರ್ಮಜವ್ಯಾಧಿ) ಪೀಡಿತನು, ಪತ್ನಿ, ಪುತ್ರರನ್ನು ಕಳಕೊಳ್ಳುವವನು, ವಿಷಭಯ, ಶತ್ರುಪೀಡೆ, ಕಣ್ಣಿನ ಅಥವಾ ಊರ್ಧ್ವಾಂಗರೋಗದಿಂದ ಪೀಡಿತನು ಆಗುತ್ತಾನೆ. ಕೃಷಿಕರೊಡನೆ ವಿರೋಧ ಅಥವಾ ಕೃಷಿ-ಬೇಸಾಯದಿಂದ ಹಾನಿ. ಮಿತ್ರರೊಡನೆ ಕಲಹ, ರಾಜರೊಡನೆ ಅಥವಾ ಸರಕಾರದೊಂದಿಗೆ ದ್ವೇಷ ಉಂಟಾಗುತ್ತದೆ.

ಅಮರಗುರುದಶಾಯಾಮಂಬರಾದ್ಯರ್ಥಸಿದ್ಧಿ: ಪರಿಜನಪರಿವಾರ ಪ್ರೌಢರತ್ಯರ್ಥಮಾನ: ಸುತಧನಸುಹೃದಾಪ್ತಿ: । ಸಾಧುವಾದಾಪ್ತಪೂಜಾ ಭವತಿ ಗುರುವಿಯೋಗ: ಕರ್ಣರೋಗ: ಕಫಾರ್ತಿ: ॥೨೨॥

ಗುರುದಶಾಫಲ:- ಗುರು ದಶಾಕಾಲದಲ್ಲಿ ವಸ್ತ್ರ, ಉಡುಪು, ಜ್ಞಾನ ಇತ್ಯಾದಿ ಲಭಿಸುತ್ತದೆ. ಸೇವಕಾದಿ ಪರಿವಾರದಿಂದ ಕೂಡಿದವನು ಆಗುತ್ತಾನೆ. ಮಾನಸನ್ಮಾನ ಮತ್ತು ಸ್ಥಾನ ಲಭಿಸುತ್ತದೆ. ಸಂತಾನಸುಖ, ಧನಸಂಪತ್ತು ಮತ್ತು ಮಿತ್ರರನ್ನು ಪಡೆಯುತ್ತಾನೆ. ಸಾತ್ವಿಕ ಮತ್ತು ಬೋಧಪ್ರದ ವಾದದಿಂದ ಪೂಜಿಸಲ್ಪಡುತ್ತಾನೆ. ತನ್ನ ಗುರು-ಹಿರಿಯರನ್ನು ಕಳಕೊಳ್ಳುತ್ತಾನೆ. ಕಿವಿರೋಗ ಮತ್ತು ಕಫವ್ಯಾಧಿಗಳಿಂದ ಪೀಡಿಸಲ್ಪಡುತ್ತಾನೆ.

ರವಿತನಯದಶಾಯಾಂ ರಾಷ್ಟ್ರಪೀಡಾಪ್ರಹಾರಪ್ರತಿಜನಿತವಿಭೂತಿ: ಪ್ರೇಷ್ಯವೃದ್ಧಾಂಗನಾಪ್ತಿ: । ಪಶುಮಹಿಷವೃಷಾಪ್ತಿ: ಪುತ್ರದಾರಪ್ರಪೀಡಾ ಪವನಕಫಗುದಾರ್ತಿ: ಪಾದ-ಹಸ್ತಾಂಗತಾಪ: ॥೨೩॥

ಶನಿದಶಾಫಲ:- ಶನಿದಶಾಕಾಲದಲ್ಲಿ ಯುದ್ಧ, ಜಗಳ, ಗಲಭೆ ಮೊದಲಾದವುಗಳಿಂದ ಧನಗಳಿಸುತ್ತಾನೆ. ಸೇವಕರು, ವೃದ್ಧಸ್ತ್ರೀ, ದನ, ಎಮ್ಮೆ, ಮತ್ತು ಎತ್ತು, ಲಭಿಸುತ್ತದೆ. ಹೆಂಡತಿ, ಮಕ್ಕಳಿಗೆ ಪೀಡೆ, ವಾತ, ಕಫ ಮತ್ತು ಮೂಲವ್ಯಾಧಿಯಿಂದ ಪೀಡಿಸಲ್ಪಡುತ್ತಾನೆ. ಕಾಲು, ಕೈ ಮತ್ತು ಇತರ ಅಂಗಗಳಲ್ಲಿ ಉರಿಯಿಂದ ಪೀಡಿಸಲ್ಪಡುತ್ತಾನೆ.

ಶಶಿತನಯದಶಾಯಾಂ ಶಶ್ವದಾಚಾರ್ಯಸಿದ್ಧಿರ್ದ್ವಿಜಜನಿತಧನಾಪ್ತಿ: ಕ್ಷೇತ್ರಗೋವಾಜಿ-ಲಾಭ; । ಮನುವರಸುರಪೂಜಾ ವಿತ್ತಸಂಘಾತಸಿದ್ಧಿ: ಪ್ರಭವತಿ ಮರುದುಷ್ಣಶ್ಲೇಷ್ಮ ರೋಗಪ್ರಪೀಡಾ ॥೨೪॥

ಬುಧದಶಾಫಲ:- ಬುಧದಶಾಕಾಲದಲ್ಲಿ ಉತ್ತಮ ಗುರು ಪ್ರಾಪ್ತಿ, ಬ್ರಾಹ್ಮಣರಿಂದ ಧನ ಲಾಭ, ಭೂಮಿ, ದನ, ಕುದುರೆ ಲಭಿಸುತ್ತದೆ. ಶ್ರೇಷ್ಠರಾಜ ಮತ್ತು ದೇವತಾರಾಧನೆ ಯಿಂದ ಧನಸಂಚಯ ಆಗುತ್ತದೆ. ತ್ರಿದೋಷಜನಿತ ವ್ಯಾಧಿಯಿಂದ ಪೀಡಿಸಲ್ಪಡುತ್ತಾನೆ.

ಶಿಖಿಜನಿತದಶಾಯಾಂ ಶೋಕಮೋಹೋಽಂಗನಾಭಿ: ಪ್ರಭುಜನಪರಿಪೀಡಾ ವಿತ್ತ-ನಾಶೋಽಪರಾಧ: ಪ್ರಭವತಿ ತನುಭಾಜಾಂ ಪ್ರೋಷಣಂ ಸ್ವೀಯದೇಶಾದ್ದಶನ ಚರಣ-ರೋಗ: ಶ್ಲೇಶ್ಮ ಸಂತಾಪನಂ ಚ ॥೨೫॥

ಕೇತುದಶಾಫಲ:- ಕೇತುದಶಾಕಾಲದಲ್ಲಿ ಸ್ತ್ರೀವ್ಯಾಮೋಹ ದಿಂದ ದು:ಖ ಸಂಭವಿಸುತ್ತದೆ. ಆಢ್ಯಮಹನೀಯರಿಂದ ಪೀಡೆ ಮತ್ತು ಧನನಾಶ ಆಗುತ್ತದೆ. ಪರರಿಗೆ ಅನ್ಯಾಯ ಮಾಡುತ್ತಾನೆ. ಸ್ವದೇಶತ್ಯಾಗ ಮಾಡಬೇಕಾಗುತ್ತದೆ. ಹಲ್ಲು ಮತ್ತು ಕಾಲಿನ ರೋಗದಿಂದ ಹಾಗೂ ಕಫದೋಷದಿಂದ ಪೀಡಿಸಲ್ಪಡುತ್ತಾನೆ.

ಭೃಗುತನಯದಶಾಯಾಮಂಗನಾರತ್ನವಸ್ತ್ರದ್ಯುತಿನಿಧಿಧನಭೂಷಾವಾಜಿಶಯ್ಯಾ-ಸನಾಪ್ತಿ: । ಕ್ರಯಕೃಷಿಜಲಯಾನಪ್ರಾಪ್ತವಿತ್ತಾಗಮೋ ವಾ ಭವತಿ ಗುರು-ವಿಯೋಗೋ ಬಾಂಧವಾರ್ತಿರ್ಮನೋರುಕ್ ॥೨೬॥

ಶುಕ್ರದಶಾಫಲ:- ಶುಕ್ರದಶಾಕಾಲದಲ್ಲಿ ಸ್ತ್ರೀ, ರತ್ನ, ವಸ್ತ್ರ, ಕಾಂತಿ, ನಿಧಿ, ಧನ, ಆಭರಣ, ಕುದುರೆ, ಹಾಸಿಗೆ, ಆಸನ ಮೊದಲಾದವು ಲಭಿಸುತ್ತದೆ. ಕ್ರಯ-ವಿಕ್ರಯ, ಕೃಷಿ-ಬೇಸಾಯ, ಜಲಪ್ರಯಾಣ ಇತ್ಯಾದಿಗಳಿಂದ ಧನ ಲಭಿಸುತ್ತದೆ. ಗುರು-ಹಿರಿಯರ ವಿಯೋಗ, ಬಂಧುಬಳಗದವರಿಗೆ ರೋಗ ಪೀಡೆ ಮತ್ತು ಮಾನಸಿಕ ಪೀಡೆ ಸಂಭವಿಸುತ್ತದೆ.

ದಶಾಭುಕ್ತಿಫಲಾಧ್ಯಾಯ-೨೦

ಭಾವೇಶ್ವರೇಣ ಪ್ರಬಲೇನ ಯೇನ ಯದ್ಯತ್ಫಲಂ ಹೀನಬಲೇನ ಯೇನ ।
ಯದಾನುಭೋಕ್ತವ್ಯಮನನ್ಯಸಮ್ಯಕ್ಸಂಸೂಚಯಿಷ್ಯತ್ಯಥ ಸಂಗ್ರಹೇಣ ॥೧॥

ಬಲಿಷ್ಠ ಭಾವಾಧಿಪತಿ ಅಥವಾ ಬಲಹೀನ ಭಾವಾಧಿಪತಿ ನೀಡುವ ಶುಭಾಶುಭಫಲ ವಿಚಾರವನ್ನು ಈ ಅಧ್ಯಾಯದಲ್ಲಿ ಗ್ರಂಥಕರ್ತನು ವಿವರಿಸುತ್ತಾನೆ.

ಲಗ್ನೇ ಬಲಿಷ್ಠೇ ಜಗತಿ ಪ್ರಭುತ್ವಂ ಸುಖಸ್ಥಿತಿಂ ದೇಹಬಲಂ ಸುವರ್ಚ: । ಉಪ-ರ್ಯುಪರ್ಯಭ್ಯುದಯಾಭಿವೃದ್ಧಿಂ ಪ್ರಾಪ್ನೋತಿ ಬಾಲೇಂದುವದೇಷಜಾತ: ॥

ಲಗ್ನಾಧಿಪತಿ ದಶಾಫಲ:- ಲಗ್ನಾಧಿಪತಿಯು ಬಲಿಷ್ಠನಾದರೆ ತನ್ನ ದಶಾಕಾಲದಲ್ಲಿ ಅಧಿಕಾರ, ಸುಖಮಯ ಅಸ್ತಿತ್ವ, ಶಾರೀರಿಕ ಬಲ, ವರ್ಚಸ್ಸು, ವೃದ್ಧಿ ಚಂದ್ರನಂತೆ ನಿರಂತರ ಅಭಿವೃದ್ಧಿಯನ್ನು ನೀಡುತ್ತಾನೆ.

ವಾಕ್ಯೇಽರ್ಥನಾಥಸ್ಯ ಕುಟುಂಬಸಿದ್ಧಿಂ ಸತ್ಪುತ್ರಿಕಾಪ್ತಿಂ ಸುಖಿಭೋಜನಂ ಚ । ಪ್ರಾಪ್ನೋತಿ ವಾಗ್ಜೀವಿಕಯಾ ಧನಾನಿ ವಕ್ತಾ ಸದುಕ್ತಿಂ ಸದಸಿ ಪ್ರಶಸ್ತಾಮ್ ॥೩॥

ಧನಾಧಿಪತಿ ದಶಾಫಲಃ- ದ್ವಿತೀಯಾಧಿಪತಿಯು ದಶಾಕಾಲದಲ್ಲಿ ಕುಟುಂಬಸುಖ, ಸದ್ಗುಣವಂತಳಾದ ಮಗಳ ಜನನ, ಹಿತವಾದಭೋಜನ, ಲಭಿಸುತ್ತದೆ. ವಾಕ್‌ಚತುರತೆಯಿಂದ ಧನಪ್ರಾಪ್ತಿ, ಹಿತೋಕ್ತಿಗಳನ್ನು ಬೋಧಿಸುವವನು ಮತ್ತು ಪ್ರಶಸ್ತನು ಆಗುತ್ತಾನೆ.

ಶೌರ್ಯೇ ಸವೀರ್ಯೇ ಸಸಹಜಾನುಕೂಲ್ಯಂ ಸಂತೋಷವಾರ್ತಾಶ್ರವಣಂ ಚ ಶೌರ್ಯಮ್ । ಸೇನಾಪತಿತ್ವಂ ಲಭತೇಽಭಿಮಾನಂ ಜನಾಶ್ರಯಂ ಸದ್ಗುಣಭಾಜನತ್ವಮ್ ॥೪॥

ತೃತೀಯಾಧಿಪತಿ ದಶಾಫಲಃ- ಬಲಿಷ್ಠ ತೃತೀಯಾಧಿಪತಿಯು ದಶಾಕಾಲದಲ್ಲಿ ಸಹೋದರರಿಂದ ಸಹಾಯ, ಸುವಾರ್ತೆ, ಸಾಹಸಕಾರ್ಯ, ಸೇನಾಧಿಪತ್ಯ, ಅಭಿಮಾನ, ಜನರ ಬೆಂಬಲ, ಮತ್ತು ಸದ್ಗುಣಗಳಿಂದ ಕೂಡಿದವನು ಆಗುತ್ತಾನೆ.

ಬಂಧೂಪಕಾರಂ ಕೃಷಿಕರ್ಮಸಿದ್ಧಿಂ ಸ್ತ್ರೀಸಂಗಮಂ ವಾಹನಲಾಭಮೇತಿ ।
ಕ್ಷೇತ್ರಂ ಗೃಹಂ ನೂತನಮರ್ಥಸಿದ್ಧಿಂ ಸ್ಥಾನಪ್ರಶಸ್ತಂ ಚ ಸುಖೇಶದಾಯೇ ॥

ಚತುರ್ಥಾಧಿಪತಿ ದಶಾಫಲಃ- ಚತುರ್ಥಾಧಿಪತಿಯು ದಶಾಕಾಲದಲ್ಲಿ ಸಂಬಂಧಿಕರಿಗೆ ಸಹಾಯ ಕೃಷಿ–ಬೇಸಾಯದಲ್ಲಿ ಯಶಸ್ಸು, ಸ್ತ್ರೀಯರ ಸಹವಾಸ, ವಾಹನಲಾಭ, ಭೂಮಿ, ನೂತನಗೃಹ, ಧನ, ಶ್ರೇಷ್ಠವಾದ ಸ್ಥಾನಪ್ರಾಪ್ತಿ ಲಭಿಸುತ್ತದೆ.

ಪುತ್ರಪ್ರಾಪ್ತಿಂ ಬಂಧುವಿಲಾಸಂ ನೃಪತೀನಾಂ ಸಾಚಿವ್ಯಂ ವಾ ಧೀಶದಶಾಯಾಂ ಬಹುಮಾನಮ್ । ಪ್ರಾಜ್ಯೈರ್ಭಾಜ್ಯೈರ್ಮೃಷ್ಟಮಿಹಾಶ್ನಾತಿ ದದಾತಿ ಶ್ರೇಯಸ್ಕಾರ್ಯಂ ಸಜ್ಜನಶಸ್ತಂ ಸ ವಿದಧ್ಯಾತ್ ॥೬॥

ಪಂಚಮಾಧಿಪತಿ ದಶಾಫಲಃ- ಪಂಚಮಾಧಿಪತಿಯು ದಶಾಕಾಲದಲ್ಲಿ ಪುತ್ರಪ್ರಾಪ್ತಿ, ಬಂಧು ಜನರೊಂದಿಗೆ ವಿಲಾಸ, ರಾಜಮಂತ್ರಿ ಪದವಿ, ಮಾನ–ಸನ್ಮಾನ, ಉತ್ತಮ ಆಹಾರ ಹಾಗೂ ಅನ್ನದಾನ ಮಾಡುತ್ತಾನೆ. ಶ್ರೇಯಸ್ಕರ ಕಾರ್ಯಗಳಿಂದ ಸಜ್ಜನರ ಮೆಚ್ಚಿಗೆ ಗಳಿಸುತ್ತಾನೆ.

ರಿಪೂನ್ನಿಹಂತಿ ಸಾಹಸ್ಯೈರರೀಶ್ವರಸ್ಯ ವತ್ಸರೇ । ಅರೋಗತಾ ಮುದಾರತಾಮಭ್ಯೃಷ್ಯತಾಮತಿಶ್ರಿಯಮ್ ॥೭॥

ಷಷ್ಠಾಧಿಪತಿ ದಶಾಫಲಃ- ಷಷ್ಠಾಧಿಪತಿಯು ದಶಾಕಾಲದಲ್ಲಿ ಸಾಹಸದಿಂದ ಶತ್ರುಗಳನ್ನು ನಾಶಮಾಡುತ್ತಾನೆ. ಆರೋಗ್ಯ, ಉದಾರತೆ, ಉತ್ತಮ ಅಭಿವೃದ್ಧಿ ಹೊಂದಿ ಮೆರೆಯುತ್ತಾನೆ.

ಸಂಪಾದ್ಯ ವಸ್ತ್ರಾಭರಣಾನಿ ಶಯ್ಯಾಂ ಪ್ರೀತೋ ರಮಣ್ಯಾ ರಮತೇಽತಿವೀರ್ಯಃ । ಕರೋತಿ ಕಲ್ಯಾಣಮಹೋತ್ಸವಾದೀನ್ ಸಂತೋಷಯಾತ್ರಾಂ ಚ ಮದೇಶದಾಯೇ॥

ಸಪ್ತಮಾಧಿಪತಿ ದಶಾ ಫಲಃ- ಸಪ್ತಮಾಧಿಪತಿಯು ದಶಾಕಾಲದಲ್ಲಿ ವಸ್ತ್ರ, ಆಭರಣ, ಹಾಸಿಗೆ, ಪ್ರೇಮ ಸ್ತ್ರೀಸುಖ, ಲಭಿಸುತ್ತದೆ. ಬಲಾಢ್ಯನು, ವಿವಾಹಾದಿ ಶುಭಸಮಾರಂಭ, ಸಂತೋಷ, ಯಾತ್ರೆ, ಇತ್ಯಾದಿ ಜರಗುತ್ತವೆ.

ಋಣವಿಮೋಚನಮುಚ್ಛ್ರಿತಿಮಾತ್ಮನಃ ಕಲಹಕೃತ್ಯನಿವೃತ್ತಿಮುಪೈತಿ ಸಃ ।
ಮಹಿಷಪಶ್ವಜಭೃತ್ಯಜನಾಗಮಂ ಮಯಸಿರಂಧ್ರಪತೇರ್ಬಲಶಾಲಿನಃ ॥೯॥

ಅಷ್ಟಮನಾಥಿಪ ದಶಾಫಲ:- ಬಲಿಷ್ಟನಾದ ಅಷ್ಟಮಾಧಿಪತಿಯ ದಶಾಕಾಲದಲ್ಲಿ ಸಾಲ ಬಿಡುಗಡೆ, ಉನ್ನತಿ, ಕಲಹದಿಂದ ನಿವೃತ್ತಿ, ಎಮ್ಮೆ, ಆಡು, ಪಶು, ಸೇವಕರು ಮೊದಲಾದವು ಲಭಿಸುತ್ತದೆ.

ಸ್ತ್ರೀ ಪುತ್ರಪೌತ್ರೈಃ ಸಹಬಂಧುವರ್ಗೈರ್ಭಾಗ್ಯಂ ಶ್ರಿಯಂ ಚಾನುಭವತ್ಯಜಸ್ರಮ್ । ಶ್ರೇಯಾಂಸಿ ಕಾರ್ಯಾಣ್ಯವನೀಶಪೂಜಾಂ ಭಾಗ್ಯೇಶದಾಯೇ ದ್ವಿಜದೇವಭಕ್ತಿಮ್ ॥೧೦॥

ಭಾಗ್ಯಾಧಿಪತಿ ದಶಾಫಲ:- ಭಾಗ್ಯಾಧಿಪತಿಯ ದಶಾಕಾಲದಲ್ಲಿ ಸ್ತ್ರೀ ಪುತ್ರ, ಮೊಮ್ಮಕ್ಕಳು ಮತ್ತು ಬಂಧು ಬಾಂಧವರಿಂದ ಕೂಡಿದವನು, ಭಾಗ್ಯವಂತನಾಗಿ ಅಭಿವೃದ್ಧಿಯನ್ನು ಹೊಂದುತ್ತಾನೆ. ಸುಖ-ಸಂಪತ್ತಿನಿಂದ ಕೂಡಿದವನು, ಸತ್ಕರ್ಮ-ಸದಾಚಾರವಂತನು, ರಾಜರಿಂದ ಪೂಜಿತನು, ಮತ್ತು ದೇವ-ಬ್ರಾಹ್ಮಣರಲ್ಲಿ ಭಕ್ತಿಉಳ್ಳವನು ಆಗುತ್ತಾನೆ.

ಯತ್ಕಾರ್ಯಮಾರಬ್ಧಮುಪೈತ್ಯನೇನ ತಸ್ಯೈವ ಸಿದ್ಧಿಂ ಸುಖಜೀವನಂ ಚ । ಕೀರ್ತಿಂ ಪ್ರತಿಷ್ಠಾಂ ಕುಶಲಪ್ರವೃತ್ತಿಂ ಮಾನೋನ್ನತಿಂ ಕರ್ಮಪತೇರ್ದಶಾಯಾಮ್ ॥೧೧॥

ದಶಾಮನಾಧಿಪತಿ ದಶಾಫಲ:- ದಶಮಾಧಿಪತಿಯ ದಶಾಕಾಲದಲ್ಲಿ ಕೈಕೊಂಡ ಸಕಲ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುತ್ತಾನೆ. ಸುಖಮಯಬಾಳ್ವೆ, ಕೀರ್ತಿ, ಸ್ಥಿರವಾದ ಸಂಪತ್ತು ಗೌರವ ಉಳ್ಳವನು, ವ್ಯವಹಾರಕುಶಲನು, ಸ್ಥಾನ-ಮಾನ, ಉನ್ನತಿ, ಇತ್ಯಾದಿ ಹೊಂದುತ್ತಾನೆ.

ಐಶ್ವರ್ಯಮವ್ಯಾಹತಮಿಷ್ಟಬಂಧುಸಮಾಗಮಂ ಭೃತ್ಯಜನಾಂಶ್ಚ ದಾಸಾನ್ । ಸಂಸಾರಸೌಭಾಗ್ಯಮಹೋದಯಂ ಚ ಲಭೇತ ಲಾಭಾಧಿಪತೇರ್ದಶಾಯಾಮ್ ॥೧೨॥

ಲಾಭಾಧಿಪತಿ ದಶಾಫಲ:- ಲಾಭಾಧಿಪತಿಯ ದಶಾಕಾಲದಲ್ಲಿ ಆತಂಕವಿಲ್ಲದೆ, ನಿರಂತರ ಐಶ್ವರ್ಯ ಲಭಿಸುತ್ತದೆ. ಇಷ್ಟ ಜನರೊಂದಿಗೆ ಬಂಧು-ಬಾಂಧವರೊಂದಿಗೆ ಸಮಾಗಮ, ಸೇವಕರು, ಲೌಕಿಕಸುಖ, ಭಾಗ್ಯೋದಯ, ಉನ್ನತಿ ಸಂಭವಿಸುತ್ತದೆ.

ವ್ಯಯೇಶಿತುರ್ವ್ಯಯಮೃತಿವ್ಯಯಂ ಕರೋತಿ ಸಜ್ಜನೇ ।
ಅಘೌಘನಾಶಿನೀಂ ಶುಭಕ್ರಿಯಾಂ ಮಹೀಶಮಾನ್ಯತಾಮ್ ॥೧೩॥

ವ್ಯಯಾಧಿಪತಿ ದಶಾಫಲ:- ವ್ಯಯಾಧಿಪತಿಯ ದಶಾಕಾಲದಲ್ಲಿ ಸತ್ಕರ್ಮ ಸದ್ವಿನಿಯೋಗ, ಶುಭಕಾರ್ಯಗಳಿಂದ ಪಾಪದೋಷ ವಿಮೋಚನೆ, ರಾಜನಿಂದ ಸನ್ಮಾನಿಸಲ್ಪಡುತ್ತಾನೆ.

ವಕ್ರಗಸ್ಯ ನಿಜತುಂಗಸುಹೃತ್ಸುಸ್ಥಾನಗಸ್ಯ ದಶಾಫಲಮೇವಮ್ ।
ಶತ್ರುನೀಚಗೃಹಮೌಢ್ಯಷಡಂತ್ಯಚ್ಛಿದ್ರಗಸ್ಯ ತು ಫಲಾನ್ಯಪಿ ವಕ್ಷ್ಯೇ ॥೧೪॥

ಈ ವರೆಗೆ ಹೇಳಿದ ದಶಾಫಲಗಳು, ವಕ್ರ, ಸ್ವಕ್ಷೇತ್ರ, ಉಚ್ಚ, ಮಿತ್ರಕ್ಷೇತ್ರ ಅಥವಾ ಸುಸ್ಥಾನ ಸ್ಥಿತಗ್ರಹರಿಗೆ ಅನ್ವಯಿಸುತ್ತದೆ. ಇನ್ನು ಮುಂದೆ ಶತ್ರು, ನೀಚ, ಅಸ್ತ, ಷಷ್ಠ, ಅಷ್ಟಮ, ವ್ಯಯ ಭಾವಸ್ಥಿತ ಗ್ರಹರ ದಶಾಫಲಗಳನ್ನು ಹೇಳುತ್ತಾನೆ.

ದುಃಸ್ಥೇ ಲಗ್ನಪತೌ ನಿರೋಧನಮುಪೈತ್ಯಜ್ಞಾತವಾಸಂ ಭಯಮ್ ವ್ಯಾಧ್ಯಾಧೀನ್
ಪರಕ್ರಿಯಾಭಿಗಮನಂ ಸ್ಥಾನಚ್ಯುತಿಂ ಚಾಪದಮ್ । ಜಾಡ್ಯಂ ಸಂಸದಿ ವಾಕ್ಕುಟುಂ
ಬ ಚಲನಂ ದುಷ್ಪತ್ರಿಕಾಂ ದೃಗ್ರುಜಂ ವಾಗ್ದೋಷಂ ದ್ರವಿಣವ್ಯಯಂ ನೃಪಭಯಂ
ದುಃಸ್ಥೇ ದ್ವಿತೀಯಾಧಿಪೇ ॥೧೫॥

ಲಗ್ನಾಧಿಪತಿಯು ದುಃಸ್ಥಾನದಲ್ಲಿ (6,8,12,) ಇದ್ದರೆ, ತನ್ನ ದಶಾಕಾಲದಲ್ಲಿ ಜಾತಕನ ಪ್ರಗತಿಗೆ ಅಡ್ಡಿ ಆತಂಕಗಳು ಅಥವಾ ಬಂಧನ, ಅಜ್ಞಾತವಾಸ, ಭಯ, ರೋಗಗಳು, ಅಶಾಂತಿ, ಕ್ರಿಯಾಕರ್ಮದಲ್ಲಿ ಭಾಗಿ, ಸ್ಥಾನನಷ್ಟ, ವಿಪತ್ತು ಸಂಭವಿಸುತ್ತದೆ.

ದುಃಸ್ಥಾನಸ್ಥಿತ ಧನಾಧಿಪತಿಯ ದಶಾಕಾಲದಲ್ಲಿ ಜಾತಕನು ಸಭೆ ಸಮಾರಂಭಗಳಲ್ಲಿ ಮೂರ್ಖನಂತೆ ವರ್ತಿಸುತ್ತಾನೆ. ಕೊಟ್ಟಮಾತಿನಂತೆ ನಡೆಯದವನು, ಕುಟುಂಬೀಯರಿಗೆ ವಂಚಿಸುವವನು, ಹೀನಪತ್ರ ಬರೆಯುವವನು, ಕಣ್ಣಿನವ್ಯಾಧಿಗಳಿಂದ ಪೀಡಿತನು, ವಾಗ್ದೋಷಉಳ್ಳವನು, ಅನಾವ್ಯಯಮಾಡುವವನು, ರಾಜಭಯಉಳ್ಳವನು ಆಗುತ್ತಾನೆ

ದುಶ್ಚಿಕ್ಯಾಧಿಪತೌ ಸಹೋದರಮೃತಿಂ ಕಾರ್ಯೇ ದುರಾಲೋಚನಾಮಂತಃ ಶತ್ರುನಿ-
ಪೀಡನಂ ಪರಿಭವಂ ತದ್ಗರ್ವಭಂಗಂ ವದೇತ್ । ಮಾತೃಕ್ಲೇಶಮರಿಷ್ಟಮಿಷ್ಟಸುಹೃದಾಂ
ಕ್ಷೇತ್ರಗೃಹೋಪಪ್ಲುತಿಂ ಪಶ್ವಶ್ವಾದಿವಿನಾಶನಂ ಜಲಭಯಂ ಪಾತಾಲನಾಥೇಽಬಲೇ ॥೧೬॥

ದುಃಸ್ಥಾನಸ್ಥಿತ ತೃತೀಯಾಧಿಪತಿಯ ದಶಾಕಾಲದಲ್ಲಿ ಸಹೋದರನಾಶ, ದುರಾಲೋಚನೆಯಿಂದ ಕೂಡಿದಕಾರ್ಯ, ಗುಪ್ತಶತ್ರುಗಳಿಂದ ಪೀಡೆ, ಪರಾಭವ, ಗರ್ವಭಂಗ ಸಂಭವಿಸುತ್ತದೆ.

ಬಲಹೀನನಾದ ಚತುರ್ಥಾಧಿಪತಿಯ ದಶಾಕಾಲದಲ್ಲಿ ತಾಯಿಯು ದುಃಖಪೀಡಿತಳು ಆಗುತ್ತಾಳೆ. ಇಷ್ಟಮಿತ್ರರಿಗೆ ಅರಿಷ್ಟ, ಭೂಮಿ, ಗೃಹ ಇತ್ಯಾದಿಗಳಿಗೆ ಹಾನಿ. ಪಶುಸಂಪತ್ತಿನ ನಾಶ, ಜಲಭಯ ಸಂಭವಿಸುತ್ತದೆ.

ಹೀನೋರ್ಜೇ ಪ್ರತಿಭಾಪತೌ ಸುತಮೃತಿರ್ಬುದ್ಧಿಭ್ರಮಂ ವಂಚನಾಮಧ್ವಾನಂ
ಹ್ಯುದರಾಮಯಂ ನರಪತೇಃ ಕೋಪಂ ಸಶಕ್ತಿಕ್ಷಯಮ್ । ಚೋರಾದ್ಭೀತಿಮನರ್ಥ-
ತಾಂ ಚ ದಮನಂ ರೋಗಾನ್ ಬಹೂಂದುಷ್ಕೃತಿಂ ಭೃತ್ಯತ್ವಂ ಲಭತೇಽಪಮಾನ-
ಮಯಶಃ ಷಷ್ಠೇಶದಾಯೇ ವ್ರಣಮ್ ॥೧೭॥

ಬಲಹೀನನಾದ ಪಂಚಮಾಧಿಪತಿಯ ದಶಾಕಾಲದಲ್ಲಿ ಪುತ್ರಮರಣ, ಬುದ್ಧಿಭ್ರಮೆ, ವಂಚಿಸಲ್ಪಡುವುದು, ಅನಾವಶ್ಯಕ ಸಂಚಾರ ಅಥವಾ ಪ್ರಯಾಣ, ಉದರವ್ಯಾಧಿಗಳು, ರಾಜಕೋಪ ಮತ್ತು ಸ್ವಶಕ್ತಿಯನಾಶ ಸಂಭವಿಸುತ್ತದೆ.

ಬಲಹೀನನಾದ ಷಷ್ಠಾಧಿಪತಿಯ ದಶಾಕಾಲದಲ್ಲಿ ಕಳ್ಳರಭಯ, ಪ್ರತಿಕೂಲವಾತಾವರಣ, ಕಾರ್ಯಹಾನಿ, ವಿಪತ್ತಿ, ಅಥವಾ ಅನಿಷ್ಟಫಲಗಳು ಸಂಭವಿಸುತ್ತವೆ. ರೋಗಗಳನ್ನು ನಿಗ್ರಹಿಸುವುದು, ದುಷ್ಕರ್ಮಪ್ರವೃತ್ತಿ, ಸೇವಕವೃತ್ತಿ, ಅಪಮಾನ, ಅಪಜಯ ಮತ್ತು ವ್ರಣ ನೀಡುತ್ತಾನೆ.

ಜಾಮಾತುರ್ವ್ಯಸನಂ ಕಲತ್ರವಿರಹಂ ಸ್ತ್ರೀಹೇತ್ವನರ್ಥಾಗಮಂ ದ್ಯೂನೇಶೇ ವಿಬಲೇಽನೃ ಸತ್ಯಭಿರತಿಂ ಗುಹ್ಯಾಮಯಂ ಚಾಟನಮ್ । ರಂಧ್ರೇಶಾಯುಷಿ ಶೋಕಮೋಹಮ-ದಮಾತ್ಸರ್ಯಾದಿ ಮೂರ್ಛೋರ್ಜ್ಜಿತಿಂ ದಾರಿದ್ರ್ಯಂ ಭ್ರಮಣಂ ವದೇದಪಯಶೋ ವ್ಯಾಧೀನವಜ್ಞಾಂ ಮೃತಿಮ್ ॥೧೮॥

ಬಲಹೀನನಾದ ಸಪ್ತಮಾಧಿಪತಿಯ ದಶಾಕಾಲದಲ್ಲಿ ಅಳಿಯನಿಗೆ ದುಃಖ, ದಾಂಪತ್ಯ ವಿರಹ ಅಥವಾ ಪತ್ನಿಯನ್ನು ಕಳಕೊಳ್ಳುತ್ತಾನೆ. ಸ್ತ್ರೀ ಹೇತುವಿನಿಂದ ಸಂಕಷ್ಟಗಳು, ಅಸತ್ಯರತನು, ಗುಹ್ಯರೋಗಗಳು ಅಥವಾ ಗುಹ್ಯಸ್ಥಾನವಲ್ಲಿ ರೋಗಪೀಡೆ, ಮತ್ತು ಅನಾವಶ್ಯಕ ಸಂಚಾರ ಸಂಭವಿಸುತ್ತದೆ.

ಬಲಹೀನ ಅಷ್ಟಮಾಧಿಪತಿಯ ದಶಾಕಾಲದಲ್ಲಿ ಶೋಕ, ಮೋಹ, ಮದ, ಮತ್ಸರ ಇತ್ಯಾದಿ ಪೀಡೆ, ಮೂರ್ಛೆ, ದಾರಿದ್ರ್ಯ, ಅನಾವಶ್ಯಕ ಸಂಚಾರ, ಅಪಜಯ, ವ್ಯಾಧಿ, ತಿರಸ್ಕಾರ, ಮತ್ತು ಮರಣ ಸಂಭವಿಸುತ್ತದೆ.

ಪೂರ್ವೋಪಾಸಿತದೇವಕೋಪಮಶುಭಂ ಜಾಯಾತನೂಜಾಪದಂ ದೌಷ್ಕೃತ್ಯಂ ಸ್ವಗುರೋಃ ಪಿತುಶ್ಚ ನಿಧನಂ ದೈನ್ಯಂ ಶುಭೇ ದುರ್ಬಲೇ । ಯದ್ಯತ್ಕರ್ಮ ಕರೋತಿ ತತ್ತದಫಲಂ ಸ್ಯಾನ್ಮಾನಭಂಗೋ ನಭೋಭಾವೇ ದುರ್ಗುಣತಾಂ ಪ್ರವಾಸಮಶುಭಂ ದುರ್ವೃತ್ತಿಮಾಪನ್ನತಾಮ್ ॥೧೯॥

ಬಲಹೀನ ನವಮಾಧಿಪತಿಯ ದಶಾಕಾಲದಲ್ಲಿ ಹಿರಿಯರಿಂದ ಪೂಜಿಸಲ್ಪಡುವ (ಇಷ್ಟದೇವತೆ) ದೇವರ ಕೋಪ, ಅಶುಭ, ಹೆಂಡತಿ-ಮಕ್ಕಳಿಗೆ ಆಪತ್ತು, ದುಷ್ಕರ್ಮ ಪ್ರವೃತ್ತಿ, ಗುರು ಮತ್ತು ತಂದೆಯ ಮರಣ, ದೀನತೆ ಸಂಭವಿಸುತ್ತದೆ.

ಬಲಹೀನ ದಶಮಾಧಿಪತಿಯ ದಶಾಕಾಲದಲ್ಲಿ ಕೈಕೊಂಡ ಸಕಲ ಕಾರ್ಯಗಳಲ್ಲಿ ಅಸಫಲತೆ, ಮಾನಭಂಗ, ದುರ್ಗುಣ, ಪ್ರವಾಸ, ಅಶುಭಫಲ, ಕೆಟ್ಟಕರ್ಮಮಾಡುವುದರಿಂದ ಸಂಕಷ್ಟಗಳಿಂದ ಪೀಡಿತನು ಆಗುತ್ತಾನೆ.

ಶ್ರವಣಮಶುಭವಾಚಾಂ ಭ್ರಾತೃಕಷ್ಟಂ ಸುತಾರ್ತಿಂ ಭವಪವಯುಸಿ ದೈನ್ಯಂ ವಂಚನಂ ಕರ್ಣರೋಗಮ್ । ಬಹುರುಜಮಪಮಾನಂ ಬಂಧನಂ ಸರ್ವಸಂಪತ್ಕ್ಷಯಮುಪರಶಶೀವ್ಯಾಽಯಾತಿ ರಿಃಫೇಶದಾಯೇ ॥೨೦॥

ಬಲಹೀನ ಲಾಭಾಧಿಪತಿಯ ದಶಾಕಾಲದಲ್ಲಿ ಕೆಟ್ಟವಾರ್ತೆ ಅಥವಾ ಮಾತುಗಳನ್ನು ಕೇಳಬೇಕಾಗುತ್ತದೆ. ಸಹೋದರನಿಗೆ ಕಷ್ಟಗಳು, ಮಕ್ಕಳಿಗೆ ಅನಾರೋಗ್ಯ, ದರಿದ್ರತೆ, ವಂಚನೆ, ಮತ್ತು ಕಿವಿರೋಗಗಳು ಸಂಭವಿಸುತ್ತದೆ.

ಬಲಹೀನ ವ್ಯಯಾಧಿಪತಿಯ ದಶಾಕಾಲದಲ್ಲಿ ಹಲವು ರೋಗಗಳಿಂದ ಪೀಡಿಸಲ್ಪಡುತ್ತಾನೆ. ಅಪಮಾನ, ಬಂಧನ, ಸಕಲ ಸಂಪತ್ತು ಕೃಷ್ಣಪಕ್ಷದ ಚಂದ್ರನಂತೆ ಕ್ಷೀಣವಾಗುತ್ತದೆ.

ಸಂಜ್ಞಾಯಾಂ ಯದಗಾಚ್ಚ ಕಾರಕವಿಧಿಶ್ಲೋಕೇಷು ಯಜ್ಜಲ್ಪಿತಂ ಕರ್ಮಾಜೀವ-ನಿರೂಪಿತಂ ಫಲಮಿದಂ ಯದ್ರೋಗಚಿಂತಾವಿಧೌ । ಯದೃಸ್ಯೇಕ್ಷಣಯೋಗಸಂಭವ

ಫಲಂ ಭಾವೇಶಯೋಗೋದ್ಭವಂ ಭಾವೇಶೈರಪಿ ಭಾವಗೈರಪಿ ಫಲಂ ವಾಚ್ಯಂ ದಶಾಯಾಮಿಹ ॥೨೦॥

ಸಂಜ್ಞಾಧ್ಯಾಯದಲ್ಲಿ ಹೇಳಿದ ಮತ್ತು ಕಾರಕತ್ವಾದಿ ವಿಚಾರ, ಕರ್ಮಜೀವಫಲ. ರೋಗ ಚಿಂತೆ, ದೃಷ್ಟಿಫಲ. ಭಾವಫಲ, ಭಾವೇಶಫಲ, ಭಾವಸ್ಥಿತ ಗ್ರಹಫಲ. ಇತ್ಯಾದಿ ಸಕಲ ವಿಚಾರಗಳನ್ನು ಆಯಾಗ್ರಹದಶಾ ಕಾಲದಲ್ಲಿಯೂ ಚಿಂತಿಸಬೇಕು.

ವರ್ಗೋತ್ತಮಾಂಶಸ್ತದಶಾ ಶುಭಪ್ರದಾ ಮಿಶ್ರೈವ ಸಾ ಚಾಸ್ತಮಿತೇ ಚ ನೀಚಗೇ । ಮೃತ್ಯುವ್ಯಯಾರೀಶದಶಾಪಹಾರಯೋಸ್ತತ್ರ ಸ್ಥಿತಸ್ಯಾಪ್ಯಶುಭಂ ಫಲಂ ಭವೇತ್ ॥

1.ವರ್ಗೋತ್ತಮ ನವಾಂಶಸ್ಥಿತಗ್ರಹದಶೆಯು ಶುಭಪ್ರದ ಆಗಿರುತ್ತದೆ. 2.ಅಸ್ತ ಅಥವಾ ನೀಚಕ್ಷೇತ್ರಸ್ಥಿತ ಗ್ರಹನು ವರ್ಗೋತ್ತಮ ನವಾಂಶದಲ್ಲಿ ಇದ್ದರೆ, ಅವನದಶೆಯು ಮಿಶ್ರಫಲದಾಯಕ ಆಗಿರುತ್ತದೆ. 3. ದಶಾನಾಥ ಮತ್ತು ಭುಕ್ತಿನಾಥ, ಇಬ್ಬರೂ ದುಃಸ್ಥಾನದಲ್ಲಿದ್ದರೆ ಅಥವಾ ದುಃಸ್ಥಾನಾಧಿಪತಿಗಳಾದರೆ ಆಭುಕ್ತಿಫಲವು ಅಶುಭ ಆಗುತ್ತದೆ.

ಕ್ರೂರಗ್ರಹಸ್ಯೈವ ದಶಾಪಹಾರೇ ತ್ರಿಪಂಚಸಪ್ತರ್ಕ್ಷಪತೇರ್ವಿಪಾಕೇ । ತಥೈವ ಜನ್ಮಾಷ್ಟಮನಾಥಭುಕ್ತೌ ಚೋರಾರಿಪೀಡಾಂ ಲಭತೇsತಿದುಃಖಮ್ ॥೨೩॥

ಪಾಪಗ್ರಹನ ದಶಾಕಾಲದಲ್ಲಿ ವಿಪತ್ತಾರೆ, ಪ್ರತ್ಯರತಾರೆ ಮತ್ತು ವಧತಾರೆ (ಜನ್ಮನಕ್ಷತ್ರದಿಂದ 3, 5ಮತ್ತು 7ನೇ ನಕ್ಷತ್ರಾಧಿಪತಿ) ಯ ಅಧಿಪತಿಯ ಭುಕ್ತಿಯಲ್ಲಿ ಚಂದ್ರರಾಶ್ಯಾಧಿಪ ಮತ್ತು ಚಂದ್ರನಿಂದ ಅಷ್ಟಮಾಧಿಪತಿಯ ಭುಕ್ತಿಯಲ್ಲಿ ಕಳ್ಳರಿಂದ ಮತ್ತು ಶತ್ರುಗಳಿಂದ ಪೀಡೆ ಹಾಗೂ ದುಃಖ ಉಂಟಾಗುತ್ತದೆ.

ಶನೇಶ್ಚತುರ್ಥೀ ಚ ಗುರೋಸ್ತು ಷಷ್ಠೀ ದಶಾ ಕುಜಾಹ್ಯೋರ್ಯದಿ ಪಂಚಮೀ ಸಾ । ಕಷ್ಟಾ ಭವೇದ್ರಾಶ್ಯವಸಾನಭಾಗಸ್ಥಿತಸ್ಯ ದುಃಸ್ಥಾನಪತೇಸ್ತಥೈವ ॥೨೪॥

ಜನ್ಮಕಾಲದ ದಶೆಯಿಂದ ಪ್ರಾರಂಭಿಸಿ ನಾಲ್ಕನೇದಶೆ-ಶನಿದಶೆ, ಆರನೇದಶೆ-ಗುರುದಶೆ, ಐದನೇದಶೆ-ಕುಜ ಅಥವಾ ರಾಹುದಶೆ ಆದರೆ, ಆ ದಶೆಯು ಕಷ್ಟಕರ ಆಗುತ್ತದೆ. (ಮೃಗಶಿರಾ, ಚಿತ್ರಾ ಮತ್ತು ಧನಿಷ್ಠಾ ನಕ್ಷತ್ರಗಳಲ್ಲಿ ಜನಿಸಿದವರಿಗೆ ನಾಲ್ಕನೇದಶೆಯು ಶನಿದಶೆ, ಭರಣಿ, ಹುಬ್ಬಾ ಮತ್ತು ಪೂರ್ವಾಷಾಢಾ ನಕ್ಷತ್ರಗಳಲ್ಲಿ ಜನಿಸಿದವರಿಗೆ ಐದನೇ ದಶೆ ರಾಹುದಶೆ ಮತ್ತು ಆರನೇದಶೆ ಗುರುದಶೆ, ಅಶ್ವಿನಿ, ಮಘಾ ಮತ್ತು ಮೂಲಾ ನಕ್ಷತ್ರದಲ್ಲಿ ಜನಿಸಿದವರಿಗೆ ಐದನೇದಶೆ ಕುಜದಶೆ ಆಗಿರುತ್ತದೆ.) ಅದೇ ರೀತಿ ರಾಶಿಯ ಅಂತ್ಯಭಾಗ (30ನೇ)ದಲ್ಲಿರುವ ಗ್ರಹದಶೆ ಮತ್ತು ದುಃಸ್ಥಾನಾಧಿಪತಿಯ ದಶೆಯು ಕಷ್ಟಕರ ಆಗುತ್ತದೆ.

ಊರ್ಧ್ವಾಸ್ಯತುಂಗಭವನಸ್ಥಿತಭೂಮಿಜಸ್ಯ ಕರ್ಮಾಯಗಸ್ಯ ಹಿ ದಶಾವಿದಧಾತಿ ರಾಜ್ಯಮ್ । ಜಿತ್ವಾ ರಿಪೂನ್ವಿಪುಲವಾಹನಸೈನ್ಯಯುಕ್ತಾಂ ರಾಜ್ಯಶ್ರಿಯಂ ವಿತನುತೇs-ಧಿಕಮನ್ನದಾನಮ್ ॥೨೫॥

ಜನನ ಜಾತಕದಲ್ಲಿ ಕುಜನು ಊರ್ಧ್ವಮುಖರಾಶಿ ಅಥವಾ ತನ್ನಉಚ್ಚರಾಶಿ (ಮಕರ)ಯಲ್ಲಿ, ದಶಮ ಅಥವಾ ಏಕಾದಶ ಭಾವದಲ್ಲಿ ಇದ್ದರೆ ತನ್ನ ದಶಾಕಾಲದಲ್ಲಿ ರಾಜ್ಯವನ್ನು ನೀಡುತ್ತಾನೆ. ಜಾತಕನು ತನ್ನ ಶತ್ರುಗಳನ್ನು ಜಯಿಸಿ, ವಿಪುಲವಾದ ವಾಹನ, ಸೈನ್ಯ, ಸಂಪತ್ತು ಗಳಿಸಿ, ತುಂಬಾ ಜನರಿಗೆ ಅನ್ನದಾನ ಮಾಡುತ್ತಾನೆ.

ಸ್ವೋಚ್ಚಸ್ಥಿತೋ ಭೃಗುಸುತೋ ವ್ಯಯಕರ್ಮಗೋ ವಾ ಲಾಭೇsಪಿ ವಾsಸ್ತರಹಿತೋ ನ ಚ ಪಾಪಯುಕ್ತ: । ತಸ್ಯಾಬ್ದ ಪಾಕಸಮಯೇ ಬಹುರತ್ನಪೂರ್ಣೋ ಧೀಮಾನ್ವಿ– ಶಾಲವಿಭವೋ ಜಯತಿ ಪ್ರಶಸ್ತ: ॥೨೬॥

ಸ್ವಕ್ಷೇತ್ರ ಅಥವಾ ಉಚ್ಚದ ಶುಕ್ರನು ದ್ವಾದಶ, ಕರ್ಮ ಮತ್ತು ಲಾಭಭಾವದಲ್ಲಿ, ಅಸ್ತನಾಗದೆ, ಅಥವಾ ಪಾಪಗ್ರಹರೊಂದಿಗೆ ಯುತನಾಗದೆ ಇರಬೇಕು. ಈ ಶುಕ್ರನು ತನ್ನದಶಾಕಾಲದಲ್ಲಿ ಅನೇಕ ರತ್ನ, ಮೇಧಾವಿತನ, ಅತ್ಯಂತ ವೈಭವ, ಜಯ ಮತ್ತು ಕೀರ್ತಿ ನೀಡುತ್ತಾನೆ.

ನೀಚಾರಿಷಷ್ಠವ್ಯಯಸಂಶ್ರಿತಾ ಹಿ ಶುಭಾ: ಪ್ರಯಚ್ಛಂತ್ಯಶುಭಾನಿ ಸರ್ವೇ । ಶುಭೇ ತರಾಸ್ತ್ವೇಷು ಗತಾ: ಪ್ರಯಚ್ಛಂತ್ಯಮೋಘದು:ಖಾನಿದಶಾಸು ತೇಷಾಮ್ ॥೨೭॥

ಶುಭಗ್ರಹರು ನೀಚ, ಶತ್ರುಕ್ಷೇತ್ರ, ಷಷ್ಠ, ಅಷ್ಟಮ ಮತ್ತು ವ್ಯಯಭಾವದಲ್ಲಿ ಇದ್ದರೆ ತಮ್ಮದಶಾಕಾಲದಲ್ಲಿ ಅಶುಭಫಲವನ್ನು ನೀಡುತ್ತಾರೆ. ಪಾಪಗ್ರಹರು ಇದೇಸ್ಥಾನಗಳಲ್ಲಿ ಅತೀ ದು:ಖಾದಿ ಅಶುಭಫಲಗಳನ್ನು ತಮ್ಮದಶಾಕಾಲದಲ್ಲಿ ನೀಡುತ್ತಾರೆ.

ದಶೇಶಶತ್ರೋರರಿಗೇಹಭಾಜೋ ಲಗ್ನೇಶಶತ್ರೋರಪಿ ವಾsಥ ಭುಕ್ತೌ । ಶತ್ರೋ– ರ್ಭಯಂ ಸ್ಥಾನಭಯಂ ತದಾಸ್ಯ ಸ್ನಿಗ್ಧೋsಪಿ ಶತ್ರುತ್ವಮುಪೈತಿ ನೂನಮ್ ॥೨೮॥

ಭುಕ್ತಿನಾಥನು ದಶಾನಾಥನ ಶತ್ರುಗ್ರಹನಾದರೆ, ಷಷ್ಠಭಾವದಲ್ಲಿದ್ದರೆ, ಶತ್ರುಕ್ಷೇತ್ರದಲ್ಲಿದ್ದರೆ ಅಥವಾ ಲಗ್ನಾಧಿಪತಿಯ ಶತ್ರುಗ್ರಹನಾದರೆ, ಆ ಭುಕ್ತಿಕಾಲದಲ್ಲಿ ಶತ್ರುಭಯ, ಸ್ಥಾನಚ್ಯುತಿ, ಮಿತ್ರನಾದವನೂ ಶತ್ರು ಆಗುತ್ತಾನೆ.

ಯದ್ಭಾವಗ: ಪಾಕಪತಿರ್ದಶೇಶಾತ್ತದ್ಭಾವಜಾತಾನಿ ಫಲಾನಿ ಕುರ್ಯಾತ್ । ವಿಪ ಕ್ಷರಿ:ಫಾಷ್ಟಮಭಾವಗಶ್ಚೇದ್ದು:ಖಂ ವಿದಧ್ಯಾದಿತರತ್ರ ಸೌಖ್ಯಮ್ ॥೨೯॥

ಭುಕ್ತಿನಾಥನು, ದಶಾನಾಥನಿಂದ ಎಷ್ಟನೇ ಭಾವದಲ್ಲಿ ಇದ್ದಾನೆ ಎಂದು ಗಣಿಸಿ ತಿಳಿಯಬೇಕು. ಭುಕ್ತಿನಾಥನು ಈ ಸಂಖ್ಯಾತುಲ್ಯ ಭಾವಫಲವನ್ನು ತನ್ನಭುಕ್ತಿಯಲ್ಲಿ ನೀಡುತ್ತಾನೆ. ಭುಕ್ತಿನಾಥನು ದಶಾನಾಥನಿಂದ 6, 8, 12ರಲ್ಲಿ ಇದ್ದರೆ ದು:ಖವನ್ನು ನೀಡುತ್ತಾನೆ. ಮತ್ತು ಇನ್ನಿತರ ಸ್ಥಾನಗಳಲ್ಲಿ ಶುಭಫಲವನ್ನು ನೀಡುತ್ತಾನೆ.

ಸ್ವೋಚ್ಚತ್ರಿಕೋಣಸ್ವಹಿತಾರಿನೀಚೇ ಪೂರ್ಣಂ ತ್ರಿಪಾದಾರ್ಧಪದಾಲ್ಪಶೂನ್ಯಮ್ । ಕ್ರಮಾಚ್ಛುಭಂ ಚೇದಶುಭಂ ವಿಲೋಮಾನ್ಮೂಢೇ ಗ್ರಹೇ ನೀಚಸಮಂ ಫಲಂ ಸ್ಯಾತ್ ॥

ಶುಭಗ್ರಹನು ತನ್ನ ಉಚ್ಚರಾಶಿಯಲ್ಲಿ ಪೂರ್ಣಶುಭಫಲ, ಮೂಲತ್ರಿಕೋಣರಾಶಿ ಯಲ್ಲಿ ಮುಕ್ಕಾಲು, ಸ್ವಕ್ಷೇತ್ರದಲ್ಲಿ ಅರ್ಧ, ಮಿತ್ರಕ್ಷೇತ್ರದಲ್ಲಿ ಕಾಲು, ಶತ್ರುಕ್ಷೇತ್ರದಲ್ಲಿ ಅತೀ ಅಲ್ಪ ಮತ್ತು ನೀಚಕ್ಷೇತ್ರದಲ್ಲಿ ಶೂನ್ಯಫಲವನ್ನು ನೀಡುತ್ತಾನೆ. ಪಾಪಗ್ರಹರಿಗೆ

ಈ ನಿಯಮವನ್ನು ವ್ಯತ್ಯಮವಾಗಿ ತಿಳಿಯಬೇಕು ಅಸ್ತಗ್ರಹನು. ನೀಚರಾಶಿಸ್ಥಿತ ಗ್ರಹ ನಂತೆ ಫಲವನ್ನು ನೀಡುತ್ತಾನೆ.

ಶ್ಲೋಕ 30ರಲ್ಲಿ ನೀಚಕ್ಷೇತ್ರದ ಪಾಪಗ್ರಹರು ಶುಭಫಲವನ್ನು ಮತ್ತು ಉಚ್ಚದ ಪಾಪಗ್ರಹರು ಅಶುಭಫಲವನ್ನು ನೀಡುತ್ತಾರೆ ಎಂದು ಸಾರ. ಧನ-ಸಂಪತ್ತಿನ ವಿಚಾರ ದಲ್ಲಿ ನೀಚದ ಪಾಪರು ಅಧಿಕ ಧನಾದಿ ನೀಡುತ್ತಾರೆ. ಉಚ್ಚದ ಗ್ರಹರು ಸ್ಥಾನ, ಕೀರ್ತಿ. ಯಶಸ್ಸನ್ನು ನೀಡುತ್ತಾರೆ.

ಮಂದಮಾಂದ್ಯಗುಖರೇಶರಂಧ್ರಪಾಸ್ತನ್ನವಾಂಶಪತಯೋಽಪಿ ಯೇ ಗ್ರಹಾ: ।
ತೇಷು ದುರ್ಬಲದಶಾ ಮೃತಿಪ್ರದಾ ಕಷ್ಟಭೇ ಚರತಿ ಸೂರ್ಯನಂದನೇ ॥೩೧॥

ಶನಿ, ಮಾಂದಿ, ರಾಹು, ಖರದ್ರೇಕ್ಕಾಣಾಧಿಪತಿ (೨೨ನೇ ದ್ರೇಕ್ಕಾಣಾಧಿಪ) ಮತ್ತು ಅಷ್ಟಮಾಧಿಪತಿ, ಮತ್ತು ಈ ಗ್ರಹರನವಾಂಶಾಧಿಪತಿ, ಇವರಲ್ಲಿ ಬಲಹೀನನಾದ ವನ ದಶಾಕಾಲದಲ್ಲಿ, ಶನಿಯು ದು:ಸ್ಥಾನದಲ್ಲಿ ಸಂಚರಿಸುವ ಕಾಲ ಅವಸಾನ ಆಗುತ್ತದೆ.

ಮೃತೀಶನಾಥಸ್ಥಿತಭಾಂಶಕೇಶಯೋ: ಖರತ್ರಿಭಾಗೇಶ್ವರಯೋರ್ಬಲೀಯಸ: ।
ದಶಾಗಮೇ ಮೃತ್ಯುಪಯುಕ್ತಭಾಂಶಕತ್ರಿಕೋಣಗೇ ದೇವಗುರೌತನುಕ್ಷಯ: ॥೩೨॥

1.ಅಷ್ಟಮಾಧಿಪತಿಸ್ಥಿತ ರಾಶ್ಯಾಧಿಪತಿ ಮತ್ತು ನವಾಂಶಾಧಿಪತಿ. 2.ಖರದ್ರೇಕ್ಕಾ ಣಾಧಿಪತಿ ಇವರಲ್ಲಿ ಬಲಿಷ್ಠನಾದವನ ದಶಾಕಾಲದಲ್ಲಿ ಅಷ್ಟಮಾಧಿಪತಿಸ್ಥಿತ ರಾಶ್ಯಾಂಶದಲ್ಲಿ ಅಥವಾ ಅದರ ತ್ರಿಕೋಣರಾಶಿಯಲ್ಲಿ ಗುರು ಸಂಚಾರಕಾಲ ಮರಣಸೂಚಕ ಆಗಿರುತ್ತದೆ.

ಚತುಷ್ಟಯಸ್ಥಾ ಗುರುಜನ್ಮಲಗ್ನಪಾ ಭವಂತಿ ಮಧ್ಯೇ ವಯಸ: ಸುಖ-ಪ್ರದಾ: ।
ಕ್ರಮೇಣ ಪೃಷ್ಠೋಭಯ ಮಸ್ತಕೋದಯಸ್ಥಿತೋಽಂತ್ಯಮಧ್ಯಪ್ರಥಮೇಷು
ಪಾಕದಾ: ॥೩೩॥

ಗುರು, ಚಂದ್ರರಾಶ್ಯಾಧಿಪ ಮತ್ತು ಲಗ್ನಾಧಿಪತಿ, ಈ ಮೂವರು ಜನನಕಾಲದಲ್ಲಿ ಕೇಂದ್ರಗಳಲ್ಲಿ ಇದ್ದರೆ ಜಾತಕನ ಜೀವಿತದ ಮಧ್ಯಭಾಗವು ಸುಖಪ್ರದ ಆಗುತ್ತದೆ. ಪ್ರಷ್ಠೋ ದಯರಾಶಿಸ್ಥಿತಗ್ರಹರು ತಮ್ಮ ದಶಾಕಾಲದ ಅಂತ್ಯತ್ರಿಭಾಗದಲ್ಲಿ, ಉಭಯೋದಯರಾಶಿ ಸ್ಥಿತಗ್ರಹರು ಮಧ್ಯತ್ರಿಭಾಗದಲ್ಲಿ ಮತ್ತು ಶೀರ್ಷೋದಯ ರಾಶಿಸ್ಥಿತಗ್ರಹರು ಆದಿತ್ರಿ ಭಾಗದಲ್ಲಿ ಫಲಪ್ರದರು ಆಗುತ್ತಾರೆ. ಪ್ರಷ್ಠೋದಯರಾಶಿ-ಮೇಷ. ವೃಷಭ. ಕರ್ಕಟಕ. ಧನು ಮತ್ತು ಮಕರ, ಮೀನ ಉಭಯೋದಯರಾಶಿ, ಮತ್ತು ಇನ್ನಿತರ ರಾಶಿಗಳು ಶೀರ್ಷೋದಯರಾಶಿಗಳು ಆಗಿರುತ್ತವೆ.

ಯದ್ಭಾವಗೋ ಗೋಚರತೋ ವಿಲಗ್ನಾದ್ದಶೇಶ್ವರ: ಸ್ವೋಚ್ಚಸುಹೃದ್ಗೃಹಸ್ಥ: ।
ತದ್ಭಾವಪುಷ್ಟಿಂ ಕುರುತೇ ತದಾನೀಂ ಬಲಾನ್ವಿತಶ್ಚೇಜ್ಜನನೇಽಪಿ ತಸ್ಯ ॥೩೪॥

ದಶಾನಾಥನು ಗೋಚರದಲ್ಲಿ ಲಗ್ನಾದಿಯಾವ ಭಾವದಲ್ಲಿ ಸಂಚರಿಸುತ್ತಾನೋ, ಆ ಭಾವವು ದಶಾನಾಥನ ಉಚ್ಚ, ಸ್ವಕ್ಷೇತ್ರ ಅಥವಾ ಮಿತ್ರಕ್ಷೇತ್ರವಾದರೆ. ಆ ಭಾವಫಲದ ವೃದ್ಧಿಯನ್ನು ಮಾಡುತ್ತಾನೆ. ಆದರೆ ದಶಾನಾಥನು ಬಲಿಷ್ಠನು ಆಗಿರಬೇಕು.

ಬಲೋನಿತೋ ಜನ್ಮನಿ ಪಾಕನಾಥೋ ಮೌಢ್ಯಂ ಸ್ವನೀಚಂ ರಿಪುಮಂದಿರಂ ವಾ ।
ಪ್ರಾಪ್ತಶ್ಚ ಯದ್ಭಾವಮುಪೈತಿ ಚಾರಾತ್ತದ್ಭಾವನಾಶಂ ಕುರುತೇ ತದಾನೀಮ್ ॥

ದಶಾನಾಥನು ಬಲಹೀನನಾಗಿದ್ದರೆ, ಅಸ್ತ, ನೀಚ ಅಥವಾ ಶತ್ರುಕ್ಷೇತ್ರಗತನು ಆದರೆ, ಗೋಚರದಲ್ಲಿ ತಾನು ಸಂಚರಿಸುವ ಭಾವದ ಫಲವನ್ನು ನಾಶಮಾಡುತ್ತಾನೆ.

ದಶೇಶಸ್ಯ ತುಂಗೇ ಸುಹೃದ್ಭೇ ದಶೇಶಾತ್ ತ್ರಿಷಟ್ಕರ್ಮಲಾಭತ್ರಿಕೋಣಾಸ್ತಭೇಷು।
ಯದಾ ಚಾರಗತ್ಯಾ ಸಮಾಯಾತಿ ಚಂದ್ರ:ಶುಭಂ ಸಂವಿಧತ್ತೇಽನ್ಯಥಾ ಚೇದರಿಷ್ಟಮ್॥

ದಶಾನಾಥನ ಉಚ್ಚರಾಶಿ, ಮಿತ್ರರಾಶಿ, ದಶಾನಾಥನು ಸ್ಥಿತರಾಶಿಯಿಂದ ತೃತೀಯ ಷಷ್ಠ, ದಶಮ, ಏಕಾದಶ, ತ್ರಿಕೋಣ ಮತ್ತು ಸಪ್ತಮ ಭಾವದಲ್ಲಿ ಗೋಚರದ ಚಂದ್ರನು ಸಂಚರಿಸುವಾಗ ಶುಭಫಲವೂ, ಇನ್ನಿತರ ಭಾವಗಳಲ್ಲಿ ಚಂದ್ರನ ಚಾರವು ಅರಿಷ್ಟಕರ ಆಗಿರುತ್ತದೆ.

ಪಾಕಪ್ರಭುರ್ಗೋಚರತಃ ಸ್ವನೀಚಂ ಮೌಢ್ಯಂ ಯದಾಯಾತಿ ವಿಪಕ್ಷಭಂ ವಾ ।
ಕಷ್ಟಂ ವಿದಧ್ಯಾತ್ಸ್ವಗೃಹಂ ಸ್ವತುಂಗಂ ವಕ್ರಂ ಗತಃ ಸೌಖ್ಯಫಲಂ ತದಾನೀಮ್ ॥

ಭುಕ್ತಿನಾಥನು ಗೋಚರದಲ್ಲಿ ತನ್ನ ನೀಚಕ್ಷೇತ್ರ, ಅಥವಾ ಶತ್ರುಕ್ಷೇತ್ರಗತನಾದರೆ ಸಂಕಷ್ಟಗಳನ್ನು ಆ ಕಾಲದಲ್ಲಿ ನೀಡುತ್ತಾನೆ. ಅವನು ಸ್ವಕ್ಷೇತ್ರ, ತನ್ನ ಉಚ್ಚರಾಶಿಯಲ್ಲಿ ಸಂಚರಿಸುವಾಗ ಅಥವಾ ಚಾರದಲ್ಲಿ ವಕ್ರನಾದಾಗ ಶುಭಫಲ ನೀಡುತ್ತಾನೆ.

ಪಾಕೇಶಸ್ಯ ಶುಭಪ್ರದಸ್ಯ ಭವನಂ ತುಂಗಂ ಪ್ರಪನ್ನೇ ಯದಾ ಸೂರ್ಯೇ ತತ್ಫಲ ಸಿದ್ಧಿಮೇತಿ ಗುರುಣಾಪ್ಯೇವಂ ಫಲಂ ಚಿಂತಯೇತ್ । ನೀಚಂ ಕಷ್ಟಫಲಪ್ರದಸ್ಯ ಚ ದಶಾನಾಥಸ್ಯ ವೈರಿಸ್ಥಲಂ ಪ್ರಾಪ್ತೇ ಭಾಸ್ವತಿ ಗೋಚರೇಣಲಭತೇ ತಸ್ಯೈವ ಕಷ್ಟಂ ಫಲಮ್ ॥೩೮॥

ಶುಭಫಲದಾಯಕನಾದ ಭುಕ್ತಿನಾಥನ ಉಚ್ಚಕ್ಷೇತ್ರದಲ್ಲಿ ರವಿ ಅಥವಾ ಗುರು ಸಂಚಾರಕಾಲದಲ್ಲಿ ಆ ಭುಕ್ತಿಯ ಶುಭಫಲಗಳು ಅನುಭವಕ್ಕೆ ಬರುತ್ತವೆ. ಅಶುಭಫಲ ನೀಡುವ ಭುಕ್ತಿಯಾದರೆ, ಭುಕ್ತಿನಾಥನ ನೀಚ ಅಥವಾ ಶತ್ರುಕ್ಷೇತ್ರದಲ್ಲಿ ರವಿಚಾರಕಾಲ ದಲ್ಲ ಭುಕ್ತಿಯ ಅಶುಭಫಲಗಳು ಅನುಭವಕ್ಕೆ ಬರುತ್ತವೆ.

ಯೇನ ಗ್ರಹೇಣ ಸಹಿತೋ ಭುಜಗಾಧಿನಾಥಸ್ತತ್ಸ್ಫೋಟಜಾತಗುಣದೋಷ ಫಲಾನಿ ಕುರ್ಯಾತ್ । ಸರ್ಪಾನ್ವಿತಃ ಸ ತು ಖಗಃ ಶುಭದೋಽಪಿ ಕಷ್ಟಂ ದುಃಖಂ ದಶಾಂತ್ಯ ಸಮಯೇ ಕುರುತೇ ವಿಶೇಷಾತ್ ॥೩೯॥

ರಾಹುವು ತಾನುಯುತನಾದ ಗ್ರಹನ ಗುಣದೋಷ ತುಲ್ಯ ಶುಭಾಶುಭಫಲವನ್ನು ನೀಡುತ್ತಾನೆ. ರಾಹುವಿನ ಯುತಿಯಲ್ಲಿರುವ ಗ್ರಹನು ಶುಭಫಲದಾಯಕನಾದರೂ, ತನ್ನದಶೆಯ ಅಂತ್ಯಕಾಲದಲ್ಲಿ ದುಃಖ ಮತ್ತು ಸಂಕಷ್ಟಗಳನ್ನು ನೀಡುತ್ತಾನೆ.

ದ್ವಾವರ್ಥಕಾಮಾವಿಹ ಮಾರಕಾಖ್ಯೌ ತದೀಶ್ವರಸ್ತತ್ರ ಗತೋ ಬಲಾಢ್ಯಃ ।
ಹಂತಿ ಸ್ವಪಾಕೇ ನಿಧನೇಶ್ವರೋ ವಾ ವ್ಯಯೇಶ್ವರೋ ವಾಽಪ್ಯತಿದುರ್ಬಲಶ್ಚೇತ್ ॥

ದ್ವಿತೀಯ ಮತ್ತು ಸಪ್ತಮಭಾವವು ಮಾರಕಸ್ಥಾನ ಆಗಿರುತ್ತದೆ. ಧನಾಧಿಪತಿ ಮತ್ತು ಸಪ್ತಮಾಧಿಪತಿಯು, ದ್ವಿತೀಯ ಮತ್ತು ಸಪ್ತಮಭಾವಸ್ಥಿತ ಗ್ರಹರು, ಇವರಲ್ಲಿ ಬಲಿಷ್ಠನಾದವನ ದಶಾಕಾಲದಲ್ಲಿ ಮರಣ ಸಂಭವಿಸುತ್ತದೆ. ಅಷ್ಟಮಾಧಿಪತಿ ಅಥವಾ ವ್ಯಯಾಧಿಪತಿ, ಇವರಲ್ಲಿ ಬಲಹೀನನಾದವನ ಭುಕ್ತಿಯಲ್ಲಿ ಮರಣ ಸಂಭವಿಸುತ್ತದೆ.

ಕೇಂದ್ರೇಶಸ್ಯ ಸತೋಽಸತೋಽಶುಭಶುಭೌ ಕುರ್ಯಾದ್ದಶಾ ಕೋಣಪಾಃ ಸರ್ವೇ ಶೋಭನದಾಸ್ತ್ರಿಷಷ್ಠೈರಿಭವಪಾ ಯದ್ಯಪ್ಯನರ್ಥಪ್ರದಾಃ ರಂಧ್ರೇಶೋಽಪಿ ವಿಲಗ್ನಪೋ ಯದಿ ಶುಭಂ ಕುರ್ಯಾದ್ರವಿರ್ನಾ ಶಶೀ ಯದ್ಯೇವಂ ಶುಭದಃ ಪರಾಶರಮತಂ ತತ್ತದ್ದಶಾಯಾಂ ಫಲಮ್ ॥೪೮॥

ಶುಭಗ್ರಹರಿಗೆ ಕೇಂದ್ರಾಧಿಪತ್ಯ ಇದ್ದರೆ ಅವರು ತಮ್ಮ ದಶೆಯಲ್ಲಿ ಅಶುಭಫಲ ನೀಡುತ್ತಾರೆ. ತ್ರಿಕೋಣಾಧಿಪತ್ಯ (1, 5, 9) ಇರುವ ಗ್ರಹರು ಶುಭಫಲವನ್ನೇ ನೀಡುತ್ತಾರೆ. ತೃತೀಯ, ಷಷ್ಠ ಮತ್ತು ಲಾಭಾಧಿಪತಿ ಶುಭಗ್ರಹನಾದರೂ ಅಶುಭಫಲ ವನ್ನೇ ನೀಡುತ್ತಾರೆ. ಅಷ್ಟಮಾಧಿಪತಿಯು, ಲಗ್ನಾಧಿಪತಿಯಾದರೆ ಶುಭಫಲವನ್ನು ನೀಡುತ್ತಾನೆ. ರವಿ ಮತ್ತು ಚಂದ್ರನಿಗೆ ಅಷ್ಟಮಾಧಿಪತ್ಯ ದೋಷ ಇಲ್ಲ. ಆದ್ದರಿಂದ ಅವರು (ಮಕರ ಮತ್ತು ಧನುಲಗ್ನಕ್ಕೆ) ಶುಭಫಲ ನೀಡುತ್ತಾರೆ- ಇದು ಪರಾಶರ ಮತ ಆಗಿರುತ್ತದೆ.

ಕೋಣಾಧೀಶಃ ಕೇಂದ್ರಗಃ ಕೇಂದ್ರಪೋ ವಾ ಕೋಣಸ್ಥಶ್ಚೇದ್‌ದ್ವೌ ಚ ಯೋಗ ಪ್ರದೋಸ್ತಃ । ದ್ವಾವಪ್ಯೇತೌ ಭುಕ್ತಿಕಾಲೇ ದಶಾಯಾಮನ್ಯೋನ್ಯಂ ತೌ ಯೋಗದೌ ಸೋಪಕಾರೌ ॥೪೨॥

ಕೇಂದ್ರ-ತ್ರಿಕೋಣಾಧಿಪತಿಗಳ ಪರಿವರ್ತನವು ಯೋಗಪ್ರದ ಆಗಿರುತ್ತದೆ. ಇವರು ಪರಸ್ಪರ ದಶಾಭುಕ್ತಿಕಾಲವಲ್ಲಿ ಯೋಗಕಾರಕರಾಗಿ ಶುಭಫಲಾಧಿಕ್ಯ ನೀಡುತ್ತಾರೆ.

ನ ದಿಶೇಯುರ್ಗ್ರಹಾಃ ಸರ್ವೇ ಸ್ವದಶಾಸು ಸ್ವಭುಕ್ತಿಷು ।
ಶುಭಾಶುಭಫಲಂ ನೃಣಾಮಾತ್ಮಭಾವಾನುರೂಪತಃ ॥೪೩॥

ಸಕಲಗ್ರಹರು ತಮ್ಮದಶೆಯು, ಸ್ವಭುಕ್ತಿಯಲ್ಲಿ, ತಮ್ಮ ಭಾವಾಧಿಪತ್ಯದ ಶುಭಾ ಶುಭಫಲವನ್ನು ನೀಡುವುದಿಲ್ಲ.

ಆತ್ಮಸಂಬಂಧಿನೋ ಯೇ ಚ ಯೇ ಯೇ ನಿಜಸಧರ್ಮಿಣಃ ।
ತೇಷಾಮಂತರ್ದಶಾಸ್ವೇವ ದಿಶಂತಿ ಸ್ವದಶಾಫಲಮ್ ॥೪೪॥

ದಶಾನಾಥನ ಸಂಬಂಧವಲ್ಲಿ (ಪರಿವರ್ತನ, ಯುತಿ, ದೃಷ್ಟಿ, ಕೇಂದ್ರ-ತ್ರಿಕೋಣ ಸ್ಥಿತಿ ಇತ್ಯಾದಿ ಸಂಬಂಧ) ಭುಕ್ತಿನಾಥನು ಇದ್ದರೆ, ಅಂಥಹ ಭುಕ್ತಿನಾಥನು ತನ್ನ ಭುಕ್ತಿ ಕಾಲವಲ್ಲಿ ಆ ದಶಾನಾಥನ ಫಲವನ್ನು ನೀಡುತ್ತಾನೆ.

ಕೇಂದ್ರತ್ರಿಕೋಣನೇತಾರೌ ದೋಷಯುಕ್ತಾವಪಿ ಸ್ವಯಮ್ ।
ಸಂಬಂಧಮಾತ್ರಾದ್ಬಲಿನೌ ಭವೇತಾಂ ಯೋಗಕಾರಕೌ ॥೪೫॥

ಕೇಂದ್ರ ಅಥವಾ ತ್ರಿಕೋಣಾಧಿಪತಿಗಳಿಗೆ ಸ್ವತ: ದೋಷಕಾರಕತ್ವ ಇದ್ದರೂ (ಕೇಂದ್ರಾಧಿಪತ್ಯ ಮತ್ತು ದುಸ್ಥಾನಾಧಿಪತ್ಯ ಅಥವಾ ತ್ರಿಕೋಣಾಧಿಪತ್ಯ ಮತ್ತು ದು:ಸ್ಥಾನಾಧಿಪತ್ಯ) ಅವರ ಪರಸ್ಪರ ಸಂಬಂಧದಿಂದ (ಪರಿವರ್ತನ, ಯುತಿ, ದೃಷ್ಟಿ ಇತ್ಯಾದಿ) ಅವರು ಬಲಿಷ್ಠರಾಗಿ, ಯೋಗಕಾರಕರು ಆಗುತ್ತಾರೆ.

ತ್ರಿಕೋಣಾಧಿಪಯೋರ್ಮಧ್ಯೇ ಸಂಬಂಧೋ ಯೇನ ಕೇನಚಿತ್ ।
ಕೇಂದ್ರನಾಥಸ್ಯ ಬಲಿನೋ ಭವೇದ್ಯದಿ ಸ ಯೋಗಕೃತ್ ॥೪೬॥

ತ್ರಿಕೋಣಾಧಿಪತಿ (ಪಂಚಮ ಮತ್ತು ನವಮ ಭಾವಾಧಿಪತಿ)ಗಳಲ್ಲಿ ಒಬ್ಬನು, ಬಲಿಷ್ಠಕೇಂದ್ರಾಧಿಪತಿಯ (1, 4, 7ಅಥವಾ10) ಸಂಬಂಧದಲ್ಲಿ ಇದ್ದರೆ ಅವನು ಯೋಗಕಾರಕನು ಆಗುತ್ತಾನೆ.

ಕೇಂದ್ರತ್ರಿಕೋಣಾಧಿಪಯೋರೈಕ್ಯೇ ತೌ ಯೋಗಕಾರಕೌ ।
ಅನ್ಯತ್ರಿಕೋಣಪತಿನಾ ಸಂಬಂಧೋ ಯದಿ ಕಿಂ ಪುನ: ॥೪೭॥

ಕೇಂದ್ರ-ತ್ರಿಕೋಣಧಿಪತಿಯ ಯುತಿಯಲ್ಲಿ ಇಬ್ಬರೂ ಯೋಗಕಾರಕರು ಆಗಿರುತ್ತಾರೆ. ಇವರೊಂದಿಗೆ ಇನ್ನೊಂದು ತ್ರಿಕೋಣಾಧಿಪತಿಯ ಸಂಬಂಧ ಇದ್ದರೆ, ನಿ:ಸಂಶಯವಾಗಿ ಜಾತಕನಿಗೆ ಅತ್ಯಧಿಕ ಯೋಗ ಲಭಿಸುತ್ತದೆ.

ಯೋಗಕಾರಕಸಂಬಂಧಾತ್ಪಾಪಿನೋಽಪಿ ಗ್ರಹಾ: ಸ್ವತ: ।
ತತ್ತದ್ಭುಕ್ತ್ಯನುಸಾರೇಣ ದಿಶೇಯುರ್ಯೌಗಿಕಂ ಫಲಮ್ ॥೪೮॥

ಯೋಗಕಾರಕಗ್ರಹನ ಸಂಬಂಧದಲ್ಲಿರುವ ಗ್ರಹನು ಪಾಪಗ್ರಹನಾದರೂ, ತನ್ನ ಭುಕ್ತಿಯಲ್ಲಿ ಯೋಗಜಫಲವನ್ನೇ ನೀಡುತ್ತಾನೆ.

ಸ್ವದಶಾಯಾಂ ತ್ರಿಕೋಣೇಶೋ ಭುಕ್ತೌ ಕೇಂದ್ರಪತೇ: ಶುಭಮ್ ।
ದಿಶೇತ್ಸೋಽಪಿ ತಥಾ ನೋ ಚೇದಸಂಬಂಧೇಽಪಿ ಪಾಪಕೃತ್ ॥೪೯॥

ತ್ರಿಕೋಣಾಧಿಪತಿಯ ದಶೆಯಲ್ಲಿ, ಕೇಂದ್ರಾಧಿಪತಿಯ ಭುಕ್ತಿಯಲ್ಲಿ ಶುಭಫಲ ಸಂಭವಿಸುತ್ತದೆ. ಈ ಕೇಂದ್ರ-ತ್ರಿಕೋಣಧಿಪತಿಗಳಲ್ಲಿ ಸಂಬಂಧ ಇಲ್ಲದಿದ್ದರೂ ಪಾಪಫಲ ಸಂಭವಿಸುವುದಿಲ್ಲ.

ಕೇಂದ್ರಾಧಿಪತ್ಯದೋಷಸ್ತು ಬಲವಾನ್ ಗುರುಶುಕ್ರಯೋ: ।
ಮಾರಕತ್ವೇಽಪಿ ಚ ತಯೋರ್ಮಾರಕಸ್ಥಾನಸಂಸ್ಥಿತಿ: ॥೫೦॥

ಕೇಂದ್ರಾಧಿಪತ್ಯದೋಷವು ಗುರು-ಶುಕ್ರರಿಗೆ ಬಲಿಷ್ಠವಾಗಿರುತ್ತದೆ. ಇವರು ಮಾರಕಸ್ಥಾನಗಳಲ್ಲಿ ಇದ್ದರೆ (ದ್ವಿತೀಯ ಮತ್ತು ಸಪ್ತಮ) ಬಲಿಷ್ಠ ಮಾರಕರು ಆಗುತ್ತಾರೆ.

ಬುಧಸ್ತದನು ಚಂದ್ರೋಽಪಿ ಭವೇತ್ತದನು ತದ್ವಿಧ: ।
ಪಾಪಾಶ್ಚೇತ್ಕೇಂದ್ರಪತಯ: ಶುಭದಾಶ್ಚೋತ್ತರೋತ್ತರಮ್ ॥೫೧॥

ಬುಧನು ಕೇಂದ್ರಾಧಿಪತಿಯಾದರೆ ಗುರು-ಶುಕ್ರರಿಗಿಂತ ಕಡಿಮೆ ದೋಷ ಉಳ್ಳವನು. ಚಂದ್ರನಾದರೆ ಬುಧನಿಗಿಂತ ಕಮ್ಮಿ ದೋಷ ಉಳ್ಳವನು ಆಗುತ್ತಾನೆ. ಪಾಪಗ್ರಹರು ಕೇಂದ್ರಾಧಿಪತಿಗಳು ಆದಾಗ ಅಧಿಕಾಧಿಕ ಶುಭಫಲಗಳನ್ನು ನೀಡುತ್ತಾರೆ.

ಯದಿ ಕೇಂದ್ರೇ ತ್ರಿಕೋಣೇ ವಾ ನಿವಸೇತಾಂ ತಮೋಗ್ರಹೌ
ನಾಥೇನಾನ್ಯತರಸ್ಯೈವ ಸಂಬಂಧಾದ್ಯೋಗಕಾರಕೌ ॥೫೨॥

ರಾಹು-ಕೇತುಗಳು ಕೇಂದ್ರ ಅಥವಾ ತ್ರಿಕೋಣದಲ್ಲಿ ಇದ್ದು, ಆ ಕೇಂದ್ರ ಅಥವಾ ತ್ರಿಕೋಣಾಧಿಪತಿಯ ಸಂಬಂಧ ಇದ್ದರೆ ಯೋಗಕಾರಕರು ಆಗುತ್ತಾರೆ.

ತಮೋಗ್ರಹೌ ಶುಭಾರೂಢೌ ಸಂಬಂಧೌ ಯೇನ ಕೇನಚಿತ್ ।
ಅಂತರ್ದಶಾನುರೂಪೇಣ ಭವೇತಾಂ ಯೋಗಕಾರಕೌ ॥೫೩॥

ರಾಹು-ಕೇತುಗಳು ಶುಭಗ್ರಹರ ರಾಶಿಯಲ್ಲಿದ್ದು ಶುಭಗ್ರಹರ ಸಂಬಂಧದಲ್ಲಿ ಇದ್ದರೆ, ಆ ಗ್ರಹರ ದಶೆಯಲ್ಲಿ, ತಮ್ಮ ಭುಕ್ತಿಕಾಲದಲ್ಲಿ ಯೋಗಕಾರಕರು ಆಗುತ್ತಾರೆ.

ಆರಂಭೋ ರಾಜಯೋಗಸ್ಯ ಭವೇನ್ಮಾರಕಭುಕ್ತಿಷು ।
ಪ್ರಥಯುಂತಿ ತಮಾರಭ್ಯ ಕ್ರಮಶಃ ಪಾಪಭುಕ್ತಯಃ ॥೫೪॥

ಯೋಗಕಾರಕ ಗ್ರಹರ ದಶಾಕಾಲದಲ್ಲಿ ಕಾರಕಗ್ರಹ ಭುಕ್ತಿಯಲ್ಲಿ ರಾಜಯೋಗವು ಫಲಪ್ರದ ಆಗಲು ಪ್ರಾರಂಭ ಆಗುತ್ತದೆ. ಅನಂತರ ಪಾಪಗ್ರಹರಭುಕ್ತಿಯಲ್ಲಿ ಕೂಡಾ ಯೋಗಜಫಲ ಅಧಿಕ ಆಗುತ್ತದೆ.

ರಂಧ್ರಸ್ಥರಂಧ್ರೇಕ್ಷಕರಂಧ್ರನಾಥರಂಧ್ರತ್ರಿಭಾಗಾಧಿಪಮಾಂದಿಭೇಶಾಃ ।
ದುಃಖಪ್ರದಾಸ್ತೇಷ್ವಪಿ ದುರ್ಬಲೋ ಯಃ ಸ ನಾಶಕಾರೀ ಸ್ವದಶಾಪಹಾರೇ॥

1.ಅಷ್ಟಮಭಾವಸ್ಥಿತಗ್ರಹ, 2.ಅಷ್ಟಮಭಾವವನ್ನು ನೋಡುವ, 3.ಅಷ್ಟಮಾಧಿಪತಿ, 4.ಅಷ್ಟಮಭಾವದದ್ರೇಕ್ಕಾಣಾಧಿಪ, (22ನೇ ದ್ರೇಕ್ಕಾಣಾಧಿಪ) 5.ಮಾಂದಿಸ್ಥಿತ ರಾಶ್ಯಾಧಿಪ ಇವರು ತಮ್ಮದಶಾ-ಭುಕ್ತಿಕಾಲದಲ್ಲಿ ದುಃಖವನ್ನು ನೀಡುತ್ತಾರೆ. ಇವರಲ್ಲಿ ಬಲಹೀನನಾದವನು ತನ್ನದಶಾ-ಭುಕ್ತಿಕಾಲದಲ್ಲಿ ನಾಶಕಾರಕನು (ಸಂಪತ್ತಿನನಾಶ ಅಥವಾ ಆಯುಷ್ಯದ ಹಾನಿ), ಆಗುತ್ತಾನೆ.

ಭ್ರಷ್ಟಸ್ಯ ತುಂಗಾದವರೋಹಿಸಂಜ್ಞಾ ಮಧ್ಯಾ ಭವೇತ್ಸಾ ಸುಹೃದುಚ್ಚಭಾಗೇ ।
ಆರೋಹಿಣೀ ನಿಮ್ನಪರಿಚ್ಯುತಸ್ಯ ನೀಚಾರಿಭಾಂಶೇಷ್ವಧಮಾ ಭವೇತ್ಸಾ ॥೫೬॥

ತನ್ನ ಉಚ್ಚರಾಶಿಯನ್ನು ದಾಟಿದಗ್ರಹನ (ನೀಚಾರೋಹಿ) ದಶೆಯು "ಅವರೋಹಿಣೀ" ದಶೆ ಆಗುತ್ತದೆ. ಈ ಅವರೋಹಿಗ್ರಹನು ಮಿತ್ರಗ್ರಹನ ಅಥವಾ ಉಚ್ಚನವಾಂಶದಲ್ಲಿ ಇದ್ದರೆ ಆ ದಶೆಯು "ಮಧ್ಯಾ," ಅಂದರೆ ಶುಭಾ-ಶುಭಮಿಶ್ರಫಲ ನೀಡುತ್ತದೆ. ತನ್ನ ನೀಚರಾಶಿಯನ್ನು ದಾಟಿದ ಗ್ರಹನ (ಉಚ್ಚಾರೋಹಿ) ದಶೆಯು "ಆರೋಹಿಣೀ" ದಶೆ ಆಗುತ್ತದೆ.

ಈ ಆರೋಹಿಗ್ರಹನು ನೀಚಾಂಶ ಅಥವಾ ಶತ್ರುನವಾಂಶದಲ್ಲಿ ಇದ್ದರೆ ಅವನ ದಶೆಯು "ಅಧಮಾ" ಅಂದರೆ ಅಶುಭಫಲದಾಯಕ ಆಗುತ್ತದೆ.

ಶಸ್ತೆಗೃಹೇ ಶಸ್ತಾಂಶೇ ನೀಚೇ ರಿಪುಭೇಽಸ್ತಸಂಸ್ಥಿತೇ ವಾಪಿ ।
ತಸ್ಯ ದಶಾ ಮಿಶ್ರಫಲಾ ದಶಾಶರಾರ್ಥೇ ಫಲಪ್ರದಾ ಜ್ಞೇಯಾ ॥೫೭॥

ನೀಚರಾಶಿ ಅಥವಾ ಶತ್ರುಕ್ಷೇತ್ರ ಅಥವಾ ಅಸ್ತನಾದ ಗ್ರಹನು, ಶುಭರಾಶಿ ಅಥವಾ ಶುಭಗ್ರಹರ ನವಾಂಶದಲ್ಲಿದ್ದರೆ, ಅವನ ದಶೆಯು ಮಿಶ್ರಫಲದಾಯಕ ಆಗುತ್ತದೆ. ಈ ದಶೆಯ ಉತ್ತರಾರ್ಧದಲ್ಲಿ ಶುಭಫಲ ಲಭಿಸುತ್ತದೆ.

ತತ್ತದ್ಭಾವಾದ್ವ್ಯಯಸ್ಥಸ್ಯ ತದ್ಭಾವವ್ಯಯಪಸ್ಯ ಚ ।
ವೀರ್ಯಹೀನಸ್ಯ ಖೇಟಸ್ಯ ಪಾಕೇ ಮೃತ್ಯುಮವಾಪ್ನುಯಾತ್ ॥೫೮॥

ಆಯಾಭಾವದಿಂದ ವ್ಯಯಸ್ಥಿತ ಅಥವಾ ಆಯಾಭಾವದ ವ್ಯಯಾಧಿಪತಿ, ಇವರಲ್ಲಿ ಬಲಹೀನ ಗ್ರಹನ ದಶಾಕಾಲದಲ್ಲಿ ಆ ಭಾವವು ಸೂಚಿಸುವ ವ್ಯಕ್ತಿಗೆ ಮರಣಸಂಭವಿಸುತ್ತದೆ

ದಶಾಪತಿರ್ಲಗ್ನಗತೋ ಯದಿ ಸ್ಯಾತ್ ತ್ರಿಷಟ್‌ದಶೈಕಾದಶಗಶ್ಚ ಲಗ್ನಾತ್ ।
ತತ್ಸಪ್ತವರ್ಗೇಷ್ವಥ ತತ್ಸುಹೃದ್ವಾ ಲಗ್ನೇ ಶುಭೋ ವಾ ಶುಭದಾ ದಶಾ ಸ್ಯಾತ್॥

1.ದಶಾನಾಥನು ಗೋಚರದಲ್ಲಿ ಲಗ್ನ, (ಲಗ್ನದಿಂದ) ತೃತೀಯ, ಷಷ್ಠ, ದಶಮ ಅಥವಾ ಲಾಭದಲ್ಲಿ ಸಂಚರಿಸುವಾಗ, 2.ಲಗ್ನದ ಸಪ್ತವರ್ಗದಲ್ಲಿ ದಶಾನಾಥನು ಸಂಚರಿಸುವಾಗ, 3.ಮಿತ್ರಗ್ರಹ ಅಥವಾ ಶುಭಗ್ರಹನು ಲಗ್ನದಲ್ಲಿ ಸಂಚರಿಸುವಕಾಲದಲ್ಲಿ ತಾತ್ಕಾಲಿಕ ದಶೆಯು ಶುಭಫಲದಾಯಕ ಆಗುತ್ತದೆ.

ಯಾವಂತಿ ವರ್ಷಾಣಿ ದಶಾ ಚ ಸಾ ಸ್ಯಾಚ್ಚಾರಕ್ರಮಾತ್ತತ್ರ ದಶಾಪತಿಃ ಸಃ ।
ಯತ್ರ ಸ್ಥಿತಸ್ತದ್ಭವನಾದ್ವಿಧೋಸ್ತು ಸ್ಥಿತೇಃ ಪ್ರಕಲ್ಪ್ಯಂ ಸದಸತ್ಫಲಂ ಹಿ ॥೬೦॥

ದಶಾನಾಥನು ಜನನಕಾಲದ ಚಂದ್ರನಿಂದ ಗೋಚರದಲ್ಲಿ ಯಾವ ಯಾವಭಾವದಲ್ಲಿ ಸಂಚರಿಸುತ್ತಾನೋ, ಆಯಾಭಾವಕ್ಕೆ ಸಂಬಂಧಪಟ್ಟ ತನ್ನದಶೆಯ ಶುಭಾಶುಭ ಫಲಗಳನ್ನು ನೀಡುತ್ತಾನೆ.

ದಶಾಧಿನಾಥಸ್ಯ ಸುಹೃದ್ಗೃಹಸ್ಥಸ್ತದುಚ್ಚಗೋ ವಾಥ ದಶಾಧಿನಾಥಾತ್ ।
ಸ್ಮರತ್ರಿಕೋಣೋಪಚಯೋಪಗಶ್ಚ ದದಾತಿ ಚಂದ್ರಃ ಖಲು ಸತ್ಫಲಾನಿ ॥೬೧॥

ದಶಾನಾಥನ ಮಿತ್ರಕ್ಷೇತ್ರ, ಉಚ್ಚಕ್ಷೇತ್ರ, ದಶಾನಾಥನಿಂದ ಸಪ್ತಮ, ತ್ರಿಕೋಣ, (5,9,) ಉಪಚಯದ (3,6,10,11,) ಚಂದ್ರನು ಶುಭಫಲಗಳನ್ನು ನೀಡುತ್ತಾನೆ.

ಉಕ್ತೇಷು ರಾಶಿಷು ಗತಸ್ಯ ವಿಧೋಃ ಸ ರಾಶಿಃ ಸ್ಯಾಜ್ಜನ್ಮಕಾಲಭವ ಮೂರ್ತಿ-
ಧನಾದಿಭಾವಃ । ತತ್ತದ್ವಿವೃದ್ಧಿಕೃದಸೌ ಕಥಿತೋ ನರಾಣಾಂ ತದ್ಭಾವಹಾನಿ-
ಕೃದಥೇತರರಾಶಿಸಂಸ್ಥಃ ॥೬೨॥

ಹಿಂದೆ ಹೇಳಿದ (ಶ್ಲೋಕ ೬೧) ದಶಾನಾಥನಿಂದ ಚಂದ್ರನು ಇರಬೇಕಾದ ರಾಶಿಯು ಲಗ್ನ ಧನಾದಿ ದ್ವಾದಶಭಾವಗಳಲ್ಲಿ ಸುಸ್ಥಾನದಲ್ಲಿ ಇದ್ದರೆ, ಚಂದ್ರನು ಆ ಭಾವಫಲವನ್ನು ವೃದ್ಧಿ ಗೊಳಿಸುತ್ತಾನೆ. ಲಗ್ನದಿಂದ ಇನ್ನಿತರ ಅಶುಭಭಾವಗಳಲ್ಲಿ ಆ ಚಂದ್ರನು ಇದ್ದರೆ ಆ ಭಾವಫಲದ ಹಾನಿ ಸಂಭವಿಸುತ್ತದೆ.

ಸಾರಾವಲೀಮುಡುದಶಾಂ ಚ ವರಾಹಹೋರಾಮಾಲೋಕ್ಯ ಜಾತಕಫಲಂ ಪ್ರವ-
ದೇನ್ನರಾಣಾಮ್ । ಪ್ರಶ್ನೋದಯಗ್ರಹವಶಾದಥ ವಾ ಸ್ವಜನ್ಮರಾಶ್ಯಾದಿನಾ
ವದತು ನಾಸ್ತ್ಯನಯೋರ್ವಿಶೇಷಃ ॥೬೩॥

ಫಲಚಿಂತನೆಯಲ್ಲಿ ಸಾರಾವಲೀ, ಉಡುದಾಯ ಪ್ರದೀಪ ಮತ್ತು ವರಾಹ, ಮಿಹಿರರ ಹೋರಾಶಾಸ್ತ್ರವನ್ನು ವಿಮರ್ಶಿಸಿ ಶುಭಾಶುಭಫಲಗಳನ್ನು ಜ್ಯೋತಿಷ್ಕನು ಹೇಳಬೇಕು. ತಾತ್ಕಾಲಿಕ (ಪ್ರಶ್ನಕಾಲದ) ಗ್ರಹಸ್ಥಿತಿಯನ್ನು ತಿಳಿದು ಅಥವಾ ಜನ್ಮ ರಾಶಿ ಅಥವಾ ಜನ್ಮಲಗ್ನವನ್ನು ಆಧರಿಸಿ ಫಲಾಫಲ ನಿರ್ಣಯಿಸಬೇಕು. ಫಲಚಿಂತನೆಯಲ್ಲಿ ಜನ್ಮಲಗ್ನ ಅಥವಾ ಪ್ರಶ್ನಲಗ್ನದಲ್ಲಿ ವ್ಯತ್ಯಾಸ ಇಲ್ಲ.

ಭುಕ್ತಿಫಲಾಧ್ಯಾಯ-೨೧

ಅಪಹಾರವಿಭಾಗಲಕ್ಷಣಂ ತತ್ಪಕ್ತಿಂ ಕ್ರಮಶಃ ಸ್ಫುಟಂ ಪ್ರವಚ್ಮಿ ।
ಯದುದೀರಿತಮತ್ರ ತತ್ಸಮಸ್ತಂ ಕಥಯೇಸ್ತ್ವದಶಾಂತರಾಂತರಾದೌ ॥೧॥

ದಶಾಭುಕ್ತಿ ಮತ್ತು ಭುಕ್ತ್ಯಾಂತರ ಫಲಗಳನ್ನು ಇನ್ನು ಮುಂದೆ ಕ್ರಮವಾಗಿ ಹೇಳುತ್ತಾನೆ. ಇಲ್ಲಿ ಹೇಳಿದ ಸಕಲ ಫಲಗಳು ಆಯಾಗ್ರಹ ದಶಾಭುಕ್ತಿ, ಅಂತರ್ಭುಕ್ತಿ ಗಳಲ್ಲಿ ಸಂಭವಿಸುತ್ತದೆ.

ಪಾಕೇಶಾಬ್ದಹತಾ ದಶೇಶ್ವರಸಮಾ ನೇತ್ರಾಙ್ಕಭಕ್ತಾಃ ಸಮಾಃ ಶಿಷ್ಟಾ ರೂಪಹತಾ ನರಾಂಙ್ಕವಿಹೃತಾ ಮಾಸಾ ನಗ್ನೈರ್ವಾಸರಾಃ । ಭಿದ್ಯಾದಿಷ್ವಪಿ ಚೈವಮೇವ ಕಲಯೇ-ತ್ಪಾಕಕ್ರಮಾಚ್ಚೇದ್ದಶಾನಾಥಾದ್ಯಾ ಪುನರಂತರಾಂತರದಶಾಸ್ತತ್ಪಾಕನಾಥ ಕ್ರಮಾಃ ॥

ದಶಾಭುಕ್ತಿ ಮತ್ತು ಅಂತರ್ಭುಕ್ತಿ ಶೋಧನೆ:- ತಾತ್ಕಾಲಿಕ ದಶೆಯ ಭುಕ್ತಿಶೋಧ ನೆಗೆ, ಆ ಗ್ರಹನ ಮಹರ್ದಶಾ ವರ್ಷವನ್ನು ಚಿಂತಿತ ಅಂತರ್ದಶಾನಾಥನ ದಶಾವರ್ಷ ದಿಂದ ಗುಣಿಸಿ, ಲಬ್ಧವನ್ನು 120ರಿಂದ ಭಾಗಿಸಿದರೆ ಭುಕ್ತಿವರ್ಷಲಭಿಸುತ್ತದೆ. ಶೇಷ ವನ್ನು 12ರಿಂದ ಗುಣಿಸಿ 120ರಿಂದ ಭಾಗಿಸಿದರೆ ಭುಕ್ತಿಯ ಮಾಸಗಳು, ಮತ್ತು ಶೇಷ ವನ್ನು 30ರಿಂದ ಗುಣಿಸಿ 120ರಿಂದ ಭಾಗಿಸಿದರೆ ಭುಕ್ತಿಯ ದಿನಗಳು ಲಭಿಸುತ್ತವೆ. ಅಂತರ್ಭುಕ್ತಿಯ ಶೋಧನೆಗೆ ಇದೇ ಕ್ರಮವನ್ನು ಅನುಸರಿಸಬೇಕು. ಸಕಲದಶೆಗಳಲ್ಲಿ ಪ್ರಥಮಭುಕ್ತಿಯು ಆಯಾದಶಾನಾಥನಭುಕ್ತಿ ಆಗಿರುತ್ತದೆ.

ಮಹೀಶ್ವರಾದುಪಲಭತೇಽಧಿಕಂ ಯಶೋವನಾಚಲಸ್ಥಲವಸತಿಂ ಧನಾಗಮಮ್ ।
ಜ್ವರೋಷ್ಣರುಗ್ಜನಕವಿಯೋಗಜಂ ಭಯಂ ನಿಜಾಂ ದಶಾಂ ಪ್ರವಿಶತಿ ತೀಕ್ಷ್ಣದೀಧಿತೌ॥

ರವಿದಶಾ-ರವಿಭುಕ್ತಿ:- (3 ತಿ. 18 ದಿ.) ಈ ಭುಕ್ತಿಕಾಲದಲ್ಲಿ ರಾಜರಿಂದ ಸನ್ಮಾನಾದಿ ಪ್ರಾಪ್ತಿ ಅಥವಾ ರಾಜಕೀಯದಲ್ಲಿ ಯಶಸ್ಸು, ವನಪರ್ವತಾದಿ ಸಂಚಾರ ಅಥವಾ ವಾಸ, ಧನಪ್ರಾಪ್ತಿ, ಜ್ವರ, ಉಷ್ಣಪ್ರಕೋಪ, ತಂದೆಯ ವಿಯೋಗ, ಮತ್ತು ಭಯ ಉಂಟಾ ಗುತ್ತದೆ.

ರಿಪುಕ್ಷಯೋ ವ್ಯಸನಶಮೋ ಧನಾಗಮಃ ಕೃಷಿಕ್ರಿಯಾ ಗೃಹಕರಣಂ ಸುಹೃದ್ಯುತಿಃ ।
ಕ್ಷಯಾನಲಪ್ರತಿಪತಿರರ್ಕದಾಯಕಂ ಶಶೀ ಯದಾಹರತಿ ಜಲೋದ್ಭವಾ ರುಜಃ ॥೪॥

ರವಿದಶಾ-ಚಂದ್ರಭುಕ್ತಿ:- (6 ತಿಂಗಳು) ಈ ಭುಕ್ತಿಯಲ್ಲಿ ಶತ್ರುಗಳ ನಾಶ, ದುಃಖ ಶಮನ, ಧನಾಗಮ, ಕೃಷಿ-ಬೇಸಾಯ, ತೋಟಗಾರಿಕೆ ಮೊದಲಾದವುಗಳಿಂದ ಲಾಭ, ಗೃಹೋಪಯೋಗ ಉಪಕರಣ ಪ್ರಾಪ್ತಿ ಅಥವಾ ನೂತನಮನೆ, ಮಿತ್ರರ ಸಹವಾಸ.

ಚಂದ್ರನು ಪಾಪಸಂಬಂಧದಲ್ಲಿ ಇದ್ದರೆ ಕ್ಷಯರೋಗ, ಬೆಂಕಿಯಿಂದ ಹಾನಿ, ಜಲಜನ್ಯ ವ್ಯಾಧಿಗಳಿಂದ ಪೀಡೆ ಸಂಭವಿಸುತ್ತದೆ.

ರುಜಾಗಮ: ಪದವಿರಹೋsರಿಪೀಡನಂ ವ್ರಣೋದ್ಭವ: ಸ್ವಕುಲಜನ್ಯೈರ್ವಿರೋಧಿತಾ।
ಮಹೀಭೃತೋ ಭವತಿ ಭಯಂ ಧನಚ್ಯುತಿರ್ಯದಾ ಕುಜೋ ಹರತಿ ತದ್ದ್ವಾರ್ಕವತ್ಸರಮ್॥

ರವಿದಶಾ-ಕುಜಭುಕ್ತಿ:- (4ತಿ. 6ದಿ.) ಈ ಭುಕ್ತಿಯಲ್ಲಿ ರೋಗಪೀಡೆ, ಸ್ಥಾನನಾಶ ಶತ್ರುಪೀಡೆ, ವ್ರಣಉಂಟಾಗುತ್ತದೆ. ಸ್ವಜನರೊಂದಿಗೆ ವಿರೋಧ, ರಾಜರಿಂದ ಅಥವಾ ಸರಕಾರದಿಂದ ಭಯ, ಧನ-ಸಂಪತ್ತಿನ ನಾಶ ಸಂಭವಿಸುತ್ತದೆ.

ರಿಪೂದಯೋ ಧನಹೃತಿರಾಪದುದ್ಗಮೋ ವಿಷಾದ್ಭಯಂ ವಿಷಯವಿಮೂಢತಾ ಪುನ: ।
ಶಿರೋದೃಶೋರಧಿಕರುಗೇವ ದೇಹಿನಾಮಹೌ ಭವೇದಹಿಮಕರಾಯುರಂತರೇ ॥೬॥

ರವಿದಶಾ-ರಾಹುಭುಕ್ತಿ:- (10ತಿ. 24ದಿ.) ಈ ಭುಕ್ತಿಯಲ್ಲಿ ಶತ್ರುತ್ವ ಅಥವಾ ಶತ್ರುಗಳು ಉಂಟಾಗುತ್ತಾರೆ. ಧನನಾಶ ಅಥವಾ ಧನಾಪಹರ. ವಿಪತ್ತು, ವಿಷದಿಂದ ಭಯ, ವಿಷಯಾಭಿಲಾಷೆ, ತಲೆ ಮತ್ತು ಕಣ್ಣಿನ ವ್ಯಾಧಿಗಳು ಸಂಭವಿಸುತ್ತವೆ.

ರಿಪುಕ್ಷಯೋ ವಿವಿಧ ಧನಾಪ್ತಿರನ್ವಹಂ ಸುರಾರ್ಚನಂ ದ್ವಿಜಗುರುಬಂಧು ಪೂಜನಮ್।
ಶ್ರವ:ಶ್ರಮೋ ಭವತಿ ಚ ಯಕ್ಷ್ಮರೋಗಿತಾ ಸುರಾರ್ಚಿತೇ ಪ್ರವಿಶತಿ ಗೋಪತೇರ್ದ-ಶಾಮ್ ॥೭॥

ರವಿದಶಾ-ಗುರುಭುಕ್ತಿ:- (9ತಿ. 18ದಿ.) ಈ ಭುಕ್ತಿಕಾಲದಲ್ಲಿ ಶತ್ರುಗಳ ನಾಶ, ಹಲವಾರು ವಿಧಾನಗಳಿಂದ ಧನಪ್ರಾಪ್ತಿ, ದೇವತಾರ್ಚನೆ, ಬ್ರಾಹ್ಮಣ, ಗುರು-ಹಿರಿಯರನ್ನು ಮತ್ತು ಬಂಧುಗಳನ್ನು ಸನ್ಮಾನಿಸುವುದು, ಕಿವಿರೋಗಗಳು ಮತ್ತು ಕ್ಷಯರೋಗ ಸಂಭವಿಸುತ್ತದೆ.

ಧನಾಹತಿ: ಸುತವಿರಹ: ಸ್ತ್ರಿಯಾ ರುಜೋ ಗುರುವ್ಯಯ: ಸ್ವಪಟ ಪರಿಚ್ಛದಚ್ಯುತಿ: ।
ಮಲಿಷ್ಮತಾ ಭವತಿ ಕಫಪ್ರಪೀಡನಂ ಶನೈಶ್ಚರೇಸವಿತೃದಶಾಂತರಂ ಗತೇ ॥೮॥

ರವಿದಶಾ-ಶನಿಭುಕ್ತಿ:- (11ತಿ. 12ದಿ) ಈ ಭುಕ್ತಿಕಾಲದಲ್ಲಿ ಧನನಾಶ, ಮಕ್ಕಳ ವಿರಹ, ಸ್ತ್ರೀಜನಿತ ವ್ಯಾಧಿಗಳು, ಗುರು-ಹಿರಿಯರ ವಿಯೋಗ, ಅಧಿಕಖರ್ಚು, ಉತ್ತಮ ವಸ್ತ್ರ, ಸಾಮಾಗ್ರಿ ಇತ್ಯಾದಿಗಳ ನಷ್ಟ, ಮಲಿನತೆ, ಕಫಪೀಡೆ ಸಂಭವಿಸುತ್ತದೆ.

ವಿಚರ್ಚಿಕಾ ಪಿಟಕಸಕುಷ್ಠಕಾಮಿಲಾ ವಿಮರ್ಧನಂ ಜಠರಕಟಿಪ್ರಪೀಡನಮ್ । ಮಹೀ-ಕ್ಷಯ: ತ್ರಿಗದಭಯಂ ಭವೇತ್ತದಾ ವಿಧೋ: ಸುತೇ ಚರತಿ ರವೇರಥಾಬ್ದಕಮ್ ॥

ರವಿದಶಾ-ಬುಧಭುಕ್ತಿ:- (10ತಿ. 6ದಿ.) ಈ ಭುಕ್ತಿಕಾಲದಲ್ಲಿ ಗಜ್ಜಿ, ತುರಿಸುವಿಕೆ, ಬೊಕ್ಕೆ, ಕುಷ್ಠರೋಗ, ಕಾಮಿಲಾರೋಗ, ಜಜ್ಜುವುದು, ಜಠರ ಮತ್ತು ಸೊಂಟದಲ್ಲಿ ಪೀಡೆ, ಭೂಸಂಪತ್ತಿನ ಅವನತಿ, ತ್ರಿದೋಷ ಪ್ರಕೋಪ ಸಂಭವಿಸುತ್ತದೆ.

ಸುಹೃದ್ವ್ಯಯ: ಸ್ವಜನಕುಟುಂಬವಿಗ್ರಹೋ ರಿಪೋರ್ಭಯಂ ಧನಹರಣಂ ಪದಚ್ಯು-ತಿ:। ಗುರೋರ್ಗದಶ್ಚರಣಶಿರೋರುಗುಚ್ಚಕೈ: ಶಿಖೀ ಯದಾ ವಿಶತಿ ದಶಾಂ ವಿವಸ್ವತ: ॥

ರವಿದಶಾ-ಕೇತುಭುಕ್ತಿ:- (4ತಿ. 6ದಿ.) ಈ ಭುಕ್ತಿಕಾಲದಲ್ಲಿ ಮಿತ್ರರನ್ನು ಕಳೆದುಕೊಳ್ಳುತ್ತಾನೆ. ಸ್ವಜನರೊಂದಿಗೆ, ಕುಟುಂಬದ ಜನರೊಂದಿಗೆ ಅಭಿಪ್ರಾಯಭೇದ ಅಥವಾ ಕಲಹ, ಶತ್ರುಭಯ, ಧನಾಪಹಾರ, ಸ್ಥಾನನಾಶ, ಪಾದ ಮತ್ತು ಶಿರಸ್ಸಿನ ವ್ಯಾಧಿಗಳು ಸಂಭವಿಸುತ್ತವೆ.

ಶಿರೋರುಜಾ ಜಠರಗುದಾರ್ತಿಪೀಡನಂ ಕೃಷಿಕ್ರಿಯಾ ಗೃಹಧನಧಾನ್ಯವಿಚ್ಯುತಿ: ।
ಸುತಸ್ತ್ರಿಯೋರಸುಖಮತೀವ ದೇಹಿನಾಂ ಭೃಗೋ: ಸುತೇ ಚರತಿ ರವೇರಥಾಬ್ದಕಮ್ ॥

ರವಿದಶಾ-ಶುಕ್ರಭುಕ್ತಿ:- (1ವರ್ಷ.) ಈ ಭುಕ್ತಿಯಲ್ಲಿ ಶಿರಸ್ಸಿನ ವ್ಯಾಧಿಗಳು, ಜಠರ ಮತ್ತು ಗುದ ಪೀಡೆ ಕೃಷಿ-ಬೇಸಾಯ, ಮನೆ, ಧನ, ಧಾನ್ಯ ಇವುಗಳ ನಷ್ಟ, ಮಕ್ಕಳು. ಹೆಂಡತಿ, ಇವರಿಗೆ ಅತ್ಯಂತ ದು:ಖ ಸಂಭವಿಸುತ್ತದೆ.

ಸ್ತ್ರೀಪ್ರಜಾಪ್ತಿರಮಲಾಂಶುಕಾಗಮೋ ಭೂಸುರೋತ್ತಮಸಮಾಗಮೋ ಭವೇತ್ ।
ಮಾತುರಿಷ್ಟಫಲಮಂಗನಾಸುಖಂ ಸ್ಯಾಂ ದಶಾಂವಿಶತಿ ಶೀತದೀಧಿತೌ ॥೧೨॥

ಚಂದ್ರದಶಾ-ಚಂದ್ರಭುಕ್ತಿ:- (10ತಿ.) ಈ ಭುಕ್ತಿಯಲ್ಲಿ ಹೆಣ್ಣು ಮಕ್ಕಳು ಜನಿಸುತ್ತಾರೆ. ಸ್ವಚ್ಛ (ನೂತನ, ಬಿಳಿ) ವಸ್ತ್ರ, ಸಭ್ಯವ್ಯಕ್ತಿಗಳೊಂದಿಗೆ, ಅಥವಾ ವೇದ, ಶಾಸ್ತ್ರ ಇತ್ಯಾದಿಗಳಲ್ಲಿ ನುರಿತ ಬ್ರಾಹ್ಮಣರ ಸಹವಾಸ ಅಥವಾ ಸಮಾಗಮ, ತಾಯಿಗೆ ಸುಖ-ಸಂತೋಷ, ಮತ್ತು ದಾಂಪತ್ಯಸುಖ ನೀಡುತ್ತಾನೆ.

ಪಿತ್ತವಹ್ನಿರುಧಿರೋದ್ಭವಾ ರುಜ: ಕ್ಲೇಶದು:ಖರಿಪುಚೋರಪೀಡನಮ್ ।
ವಿತ್ತಮಾನವಿಹತಿರ್ಭವೇತ್ಕುಜೇ ಶೀತದೀಧಿತಿದಶಾಂತರಂಗತೇ ॥೧೩॥

ಚಂದ್ರದಶಾ-ಕುಜಭುಕ್ತಿ:- (7ತಿ.) ಈ ಭುಕ್ತಿಯಲ್ಲಿ ಪಿತ್ತಜನಿತ, ಉಷ್ಣಹೇತು, ರಕ್ತದೋಷದಿಂದ ಉದ್ಭವಿಸಿದ ವ್ಯಾಧಿಗಳು ಸಂಭವಿಸುತ್ತದೆ. ದು:ಖ, ಕ್ಲೇಶ, ಶತ್ರು ಮತ್ತು ಕಳ್ಳರಿಂದ ಪೀಡೆ, ಧನನಾಶ ಮತ್ತು ಮಾನಹಾನಿ ಸಂಭವಿಸುತ್ತದೆ.

ತೀವ್ರದೋಷರಿಪುವೃದ್ಧಿಬಂಧುರುಂಗ್ಮಾರುತಾಶನಿಭಯಾರ್ತಿರುದ್ಭವೇತ್ ।
ಅನ್ನಪಾನಜನಿತಜ್ವರೋದಯಾಶ್ಚಂದ್ರವತ್ಸರವಿಹಾರಕೇ ಹ್ಯಹೌ ॥೧೪॥

ಚಂದ್ರದಶಾ-ರಾಹುಭುಕ್ತಿ:- (1ವ 6ತಿ.) ಈ ಭುಕ್ತಿಯಲ್ಲಿ ಗಂಭಿರವಾದ ತಪ್ಪುಗಳು ಸಂಭವಿಸುತ್ತದೆ. ಅನೇಕ ಶತ್ರುಗಳು ಉಂಟಾಗುತ್ತಾರೆ. ಸಂಬಂಧಿಕರಿಗೆ ವ್ಯಾಧಿ ಸಂಭವಿಸುತ್ತದೆ. ಬಿರುಗಾಳಿ, ಸಿಡಿಲು, ಮೊದಲಾದವುಗಳ ಭಯ, ಆಹಾರ, ಪಾನೀಯಗಳ ದೋಷದಿಂದ ಜ್ವರಾದಿ ಪೀಡೆ ಸಂಭವಿಸುತ್ತದೆ.

ದಾನಧರ್ಮನಿರತಿ: ಸುಖೋದಯೋ ವಸ್ತ್ರಭೂಷಣಸುಹೃತ್ಸಮಾಗಮ: ।
ರಾಜಸತ್ಕೃತಿರತೀವ ಜಾಯತೇ ಕೈರವಪ್ರಿಯವಯೋಹರೇ ಗುರೌ ॥೧೫॥

ಚಂದ್ರದಶಾ-ಗುರುಭುಕ್ತಿ:- (1ವ. 4ತಿ.) ಈ ಭುಕ್ತಿಯಲ್ಲಿ ದಾನಧರ್ಮ ಇತ್ಯಾದಿಗಳಲ್ಲಿ ಮಗ್ನನು, ಸುಖ-ಸಂತೋಷ ಉಳ್ಳವನು, ವಸ್ತ್ರ, ಆಭರಣ, ಮಿತ್ರರು ಮೊದಲಾದವರೊಂದಿಗೆಕೂಡಿದವನು, ರಾಜರಿಂದ ಸನ್ಮಾನಿಸಲ್ಪಟ್ಟವನು ಆಗುತ್ತಾನೆ.

ನೈಕರೋಗವಿಹತಿ: ಸುಹೃತ್ಸುತಸ್ತ್ರೀರುಜಾ ವ್ಯಸನಸಂಭವೋ ಮಹಾನ್ ।
ಪ್ರಾಣಹಾನಿರಥವಾ ಭವೇಚ್ಛನೌ ವಾರಬಂಧುವಯಸೋಗತೇಽಂತರಮ್ ॥೧೬॥

ಚಂದ್ರದಶಾ-ಶನಿಭುಕ್ತಿ:- (1ವ.7ತಿ.) ಈ ಭುಕ್ತಿಯಲ್ಲಿ ಅನೇಕ ರೋಗಗಳಿಂದ ಪೀಡಿಸಲ್ಪಡುತ್ತಾನೆ. ಮಿತ್ರ, ಪುತ್ರ ಮತ್ತು ಪತ್ನಿಗೆ ಅನಾರೋಗ್ಯ ಸಂಭವಿಸುತ್ತದೆ. ಅತ್ಯಂತ ದು:ಖಕರ ಘಟನೆ, ಪ್ರಾಣಕ್ಕೆ ಆಪತ್ತು ಇತ್ಯಾದಿ ಸಂಭವಿಸುತ್ತದೆ.

ಸರ್ವದಾ ಧನಗಜಾಶ್ವಗೋಕುಲಪ್ರಾಪ್ತಿರಾಭರಣ ಸೌಖ್ಯ ಸಂಪದ: ।
ಚಿತ್ತಬೋಧ ಇತಿ ಜಾಯತೇ ವಿಧೋರಾಯುಷಿ ಪ್ರವಿಶತಿ ಪ್ರಬೋಧನೇ॥೧೭॥

ಚಂದ್ರದಶಾ-ಬುಧಭುಕ್ತಿ:- (1ವ. 5ತಿ.) ಈ ಭುಕ್ತಿಯಲ್ಲಿ ಧನ, ಆನೆ, ಕುದುರೆ, (ವಾಹನಸುಖ) ಪಶುಸಂಪತ್ತು ಇತ್ಯಾದಿ ಲಭಿಸುತ್ತದೆ. ಆಭರಣ, ಸೌಖ್ಯ ಮತ್ತು ಸಂಪತ್ತು ಲಭಿಸುತ್ತದೆ. ಮಾನಸಿಕ ಶಾಂತಿ ಅಥವಾ ಜ್ಞಾನ ಪ್ರಾಪ್ತಿ ಆಗುತ್ತದೆ.

ಚಿತ್ತಹಾನಿರಪಿ ಸಂಪದಶ್ಚ್ಯುತಿರ್ಬಂಧುಹಾನಿರಪಿ ತೋಯಜಂ ಭಯಮ್ ।
ದಾಸಭೃತ್ಯಹತಿರಸ್ತಿ ದೇಹಿನಾಂ ಕೇತುಕೇ ಹರತಿ ಚಾಂದ್ರಮಬ್ದಕಮ್ ॥೧೮॥

ಚಂದ್ರದಶಾ-ಕೇತುಭುಕ್ತಿ:- (7ತಿ.) ಈ ಭುಕ್ತಿಕಾಲದಲ್ಲಿ ಚಿತ್ತಭ್ರಮೆ, ಸಂಪತ್ತಿನ ನಾಶ, ಬಂಧು-ಬಾಂಧವರಿಗೆ ಹಾನಿ, ನೀರಿನಿಂದ ಭಯ, ಸೇವಕರಿಗೆ ಹಾನಿಉಂಟಾಗುತ್ತದೆ.

ತೋಯಯಾನವಸುಭೂಷಣಾಙ್ಗನಾವಿಕ್ರಯಕೃಷಿಕ್ರಿಯಾದಯ: ।
ಪುತ್ರಮಿತ್ರಪಶುಧಾನ್ಯಸಂಯುತಿಶ್ಚಂದ್ರದಾಯಹರಣೇಽಮ್ಬುಜೇ ಭೃಗೌ ॥೧೯॥

ಚಂದ್ರದಶಾ-ಶುಕ್ರಭುಕ್ತಿ:- (1ವ. 8ತಿ.) ಈ ಭುಕ್ತಿಯಲ್ಲಿ ಜಲ ಅಥವಾ ಜಲೋತ್ಪನ್ನಗಳಿಂದ, ವಾಹನ, ರತ್ನ, ಆಭರಣ, ಮೊದಲಾದವುಗಳ ವ್ಯಾಪಾರ ವ್ಯವಹಾರದಿಂದ, ಸ್ತ್ರೀಯರಿಂದ, ಕೃಷಿ–ಬೇಸಾಯ, ಸಂತಾನ, ಮಿತ್ರ, ಪಶು, ಧಾನ್ಯಸಂಗ್ರಹ ಮೊದಲಾದವು ಸಂಭವಿಸುತ್ತದೆ.

ರಾಜಮಾನನಮತೀವ ಶೂರತಾ ರೋಗಶಾಂತಿರರಿಪಕ್ಷವಿಚ್ಯುತಿ: ।
ಪಿತ್ತವಾತರುಗಿನೇ ಗತೇ ತದಾ ಸ್ಯಾಚ್ಛಶಾಂಕಪರಿವತ್ಸರಾಂತರಮ್ ॥೨೦॥

ಚಂದ್ರದಶಾ-ರವಿಭುಕ್ತಿ:- (6ತಿ.) ಈ ಭುಕ್ತಿಯಲ್ಲಿ ರಾಜರಿಂದ ಸನ್ಮಾನ, ಅತ್ಯಂತ ಶೂರತ್ವ, ರೋಗಶಮನ, ಶತ್ರುಪಕ್ಷದ ಪರಾಭವ, ಪಿತ್ತ ಮತ್ತು ವಾತ ವ್ಯಾಧಿಗಳು ಸಂಭವಿಸುತ್ತದೆ.

ಪಿತ್ತೋಷ್ಣರುಗ್ವ್ರಣಭಯಂ ಸಹಜೈರ್ವಿಯೋಗ: ಕ್ಷೇತ್ರಪ್ರವಾದಜನಿತಾರ್ಥವಿಭೂತಿಸಿದ್ಧಿ: । ಜ್ಞಾತ್ಯಗ್ನಿಶತ್ರುನೃಪಚೋರಜನೈರ್ವಿರೋಧೋ ಧಾತ್ರೀಸುತೋ ಹರತಿ ಚೇಚ್ಚರದಂ ಸ್ವಕೀಯಾಮ್ ॥೨೧॥

ಕುಜದಶಾ-ಕುಜಭುಕ್ತಿ:- ಈ ಭುಕ್ತಿಯಲ್ಲಿ ಪಿತ್ತಪ್ರಕೋಪ ಮತ್ತು ಅತ್ಯುಷ್ಣ ಜನಿತ ರೋಗಗಳಿಂದ ಪೀಡೆ, ವ್ರಣ ಅಥವಾ ಘಾಯ, ಸಹೋದರವಿಯೋಗ, ಭೂಮಿ, ವಿವಾದ

ವ್ಯಾಪ್ಯಗಳಿಂದ ಧನಲಾಭ ಮತ್ತು ಕಾರ್ಯಸಾಧನೆ, ರಕ್ತಸಂಬಂಧಿಗಳೊಂದಿಗೆ ಕಲಹ, ಬೆಂಕಿಯಿಂದ ಹಾನಿ, ಶತ್ರುಗಳಿಂದ ಪೀಡೆ, ರಾಜವಿರೋಧ, ಕಳ್ಳರಿಂದ ನಷ್ಟ ಸಂಭವಿಸುತ್ತದೆ.

ಶಸ್ತ್ರಾಗ್ನಿಚೋರರಿಪುಭೂಪಭಯಂ ವಿಷಾರ್ತಿ: ಕುಕ್ಷ್ಯಾಕ್ಷಿಶೀರ್ಷಜಗದೋ ಗುರುಬಂಧುಹಾನಿ: । ಪ್ರಾಣವ್ಯಯೋಽಥ ಯದಿವಾ ವಿಪುಲಾಪದೋ ವಾ ವಕ್ರಾಯುರಂತರಗತೇ ಭುಜಗಾಧಿನಾಥೇ ॥೨೨॥

ಕುಜದಶಾ-ರಾಹುಭುಕ್ತಿ:- 1ವ. 18ದಿ. ಈ ಭುಕ್ತಿಯಲ್ಲಿ ಶಸ್ತ್ರಗಳಿಂದ, ಬೆಂಕಿಯಿಂದ ಮತ್ತು ಕಳ್ಳರಿಂದ ಹಾನಿ ಸಂಭವಿಸುತ್ತದೆ. ಶತ್ರುಭಯ, ವಿಷದಿಂದ ಹಾನಿ, ಹೊಟ್ಟೆ, ಕಣ್ಣು, ತಲೆ ಇವುಗಳ ರೋಗ ಸಂಭವಿಸುತ್ತದೆ. ಗುರುಹಿರಿಯರಿಗೆ ಅಥವಾ ಸಂಬಂಧಿಕರಿಗೆ ಹಾನಿ ಉಂಟಾಗುತ್ತದೆ. ಪ್ರಾಣಹಾನಿಯ ಭಯ ಅಥವಾ ಅತ್ಯಂತಸಂಕಷ್ಟಗಳು ಬಂದೊದಗುತ್ತವೆ.

ದ್ವಿಜವಿಬುಧಸಮರ್ಚಾ ತೀರ್ಥಪುಣ್ಯಾನುಸೇವಾ ಸತತಮತಿಥಿಪೂಜಾಪುತ್ರಮಿತ್ರಾದಿವೃದ್ಧಿ: । ಶ್ರವಣರುಗತಿಮಾತ್ರಂ ಶ್ಲೇಷ್ಮರೋಗೋದ್ಭವೋ ವಾ ಭವತಿ ಕುಜದಶಾಂತ:ಸಂಗತೇ ವಾಗಧೀಶೇ ॥೨೩॥

ಕುಜದಶಾ-ಗುರುಭುಕ್ತಿ:- 11ತಿ.6ದಿ. ಈ ಭುಕ್ತಿಯಲ್ಲಿ ದೇವ-ಬ್ರಾಹ್ಮಣರ ಪೂಜೆ, ತೀರ್ಥಯಾತ್ರೆ, ಪುಣ್ಯಕಾರ್ಯಗಳು, ಅತಿಥಿ ಸತ್ಕಾರ, ಪುತ್ರ, ಮಿತ್ರ ಮತ್ತು ಸಂತಾನ ವೃದ್ಧಿ ಆಗುತ್ತದೆ. ಕಿವಿರೋಗ ಅಥವಾ ಕಫಜನಿತವ್ಯಾಧಿಗಳಿಂದ ಪೀಡಿಸಲ್ಪಡುತ್ತಾನೆ.

ಉಪರ್ಯುಪರಿವಿನಾಶ: ಸ್ವಾತ್ಮಜಸ್ತ್ರೀಗುರೂಣಾಮಗಣಿತವಿಪದಂತರ್ದು:ಖಮರ್ಥೋಪಹಾನಿ: । ವಸುಹರಣಮರಿಭ್ಯೋ ಭೀತಿರುಷ್ಣಾನಿಲಾಗ್ನಿರ್ಭವತಿ ಕುಜದಶಾಯಾಮರ್ಕಜೇ ಸಂಪ್ರಯಾತೇ ॥೨೪॥

ಕುಜದಶಾ-ಶನಿಭುಕ್ತಿ:- 13ತಿ9ದಿಈ ಭುಕ್ತಿಯಲ್ಲಿ ಮಕ್ಕಳು, ಹೆಂಡತಿ ಮತ್ತು ಹಿರಿಯರಿಗೆ ಮೇಲಿಂದ ಮೇಲೆ ಸಂಕಷ್ಟಗಳು ಬಂದೊದಗುತ್ತವೆ. ಹಲವಾರು ಆಪತ್ತುಗಳಿಂದ ಪೀಡಿಸಲ್ಪಡುತ್ತಾನೆ. ದು:ಖ, ಧನನಾಶ ಸಂಭವಿಸುತ್ತದೆ. ಶತ್ರುಗಳಿಂದ ಧನಾಪಹಾರ, ಉಷ್ಣ ಮತ್ತು ವಾಯು ಪ್ರಕೋಪದಿಂದ ಪೀಡಿಸಲ್ಪಡುತ್ತಾನೆ.

ಅರಿಭಯಮುರುಚೋರೋಪದ್ರವೋಽಥಾರ್ಥಹಾನಿ: ಪಶುಗಜತುರಗಾಣಾಂ ವಿಪ್ಲವೋಽಮಿತ್ರಯೋಗ: । ನೃಪಕೃತಪರಿಪೀಡಾ ಶೂದ್ರವೈರೋದ್ಭವೋ ವಾ ವಿಶತಿ ಶಶಿತನೂಜೇ ವಿಶ್ವಧಾತ್ರೀಸುತಾಯು: ॥೨೫॥

ಕುಜದಶಾ-ಬುಧಭುಕ್ತಿ:. 11.ತಿ27ದಿ. ಈ ಭುಕ್ತಿಯಲ್ಲಿ ಶತ್ರುಭಯ, ಕಳ್ಳರಿಂದ ಹಾನಿ,ಪಶುಸಂಪತ್ತು, ಆನೆ, ಕುದುರೆ (ವಾಹನ) ಇವುಗಳ ನಾಶ ಅಥವಾ ಹಾನಿ, ಶತ್ರುಗಳೊಂದಿಗೆ ಸಹವಾಸ. ರಾಜರಿಂದ ಪೀಡನೆ, ಅಥವಾ ಶೂದ್ರಾದಿ ಹೀನ ಜನರೊಂದಿಗೆ ಕಲಹ ಸಂಭವಿಸುತ್ತದೆ.

ಅಶನಿಭಯಮಕಸ್ಮಾದಗ್ನಿಶಸ್ತ್ರಪ್ರಪೀಡಾ ವಿಗಮನಮಥ ದೇಶಾದ್ವಿತ್ತನಾಶೋऽಥವಾ ಸ್ಯಾತ್ । ಅಪಗಮನಮಸುಭ್ಯೋ ಯೋಷಿತೋ ವಾ ವಿನಾಶಃ ಪ್ರವಿಶತಿ ಯದಿ ಕೇತುಃ ಕ್ರೂರನೇತ್ರಾಯುರಂತಮ್ ॥೨೬॥

ಕುಜದಶಾ-ಕೇತುಭುಕ್ತಿ:- 4ತಿ.27ದಿ. ಈ ಭುಕ್ತಿಯಲ್ಲಿ ಸಿಡಿಲಿನಭಯ, ಬೆಂಕಿ ಮತ್ತು ಶಸ್ತ್ರದಿಂದ ಅಕಸ್ಮಾತ್ ಪೀಡೆ, ಪರದೇಶವಾಸ ಅಥವಾ ಸಂಪತ್ತಿನ ನಾಶ, ತನ್ನ ಅಥವಾ ಪತ್ನಿಯ ಮರಣ ಸಂಭವಿಸುತ್ತದೆ.

ಯುಧಿ ಜನಿತವಿಮಾನಂ ವಿಪ್ರವಾಸಃ ಸ್ವದೇಶಾದ್ವಸುಹೃತಿರಪಿ ಚೋರೈರ್ವಾಮನೇತ್ರೋಪರೋಧಃ । ಪರಿಜನಪರಿಹಾನಿರ್ಜಾಯತೇ ಮಾನವಾನಾಮುಪಹರತಿ ಯದಾಯುರ್ಭೌಮಿಜಂ ಭಾರ್ಗವೇಂದ್ರಃ ॥೨೭॥

ಕುಜದಶಾ-ಶುಕ್ರಭುಕ್ತಿ:- 14ತಿ. ಈ ಭುಕ್ತಿಯಲ್ಲಿ ಯುದ್ಧದಲ್ಲಿ ಅಥವಾ ವಿವಾದದಲ್ಲಿ ಅಪಜಯ, ವಿದೇಶದಲ್ಲಿ ವಾಸ, ಕಳ್ಳರಿಂದ ಸಂಪತ್ತಿನ ಅಪಹಾರ, ಎಡಕಣ್ಣಿನ ವ್ಯಾಧಿಗಳು ಸೇವಕರಿಗೆ ಹಾನಿ ಸಂಭವಿಸುತ್ತದೆ.

ನೃಪಕೃತಪರಿಪೂಜಾ ಯುದ್ಧಲಬ್ಧಪ್ರಭಾವಃ ಪರಿಜನಧನಧಾನ್ಯ ಶ್ರೀಮದಂತಃಪುರಂ ಚ । ಅತಿವಿಲಸಿತವೃತ್ತಿಃ ಸಾಹಸಾದಾಪ್ತಲಕ್ಷ್ಮೀಸ್ತಿಮಿರಭಿದಿ ಕುಜಾಯುರ್ದಾಯ ಸಂಹಾರಿಣೀತಿ ॥೨೮॥

ಕುಜದಶಾ-ರವಿಭುಕ್ತಿ:- 4ತಿ.6ದಿ. ಈ ಭುಕ್ತಿಯಲ್ಲಿ ರಾಜರಿಂದ ಸನ್ಮಾನ, ಯುದ್ಧದಲ್ಲಿ ಜಯ ಹೊಂದಿ ಪ್ರಭಾವಶಾಲಿ ಆಗುತ್ತಾನೆ. ಧನ-ಧಾನ್ಯ, ಸಂಪತ್ತು, ಸೇವಕರು, ಅಂತಃಪುರ ಲಭಿಸುತ್ತದೆ. ಅತ್ಯಂತ ವಿಲಾಸದಿಂದ ಕೂಡಿದವನು, ವೃತ್ತಿನಿರತನು, ಸಾಹಸ ಕಾರ್ಯಗಳಿಂದ ಧನಗಳಿಸುವವನು ಆಗುತ್ತಾನೆ.

ವಿವಿಧಧನಸುತಾಪ್ತಿರ್ವಿಪ್ರಯೋಗೋऽರಿವರ್ಗೈರ್ವಸನಶಯನಭೂಷಾರತ್ನಸಂಪತ್ಪ್ರಸೂತಿಃ ।ಭವತಿ ಗುರುಜನಾರ್ತಿರ್ಗುಲ್ಮಪಿತ್ತಪ್ರಪೀಡಾ ಧರಣಿತನಯವರ್ಷಂ ಶೀತಗೌ ಸಂಪ್ರಯಾತೇ ॥೨೯॥

ಕುಜದಶಾ-ಚಂದ್ರಭುಕ್ತಿ:- 7ತಿ. ಈ ಭುಕ್ತಿಯಲ್ಲಿ ತರತರದ ಧನ-ಸಂಪತ್ತು ಮತ್ತು ಸಂತಾನಪ್ರಾಪ್ತಿ ಆಗುತ್ತದೆ. ಶತ್ರುಪೀಡೆ, ವಸ್ತ್ರ, ಹಾಸಿಗೆ, ಆಭರಣ, ರತ್ನ, ಸಂಪತ್ತು ಲಭಿಸುತ್ತದೆ. ಹಿರಿಯರಿಗೆ ಅನಾರೋಗ್ಯ, ಗುಲ್ಮರೋಗ, ಪಿತ್ತಪ್ರಕೋಪದಿಂದ ಪೀಡೆ ಸಂಭವಿಸುತ್ತದೆ.

ವಿಷಾಂಬುರುಗ್ದುಷ್ಟಭುಜಂಗದರ್ಶನಂ ಪರಾಬಲಾಸಂಯುತಿರಿಷ್ಟವಿಚ್ಯುತಿಃ ಅರಿಷ್ಟವಾಗ್ದುಷ್ಟಜನವ್ಯಥಾ ಭವೇದ್ವಿಧುಂತುದೇನಾಪಹೃತೇ ಸ್ವವತ್ಸರೇ ॥೩೦॥

ರಾಹುದಶಾ-ರಾಹುಭುಕ್ತಿ:- 32ತಿ.12ದಿ. ಈ ಭುಕ್ತಿಯಲ್ಲಿ ವಿಷದಿಂದ ಪೀಡೆ, ಜಲದೋಷಜನಿತ ವ್ಯಾಧಿಗಳು, ಸರ್ಪಗಳು ನೋಡಲು ಲಭಿಸುತ್ತವೆ. ಪರಸ್ತ್ರೀಸಂಯೋಗ, ಇಷ್ಟಜನರ ವಿಯೋಗ, ದುಷ್ಟಜನರಿಂದ ಅವಾಚ್ಯ ಮಾತುಗಳನ್ನು ಕೇಳಬೇಕಾಗುತ್ತದೆ. ಮಾನಸಿಕ ಅಶಾಂತಿ ಉಂಟಾಗುತ್ತದೆ.

ಸುಖೋಪನೀತಿ: ಸುರವಿಪ್ರಪೂಜನಂ ವಿರೋಗತಾ ವಾಮದೃಶಾಂ ಸಮಾಗಮ: ।
ಸುಪುಣ್ಯಶಾಸ್ತ್ರಾರ್ಥವಿಚಾರಸಂಭವ: ಸುರಾರಿದಾಯಾಂತರಗೇ ಬೃಹಸ್ಪತೌ ॥೩೨॥

ರಾಹುದಶಾ-ಗುರುಭುಕ್ತಿ:- (2ವ. 4ತಿ. 24ದಿ.) ಈ ಭುಕ್ತಿಯಲ್ಲಿ ಸುಖ, ನೀತಿ, ದೇವಬ್ರಾಹ್ಮಣರ ಪೂಜೆ, ಆರೋಗ್ಯ, ಸುಂದರ ಸ್ತ್ರೀಯರ ಸಮಾಗಮ. ಪುಣ್ಯಕಾರ್ಯ ಗಳನ್ನು ಮತ್ತು ಶಾಸ್ತ್ರವಿಚಾರಮಥನ ಮಾಡುತ್ತಾನೆ.

ಸಮೀರಪಿತ್ತಪ್ರಗದ: ಕ್ಷತಿಸ್ತನೌ ತನೂಜಯೋಷಿತ್ಸಹಜೈಶ್ಚ ವಿಗ್ರಹ: । ಸ್ವಭೃತ್ಯ
ನಾಶಶ್ಚ ಪದಚ್ಯುತಿರ್ಭವೇದ್ಧಿತಿಪ್ರಜಾಯು: ಪ್ರವಿಶತ್ಯಥಾರ್ಕಜೇ ॥೩೨॥

ರಾಹುದಶಾ-ಶನಿಭುಕ್ತಿ:- (2ವ. 10ತಿ. 6ದಿ.) ಈ ಭುಕ್ತಿಯಲ್ಲಿ ವಾತ ಮತ್ತು ಪಿತ್ತರೋಗಗಳು, ದೇಹದಲ್ಲಿ ಘಾಯ, ಮಕ್ಕಳು, ಪತ್ನಿ ಮತ್ತು ಸಹೋದರರೊಂದಿಗೆ ಅಭಿಪ್ರಾಯ ಭೇಧ ಅಥವಾ ಕಲಹ, ಸೇವಕವರ್ಗದ ನಾಶ, ಸ್ಥಾನಚ್ಯುತಿ ಸಂಭವಿಸುತ್ತದೆ.

ಸುತಸ್ವಸಿದ್ಧಿ: ಸುಹೃದಾಂ ಸಮಾಗಮೋ ಮನೋವಿನಿಂದ್ಯತ್ವಮತೀವ ಜಾಯತೇ ।
ಪಟುಕ್ರಿಯಾಭೂಷಣಕೌಶಲಾದಯೋ ಭುಜಜ್ಗಸಂವತ್ಸರಹಾರಿಣೀಂದುಜೇ ॥೩೩॥

ರಾಹುದಶಾ-ಬುಧಭುಕ್ತಿ:- (2ವ. 6ತಿ. 18ದಿ.) ಈ ಭುಕ್ತಿಯಲ್ಲಿ ಸಂತಾನ ಮತ್ತು ಧನಪ್ರಾಪ್ತಿ, ಮಿತ್ರರೊಂದಿಗೆ ಸಮಾಗಮ, ಮನಸ್ಸಿನಲ್ಲಿ ನಿಂದಿತ ಭಾವನೆಗಳು ಮತ್ತು ಕಲಾಕುಶಲತೆ ಇರುತ್ತದೆ.

ಜ್ವರಾಗ್ನಿಶಸ್ತ್ರಾರಿಭಯಂ ಶಿರೋರುಜಾ ಶರೀರಕಂಪ: ಸ್ವಸುಹೃದ್ಗುರುವ್ಯಥಾ ।
ವಿಷವ್ರಣಾರ್ತಿ: ಕಲಹ: ಸುಹೃಜ್ಜನೈರಹೀಂದ್ರದಾಯಾಂತರಗೇ ಶಿಖಾಧರೇ ॥೩೪॥

ರಾಹುದಶಾ-ಕೇತುಭುಕ್ತಿ:- (1ವ. 18ದಿ.) ಈ ಭುಕ್ತಿಯಲ್ಲಿ ಜ್ವರ ಪೀಡೆ, ಅಗ್ನಿ, ಆಯುಧ ಮತ್ತು ಶತ್ರುಗಳ ಭಯ, ಶಿರಸ್ಸಿನ ವ್ಯಾಧಿಗಳು, ಶರೀರಕಂಪನ, ಮಿತ್ರರಿಗೆ ಮತ್ತು ಹಿರಿಯರಿಗೆ ದು:ಖ, ವಿಷ ಮತ್ತು ವ್ರಣಪೀಡೆ ಮತ್ತು ಮಿತ್ರರೊಂದಿಗೆ ಕಲಹ ಸಂಭವಿಸುತ್ತದೆ.

ಕಲತ್ರಲಬ್ಧಿ: ಶಯನೋಪಚಾರತಾ ತುರಂಗ ಮಾತಂಗ ಮಹೀಸಮಾಗಮ: ।
ಕಫಾನಿಲಾಪ್ತಿ: ಸ್ವಜನೈರ್ವಿರೋಧಿತಾ ಭವೇದ್ಭುಜಂಗಾಯುರಪಾಹೃತೌ ಭೃಗೋ:॥

ರಾಹುದಶಾ-ಶುಕ್ರಭುಕ್ತಿ:- (3ವ.) ಈ ಭುಕ್ತಿಯಲ್ಲಿ ಪತ್ನಿಪ್ರಾಪ್ತಿ, ಶಯನಸಾಧನ ಗಳು, ಕುದುರೆ, ಆನೆ ಇತ್ಯಾದಿ (ವಾಹನ), ಭೂಮಿ, ಲಭಿಸುತ್ತದೆ. ಕಫ-ವಾತ ದೋಷ ಗಳಿಂದ ಪೀಡೆ, ಸ್ವಜನರೊಂದಿಗೆ ವಿವಾದ ಸಂಭವಿಸುತ್ತದೆ.

ಅರಿವ್ಯಥಾ ಸ್ಯಾದತಿಪೀಡನಂ ದೃಶೋರ್ವಿಷಾಗ್ನಿಶಸ್ತ್ರಾಹಶಿರಾಪಮುದ್ಗಮ: ।
ವಧೂಸುತಾರ್ತಿರ್ನೃಪತೇರ್ಮಹದ್ಭಯಂ ಭುಜಂಗವರ್ಷೇ ತಿಮಿರಾರಿಣಾಹೃತೇ ॥

ರಾಹುದಶಾ-ರವಿಭುಕ್ತಿ:- (10ತಿ. 24ದಿ.) ಈ ಭುಕ್ತಿಯಲ್ಲಿ ಶತ್ರುಪೀಡೆ, ಅಧಿಕ ಕಣ್ಣುನೋವು, ವಿಷ, ಅಗ್ನಿ ಮತ್ತು ಆಯುಧದಿಂದ ಅಪಾಯ, ಆಪತ್ತು ಉಂಟಾಗು

ತ್ತದೆ. ಹೆಂಡತಿ ಮಕ್ಕಳಿಗೆ ಅನಾರೋಗ್ಯ, ರಾಜಭಯ ಅಥವಾ ರಾಜರಿಂದ ಆಪತ್ತು ಸಂಭವಿಸುತ್ತದೆ.

ವಧೂವಿನಾಶ: ಕಲಹೋ ಮನೋರುಜಾ ಕೃಷಿಕ್ರಿಯಾ ವಿತ್ತಪಶುಪ್ರಜಾಕ್ಷಯ: ।
ಸುಹೃದ್ವಿಪತ್ತಿ: ಸಲಿಲಾದ್ಭಯಂ ಭವೇದ್ವಿದೌ ದಶಾಭುಕ್ತರಿ ದೇವವಿದ್ವಿಷ: ॥೩೭॥

ರಾಹುದಶಾ-ಚಂದ್ರಭುಕ್ತಿ:- (1ವ. 6ತಿ.) ಈ ಭುಕ್ತಿಯಲ್ಲಿ ಪತ್ನಿಯನಾಶ, ಕಲಹ, ಮಾನಸಿಕ ಚಿಂತೆ, ಕೃಷಿ-ಬೇಸಾಯ, ಧನ ಮತ್ತು ಪಶುಸಂಪತ್ತಿನ ನಾಶ, ಸಂತಾನಹಾನಿ, ಮಿತ್ರರಿಗೆ ಆಪತ್ತು, ಮತ್ತು ಜಲಪ್ರಯಾಣದಲ್ಲಿ ವಿಪತ್ತು ಸಂಭವಿಸುತ್ತದೆ.

ನೃಪಾಗ್ನಿಚೋರಾಸ್ತ್ರಭಯಂ ಶರೀರಿಣಾಂ ಶರೀರನಾಶೋ ಯದಿ ವಾ ಮಹಾರುಜ:।
ಪದಭ್ರಮೋ ಹೃನ್ನಯನಪ್ರಪೀಡನಂ ಯದಾತ್ರ ಸರ್ಪಾಯುಷಿ ಸಂಚರೇತ್ಕುಜ ॥

ರಾಹುದಶಾ-ಕುಜಭುಕ್ತಿ:- (1ವ. 18ದಿ.) ಈ ಭುಕ್ತಿಯಲ್ಲಿ ರಾಜರಿಂದ, ಬೆಂಕಿ, ಕಳ್ಳರು ಮತ್ತು ಆಯುಧಗಳಿಂದ ಪೀಡೆಸಂಭವಿಸುತ್ತದೆ. ಮಹಾವ್ಯಾಧಿಗಳಿಂದ ಅವಸಾನ, ಸ್ಥಾನಚ್ಯುತಿ, ಹೃದಯ ಮತ್ತು ಕಣ್ಣಿನವ್ಯಾಧಿಗಳು ಸಂಭವಿಸುತ್ತದೆ.

ಸೌಭಾಗ್ಯಕಾಂತಿ ಬಹುಮಾನಗುಣೋದಯ: ಸ್ಯಾತ್ಸತ್ಪುತ್ರಸಿದ್ಧಿರವನೀಪತಿಪೂಜನಂ ಚ। ಆಚಾರ್ಯಸಾಧುಜನಸಂಯುತಿರಿಷ್ಟಸಿದ್ಧಿ: ಸಂವತ್ಸರಂ ಹರತಿ ದೇವಗುರೌ ಸ್ವಕೀಯಮ್ ॥೩೯॥ ,

ಗುರುದಶಾ-ಗುರುಭುಕ್ತಿ:- (2ವ. 1ತಿ. 18ದಿ.) ಈ ಭುಕ್ತಿಯಲ್ಲಿ ಸೌಭಾಗ್ಯಪ್ರಾಪ್ತಿ, ಕಾಂತಿ, ಅತ್ಯಂತ ಮಾನಸನ್ಮಾನ, ಸದ್ಗುಣ, ಮತ್ತು ಉತ್ತಮಪುತ್ರ ಪ್ರಾಪ್ತಿ ಆಗುತ್ತದೆ. ರಾಜರಿಂದ ಸನ್ಮಾನ, ಶಾಸ್ತ್ರಬಲ್ಲವರು, ಮತ್ತು ಸಾಧುಸಂತರೊಡನೆ ಕೂಡುವಿಕೆ, ಮನೋಭೀಷ್ಟಗಳ ಪೂರೈಕೆ ಸಂಭವಿಸುತ್ತದೆ.

ವೇಶ್ಯಾಂಗನಾಮದಕೃದಾಸವದೋಷಸಂಗ: ಉತ್ಕರ್ಷಸೌಖ್ಯಸಕುಟುಂಬ ಪಶುಪ್ರ-ಪೀಡಾ । ಅರ್ಥವ್ಯಯೋರುಭಯಮಕ್ಷಿಜರುಕ್ಸುತಾರ್ತಿ ರ್ಜೈವೀಂದಶಾಂವಿಶತಿ ದೈನ ಕರೇ ನರಾಣಾಮ್ ॥೪೦॥

ಗುರುದಶಾ-ಶನಿಭುಕ್ತಿ:- (2ವ. 6ತಿ. 12ದಿ.) ಈ ಭುಕ್ತಿಯಲ್ಲಿ ವೇಶ್ಯಾಸ್ತ್ರೀಯರ ಸಹವಾಸ. ಅಮಲು ಪದಾರ್ಥಸೇವನೆ, ನೀಚಜನರೊಂದಿಗೆ ಸಹವಾಸ, ಅಭ್ಯುದಯ, ಸೌಖ್ಯ, ಕುಟುಂಬೀಯರಿಗೆ ಅನಾರೋಗ್ಯ, ಪಶುಗಳಿಗೆ ಪೀಡೆ, ಧನವ್ಯಯ, ಎರಡೂ ಕಣ್ಣುಗಳಿಗೆ ಮತ್ತು ಮಕ್ಕಳಿಗೆ ವ್ಯಾಧಿಪೀಡೆ ಸಂಭವಿಸುತ್ತದೆ.

ಸ್ತ್ರೀದ್ಯೂತಮದ್ಯಜಮಹಾವ್ಯಸನಂ ತ್ರಿದೋಷೈ: ಕೇಚಿದ್ವದಂತ್ಯಪಿ ಚ ಕೇವಲಮಂ-ಗಲಾಪ್ತಿ: । ದೇವದ್ವಿಜಾರ್ಚನಸುತಾರ್ಥಸುಖಪ್ರಯೋಗೈರ್ಗೀರ್ವಾಣಪೂಜಿತದಶಾಂ ಹರತೀಂದುಸೂನೌ ॥೪೧॥

ಗುರುದಶಾ-ಬುಧಭುಕ್ತಿ:- (2ವ. 3ತಿ. 6ದಿ.) ಈ ಭುಕ್ತಿಯಲ್ಲಿ ಸ್ತ್ರೀ ಹೇತುವಿನಿಂದ, ಜೂಜು, ಮದ್ಯ ಮತ್ತು ತ್ರಿದೋಷಪ್ರಕೋಪದಿಂದ ಪೀಡಿಸಲ್ಪಡುತ್ತಾನೆ ಎಂದು

ಕೆಲವು ಆಚಾರ್ಯರ ಮತ ಆಗಿರುತ್ತದೆ. ದೇವ-ಬ್ರಾಹ್ಮಣರ ಆರಾಧನೆ, ಸಂತಾನಸುಖ, ಧನಲಾಭ ಮತ್ತು ಸುಖ ಲಭಿಸುತ್ತದೆ ಎಂದು ಇನ್ನಿತರ ಆಚಾರ್ಯರ ಮತ ಆಗಿರುತ್ತದೆ.

ಶಸ್ತ್ರವ್ರಣಂ ಭವತಿ ಭೃತ್ಯಜನೈರ್ವಿರೋಧಶ್ಚಿತ್ತವ್ಯಥಾ ತನಯಯೋಷಿದುಪದ್ರವಶ್ಚ ।
ಪ್ರಾಣಚ್ಯುತಿರ್ಗುರುಸುಹೃಜ್ಜನವಿಪ್ರಯೋಗಃ ಸೌರೇಢ್ಯಮಾಯುರಪಹೃತ್ಯ ದದಾತಿ ಕೇತುಃ ॥೪೨॥

ಗುರುದಶಾ-ಕೇತುಭುಕ್ತಿಃ. (11ತಿ. 6ದಿ.) ಈ ಭುಕ್ತಿಯಲ್ಲಿ ಶಸ್ತ್ರಾಘಾತದಿಂದ ವ್ರಣ, ಸೇವಕರಿಂದ ಅಥವಾ ಕೈಕೆಳಗಿನವರೊಂದಿಗೆ ವಿರೋಧ, ಮಾನಸಿಕ ವ್ಯಥೆ, ಹೆಂಡತಿ ಮಕ್ಕಳಿಗೆ ತೊಂದರೆಗಳು, ಪ್ರಾಣಹಾನಿ, ಹಿರಿಯರ ಅಥವಾ ಮಿತ್ರರ ವಿಯೋಗ ಸಂಭವಿಸುತ್ತದೆ.

ನಾನಾವಿಧಾರ್ಥಪಶುಧಾನ್ಯಪರಿಚ್ಛದಸ್ತ್ರೀಪುತ್ರಾನ್ನಪಾನಶಯನಾಂಬರಭೂಷಣಾಪ್ತಿಃ ।
ದೇವದ್ವಿಜಾರ್ಚನಮುಪಾಸನತತ್ಪರತ್ವಮಾಯುರ್ಯದಾ ಹರತಿ ಜೈವಮಥಾಸುರೇಡ್ಯಃ ॥

ಗುರುದಶಾ-ಶುಕ್ರಭುಕ್ತಿಃ- (2ವ. 8ತಿ.) ಈ ಭುಕ್ತಿಯಲ್ಲಿ ತರತರದ ಪದಾರ್ಥಪ್ರಾಪ್ತಿ ಪಶುಸಂಪತ್ತಿ, ಧಾನ್ಯ, ಪಾತ್ರೆ, ಸ್ತ್ರೀ, ಪುತ್ರ, ಅನ್ನ-ಪಾನ, ಹಾಸಿಗೆ, ಆಭರಣ ಇತ್ಯಾದಿ ಲಭಿಸುತ್ತದೆ. ದೇವ-ಬ್ರಾಹ್ಮಣರ ಪೂಜನೆ ಮತ್ತು ಉಪಾಸನೆ ಮಾಡುತ್ತಾನೆ.

ಶತ್ರೋರ್ಜಯಃ ಕ್ಷಿತಿಪಮಾನನಕೀರ್ತಿಲಾಭ : ಸ್ಯಾಚ್ಚಂಡತಾ ನರತುರಂಗವಾಹನಾಪ್ತಿಃ।
ಶ್ರೇಣ್ಯಗ್ರಹಾರಪುರರಾಷ್ಟ್ರಸಮಸ್ತಸಂಪದುಚ್ಚೈರುಚಥ್ಯಸಹಜಾಯುರಪಾಹೃತೇಽರ್ಕೇ

ಗುರುದಶಾ-ರವಿಭುಕ್ತಿಃ- (9ತಿ. 18ದಿ.) ಈ ಭುಕ್ತಿಯಲ್ಲಿ ಶತ್ರುಗಳನ್ನು ಜಯಿಸುತ್ತಾನೆ, ರಾಜರಿಂದ ಸನ್ಮಾನ, ಕೀರ್ತಿಲಾಭ, ಪ್ರಚಂಡತೆ, ಮನುಷ್ಯ ಅಥವಾ ಕುದುರೆ ಸವಾರಿ, (ವಾಹನ ಸುಖ), ಆಧುನಿಕ ಪಟ್ಟಣದಲ್ಲಿ ಸಕಲ ಸೌಕರ್ಯಉಳ್ಳವನಾಗಿ ವಾಸಿಸುತ್ತಾನೆ.

ಯೋಷಿದ್ಬಹುತ್ವಮರಿನಾಶನಮರ್ಥಲಾಭಃ ಕೃಷ್ಯರ್ಥವಸ್ತುಪರಮೋನ್ನತಕೀರ್ತಿಲಾಭಃ।
ದೇವದ್ವಿಜಾರ್ಚನಪರತ್ವಮತೀವ ಪುಂಸಾಂ ಸಂಜಾಯತೇ ಗುರುದಶಾಹೃತಿ ಶರ್ವರೀಶೇ ॥

ಗುರುದಶಾ-ಚಂದ್ರಭುಕ್ತಿಃ- (1ವ. 4ತಿ.) ಈ ಭುಕ್ತಿಯಲ್ಲಿ ಅನೇಕ ಸ್ತ್ರೀಯರಿಂದ ಕೂಡಿದವನು, ಶತ್ರುನಾಶ, ಧನಲಾಭ, ಕೃಷಿಸಾಧನಗಳು, ಅಧಿಕ ಕೀರ್ತಿ ಲಾಭ ಸಂಭವಿಸುತ್ತದೆ. ದೇವ-ಬ್ರಾಹ್ಮಣರ ಅರ್ಚನೆ ಮಾಡುತ್ತಾನೆ.

ಬಂಧೂಪತೋಷಣಮರಿವ್ರಜತೋಽರ್ಥಲಾಭಃ ಸುಕ್ಷೇತ್ರಸತ್ಕೃತಿರಿಹ ಪ್ರಥಿತ-ಪ್ರಭಾವಃ । ಈಷದ್ಗುರೂಪಹತಿರೀಕ್ಷಣಸುಕ್ಷತಿರ್ವಾ ಕ್ಷಿತ್ಯಾತ್ಮಜೇ ಹರತಿ ವತ್ಸರಮಾರ್ಯಜಾತಮ್ ॥೪೬॥

ಗುರುದಶಾ-ಕುಜಭುಕ್ತಿಃ- (11ತಿ. 6ದಿ.) ಈ ಭುಕ್ತಿಯಲ್ಲಿ ಸಂಬಂಧಿಕರನ್ನು ಸಾಕುವುದು, ಶತ್ರುಗಳಿಂದ ಧನನಾಶ, ಭೂಮಿಲಾಭ, ಸತ್ಕರ್ಮ, ಪ್ರಭಾವ, ಗುರು ಅಥವಾ ಹಿರಿಯರಿಗೆ ಆಘಾತ, ಕಣ್ಣುನೋವು ಸಂಭವಿಸುತ್ತದೆ.

ಬಂಧೂಪತಪ್ತಿರುರುಮಾನಸರುಗ್ಗದಾರ್ತಿ ಶ್ಚೋರಾದ್ಭಯಂ ಗುರುಗದೋ ಜರ-
ರೋದ್ಭವೋ ವಾ । ರಾಜೇಂದ್ರಪೀಡನಮರಿವ್ಯಸನಂ ಸ್ವನಾಶ: ಸಂಪದ್ಯತೇ ಪರತಿ
ಸೂರಿದಶಾಂ ಸುರಾರೌ ॥೪೭॥

ಗುರುದಶಾ-ರಾಹುಭುಕ್ತಿ: (2ವ. 4ತಿ. 24ದಿ.) ಈ ಭುಕ್ತಿಯಲ್ಲಿ ಬಂಧುಗಳಿಂದ ಅಶಾಂತಿ, ಮಾನಸಿಕ ಪೀಡೆ, ರೋಗಪೀಡೆ, ಕಳ್ಳರಭಯ, ಹಿರಿಯರಿಗೆ ಅಥವಾ ಕಿರಿಯರಿಗೆ ಅನಾರೋಗ್ಯ, ರಾಜರಿಂದ ಪೀಡೆ, ಶತ್ರುಗಳಿಂದ ದು:ಖ, ಸಂಪತ್ತಿನನಾಶ ಸಂಭವಿಸುತ್ತದೆ.

ಕೃಷಿವೃದ್ಧಿಭೃತ್ಯಮಹಿಷಾಭ್ಯುದಯ: ಪವನಾಮಯೋ ವೃಷಲಜಾತಿಧನಮ್ ।
ಸ್ಥವಿರಾಂಗನಾಪ್ತಿರಲಸತ್ವಮಘೋ ನಿಜವತ್ಸರಾಂತರಗತೇ ರವಿಜೇ ॥೪೮॥

ಶನಿದಶಾ-ಶನಿಭುಕ್ತಿ:- (3ವ. 3ದಿ.) ಈ ಭುಕ್ತಿಯಲ್ಲಿ ಕಷಿ-ಬೇಸಾಯದಲ್ಲಿ ವೃದ್ಧಿ, ಅಧಿಕ ಸೇವಕರು, ಹೆಚ್ಚು ಪಶುಗಳು, ವಾತ ವ್ಯಾಧಿಗಳು, ಹೀನ ಜಾತಿಯ ಜನರಿಂದ ಧನಲಾಭ, ವೃದ್ಧಸ್ತ್ರೀಯ ಸಹವಾಸ, ಆಲಸ್ಯತನ ಮತ್ತು ಪಾಪಕರ್ಮ ಮಾಡುತ್ತಾನೆ.

ಸುಭಗತ್ವಮಸ್ತಿ ಸುಹಿತಾ ವನಿತಾ ನೃಪಲಾಲನಂ ವಿಜಯಮಿತ್ರಯುತಿ: ।
ತ್ರಿಗದೋದ್ಭವ: ಸಹಜಪುತ್ರರುಜಾ ಶನಿದಾಯಹಾರಿಣಿ ಶಶಾಂಕಸುತೇ ॥೪೯॥

ಶನಿದಶಾ-ಬುಧಭುಕ್ತಿ:- (2ವ. 8ತಿ.9ದಿ.) ಈಭುಕ್ತಿಯಲ್ಲಿ ಸೌಭಾಗ್ಯ, ಸುಖ, ಸ್ತ್ರೀ, ರಾಜರಿಂದಬಿರುದು, ಜಯ, ಮಿತ್ರರೊಂದಿಗೆ ಸಮಾಗಮ ಇತ್ಯಾದಿ ಲಭಿಸುತ್ತದೆ. ತ್ರಿದೋಷಜನಿತ ಪೀಡೆ, ಸಹೋದರ ಮತ್ತು ಪುತ್ರರಿಗೆ ಅನಾರೋಗ್ಯ ಸಂಭವಿಸುತ್ತದೆ.

ಮರುದಗ್ನಿಪೀಡನಮರಿವ್ಯಸನಂ ಸುತದಾರವಿಗ್ರಹಮತಿ: ಸತತಮ್ । ಅಶುಭಾವ
ಲೋಕನಮಹೇಶ್ಚ ಭಯಂ ಮೃದುವತ್ಸರಂಹರತಿ ಕೇತುಪತೌ ॥೫೦॥

ಶನಿದಶಾ-ಕೇತುಭುಕ್ತಿ:- (1ವ. 1ತಿ. 9ದಿ.) ಈ ಭುಕ್ತಿಯಲ್ಲಿ ವಾಯು ಮತ್ತು ಅಗ್ನಿ ಜನಿತ ವ್ಯಾಧಿಗಳಿಂದ ಪೀಡೆ, ಶತ್ರುಗಳಿಂದ ದು:ಖ, ಹೆಂಡತಿ ಮಕ್ಕಳೊಂದಿಗೆ ಯಾವಾಗಲೂ ಕಲಹ, ಅಶುಭಕಾರ್ಯಗಳನ್ನು ನೋಡಬೇಕಾಗುತ್ತದೆ. ಸರ್ಪಭಯ ಇರುತ್ತದೆ.

ಸುಹೃದಂಗನಾತನಯಸೌಖ್ಯಯುತ: ಕೃಷಿತೋಯಮಾನಜನಿತಾರ್ಥಚಯ: । ಶುಭ
ಕೀರ್ತಿರುದ್ಭವತಿ ದೇಹಭೃತಾಂ ಯಮದಾಯಹಾರಿಣಿ ಭೃಗೋಸ್ತನಯೇ ॥೫೧॥

ಶನಿದಶಾ-ಶುಕ್ರಭುಕ್ತಿ:- (3ವ. 2ತಿ.) ಈ ಭುಕ್ತಿಯಲ್ಲಿ ತನ್ನ ಮಿತ್ರರು, ಪತ್ನಿ ಮತ್ತು ಪುತ್ರರೊಂದಿಗೆ ಸುಖ-ಸಂತೋಷದಿಂದ ಇರುತ್ತಾನೆ. ಕೃಷಿ-ಬೇಸಾಯ, ಜಲ ಪ್ರಯಾಣದಿಂದ ಧನಸಂಚಯ ಆಗುತ್ತದೆ. ಸತ್ಕೀರ್ತಿ ಲಭಿಸುತ್ತದೆ.

ಮರಣಂ ತು ವಾ ರಿಪುಭಯಂ ಸತತಂ ಗುರುವರ್ಗರುಗ್ಜ್ವರನೇತ್ರರುಜಾ। ಧನ
ಧಾನ್ಯವಿಚ್ಯುತಿರಿಹ ಪ್ರಭವೇದ್ರವಿಜಾಯುರಾವಿಶತಿ ತೀವ್ರಕರೇ ॥೫೨॥

ಶನಿದಶಾ-ರವಿಭುಕ್ತಿ:- (11ತಿ. 12ದಿ.) ಈ ಭುಕ್ತಿಯಲ್ಲಿ ಮರಣ ಅಥವಾ ಶತ್ರು ಭಯ ಯಾವಗಲೂ ಇರುತ್ತದೆ. ಹಿರಿಯರಿಗೆ ಅನಾರೋಗ್ಯ, ಜಠರ ಮತ್ತು ನೇತ್ರ ರೋಗಗಳಿಂದ ಪೀಡಿಸಲ್ಪಡುತ್ತಾನೆ. ಧನ-ಧಾನ್ಯಗಳ ನಾಶ ಸಂಭವಿಸುತ್ತದೆ.

ವನಿತಾಪತಿರ್ಮರಣಮೇವ ನೃಣಾಂ ಸುಹೃದಾಂ ವಿಪತ್ತಿರಥ ರೋಗಭಯಮ್ ।
ಜಲವಾತಜಂ ಭಯಮತೀವ ಭವೇದ್ರವಿಜಾಯುರಾವಿಶತಿ ರಾತ್ರಿಕರೇ ॥೫೩॥

ಶನಿದಶಾ-ಚಂದ್ರಭುಕ್ತಿ:- (1ವ. 7ತಿ.) ಈ ಭುಕ್ತಿಯಲ್ಲಿ ಪತ್ನಿಯನ್ನು ಕಳಕೊಳ್ಳುತ್ತಾನೆ ಅಥವಾ ಸ್ವಮರಣ ಸಂಭವಿಸುತ್ತದೆ. ಮಿತ್ರರಿಗೆ ವಿಪತ್ತು, ರೋಗಭಯ, ಜಲ ಭೀತಿ ವಾತರೋಗದ ಭಯ ಸಂಭವಿಸುತ್ತದೆ.

ಸ್ವಪದಚ್ಯುತಿ: ಸ್ವಜನವಿಗ್ರಹರುಗ್ಜ್ವರವಹ್ನಿಶಸ್ತ್ರವಿಷಭೀರಥ ವಾ । ಅರಿವೃದ್ಧಿರಾಂತ-
ರರುಗಕ್ಷಿಭಯಂ ರವಿಜಾಯುರಾವಿಶತಿ ಭೂಮಿಸುತೇ ॥೫೪॥

ಶನಿದಶಾ-ಕುಜಭುಕ್ತಿ:- (1ವ. 1ತಿ. 9ದಿ.) ಈ ಭುಕ್ತಿಯಲ್ಲಿ ಸ್ಥಾನಚ್ಯುತಿ, ಸ್ವಜನರೊಂದಿಗೆ ಕಲಹ, ರೋಗ, ಜ್ವರ, ಅಗ್ನಿ, ಶಸ್ತ್ರ, ಅಥವಾ ವಿಷದಿಂದ ಪೀಡೆ, ಹೆಚ್ಚು ಶತ್ರುಗಳು, ಅಂತ್ರವೃದ್ಧಿ, ಕಣ್ಣಿನವ್ಯಾಧಿಗಳು ಸಂಭವಿಸುತ್ತದೆ.

ಅಪಮಾರ್ಗಯಾನಮಸುಭಿರ್ವಿರಹಸ್ತ್ವಥವಾ ಪ್ರಮೇಹಗುರುಗುಲ್ಮ ಭಯಮ್ ।
ಜ್ವರರುಕ್‌ಕ್ಷತಿ: ಸತತಮೇವ ನೃಣಾಮಸಿತಾಂತರಂ ವಿಶತಿ ಭೋಗಿಪತೌ ॥೫೫॥

ಶನಿದಶಾ-ರಾಹುಭುಕ್ತಿ:- (2ವ. 10ತಿ. 6ದಿ.) ಈ ಭುಕ್ತಿಯಲ್ಲಿ ನ್ಯಾಯಮಾರ್ಗದಿಂದ ಚ್ಯುತಿ, ಜೀವಹಾನಿ, ಪ್ರಮೇಹ, ಸಿಹಿಮೂತ್ರ ಮತ್ತು ಗುಲ್ಮರೋಗದಿಂದ ಪೀಡೆ, ಜ್ವರ, ಘಾಯ, ಸಂಭವಿಸುತ್ತದೆ.

ಅಮರಾರ್ಚನದ್ವಿಜಗಣಾಭಿರುಚಿರ್ಗೃಹಪುತ್ರದಾರವಿಹೃತಿಸ್ತು ಭವೇತ್ । ಧನಧಾನ್ಯ
ವೃದ್ಧಿರಧಿಕಾ ಹಿ ನೃಣಾಂ ಗತಪತ್ಯಥಾರ್ಕಿವಯಸೀಂದ್ರಗುರೌ ॥೫೬॥

ಶನಿದಶಾ-ಗುರುಭುಕ್ತಿ:- (2ವ. 6ತಿ. 12ದಿ.) ಈ ಭುಕ್ತಿಯಲ್ಲಿ ದೇವ-ಬ್ರಾಹ್ಮಣರ ಪೂಜೆ, ಪತ್ನಿ ಪುತ್ರರೊಂದಿಗೆ ಸ್ವಗೃಹದಲ್ಲಿ ಸಂತೋಷದಿಂದ ವಾಸ, ಧನ-ಧಾನ್ಯ ಇತ್ಯಾದಿಗಳ ಅಭಿವೃದ್ಧಿ ಆಗುತ್ತದೆ.

ಧರ್ಮಮಾರ್ಗನಿರತಿರ್ವಿಪಶ್ಚಿತಾಂ ಸಂಗಮೋ ವಿಮಲಧೀರ್ಧನಂ ದ್ವಿಜಾತ್ ।
ವಿದ್ಯಯಾ ಬಹುಯಶ: ಸುಖಂ ಸದಾ ಚಂದ್ರಜೇ ಹರತಿ ವತ್ಸರಂ ಸ್ವಕಮ್ ॥೫೭॥

ಬುಧದಶಾ-ಬುಧಭುಕ್ತಿ:- (2ವ. 4ತಿ. 27ದಿ.) ಈ ಭುಕ್ತಿಯಲ್ಲಿ ಧರ್ಮಮಾರ್ಗವನ್ನು ಅನುಸರಿಸುವವನು, ಪರಿಶುದ್ಧ ಮನಸ್ಸುಳ್ಳವನು ಅಥವಾ ಶಾಂತ ಬುದ್ಧಿಯುವನು, ಬ್ರಾಹ್ಮಣರಿಂದ ಧನಪಡೆಯುವವನು, ವಿದ್ಯೆಯಿಂದ ಯಶಸ್ಸನ್ನು ಗಳಿಸುವವನು ಸದಾ ಸುಖವಂತನು ಆಗುತ್ತಾನೆ.

ದು:ಖಶೋಕಕಲಹಾಕುಲಾತ್ಮತಾ ಗಾತ್ರಕಂಪನಮಮಿತ್ರಸಂಯುತಿ: । ಕ್ಷೇತ್ರಯಾನ
ವಿಯುತಿರ್ಯದಾ ಭವೇತ್ಸೋಮಸೂನುಶರದಂ ಗತ: ಶಿಖೀ ॥೫೮॥

ಬುಧದಶಾ-ಕೇತುಭುಕ್ತಿ:- (11ತಿ. 27ದಿ.) ಈ ಭುಕ್ತಿಯಲ್ಲಿ ದು:ಖ ಪೀಡಿತನು, ಶೋಕ ಸಂತ್ರಪ್ತನು, ಕಲಹವಂತನು ಆಗುತ್ತಾನೆ. ಶಾರೀರಿಕ ಕಂಪನ, ಅಮಿತ್ರರೊಡನೆ ಸೇರುವುದು, ಭೂಮಿ ಮತ್ತು ವಾಹನ ನಾಶ ಸಂಭವಿಸುತ್ತದೆ.

ದೇವವಿಪ್ರಗುರುಪೂಜನಕ್ರಿಯಾ ದಾನಧರ್ಮಪರತಾ ಸಮಾಗಮ: । ವಸ್ತ್ರಭೂಷಣ ಸುಹೃದ್ಯುತಿರ್ಭವೇದ್ಬೋಧನಾಯುಷಿ ಸಮಾಗತೇ ಸಿತೇ ॥೫೯॥

ಬುಧದಶಾ-ಶುಕ್ರಭುಕ್ತಿ:- (2ವ. 10ತಿ.) ಈ ಭುಕ್ತಿಯಲ್ಲಿ ದೇವ-ಬ್ರಾಹ್ಮಣರ ಮತ್ತು ಗುರುಹಿರಿಯರ ಪೂಜೆ, ಸೇವೆ ಇತ್ಯಾದಿ ಮಾಡುತ್ತಾನೆ. ದಾನ-ಧರ್ಮಾದಿ ಸತ್ಕರ್ಮ, ವಸ್ತ್ರ, ಆಭರಣ, ಮಿತ್ರರ ಸಹವಾಸ, ಇತ್ಯಾದಿ ಮಾಡುತ್ತಾನೆ.

ಹೇಮವಿದ್ರುಮತುರಂಗವಾರಣಪ್ರಾವೃತಂ ಭವನಮನ್ನಪಾನಯುಕ್ । ಭೂಪತೇರಪಿ ಚ ಪೂಜನಂ ಭವೇದ್ಭಾನುಮಾಲಿನಿ ಬುಧಾಬ್ದಕಂ ಗತೇ ॥೬೦॥

ಬುಧದಶಾ-ರವಿಭುಕ್ತಿ:- (10ತಿ. 6ದಿ.) ಈ ಭುಕ್ತಿಯಲ್ಲಿ ಬಂಗಾರ, ಹವಳ, ಕುದುರೆ, ಆನೆ (ವಾಹನ), ಗೃಹ, ಅನ್ನ-ಪಾನ ಮತ್ತು ರಾಜರಿಂದ ಸನ್ಮಾನ ಲಭಿಸುತ್ತದೆ.

ಮಸ್ತಕವ್ಯಸನಮಕ್ಷಿಪೀಡನಂ ಕುಷ್ಠದದ್ರುಬಹುಕಂಠಪೀಡನಮ್ । ಪ್ರಾಣಸಂಶಯ-ಯುತಿರ್ನೃಣಾಂ ಭವೇಜ್ಞಾಯುಷಂ ವ್ರಜತಿ ಶೀತದೀಧಿತೌ ॥೬೧॥

ಬುಧದಶಾ-ಚಂದ್ರಭುಕ್ತಿ:- (1ವ. 5ತಿ.) ಈ ಭುಕ್ತಿಯಲ್ಲಿ ಶಿರೋವೇದನೆ, ಕಣ್ಣು ನೋವು, ಕುಷ್ಠ, ಗಜಕರ್ಣ, ಕುತ್ತಿಗೆಯ ಪೀಡೆ ಸಂಭವಿಸುತ್ತದೆ. ಪ್ರಾಣಾಪಾಯ ಚಿಂತೆ ಇರುತ್ತದೆ.

ಅಗ್ನಿಭೀತಿರಪಿ ನೇತ್ರಜಾ ರುಜಾ ಚೋರಜಂ ಭಯಮತೀವ ದು:ಖತಾ । ಸ್ಥಾನಹಾ-ನಿರಥ ವಾತರೋಗಿತಾ ಜ್ಞಾಯುಷಂ ಹರತಿ ಮೇದಿನೀಸುತೇ ॥೬೨॥

ಬುಧದಶಾ-ಕುಜಭುಕ್ತಿ:- (11ತಿ. 27ದಿ.) ಈ ಭುಕ್ತಿಯಲ್ಲಿ ಅಗ್ನಿಭಯ, ಕಣ್ಣಿನ ವ್ಯಾಧಿಗಳು, ಕಳ್ಳರ ಭಯ, ಅತ್ಯಂತದು:ಖ, ಸ್ಥಾನನಾಶ ಮತ್ತು ವಾತರೋಗ ಸಂಭವಿಸುತ್ತದೆ,

ಮಾನಹಾನಿರಥವಾಶ್ರಯಚ್ಯುತಿ: ಸ್ವಕ್ಷಯೋಽಗ್ನಿವಿಷತೋಯಜಂ ಭಯಮ್ । ಮಸ್ತಕಾಕ್ಷಿಜಠರಪ್ರಪೀಡನಂ ಶೀತರಶ್ಮಿಜದಶಾಂ ಗತೇಽಸುರೇ ॥೬೩॥

ಬುಧದಶಾ-ರಾಹುಭುಕ್ತಿ:- (2ವ. 6ತಿ. 18ದಿ.) ಈ ಭುಕ್ತಿಯಲ್ಲಿ ಮಾನಹಾನಿ, ಅಥವಾ ಅಭಿವೃದ್ಧಿಗೆ ತಡೆ, ಆರ್ಥಿಕ ಅವನತಿ, ಬೆಂಕಿ, ವಿಷ ಅಥವಾ ನೀರಿನಿಂದ, ಅಪಾಯ, ತಲೆ, ಕಣ್ಣು ಮತ್ತು ಜಠರಪೀಡೆ ಸಂಭವಿಸುತ್ತದೆ.

ವ್ಯಾಧಿಶತ್ರುಭಯವಿಚ್ಯುತಿರ್ಭವೇದ್ಬ್ರಹ್ಮಸಿದ್ಧಿರವನೀಶಸತ್ಕೃತಿ: ।
ಧರ್ಮಸಿದ್ಧಿ ತಪಸಾಂ ಸಮುದ್ಗಮೋ ದೇವಮಂತ್ರಿಣಿ ವಿದೋದಶಾಂಗತೇ ॥

ಬುಧದಶಾ-ಗುರುಭುಕ್ತಿ:- (2ವ. 3ತಿ. 6ದಿ.), ಈ ಭುಕ್ತಿಯಲ್ಲಿ ರೋಗ ವಿಮುಕ್ತಿ, ಶತ್ರುನಾಶ ಮತ್ತು ಭಯನಾಶ ಸಂಭವಿಸುತ್ತದೆ. ಆತ್ಮಜ್ಞಾನಪ್ರಾಪ್ತಿ,

ರಾಜರಿಂದ ಸನ್ಮಾನ, ನ್ಯಾಯ-ಧರ್ಮ, ತಪಶ್ಚರ್ಯ, ಇತ್ಯಾದಿಗಳಲ್ಲಿ ಯಶಸ್ಸು ಲಭಿಸುತ್ತದೆ.

ಅರ್ಥಧರ್ಮಪರಿಲುಪ್ತಿರುಚ್ಚಕೈಃ ಸರ್ವಕಾರ್ಯವಿಫಲತ್ವಮಂಗಿನಾಮ್ ।
ಶ್ಲೇಷ್ಮವಾತಜನಿತಾ ರುಗುದ್ಭವೇದ್ಬೋಧನಾಯುಷಿ ಸಮಾಗತೇऽಸಿತೇ ॥೬೫॥

ಬುಧದಶಾ-ಶನಿಭುಕ್ತಿ:- (2ವ. 8ತಿ. 9ದಿ.) ಈ ಭುಕ್ತಿಯಲ್ಲಿ ಧನನಾಶ, ಧರ್ಮಚ್ಯುತಿ. ಕೈಕೊಂಡ ಸಕಲಕಾರ್ಯಗಳಲ್ಲಿ ವಿಫಲತೆ, ಕಫ-ವಾತ ಜನಿತ ರೋಗಗಳು ಸಂಭವಿಸುತ್ತದೆ.

ರಿಪುಜನಕಲಹಂ ಸುಹೃದ್ವಿರೋಧಂ ತ್ವಶುಭವಚಃ ಶ್ರವಣಂ ಜ್ವರಾಂಗದಾಹಮ್ ।
ಗಮನಪರಧಾಮ್ನಿ ವಿತ್ತನಾಶಂ ಶಿಖಿನಿ ಲಭೇತ ದಶಾಂ ಗತೇ ಸ್ವಕೀಯಾಮ್ ॥೬೬॥

ಕೇತುದಶಾ-ಕೇತುಭುಕ್ತಿ:- (4ತಿ. 27ದಿ.) ಈ ಭುಕ್ತಿಯಲ್ಲಿ ಶತ್ರುಗಳೊಂದಿಗೆ ಕಲಹ, ಮಿತ್ರರೊಂದಿಗೆ ವಿರೋಧ, ಅವಾಚ್ಯ ಮಾತುಗಳನ್ನು ಕೇಳಬೇಕಾಗುತ್ತದೆ. ದೇಹದಲ್ಲಿ ಉರಿ, ಅಥವಾ ಜ್ವರ, ಪರಗೃಹವಾಸ ಮತ್ತು ಸಂಪತ್ತಿನ ನಾಶಸಂಭವಿಸುತ್ತದೆ.

ದ್ವಿಜವರಕಲಹಃ ಸ್ತ್ರಿಯಾ ವಿರೋಧಃ ಸ್ವಕುಲಜನೈರಪಿ ಕನ್ಯಕಾಪ್ರಸೂತಿಃ ।
ಪರಿಭವಜನನಂ ಪರೋಪತಾಪೋ ಭವತಿ ಸಿತೇ ಶಿಖಿವತ್ಸರಾಂತರಾಲೇ ॥೬೭॥

ಕೇತುದಶಾ-ಶುಕ್ರಭುಕ್ತಿ:- (1ವ. 2ತಿ.) ಈ ಭುಕ್ತಿಯಲ್ಲಿ ಬ್ರಾಹ್ಮಣರೊಂದಿಗೆ ಕಲಹ, ಹೆಂಡತಿ ಮತ್ತು ಸ್ವಜನರೊಂದಿಗೆ ವಿರೋಧ, ಪುತ್ರಿಯ ಜನನ, ಸೋಲು, ಮತ್ತು ಪರರಿಂದ ಹೀನೈಸಲ್ಪಡುತ್ತಾನೆ.

ಗುರುಜನಮರಣಂ ಜ್ವರಾವತಾರಃ ಸ್ವಜನವಿರೋಧವಿದೇಶಯಾನಲಾಭಃ । ನೃಪಕೃತಕಲಹಃ ಕಫಾನಿಲಾರ್ತಿರ್ವಿಶತಿ ರವೌ ಶಿಖಿವತ್ಸರಾಂತರಾಲಮ್ ॥೬೮॥

ಕೇತುದಶಾ-ರವಿಭುಕ್ತಿ:- (4ತಿ. 6ದಿ.) ಈ ಭುಕ್ತಿಯಲ್ಲಿ ಹಿರಿಯರ ಅವಸಾನ, ಜ್ವರಪೀಡೆ, ಸ್ವಜನರೊಂದಿಗೆ ವಿರೋಧ, ವಿದೇಶಪ್ರಯಾಣದಿಂದ ಲಾಭ, ರಾಜ ಸೇವೆಯಿಂದ ಕಲಹ ಮತ್ತು ಕಫ-ವಾತ ರೋಗಗಳು ಸಂಭವಿಸುತ್ತದೆ.

ಸುಲಭಬಹುಧನಂ ತಥೈವ ಹಾನಿಃ ಸುತವಿರಹೋ ಬಹುದುಃಖಭಾಕ್‌ಪ್ರಸೂತಿಃ ।
ಪರಿಜನಯುವತಿಪ್ರಜಾಪ್ರಲಾಭಃ ಶಶಿನಿ ಯದಾ ಶಿಖಿದಾಯಮಭ್ಯುಪೇತೇ ॥೬೯॥

ಕೇತುದಶಾ ಚಂದ್ರಭುಕ್ತಿ:- (7ತಿ.) ಈ ಭುಕ್ತಿಯಲ್ಲಿ ಅನಾಯಾಸಧನಪ್ರಾಪ್ತಿ ಹಾಗೂ ಅಕಸ್ಮಾತ್‌ಧನನಾಶ, ಸಂತಾನಚಿಂತೆ, ಅತ್ಯಂತದುಃಖ, ಸೇವಕರು, ಸ್ತ್ರೀ ಮತ್ತು ಸಂತಾನ ಪ್ರಾಪ್ತಿ ಆಗುತ್ತದೆ.

ಸ್ವಕುಲಜನಕಲಹಂ ಸ್ವಬಂಧುನಾಶಂ ಭಯಮಪಿ ಪನ್ನಗಜಂ ವದಂತಿ ಚೋರಾತ್ ।
ಹುತವಹಭಯಶತ್ರುಪೀಡನಂ ಚ ವ್ರಜತಿ ಕುಜೇ ಧ್ವಜನಾಮಖೇಚರಾಯುಃ ॥೭೦॥

ಕೇತುದಶಾ-ಕುಜಭುಕ್ತಿ:- (4ತಿ. 27ದಿ.) ಈ ಭುಕ್ತಿಯಲ್ಲಿ ತನ್ನಕುಲದವರೊಂದಿಗೆ ಕಲಹ, ಬಂಧುನಾಶ, ಸರ್ಪಭಯ, ಬೆಂಕಿಯಿಂದ ಹಾನಿ, ಕಳ್ಳರಿಂದ ಮತ್ತು ಶತ್ರುಗಳಿಂದ ಪೀಡೆ ಸಂಭವಿಸುತ್ತದೆ.

ಅರಿಕೃತಕಲಹಂ ನೃಪಾಗ್ನಿಚೋರೈರ್ಭಯಮಪಿ ಪನ್ನಗಜಂ ವದಂತಿ ತಜ್ಞಾ: । ಖಲ
ಜನವಚನಂ ದುರಿಷ್ಟಚೇಷ್ಟಾ ತಮಸಿ ಗತೇऽತ್ರ ಶಿಖೀಂದ್ರದಾಯಮಾಹು: ॥೭೧॥

ಕೇತುದಶಾ-ರಾಹುಭುಕ್ತಿ:- (1ವ. 18ದಿ.) ಈ ಭುಕ್ತಿಯಲ್ಲಿ ಶತ್ರುಗಳಿಂದ ಉದ್ಭವಿಸಿದ ಕಲಹ, ರಾಜರಿಂದ, ಬೆಂಕಿಯಿಂದ, ಕಳ್ಳರಿಂದ ಮತ್ತು ಸರ್ಪದಿಂದ ಭಯ ಸಂಭವಿಸುತ್ತದೆ. ಎಂದು ತಜ್ಞರಮತ ಆಗಿರುತ್ತದೆ. ದುಷ್ಟಜನರಿಂದ ದೂಷಣೆಯ ಮಾತು ಹಾಗೂ ವಿರುದ್ಧಕಾರ್ಯ ಸಂಭವಿಸುತ್ತದೆ.

ಸುತವರಜನನಂ ಸುರೇಂದ್ರಪೂಜಾ ಧರಣಿಧನಾಪ್ತಿರುಪಾಯನಾರ್ಥಸಿದ್ಧಿ: ।
ಧನಚಯಜನನಂ ಮಹೀಶಮಾನೋ ಭವತಿ ಗತೇऽತ್ರ ಗುರೌ ಶಿಖೀಂದ್ರದಾಯಮ್ ॥

ಕೇತುದಶಾ-ಗುರುಭುಕ್ತಿ:- (11ತಿ. 6ದಿ.) ಈ ಭುಕ್ತಿಯಲ್ಲಿ ಸತ್ಪುತ್ರಜನನ, ದೇವತಾರ್ಚನೆ, ಭೂಮಿಯಿಂದ ಲಾಭ, ಉಡುಗೊರೆ, ಧನಸಂಚಯ ರಾಜರಿಂದ ಸನ್ಮಾನ ಲಭಿಸುತ್ತದೆ.

ಪರಿಜನವಿಹತಿಂ ಪರೋಪತಾಪಂ ರಿಪುಜನವಿಗ್ರಹಮಂಗಭಂಗತಾಂ ಚ ।
ಧನಪದವಿಯುತಿಂ ತಥಾಹುರಾರ್ಯಾ ಗತವತಿ ಸೂರ್ಯಸುತೇ ಶಿಖಾಧರಾಯು: ॥

ಕೇತುದಶಾ-ಶನಿಭುಕ್ತಿ:- (1ವ. 1ತಿ. 9ದಿ.) ಈ ಭುಕ್ತಿಯಲ್ಲಿ ಸೇವಕರ ವಿಯೋಗ ಪರರಿಂದ ದು:ಖ, ಶತ್ರುಗಳೊಂದಿಗೆ ಕಲಹ, ಕಾಲು ಮುರಿಯುವುದು ಅಥವಾ ಅಂಗಚ್ಛೇದನ, ಧನನಾಶ ಮತ್ತು ಸ್ಥಾನಚ್ಯುತಿ ಸಂಭವಿಸುತ್ತದೆ.

ಸುತವರಜನನಂ ಪ್ರಭುಪ್ರಶಸ್ತಿ: ಕ್ಷಿತಿಧನಸಿದ್ಧಿರರೀಶ್ವರಪ್ರಪೀಡಾ । ಪಶುಕೃಷಿ-
ವಿಹತಿರ್ಭವೇತ್ತು ಪುಂಸಾಂ ವಿಶತಿ ಬುಧೇ ಶಿಖಿವತ್ಸರಾಂತರಾಲಮ್ ॥೭೪॥

ಕೇತುದಶಾ-ಬುಧಭುಕ್ತಿ:- (11ತಿ. 27ದಿ.) ಈ ಭುಕ್ತಿಯಲ್ಲಿ ಸತ್ಪುತ್ರಜನನ, ಮ್ಹಾಲಿಕರಿಂದ, ಅಥವಾ ಅಧಿಕಾರಿಗಳಿಂದ ಪ್ರಶಸ್ತಿ, ಭೂಮಿಯಿಂದ ಧನಲಾಭ, ಶತ್ರುಗಳಿಂದ ಪೀಡೆ, ಪಶುಸಂಪತ್ತಿನನಾಶ, ಕೃಷಿ–ಬೇಸಾಯಗಳಲ್ಲಿ ಹಾನಿ ಸಂಭವಿಸುತ್ತದೆ.

ವಸನಭೂಷಣವಾಹನಚಂದನಾದ್ಯನುಭವ: ಪ್ರಮದಾಸುಖಸಂಪದ: ।
ದ್ಯುತಿಯುತಿ: ಕ್ಷಿತಿಪಾದ್ಧನಲಬ್ಧಯೋ ಭೃಗುಸುತೇ ಸ್ವದಶಾಂ ಪ್ರವಿಶತ್ಯಪಿ ॥೭೫॥

ಶುಕ್ರದಶಾ-ಶುಕ್ರಭುಕ್ತಿ:- (3ವ. 4ತಿ.) ಈ ಭುಕ್ತಿಯಲ್ಲಿ ಉಡುಪು, ಆಭರಣ, ವಾಹನ, ಚಂದನಾದಿ ಸುಗಂಧ ದ್ರವ್ಯಗಳು, ಸ್ತ್ರೀಸುಖ ಮತ್ತು ರಾಜರಿಂದ ಧನಪ್ರಾಪ್ತಿ ಆಗುತ್ತದೆ.

ನಯನಕುಕ್ಷಿಕಪೋಲಗದೋದ್ಭವ: ಕ್ಷಿತಿಭೃತೋ ಭಯಮಸ್ತಿ ಶರೀರಿಣಾಮ್ ।
ಗುರುಕುಲೋದ್ಭವಭಾಂಧಮಪೀಡನಂ ಭೃಗಸುತಾಯುಷಿ ಭಾನುಮತಿ ಸ್ಥಿತೇ ॥೭೬॥

ಶುಕ್ರದಶಾ-ರವಿಭುಕ್ತಿ:- (1ವ.) ಈ ಭುಕ್ತಿಯಲ್ಲಿ ಕಣ್ಣಿನ ವ್ಯಾಧಿಗಳು, ಉದರ ರೋಗಗಳು, ಗಲ್ಲದಲ್ಲಿವ್ಯಾಧಿ ಸಂಭವಿಸುತ್ತದೆ. ರಾಜರಿಂದ ಭಯ, ಗುರು-ಹಿರಿಯರಿಂದ ಮತ್ತು ಬಂಧುಬಾಂಧವರಿಂದ ಪೀಡೆ ಉಂಟಾಗುತ್ತದೆ.

ನಖಶಿರೋರದನಕ್ಷತಿರುಚ್ಚಕೈ: ಪವನಪಿತ್ತರುಗರ್ಥವಿನಾಶನಮ್ । ಗ್ರಹಣಿಗುಲ್ಮಕ ಯಕ್ಷ್ಮಕಪೀಡನಂ ಸಿತವಯೋಽಹೃತಿ ತತ್ರ ಹಿಮತ್ವಿಷಿ ॥೭೭॥

ಶುಕ್ರದಶಾ-ಚಂದ್ರಭುಕ್ತಿ:- (1ವ.8ತಿ.) ಈ ಭುಕ್ತಿಯಲ್ಲಿ ಉಗುರಿನವ್ಯಾಧಿ, ಶಿರೋವ್ಯಾಧಿ ಮತ್ತು ಹಲ್ಲಿನ ರೋಗಗಳು ಸಂಭವಿಸುತ್ತದೆ. ವಾತ-ಪಿತ್ತ ಜನಿತವ್ಯಾಧಿಪೀಡೆ, ಧನನಾಶ, ಗ್ರಹಣೀರೋಗ, ಗುಲ್ಮ ಮತ್ತು ಕ್ಷಯರೋಗದಿಂದ ಪೀಡಿಸಲ್ಪಡುತ್ತಾನೆ.

ರುಧಿರಪಿತ್ತಗದಾರ್ತಿಸಮಾಶ್ರಯು: ಕನಕತಾಮ್ರಚಯಾವನಿಸಂಗ್ರಹ: । ಯುವತಿ ದೂಷಣಮುದ್ಯಮವಿಚ್ಯುತಿರ್ವೃಷಭವಲ್ಲಭವತ್ಸರಗೇ ಕುಜೇ ॥೭೮॥

ಶುಕ್ರದಶಾ-ಕುಜಭುಕ್ತಿ:- (1ವ. 2ತಿ.) ಈ ಭುಕ್ತಿಯಲ್ಲಿ ರಕ್ತ ಮತ್ತು ಪಿತ್ತಜನಿತ ವ್ಯಾಧಿಗಳು, ಬಂಗಾರ, ತಾಮ್ರ, ಭೂಮಿ, ಲಭಿಸುತ್ತದೆ. ಸ್ತ್ರೀಯರ ದೂಷಣೆ ಮಾಡುತ್ತಾನೆ. ಕರ್ಮನಾಶ ಸಂಭವಿಸುತ್ತದೆ.

ನಿಧಿಭವ: ಸುತಲಬ್ಧಿರಭೀಷ್ಟವಾಕ್ ಸ್ವಜನಪೂಜನಮಪ್ಯರಿಬಂಧನಮ್ । ದಹನ-ಚೋರವಿಷೋದ್ಭವಪೀಡನಂ ತುಲಧರೇಶ್ವರವತ್ಸರಗೇಽಸುರೇ ॥೭೯॥

ಶುಕ್ರದಶಾ-ರಾಹುಭುಕ್ತಿ:- (3ವ.) ಈ ಭುಕ್ತಿಯಲ್ಲಿ ಭೂಗತಧನಪ್ರಾಪ್ತಿ, ಪುತ್ರ ಸಂತಾನ, ಸುವಾರ್ತೆ, ಸ್ವಜನರಿಂದ ಮಾನ್ಯತೆ, ಶತ್ರುಗಳ ಬಂಧನ, ಬೆಂಕಿಯಿಂದ, ಕಳ್ಳರಿಂದ ಮತ್ತು ವಿಷಜನಿತ ದೋಷದಿಂದ ಪೀಡೆ ಸಂಭವಿಸುತ್ತದೆ.

ವಿವಿಧಧರ್ಮಸುರೇಶನಮಸ್ಕ್ರಿಯಾ ಭವತಿ ಚಾತ್ಮಜ ವಾಮುದ್ರಗಾಗಮ: ।
ವಿವಿಧರಾಜ್ಯಸುಖಂ ಚ ಶರೀರಿಣಾಂ ಕವಿದಶಾಹೃತಿ ಕಾರ್ಮುಕನಾಯಕೇ ।೮೦॥

ಶುಕ್ರದಶಾ-ಗುರುಭುಕ್ತಿ:- (2ವ. 8ತಿ.) ಈ ಭುಕ್ತಿಯಲ್ಲಿ ವಿವಿಧ ದೇವರ ಅಥವಾ ವಿವಿಧ ಧಾರ್ಮಿಕ ಕಾರ್ಯಮಾಡುವುದು, ಪುತ್ರಸಂತಾನಪ್ರಾಪ್ತಿ, ತನ್ನ ಅಂತಸ್ಥಿನಿಂದ ಸುಖಪ್ರಾಪ್ತಿ ರಾಜಕೀಯದಿಂದ ಹಲವಾರು ವಿಧದ ಲಾಭಪ್ರಾಪ್ತಿ ಆಗುತ್ತದೆ.

ನಗರಯೋಧನ್ಯಪೋದ್ಭವಪೂಜನಂ ಪ್ರವರಯೋಷಿದವಾಪ್ತಿರಥಾಸ್ತಿ ವಾ । ವಿವಿಧ-ವಿತ್ತಪರಿಚ್ಛವ ಸಂಯುತಿರ್ದ್ವಿಜಪೂಜಿತದಾಯಗತೇ ಶನೌ ॥೮೧॥

ಶುಕ್ರದಶಾ-ಶನಿಭುಕ್ತಿ:- (3ವ. 2ತಿ.) ಈ ಭುಕ್ತಿಯಲ್ಲಿ ನಗರ ಸಭಾಪತಿಯಿಂದ, ಸನ್ಮಾನ, ಅಥವಾ ರಾಜರಿಂದ ಉತ್ತಮ ಸ್ತ್ರೀ ಪ್ರಾಪ್ತಿ, ಹಲವಾರು ವಿಧದಿಂದ ಧನ ಪ್ರಾಪ್ತಿ, ಪಾತ್ರೆ, ಬಳಕೆಯವಸ್ತು ಇತ್ಯಾದಿ ತರತರದ ಸಂಪತ್ತು ಲಭಿಸುತ್ತದೆ.

ತನಯಸೌಖ್ಯಸಮಾಗಮಸಂಪದಾಂ ನಿಚಯಲಬ್ಧಿರತಿಪ್ರಭುತಾ ಯಶ: । ಪವನಪಿತ್ತ ಕಫಾರ್ತಿರರಿಚ್ಯುತಿರ್ದನುಜಮಂತ್ರಿದಶಾಹೃತಿ ಚಾದ್ರಜೇ ॥೮೨॥

ಶುಕ್ರದಶಾ-ಬುಧಭುಕ್ತಿ:- (2ವ. 10ತಿ.) ಈ ಭುಕ್ತಿಯಲ್ಲಿ ಸಂತಾನಸುಖ, ಸಂಪತ್ತಿನ ಕೂಡುವಿಕೆ, ಸುಖ, ಅಧಿಕಾರ, ಶತ್ರುನಾಶ, ಜಯ ಲಭಿಸುತ್ತದೆ. ವಾತ-ಪಿತ್ತ-ಕಫ (ತ್ರಿದೋಷ) ಜನಿತ ವ್ಯಾಧಿಪೀಡೆ ಉಂಟಾಗುತ್ತದೆ.

ಸುತಸುಖಾದಿಬಹಿಃ ಸ್ಥಿತಿರಗ್ನಿಜಂ ಭಯಮತೀವ ವಿನಾಶನಮುಂಗರುಕ್ । ಅಪಿ ಚ ವಾರವಧೂಜನಸಂಯುತಿಃ ಶಿಖಿನಿ ಯಾತ್ಯಲವಮೌಶನಸೀಂ ದಶಾಮ್ ॥೮೩॥

ಶುಕ್ರದಶಾ-ಕೇತುಭುಕ್ತಿ:- (1ವ. 2ತಿ.) ಈ ಭುಕ್ತಿಯಲ್ಲಿ ಸಂತಾನ ಮತ್ತು ಸುಖ ಹಾನಿ, ಬೆಂಕಿಯಿಂದ ನಷ್ಟ, ಕಾಲುನೋವು ಅಥವಾ ಊನ, ಮತ್ತು ವಾರಾಂಗನೆಯರ ಸಹವಾಸ ಮಾಡುತ್ತಾನೆ.

ದಶಾಪಹಾರೇಷು ಫಲಂ ಯದುಕ್ತಂ ವರ್ಣಾಧಿಕಾರಾನುಗುಣಂ ವದಂತು । ಛಿದ್ರೇಷು ಸೂಕ್ಷ್ಮೇಷ್ವಪಿ ತತ್ಫಲಾಪ್ತಿಃ ಛಾಯಾಂಕವಾರ್ತಾಶ್ರವಣಾನಿ ವಾ ಸ್ಯುಃ ॥೮೪॥

ಈ ವರೆಗೆ ಹೇಳಿದ ದಶಾಭುಕ್ತಿಫಲ ಚಿಂತನೆಯಲ್ಲಿ ಜಾತಕನ ಜಾತಿ, ಕುಲ, ಧರ್ಮ, ದೇಶ, ಕಾಲ, ಪರಿಸ್ಥಿತಿ ಇತ್ಯಾದಿಗಳನ್ನು ತಿಳಿದು ಫಲಾಫಲ ನಿರ್ಣಯಿಸಬೇಕು. ಭುಕ್ತಿ ಫಲದಂತೆಯೇ ಅಂತರ್ಭುಕ್ತಿ, ಸೂಕ್ಷ್ಮ ಮತ್ತು ಪ್ರಾಣಭುಕ್ತಿ ಫಲ ಹೇಳಬೇಕು.

ಕಾಲಚಕ್ರದಶಾ-ಅಧ್ಯಾಯ-೨೨

ದಸ್ರಾದಿತಃ ಪಾದವಶೇನ ಮೇಷಾನ್ಮೀನಾಂಶಕಾಂತಂ ಕ್ರಮಶೋಽಪಸವ್ಯಮ್ ।
ಕೀಟಾದ್ಧಯಾಂತಂ ಗಣಯೇಚ್ಚ ಸವ್ಯಮಾರ್ಗೇಣ ಪಾದಕ್ರಮಶೋಽಜತಾರಾತ್ ॥

ಕಾಲಚಕ್ರದಶೆ:- ಅಶ್ವಿನೀಯಿಂದ ಪ್ರಾರಂಭಿಸಿ ಮೂರು ನಕ್ಷತ್ರಗಳ ಚರಣಗಳಿಗೆ ಅಪಸವ್ಯವಾಗಿ ಮೇಷಾದಿ 12 ರಾಶಿಗಳ ದಶಾವರ್ಷಗಳು ಕ್ರಮವಾಗಿ ಆಗುತ್ತವೆ. ರೋಹಿಣಿಯಿಂದ ಪ್ರಾರಂಭಿಸಿ ಮೂರು ನಕ್ಷತ್ರಗಳ ಚರಣಗಳಿಗೆ ಸವ್ಯವಾಗಿ ವೃಶ್ಚಿಕಾದಿ 12 ರಾಶಿಗಳ ದಶಾವರ್ಷಗಳು ಆಗುತ್ತವೆ.

ಶ್ಲೋಕ ೧ರಲ್ಲಿ ಕಾಲಚಕ್ರದಶಾ ಕ್ರಮ ಹೇಳುತ್ತಾನೆ. ಅಶ್ವಿನೀಯಿಂದ ಪ್ರಾರಂಭಿಸಿ, ಮೂರು ನಕ್ಷತ್ರಗಳಿಗೆ (ಅಶ್ವಿನೀ, ಭರಣಿ, ಕೃತ್ತಿಕಾ) 12 ಪಾದಗಳು ಆಗುತ್ತವೆ. ಮೇಷ, ವೃಷಭ, ಮಿಥುನ ಮತ್ತು ಕರ್ಕಟಕ ಈ ನಾಲ್ಕು ರಾಶಿಗಳಿಗೆ ಅಶ್ವಿನೀ ನಕ್ಷತ್ರದ ನಾಲ್ಕು ಚರಣಗಳು. ಸಿಂಹ, ಕನ್ಯಾ, ತುಲಾ ಮತ್ತು ವೃಶ್ಚಿಕ ಈ ನಾಲ್ಕು ರಾಶಿಗಳಿಗೆ ಭರಣೀ ನಕ್ಷತ್ರದ ನಾಲ್ಕು ಚರಣಗಳು, ಧನು, ಮಕರ, ಕುಂಭ ಮತ್ತು ಮೀನ ಈ ನಾಲ್ಕು ರಾಶಿಗಳಿಗೆ ಕೃತ್ತಿಕಾ ನಕ್ಷತ್ರದ ನಾಲ್ಕು ಚರಣಗಳು, ಈ ಕ್ರಮದಂತೆ 3 ನಕ್ಷತ್ರಗಳಿಗೆ 12 ರಾಶಿಗಳನ್ನು ವಿಭಜಿಸಿರುತ್ತಾರೆ.

ರೋಹಿಣಿ, ಮೃಗಶಿರಾ ಮತ್ತು ಆರ್ದ್ರಾ ಈ 3 ನಕ್ಷತ್ರಗಳ 12 ಪಾದಗಳನ್ನು ವೃಶ್ಚಿಕದಿಂದ ವ್ಯುತ್ಕ್ರಮವಾಗಿ ಗಣಿಸುತ್ತಾರೆ. ವೃಶ್ಚಿಕ, ತುಲಾ, ಕನ್ಯಾ ಮತ್ತು ಸಿಂಹ ಈ ನಾಲ್ಕು ರಾಶಿಗಳಿಗೆ ರೋಹಿಣಿ ನಕ್ಷತ್ರದ ನಾಲ್ಕು ಚರಣಗಳು, ಕರ್ಕಟಕ, ಮಿಥುನ, ವೃಷಭ ಮತ್ತು ಮೇಷರಾಶಿಗೆ ಮೃಗಶಿರಾ ನಕ್ಷತ್ರದ ನಾಲ್ಕು ಚರಣಗಳು. ಮೀನ,

ಕುಂಭ, ಮಕರ ಮತ್ತು ಧನುರಾಶಿಗೆ ಆರ್ದ್ರಾ ನಕ್ಷತ್ರದ ನಾಲ್ಕು ಚರಣಗಳು, ಈ ಕ್ರಮದಂತೆ 3 ನಕ್ಷತ್ರಗಳಿಗೆ 12 ರಾಶಿಗಳನ್ನು ವ್ಯುತ್ಕ್ರಮವಾಗಿ ವಿಭಜಿಸಿರುತ್ತಾರೆ.

ಏವಂ ಭೂಯಾಚ್ಚಾಪಸವ್ಯಂ ಚ ಸವ್ಯಂ ಭಾನಿ ತ್ರೀಣಿ ತ್ರೀಣಿ ವಿದ್ಯಾತ್ಕ್ರಮೇಣ ।
ತದ್ರಾಶೀಶಪ್ರೋಕ್ತವರ್ಷೈರ್ದಶಾ ಸ್ಯಾದೇವಂ ಪ್ರಾಹುಃ ಕಾಲಚಕ್ರೇ ಮಹಾಂತಃ ॥

ಈ ರೀತಿ ಮೂರು-ಮೂರು ನಕ್ಷತ್ರಗಳಿಗೆ ಅಪಸವ್ಯ ಮತ್ತು ಸವ್ಯಕ್ರಮವಾಗಿ ತಿಳಿಯಬೇಕು. ಗ್ರಹರಿಗೆ ಹೇಳಿದ ದಶಾವರ್ಷಗಳನ್ನು ಅವರ ಅಧಿಪತ್ಯದ ರಾಶಿಗಳಿಂದ ತಿಳಿಯಬೇಕು ಎಂದು ಪಂಡಿತರಿಂದ ಕಾಲಚಕ್ರದಶಾ ವಿಚಾರದಲ್ಲಿ ಹೇಳಲ್ಪಟ್ಟಿದೆ.

A. 1. ಅಶ್ವಿನೀ, ಭರಣೀ ಕೃತ್ತಿಕಾ ಈ ಮೂರು ನಕ್ಷತ್ರಗಳಿಗೆ ಹೇಳಿದ ಮೇಷಾದಿ ಗಣನೆಯಿಂದ, 2. ಪುನರ್ವಸು, ಪುಷ್ಯಾ, ಆಶ್ಲೇಷಾ, 3. ಹಸ್ತಾ, ಚಿತ್ರಾ, ಸ್ವಾತಿ, 4. ಮೂಲಾ, ಪೂರ್ವಾಷಾಢಾ, ಉತ್ತರಾಷಾಢಾ 5. ಪೂರ್ವಾಭಾದ್ರಾ, ಉತ್ತರಾಭಾದ್ರಾ ಮತ್ತು ರೇವತಿ ಈ ಮೂರು – ಮೂರು ನಕ್ಷತ್ರಗಳ 12 ಚರಣಗಳನ್ನು ಮೇಷಾದಿ ರಾಶಿಯಿಂದ ಗಣಿಸಬೇಕು.

B.1.ರೋಹಿಣಿ, ಮೃಗಶಿರಾ ಮತ್ತು ಆರ್ದ್ರಾ ಈ ಮೂರು ನಕ್ಷತ್ರಗಳಿಗೆ ಹೇಳಿದ ವೃಶ್ಚಿಕಾದಿ ವ್ಯುತ್ಕ್ರಮ ಗಣನೆಯಂತೆ ಉಳಿದ ನಕ್ಷತ್ರಗಳಾದ, 2. ಮಘಾ, ಹುಬ್ಬಾ, ಉತ್ತರಾ, 3. ವಿಶಾಖಾ, ಅನುರಾಧಾ, ಜ್ಯೇಷ್ಠಾ, 4. ಶ್ರವಣಾ, ಧನಿಷ್ಠಾ ಮತ್ತು ಶತಭಿಷಾ, ಈ ಮೂರು-ಮೂರು ನಕ್ಷತ್ರಗಳ 12 ಚರಣಗಳನ್ನು ವೃಶ್ಚಿಕಾದಿ ವ್ಯುತ್ಕ್ರಮವಾಗಿ ಧನುರಾಶಿ ಪರ್ಯಂತ ಗಣಿಸಬೇಕು.

ಮನುಃ ಪರಃ ಸನಿರ್ಧನಿರ್ನೃಪಸ್ತಪೋ ವನೇ ಕ್ರಮಾತ್ ।
ದಿವಾಕರಾದಿವತ್ಸರಾಃ ಶುಭಾಶುಭಾಪ್ತಿಹೇತವಃ ॥೩॥

ದಶಾವರ್ಷಗಳು ಕ್ರಮವಾಗಿ ರವಿ-5, ಚಂದ್ರ-21, ಕುಜ-7, ಬುಧ-9, ಗುರು-10, ಶುಕ್ರ-16, ಶನಿ-4ವರ್ಷ ಆಗಿರುತ್ತದೆ. ಈ ದಶೆಯ ಶುಭಾ-ಶುಭ ಫಲ ನಿರ್ಣಯಕ್ಕೆ ಗ್ರಹರ ಕ್ಷೇತ್ರಗಳಿಂದ ತಿಳಿಯಬೇಕು. ಮೇಷಾದಿರಾಶಿಗಳ ದಶಾವರ್ಷಗಳು ಕ್ರಮವಾಗಿ, ಮೇಷ–7, ವೃಷಭ-16, ಮಿಥುನ–9, ಕರ್ಕಟಕ–21, ಸಿಂಹ-5, ಕನ್ಯೆ-9, ತುಲಾ–16, ವೃಶ್ಚಿಕ-7, ಧನು-10, ಮಕರ-4, ಕುಂಭ–4, ಮತ್ತು ಮೀನ 10 ವರ್ಷ ಆಗಿರುತ್ತದೆ.

ದಶಾಪಹಾರಾದಿಕಕಾಲಚಕ್ರೇ ವಾಕ್ಯಾನಿ ದಸ್ರಾದಿಪದಾದಿಜಾನಿ ।
ವಕ್ಷ್ಯಾಮಿವರ್ಷೈರ್ನವಭಿರ್ಭವಾಸ್ಯೈ ರಾಶೀಶವರ್ಷೈಃ ಪರಮಾಯುರತ್ರ ॥೪॥

"ಕಟಪಯಾದಿ" ಅಕ್ಷರಸಂಖ್ಯೆಯಿಂದ ಸೂಚಿತ ಕ್ರಮದಂತೆ ಅಶ್ವಿನ್ಯಾದಿ ನಕ್ಷತ್ರಚರಣ ಸೂಚಿತ ರಾಶ್ಯಾದಿ ಗ್ರಹದಶಾ ಭುಕ್ತಿಗಳನ್ನು ಶೋಧಿಸಿ ಆಯುರ್ದಾಯವನ್ನು ತಿಳಿಯಬೇಕು

ಪೌರೇಂ ಗಾವ್ಪೋ ಮಿತ ಸಂದಿಗ್ಧಂ ನಕ್ಷತ್ರೇಂದು: ಸ ತು ಭೂಶೂಲವರ್ ‍। ರೂಪೇ-
ತ್ರಕ್ಷನ್ನಿಧಯೋರಂಗೇ ವಾಣೀ ಚಷ್ಠಂ ವಧಿ ನಕ್ಷತ್ರವರ್ ॥೫॥

ಅಶ್ವಿನೀ ನಕ್ಷತ್ರ ಪ್ರಥಮ ಪಾದದಲ್ಲಿ ಜನಿಸಿದವರಿಗೆ ಕ್ರಮವಾಗಿ ಮೇಷ-ಕುಜ, ವೃಷಭ ಶುಕ್ರ, ಮಿಥುನ-ಬುಧ, ಕರ್ಕ-ಚಂದ್ರ, ಸಿಂಹ-ರವಿ, ಕನ್ಯಾ-ಬುಧ, ತುಲಾ-ಶುಕ್ರ, ವೃಶ್ಚಿಕ-ಕುಜ ಮತ್ತು ಧನು-ಗುರು ಭುಕ್ತಿಗಳು ಕ್ರಮವಾಗಿ ಆಗುತ್ತವೆ.

ಅಶ್ವಿನೀ ದ್ವಿತೀಯ ಪಾದವಲ್ಲಿ ಭುಕ್ತಿಗಳು ಕ್ರಮವಾಗಿ ಮಕರ-ಶನಿ, ಕುಂಭ-ಶನಿ, ಮೀನ-ಗುರು, ವೃಶ್ಚಿಕ-ಕುಜ, ತುಲಾ-ಶುಕ್ರ, ಕನ್ಯಾ-ಬುಧ, ಕರ್ಕ-ಚಂದ್ರ, ಸಿಂಹ-ರವಿ, ಮತ್ತು ಮಿಥುನ-ಬುಧ. **ಅಶ್ವಿನೀ ತೃತೀಯ ಪಾದದ** ಭುಕ್ತಿಗಳು ಕ್ರಮವಾಗಿ ವೃಷಭ-ಶುಕ್ರ, ಮೇಷ-ಕುಜ, ಮೀನ-ಗುರು, ಕುಂಭ-ಶನಿ, ಮಕರ-ಶನಿ, ಧನು-ಗುರು, ಮೇಷ-ಕುಜ, ವೃಷಭ-ಶುಕ್ರ, ಮತ್ತು ಮಿಥುನ-ಬುಧ. **ಅಶ್ವಿನೀ ಚತುರ್ಥ ಪಾದ** ಭುಕ್ತಿಗಳು ಕ್ರಮವಾಗಿ ಕರ್ಕ-ಚಂದ್ರ, ಸಿಂಹ-ರವಿ, ಕನ್ಯಾ-ಬುಧ, ತುಲಾ-ಶುಕ್ರ, ವೃಶ್ಚಿಕ-ಕುಜ, ಧನು-ಗುರು, ಮಕರ-ಶನಿ, ಕುಂಭ-ಶನಿ ಮತ್ತು ಮೀನ-ಗುರು ಆಗಿರುತ್ತದೆ.

ದಾಸತವೇಶೋ ಗೌರೀಪುತ್ರಂ ಕ್ಷನ್ನಿಧಿಕಾರೋ ಗೋಭೂಶೇಷವರ್ ।
ಸೌವಧಿ ನಕ್ಷತ್ರೇಹಾಸಂತೋ ಭೌಮಗುರು: ಪುತ್ರಾಕ್ಷೋನಾಧಿ: ॥೬॥

ಭರಣೀ ನಕ್ಷತ್ರ ಪ್ರಥಮ ಪಾದ ಭುಕ್ತಿಗಳು ಕ್ರಮವಾಗಿ ವೃಶ್ಚಿಕ-ಕುಜ, ತುಲಾ-ಶುಕ್ರ, ಕನ್ಯಾ-ಬುಧ, ಕಟಕ-ಚಂದ್ರ, ಸಿಂಹ-ರವಿ, ಮಿಥುನ-ಬುಧ, ವೃಷಭ-ಶುಕ್ರ ಮೇಷ-ಕುಜ, ಮತ್ತು ಮೀನ-ಗುರು, **ಭರಣೀ ನಕ್ಷತ್ರ ದ್ವಿತೀಯ** ಪಾದ ಭುಕ್ತಿಗಳು ಕ್ರಮವಾಗಿ ಕುಂಭ-ಶನಿ, ಮಕರ-ಶನಿ, ಧನು-ಗುರು, ಮೇಷ-ಕುಜ, ವೃಷಭ-ಶುಕ್ರ, ಮಿಥುನ-ಬುಧ, ಕರ್ಕ-ಚಂದ್ರ, ಸಿಂಹ-ರವಿ ಮತ್ತು ಕನ್ಯಾ ಬುಧ. **ಭರಣೀ-ನಕ್ಷತ್ರ ತೃತೀಯಪಾದ** ಭುಕ್ತಿಗಳು ತುಲಾ-ಶುಕ್ರ. ವೃಶ್ಚಿಕ-ಕುಜ, ಧನು-ಗುರು, ಮಕರ-ಶನಿ, ಕುಂಭ-ಶನಿ. ಮೀನ-ಗುರು, ವೃಶ್ಚಿಕ-ಕುಜ, ತುಲಾ-ಶುಕ್ರ, ಮತ್ತು ಕನ್ಯಾ-ಬುಧ, **ಭರಣೀನಕ್ಷತ್ರಚತುರ್ಥಪಾದ** ಭುಕ್ತಿಗಳು, ಕರ್ಕ-ಚಂದ್ರ, ಸಿಂಹ-ರವಿ, ಮಿಥುನ-ಬುಧ, ವೃಷಭ-ಶುಕ್ರ, ಮೇಷ-ಕುಜ, ಮೀನ-ಗುರು, ಕುಂಭ-ಶನಿ, ಮಕರ-ಶನಿ, ಮತ್ತು ಧನು-ಗುರು ಆಗಿರುತ್ತವೆ.

ವಾಕ್ಯಾನ್ಯೇತಾನ್ಯಶ್ವಿಯಾಮ್ಯರ್ಕ್ಷಯೋರ್ಯಾನ್ಯಶ್ವಿನ್ಯಾದ್ಯಾನ್ಯಗ್ನಿಭಸ್ಯಾಪಸವ್ಯೇ। ಸವ್ಯೇऽ
-ಚೇಂದ್ವೋರ್ವೀಕ್ಷಮಾಣೇಷು ವಾಕ್ಯೇಷ್ವಿಂದೋರ್ವಾಕ್ಯಾನ್ಯೇವ ರೌದ್ರಸ್ಯ ಭೂಯ: ॥

ಅಶ್ವಿನೀ ನಕ್ಷತ್ರಪಾದಗಳಿಗೆ ಹೇಳಿದ ಭುಕ್ತಿಕ್ರಮ, ಕೃತ್ತಿಕಾ ನಕ್ಷತ್ರಪಾದಗಳಿಗೂ ಅನ್ವಯಿಸುತ್ತದೆ. ರೋಹಿಣಿ ಮತ್ತು ಮೃಗಶಿರಾ ನಕ್ಷತ್ರಪಾದಗಳ ಭುಕ್ತಿಶೋಧನಾ ಕ್ರಮ ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ. ಮೃಗಶಿರಾನಕ್ಷತ್ರಪಾದಕ್ಕೆ ಹೇಳಿದ ಸೂತ್ರವು ಆರ್ದ್ರಾನಕ್ಷತ್ರ ಪಾದಗಳಿಗೂ ಅನ್ವಯಿಸುತ್ತದೆ.

ಧೇನು: ಕ್ಷೇತ್ರೇ ಪುರಗೋ ಶಂಭುಸ್ತಾಸಾಂ ಜತ್ರು ಕ್ಷನ್ನಿಧಿ ದಾಸೀ ।
ಚರ್ಮಾಭೋಗೀ ರಾಯಧಿನಾಕ್ಷಸ್ತ್ರೀ ಪೌರಾಂಗೀ ಶಿವತೀರ್ಥಾಬ್ಜೇ ॥೮॥

ರೋಹಿಣಿಪ್ರಥಮಪಾದ ಭುಕ್ತಿಗಳು ಧನು-ಗುರು, ಮಕರ-ಶನಿ, ಕುಂಭ-ಶನಿ, ಮೀನ-ಗುರು, ಮೇಷ-ಕುಜ, ವೃಷಭ-ಶುಕ್ರ, ಮಿಥುನ-ಬುಧ, ಸಿಂಹ-ರವಿ, ಮತ್ತು ಕರ್ಕ-ಚಂದ್ರ, **ರೋಹಿಣಿದ್ವಿತೀಯಪಾದ** ಭುಕ್ತಿಗಳು ಕನ್ಯಾ-ಬುಧ, ತುಲಾ-ಶುಕ್ರ, ವೃಶ್ಚಿಕ-ಕುಜ, ಮೀನ-ಗುರು, ಕುಂಭ-ಶನಿ, ಮಕರ-ಶನಿ, ಧನು-ಗುರು, ವೃಶ್ಚಿಕ-ಕುಜ, ಮತ್ತು ತುಲಾ-ಶುಕ್ರ, **ರೋಹಿಣಿತೃತೀಯಪಾದ** ಭುಕ್ತಿಗಳು ಕನ್ಯಾ-ಬುಧ, ಸಿಂಹ-ರವಿ, ಕರ್ಕ-ಚಂದ್ರ, ಮಿಥುನ-ಬುಧ, ವೃಷಭ-ಶುಕ್ರ, ಮೇಷ-ಕುಜ, ಧನು-ಗುರು, ಮಕರ-ಶನಿ, ಮತ್ತು ಕುಂಭ-ಶನಿ, **ರೋಹಿಣಿಚತುರ್ಥಪಾದ** ಭುಕ್ತಿಗಳು ಮೀನ-ಗುರು, ಮೇಷ-ಕುಜ, ವೃಷಭ-ಶುಕ್ರ, ಮಿಥುನ-ಬುಧ, ಸಿಂಹ-ರವಿ, ಕರ್ಕ-ಚಂದ್ರ, ಕನ್ಯಾ-ಬುಧ, ತುಲಾ-ಶುಕ್ರ ಮತ್ತು ವೃಶ್ಚಿಕ-ಕುಜ ಆಗಿರುತ್ತವೆ.

ತ್ರಿಕ್ಷನಿಧಿರ್ದ್ಯಾ ಸೂಚೀಶಂಭೋಃ ಗೌರಯಧೀ ನಕ್ಷತ್ರಂ ಪಾರಮ್ ।
ಗೋಶಿವತೀರ್ಥೇ ದಾತ್ರಿಕ್ಷಸ್ನೋಃ ಧೀಹಸಿತಾಂಶುಭೋರ್ಗಾಃ ರಮ್ಯಾ ॥೯॥

ಮೃಗಶಿರಾ ನಕ್ಷತ್ರ ಪ್ರಥಮ ಪಾದ ಭುಕ್ತಿಗಳು ಕ್ರಮವಾಗಿ ಮೀನ-ಗುರು, ಕುಂಭ-ಶನಿ, ಮಕರ-ಶನಿ, ಧನು-ಗುರು, ವೃಶ್ಚಿಕ-ಕುಜ, ತುಲಾ-ಶುಕ್ರ, ಕನ್ಯಾ-ಬುಧ, ಸಿಂಹ-ರವಿ, ಮತ್ತು ಕರ್ಕ-ಚಂದ್ರ, **ಮೃಗಶಿರಾನಕ್ಷತ್ರದದ್ವಿತೀಯಪಾದ** ಮಿಥುನ-ಬುಧ, ವೃಷಭ-ಶುಕ್ರ, ಮೇಷ-ಕುಜ, ಧನು-ಗುರು, ಮಕರ-ಶನಿ, ಕುಂಭ-ಶನಿ, ಮೀನ-ಗುರು, ಮೇಷ-ಕುಜ, ಮತ್ತು ವೃಷಭ-ಶುಕ್ರ, **ಮೃಗಶಿರಾನಕ್ಷತ್ರತೃತೀಯಪಾದ** ಮಿಥುನ-ಬುಧ, ಸಿಂಹ-ರವಿ, ಕರ್ಕ-ಚಂದ್ರ, ಕನ್ಯಾ-ಬುಧ, ತುಲಾ-ಶುಕ್ರ, ವೃಶ್ಚಿಕ-ಕುಜ, ಮೀನ-ಗುರು, ಕುಂಭ-ಶನಿ, ಮತ್ತು ಮಕರ-ಶನಿ, **ಮೃಗಶಿರಾ ನಕ್ಷತ್ರ ಚತುರ್ಥಪಾದ** ಧನು-ಗುರು, ವೃಶ್ಚಿಕ-ಕುಜ, ತುಲಾ-ಶುಕ್ರ, ಕನ್ಯಾ-ಬುಧ, ಸಿಂಹ-ರವಿ, ಕರ್ಕ-ಚಂದ್ರ, ಮಿಥುನ-ಬುಧ, ವೃಷಭ-ಶುಕ್ರ, ಮತ್ತು ಮೇಷ-ಕುಜ. ಭುಕ್ತಿಗಳು ಆಗಿರುತ್ತವೆ.

ನಕ್ಷತ್ರಪಾದೈಃಪ್ಯಘಟೀಃ ಸಮುತ್ಥಾ ಪೂರ್ವಾ ದಶಾ ತತ್ಪತಿವರ್ಷಜಾತಾ । ಪೂರ್ವೋ-
ಕ್ತಪಾದಕ್ರಮಶೋಽತ್ರ ವಿದ್ಯಾತ್ಕೇಷಾಂಚಿದೇವಂ ಮತಮಾಹುರಾರ್ಯಾಃ ॥೧೦॥

ಜನನ ಕಾಲದ ಚಂದ್ರನು ಸ್ಥಿತ ನಕ್ಷತ್ರಪಾದದ ಮಹರ್ದಶೆಯು ಪ್ರಥಮದಶೆ ಆಗಿರುತ್ತದೆ. ಈ ನಕ್ಷತ್ರಪಾದದಲ್ಲಿ ಶಿಷ್ಟಘಟಿತುಲ್ಯ ದಶೆಯನ್ನು ಶೋಧಿಸಿ ಅನಂತರ ಕ್ರಮವಾಗಿ ನಕ್ಷತ್ರ ಪಾದಗಳಿಗೆ ಹೇಳಿದ ಕ್ರಮದಿಂದ ಸೂಕ್ತದಶಾವರ್ಷಗಳನ್ನು ಶೋಧಿಸಬೇಕು. ಇದು ಕೆಲವು ಆಚಾರ್ಯರ ಮತ ಆಗಿರುತ್ತದೆ.

ದಸ್ರಾದಿಪಾದಪ್ರಭೃತೀನಿ ಭಾನಾಂ ವಾಕ್ಯಾನಿ ಯಾನ್ಯಕ್ಷರಪಂಕ್ತಿಜಾನಿ । ತೇಷಾಂ
ಕ್ರಮೇಣೈವ ದಶಾ ಪ್ರಕಲ್ಪ್ಯಾ ವಾಕ್ಯಕ್ರಮಂ ಸಾಧ್ವಿತಿ ಕೇಚಿದಾಹುಃ ॥೧೧॥

ಅಶ್ವಿನ್ಯಾದಿನಕ್ಷತ್ರಗಳ ಪ್ರಥಮಪಾದದಿಂದ ಪ್ರಾರಂಭವಾಗುವ ಈ ಕಾಲಚಕ್ರ ದಶಾಕ್ರಮವನ್ನು ರಾಶಿಗಳಲ್ಲಿ ಕಾಲಪರಿಮಿತಿಯ ಕ್ರಮವನ್ನು ತಿಳಿಯಲು ಕೆಲವು ಆಚಾರ್ಯರು ವಾಕ್ಯಕ್ರಮದ ಸೂತ್ರಗಳನ್ನು ಮಾಡಿರುತ್ತಾರೆ.

ವಾಕ್ಯಕ್ರಮೇ ಕರ್ಕ್ಯಲಿಮೀನಸಂಧೌ ಮಂಡೂಕಗತ್ಯಶ್ವಪರಪತಿಶ್ಚ ।
ಸಿಂಹಾವಲೋಕಸ್ತ್ರಿವಿಧಾ ತದಾನೀಂ ದಶಾಂತರಂ ದುಃಖಫಲಪ್ರದಂ ಸ್ಯಾತ್ ॥

ಕರ್ಕಾಟಕ, ವೃಶ್ಚಿಕ ಮತ್ತು ಮೀನರಾಶಿಯ ಸಂಧಿಗಳಲ್ಲಿ (ಋಕ್ಷಸಂಧಿ) ವಾಕ್ಯ ಕ್ರಮದಂತೆ ತುಲ್ಯದಶೆಯನ್ನು ಕ್ರಮವಾಗಿ ಮಂಡೂಕಗತಿ, ಅಶ್ವ ಅಥವಾ ತುರಗಗತಿ ಮತ್ತು ಸಿಂಹಾವಲೋಕನ ಗತಿ ಎಂದು ಕರೆಯುತ್ತಾರೆ. ಋಕ್ಷಸಂಧಿಯ ಈ ದಶೆಗಳು ದುಃಖಪ್ರದ ಆಗಿರುತ್ತದೆ.

ತದ್ವಾಕ್ಯವರ್ಣಕ್ರಮಶೋಪಹಾರವರ್ಷಾಹತೇ ತತ್ಪರಮಾಯುರಾಪ್ತೇ ।
ತದಾ ದಶಾಯಾಮುಪಹಾರವರ್ಷಸಂಖ್ಯಾಶ್ಚ ಮಾಸಾನ್ದಿವಸಾನ್ವದೇಯುಃ ॥೧೩॥

ಕಾಲಚಕ್ರದಶೆಯ ಭುಕ್ತಿ ಶೋಧನೆಗೆ, ದಶಾನಾಥನವರ್ಷವನ್ನು ಭುಕ್ತಿನಾಥನ ವರ್ಷದಿಂದ ಗುಣಿಸಿ, ನಕ್ಷತ್ರಪಾದತುಲ್ಯ ವಾಕ್ಯಕ್ರಮದಂತೆ ಶೋಧಿಸಿದ ಮಹತ್ತಮ ವರ್ಷದಿಂದ ಭಾಗಿಸಿದರೆ ಲಬ್ಧವು ವರ್ಷ, ಮಾಸ ಮತ್ತು ದಿನಾದಿ ಕಾಲ ದಶಾಭುಕ್ತಿ ಆಗಿರುತ್ತದೆ.

ವಾಕ್ಯೇಷು ಯಾವಚ್ಚರದಾಂ ಪ್ರಮಾಣಂ ವದಂತಿ ತಾವತ್ಪರಮಾಯುರತ್ರ ।
ಮೇಷಾದನೀಕಂ ಮದನಂ ಗಜೇನ ತುಂದಃ ಪುನಶ್ಚೈವಮುದೀರಿತಂ ತತ್ ॥೧೪॥

ವಾಕ್ಯಕ್ರಮದಿಂದ ಲಭಿಸುವ ಮಹತ್ತಮ ದಶಾವರ್ಷಗಳು ಮೇಷಾದಿ ಚಕ್ರದಲ್ಲಿ ಕ್ರಮವಾಗಿ 100, 85, 83 ಮತ್ತು 86 ವರ್ಷ ಆಗಿರುತ್ತವೆ. ವೃಶ್ಚಿಕಾದಿ ಚಕ್ರದಲ್ಲಿ ಕ್ರಮವಾಗಿ 86, 83, 85 ಮತ್ತು 100 ವರ್ಷ ಆಗಿರುತ್ತದೆ.

ಮಹಾದಶಾಸು ಯತ್ಫಲಂ ಪ್ರಕೀರ್ತಿತಂ ಮಯಾ ಪುರಾ ।
ತದೇವ ಯೋಜಯೇದ್ಬುಧೋ ದಶಾಸು ಚೈವಮಾದಿಷು ॥೧೫॥

ಇಷ್ಟರ ತನಕ ನನ್ನಿಂದ ಹೇಳಲ್ಪಟ್ಟ ದಶಾಫಲಗಳನ್ನು ಬುದ್ಧಿವಂತರು ದಶಾಫಲ ಚಿಂತನೆಯಲ್ಲಿ ಹೇಳಬೇಕು.

ಜನ್ಮರ್ಕ್ಷಾತ್ಪರತಸ್ತು ಪಂಚಮಭವಾಥೋತ್ಪನ್ನಸಂಜ್ಞಾ ದಶಾ ಸ್ಯಾದಾಧಾನದ-ಶಾಪ್ಯತೋಽಷ್ಟಮಭವಾ ಕ್ಷೇಮಾನ್ಮಹಾಖ್ಯಾ ದಶಾ । ಅಸಾಮೇವ ದಶಾವಸಾನಸ-ಮಯೇ ಮೃತ್ಯುಪ್ರದಾ ಸ್ಯಾನ್ನೃಣಾಂ ಸ್ವಲ್ಪಾನಲ್ಪ ಸಮಾಯುಷಾಂ ತ್ರಿವಿಧಪಂಚ ಕ್ಷೇಶದಾಯಾಂತಿಮೇ ॥೧೬॥

ಜನ್ಮನಕ್ಷತ್ರದಿಂದ ಐದನೇ, ಎಂಟನೇ, ಮತ್ತು ನಾಲ್ಕನೇ ನಕ್ಷತ್ರ ದಶೆಗಳು ಕ್ರಮವಾಗಿ ಉತ್ಪನ್ನದಶಾ, ಆಧಾನದಶಾ ಮತ್ತು ಮಹಾದಶಾ ಎಂದು ಕರೆಯುತ್ತಾರೆ. ಈ ದಶೆಗಳ ಅಂತ್ಯಕಾಲವು ಮರಣಪ್ರದ ಆಗಿರುತ್ತದೆ. ಅಲ್ಪಾಯುಯೋಗದಲ್ಲಿ ಜನಿಸಿದವರಿಗೆ ಜನ್ಮನಕ್ಷತ್ರದಿಂದ ಮೂರನೇ ನಕ್ಷತ್ರದಶೆ (ವಿಪತ್ತಾರೆ.), ದೀರ್ಘಾಯು ಯೋಗದಲ್ಲಿ ಜನಿಸಿದವರಿಗೆ ಏಳನೇನಕ್ಷತ್ರದಶೆ (ವಧತಾರೆ), ಮತ್ತು ಮಧ್ಯಾಯು ಯೋಗದಲ್ಲಿ

ಜನಿಸಿದವರಿಗೆ ಐದನೇನಕ್ಷತ್ರದಶೆ (ಪ್ರತ್ಯರತಾರೆ.), ಈ ದಶೆಗಳ ಅಂತ್ಯಕಾಲ ಮರಣಪ್ರದ ಆಗಿರುತ್ತದೆ.

ಏಕಂ ದ್ವೇ ನವ ವಿಂಶತಿರ್ಧೃತಿಕೃತೀ ಪಂಚಾಶದೇಷಾಂ ಕ್ರಮಾಚಂದ್ರಾರೇಂ-ದುಜ ಶುಕ್ರಜೀವದಿನಕೃದ್ದೈವಾಕರೀಣಾಂ ಸಮಾಃ ಸ್ವೈಃ ಸ್ವೈಃ ಪುಷ್ಟಫಲಾ ನಿಸರ್ಗಜನಿತೈಃ ಪಕ್ತಿರ್ದಶಾಯಾಃ ಕ್ರಮಾದಂತೇ ಲಗ್ನದಶಾ ಶುಭೇತಿಯವನಾ ನೇಚ್ಛಂತಿ ಕೇಚಿತ್ತಥಾ॥

ನಿಸರ್ಗದಶಾಃ-ಜನನಕಾಲದಿಂದ ಕ್ರಮವಾಗಿ ಮೊದಲಿನ ವರ್ಷ ಚಂದ್ರದಶೆ. ನಂತರ 2ವರ್ಷ ಕುಜದಶೆ (2–3ವರ್ಷ), ನಂತರ 9ವರ್ಷ ಬುಧದಶೆ (4–12ವರ್ಷ), ನಂತರ 20ವರ್ಷ ಶುಕ್ರದಶೆ (13-32ವರ್ಷ), ನಂತರ 18ವರ್ಷ ಗುರುದಶೆ (33–50ವರ್ಷ), ನಂತರ 20ವರ್ಷ ರವಿದಶೆ (51–70ವರ್ಷ), ನಂತರ 50ವರ್ಷ ಶನಿದಶೆ (71-120 ವರ್ಷ), ಆಗಿರುತ್ತದೆ. ಗ್ರಹರ ನೈಸರ್ಗಿಕ ಬಲಕ್ಕನುಗುಣವಾಗಿರುವ ಈ ದಶಾಕ್ರಮವನ್ನು ನೈಸರ್ಗಿಕದಶೆ ಎಂದು ಕರೆಯುತ್ತಾರೆ. ಈ ದಶೆಗಳ ನಂತರ ಲಗ್ನದಶೆಯು, ಬರುತ್ತದೆ. ಹಾಗೂ ಲಗ್ನದಶೆಯು ಶುಭಫಲದಾಯಕ ಆಗಿರುತ್ತದೆ, ಎಂದು ಯವನಾಚಾರ್ಯರ ಮತ ಆಗಿರುತ್ತದೆ. ಆದರೆ ಕೆಲವರು ಯವನರ ಮತವನ್ನು ಒಪ್ಪುವುದಿಲ್ಲ.

ಲಿಪ್ತೀಕೃತ್ಯ ಭವೇದ್ಗ್ರಹಂ ಖಖಜಿನೈಸ್ತಚ್ಛಿಷ್ಟಮಾಯುಷ್ಕಲಾ ಆಶಾಭಿಶ್ಚಹೃತಾಬ್ದ-ಮಾಸದಿವಸಾಃ ಸತ್ಯೋದಿತೇಂಽಶಾಯುಷಿ। ವಕ್ರಿಣ್ಯುಚ್ಚಗತೇ ತ್ರಿಸಂಗುಣಮಿದಂ ಸ್ವಾಂಶ-ತ್ರಿಭಾಗೋತ್ತಮೇ ದ್ವಿಘ್ನಂ ನೀಚಗತೇಽರ್ಧಮುಪ್ಯಥ ದಲಂ ಮೌಢ್ಯೇ ಸಿತಾರ್ಕೀ ವಿನಾ ॥೧೮॥ ಸರ್ವಾರ್ಧತ್ರಿಕೃತೇಷುಷಣ್ಮಿತಲವಹ್ರಾಸೋಽಸದಾಮುತ್ಕ್ರಮಾದ್ರಿಃ-ಘಾತ್ಸತ್ಸು ದಲಂ ತದಾ ಹರತಿ ಬಲ್ಯೇಕೋ ಬಹುಷ್ವೇಕಭೇ । ತ್ರ್ಯಂಶೋನಂ ರಿಪುಭೇ ವಿನಾ ಕ್ಷಿತಿಸುತಂ ಸತ್ಯೋಪದೇಶೇ ದಶಾ ಲಗ್ನಸ್ಯಾಂಶಸಮಾ ಬಲಿನ್ಯುದಯಭೇಽ-ಸ್ಯಾತ್ರಾಪಿ ತುಲ್ಯಾಪಿ ಚ ॥೧೯॥ ಸತ್ಯೋಪದೇಶೋ ವರಮತ್ರ ಕಿಂತು ಕುರ್ವಂತ್ಯ-ಯೋಗ್ಯಂ ಬಹುವರ್ಗಣಾಭಿಃ । ಆಚಾರ್ಯಕಂ ತ್ವತ್ರ ಬಹುಘ್ನತಾಯಾಮೇಕಂ ತು ಯದ್ಭೂರಿತದೇವ ಕಾರ್ಯಮ್ ॥೨೦॥

ಅಂಶದಶಾಃ- ರಾಶ್ಯಾದಿಗ್ರಹಸ್ಫುಟವನ್ನು ಲಿಪ್ತಿಗಳನ್ನಾಗಿ ಮಾಡಿ 2,400ರಿಂದ ಭಾಗಿಸಬೇಕು. ಶೇಷವು ಗ್ರಹನ ಆಯುಷ್ಕಲೆ ಆಗಿರುತ್ತದೆ. ಇದನ್ನು 200ರಿಂದ ಭಾಗಿಸಿದರೆ ಗ್ರಹನು ನೀಡುವ ವರ್ಷಾದಿ ಆಯುರ್ದಾಯ ಲಭಿಸುತ್ತದೆ. ಇದು ಸತ್ಯಾಚಾರ್ಯರ ಮತ ಆಗಿರುತ್ತದೆ. ಗ್ರಹನು ವಕ್ರನು ಅಥವಾ ಉಚ್ಚನಾದರೆ ಅವನು ನೀಡುವ ಆಯುಸ್ಸನ್ನು ತ್ರಿಗುಣಿತಮಾಡಬೇಕು. ಗ್ರಹನು ಸ್ವಕ್ಷೇತ್ರ, ಸ್ವನವಾಂಶ, ದ್ರೇಕ್ಕಾಣ, ಅಥವಾ ವರ್ಗೋತ್ತಮನಾದರೆ ಅವನು ನೀಡುವ ಆಯುಸ್ಸನ್ನು ದ್ವಿಗುಣಿತ ಮಾಡಬೇಕು. ಗ್ರಹನು ನೀಚದಲ್ಲಿದ್ದರೆ ಅವನು ನೀಡುವ ಆಯುಸ್ಸಿನ ಅರ್ಧಾಂಶವನ್ನು ಕಳೆಯಬೇಕು. ಶುಕ್ರ-ಶನಿಗಳ ಹೊರತು ಉಳಿದ ಗ್ರಹರು ಅಸ್ತರಾದರೆ ಅವರು ನೀಡುವ ಆಯುಸ್ಸಿನ ಅರ್ಧಾಂಶ ಕಳೆಯಬೇಕು. ದೃಶ್ಯಾರ್ಧದಲ್ಲಿರುವ ಗ್ರಹರು ದ್ವಾದಶದಲ್ಲಿ ಪೂರ್ಣ, ಏಕಾದಶ-ಅರ್ಧ, ದಶಮ-ಮೂರನೇ ಒಂದು ಭಾಗ, ನವಮ-ಐದನೇ ಒಂದು ಭಾಗ,

ಅಷ್ಟಮ–ಆರನೇ ಒಂದು ಭಾಗ, ತಾವು ನೀಡುವ ಆಯುಸ್ಸಿನ ಅಂಶವನ್ನು ಕಳಕೊಳ್ಳು ತ್ತಾರೆ. ದೃಷ್ಯಾರ್ಧದಲ್ಲಿ ಹೆಚ್ಚು ಗ್ರಹಗಳಿದ್ದರೆ ಅಧಿಕ ಬಲಿಷ್ಠನಾದವನು ನೀಡುವ ಆಯುಸ್ಸಿನ ಹರಣ ಮಾತ್ರ ಮಾಡಬೇಕು. ಕುಜನು ಶತ್ರುಕ್ಷೇತ್ರದಲ್ಲಿದ್ದರೆ ತಾನು ನೀಡುವ ಆಯುಸ್ಸಿನ ⅓ಭಾಗ ಕಳಕೊಳ್ಳುತ್ತಾನೆ. ಲಗ್ನದ ಉದಿತ ತುಲ್ಯನವಾಂಶಕ್ಕೆ ಅನುಗುಣ ವಾಗಿ ವರ್ಷಾದಿ ಆಯುಸ್ಸು ಲಗ್ನವು ನೀಡುತ್ತದೆ. ಲಗ್ನಾಯುಸ್ಸಿನ ನಿರ್ಣಯಕ್ಕೆ ಲಗ್ನದ ಬಲಾಬಲದ ಅವಶ್ಯಕತೆ ಇರುವುದಿಲ್ಲ. ಸತ್ಯಾಚಾರ್ಯರಿಂದ ರಚಿತ ಈ ದಶಾಕ್ರಮ ವನ್ನು ಹಲವಾರು ಶೋಧನೆಯಿಂದ ಕೆಲವರು ಇದನ್ನು ಅನುಪಯುಕ್ತ ಮಾಡುತ್ತಾರೆ. ಈ ದಶಾಕ್ರಮಕ್ಕೆ ಹಲವಾರು ಶೋಧನೆಗಳು ಬಂದಾಗ ಅವುಗಳಲ್ಲಿ ಪ್ರಬಲವಾದ ಒಂದು ಶೋಧನೆ ಮಾಡಬೇಕು ಇತರ ಶೋಧನೆಗಳನ್ನು ಮಾಡಬಾರದು.

ಧೇಯಂ ಶೂರ ಶಕೇ ಶ್ರಿಯಂಸ್ಮ ಯಪರೇ ನಿದ್ರಾ: । ಸಮಾಭಾಸ್ಕರಾತ್ ಪಿಂಡಾಖ್ಯಾ-
ಯುಷಿ ಪೂರ್ವವಚ್ಚ ಹರಣಂ ಸರ್ವಂ ವಿದಧ್ಯಾದಿಹ ಲಗ್ನೇ ಪಾಪಿನಿ ಭಂ ವಿನೋದಯಲ-
ವೈರ್ನಿಘ್ನಂ ನತಾಂಗೈರ್ಹೃತಂ ತ್ಯಾಜ್ಯಂ ಸೌಮ್ಯನಿರೀಕ್ಷಿತೇಽರ್ಧಮೃಣಮತ್ರಾಯುಷ್ಯ-
ಭಿಜ್ಞಾ ವಿದು: ॥೨೦॥

ಪಿಂಡಾಯುರ್ದಾಯ:- ಈ ದಶಾಕ್ರಮದಲ್ಲಿ ಸೂರ್ಯಾದಿ ಸಪ್ತಗ್ರಹರಿಗೆ ಅವರ ವರ ಪರಮೋಚ್ಚದಲ್ಲಿರುವಾಗ ಮಹತ್ತಮ ಆಯುರ್ದಾಯ ವರ್ಷಗಳು ಕ್ರಮವಾಗಿ 19 25, 15, 12, 15, 21ಮತ್ತು 20 ಆಗಿರುತ್ತದೆ. ಹಿಂದೆ ಅಂಶಾಯುರ್ದಾಯ ದಲ್ಲಿ ಹೇಳಿದಂತೆ ಇಲ್ಲಿ ಕೂಡಾ ಎಲ್ಲ ಹರಣಗಳನ್ನು ಮಾಡಬೇಕು. ಲಗ್ನದಲ್ಲಿ ಪಾಪ ಗ್ರಹನಿದ್ದಾಗ ಲಗ್ನದ ಭಾಗಾದಿಗಳಿಂದ ಶೋಧಿಸಿದ ಆಯುರ್ದಾಯದ ಮೊತ್ತವನ್ನು ಗುಣಿಸಿ 360ರಿಂದ ಭಾಗಿಸಬೇಕು. ಲಗ್ನಕ್ಕೆ ಶುಭದೃಷ್ಟಿ ಇದ್ದರೆ ಈ ಹರಣವನ್ನು ಅರ್ಧಾಂಶ ಮಾಡಬೇಕು ಎಂದು ಆಚಾರ್ಯರ ಮತ ಆಗಿರುತ್ತದೆ.

ಲಗ್ನದಶಾಮಂಶಸಮಾಂ ಬಲವತ್ಯಂಶೇ ವದಂತಿ ಪೈಣ್ಡಾಖ್ಯೇ ।
ಬಲಯುಕ್ತಂ ಯದಿ ಲಗ್ನಂ ರಾಶಿಸಮೈವಾತ್ರ ನಾಂಶೋತ್ಥಾ ॥೨೨॥

ಈ ದಶಾಕ್ರಮದಲ್ಲಿ ಲಗ್ನನವಾಂಶವು ಬಲಿಷ್ಠವಾದ್ದಲ್ಲಿ ಲಗ್ನನವಾಂಶತುಲ್ಯ ಆಯು ರ್ದಾಯವು ಲಗ್ನಾಯು ಆಗುತ್ತದೆ. ಲಗ್ನರಾಶಿಯು ಬಲಿಷ್ಠವಾದ್ದಲ್ಲಿ ಲಗ್ನಾಯುವು, ಮೇಷಾದಿ ಲಗ್ನರಾಶಿತುಲ್ಯ ಆಗುತ್ತದೆ.

ಹರಣಂ ನೀಚೇಽರ್ಧಮೃಣಂ ಸ್ಯಾತ್ಪೂರ್ಣಂ ಪ್ರೋಕ್ತವರ್ಷಮುಚ್ಚಗೃಹೇ ।
ಪೈಣ್ಡಾದಾವಿದ್ವ್ಯಂತರಗೇ ಪ್ರಾಜ್ಞೈ ಸ್ತ್ರೈರಾಶಿಕಂ ಚಿಂತ್ಯಮ್ ॥೨೩॥

ಪಿಂಡಾಯುರ್ದಾಯ ಕ್ರಮದಲ್ಲಿ ಅತ್ಯುಚ್ಚದ ಗ್ರಹರಿಗೆ ಪೂರ್ಣಾಯುಸ್ಸು, ಅತಿ ನೀಚದ ಗ್ರಹರ ಆಯುಸ್ಸಿನ ಅರ್ಧಾಂಶ ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. ನಡು ವಿನ ಗ್ರಹನ ಆಯುರ್ದಾಯವನ್ನು ತ್ರೈರಾಶಿಕ ಕ್ರಮದಿಂದ ತಿಳಿದುಕೊಳ್ಳಬೇಕು.

ಪೈಣ್ಡಾಖ್ಯಮಾಯುರ್ಬ್ರುವತೇ ಪ್ರಧಾನಂ ಮಣಿತ್ಥಚಾಣಕ್ಯಮಯಾದಯಶ್ಚ ।
ಏತನ್ನ ಸಾಧ್ವಿತ್ಯವದಬ್ಧದಂತೋಽವ ರಾಹಸೂರ್ಯಸ್ಯ ತಥೈವ ವಾಕ್ಯಮ್ ॥೨೪॥

ಮಣಿತ್ಥ, ಚಾಣಕ್ಯ, ಮಯ ಮತ್ತು ಇತರ ಕೆಲವು ಆಚಾರ್ಯರಿಂದ ಪಿಂಡಾಯುರ್ದಾಯವು ಪ್ರಧಾನವೆಂದು ಹೇಳಲ್ಪಟ್ಟಿದೆ. ಆದರೆ ಸತ್ಯಾಚಾರ್ಯರು ಈ ಆಯುರ್ದಾಯ ಕ್ರಮವನ್ನು ದೋಷಯುಕ್ತ ಎಂದು ಖಂಡಿಸಿರುತ್ತಾರೆ. ವರಾಹ ಮಿಹಿರಾಚಾರ್ಯರು ಕೂಡಾ ಈ ಪದ್ಧತಿಯನ್ನು ದೋಷಯುಕ್ತವೆಂದು ಹೇಳಿರುತ್ತಾರೆ.

ಸೂರ್ಯಾದಿಕಾನಾಂ ಸ್ವಮತೇನ ಜೀವಶರ್ಮಾ ಸ್ವರಾಂಶಂ ಪರಮಾಯುಷೋऽತ್ರ ।
ಅಸ್ಯಾಪಿ ಸರ್ವಂ ಹರಣಂ ವಿಧೇಯಂ ಪೂರ್ವೋಕ್ತವಲ್ಲಗ್ನದಶಾಮಿಹೇಹ ॥೨೫॥

ಜೀವಶರ್ಮಾಯು:- ಜೀವಶರ್ಮನು ತನ್ನ ಪದ್ಧತಿಯಲ್ಲಿ 120 ವರ್ಷ 5ದಿನದ ಪರಮಾಯುವನ್ನು ಏಳುಭಾಗಗಳನ್ನಾಗಿ ಮಾಡಿ ಸೂರ್ಯಾದಿ ಸಪ್ತಗ್ರಹರಿಗೆ ವಿಭಾಗಿಸಿರುತ್ತಾನೆ. ಈ ಪದ್ಧತಿಯಲ್ಲಿ ಕೂಡಾ ಸಕಲ ಹರಣಗಳನ್ನು ಮಾಡಬೇಕು. ಲಗ್ನಾಯುರ್ದಾಯವನ್ನು ಕೂಡಾ ಇತರ ಪದ್ಧತಿಯಂತೆ ಶೋಧಿಸಬೇಕು.

ನೃಣಾಂ ದ್ವಾದಶವತ್ಸರಾ ದಶಹತಾ ಹ್ಯಾಯು:ಪ್ರಮಾಣಂ ಪರೈರಾಖ್ಯಾತಂ ಪರಮಂ ಶನೇಸ್ತ್ರಿಭಗಣಂ ಯಾವತ್ಪರೈರೀರಿತಮ್ । ಕೈಶ್ಚಿಚ್ಚಂದ್ರಸಹಸ್ರದರ್ಶನಮಿಹ ಪ್ರೋಕ್ತಂ ಕಲೌ ಕಿಂತ್ವಯದ್ವೇದೋಕ್ತಂ ಶರದ: ಶತಂ ಹಿ ಪರಮಾಯುರ್ದಾಯಮಾಚಕ್ಷ್ಮಹೇ ॥

ಆಯುರ್ದಾಯ ವಿಚಾರ:- 1. ಕೆಲವು ಆಚಾರ್ಯರು 120ವರ್ಷ ಪೂರ್ಣಾಯು ಎಂದು ಹೇಳುತ್ತಾರೆ. 2. ಶನಿಯು ಚಾರದಲ್ಲಿ ಮೂರು ಸಲ ರಾಶಿಚಕ್ರವನ್ನು ಪರಿಭ್ರಮಿಸುವ ಕಾಲವು ಪರಮಾಯು ಎಂದು ಕೆಲವರ ಮತ, 3. ಸಹಸ್ರ ಚಂದ್ರದರ್ಶನ ಕಾಲವು ಪರಮಾಯು ಎಂದು ಕೆಲವರ ಮತ. 4. ವೇದದಲ್ಲಿ ಹೇಳಿದಂತೆ, ಕಲಿಯುಗದಲ್ಲಿ ಪರಮಾಯುವು 100 ವರ್ಷ ಆಗಿರುತ್ತದೆ ಎಂದು ಗ್ರಂಥಕರ್ತನಾದ ಮಂತ್ರೇಶ್ವರನ ಅಭಿಪ್ರಾಯ ಆಗಿರುತ್ತದೆ.

ಲಗ್ನಾದಿತ್ಯೇಂದುಕಾನಾಮಧಿಕಬಲವತ: ಸ್ಯಾದ್ದಶಾದೌ ತತೋऽನ್ಯಾ ತತ್ಕೇಂದ್ರಾದಿಸ್ಥಿತಾನಾಮಿಹ ಬಹುಷು ಪುನರ್ವೀರ್ಯತೋ ವೀರ್ಯಸಾಮ್ಯೇ । ಬಹ್ವಾಯುರ್ವರ್ಷದಾತು: ಪ್ರಥಮಮಿನವಶಾಚ್ಚೋದಿತಸ್ಯಾಬ್ದಸಾಮ್ಯೇ ವೀರ್ಯಂ ಕಿಂತ್ವತ್ರ ಸಂಧಿಗ್ರಹವಿವರಹತಂ ಭಾವಸಂಧ್ಯಂತರಾಪ್ತಮ್ ॥೨೭॥

ದಶಾಕ್ರಮ:- ಲಗ್ನ, ರವಿ ಮತ್ತು ಚಂದ್ರ ಈ ಮೂರರಲ್ಲಿ ಬಲಿಷ್ಠನಾದವನ ದಶೆಯು ಪ್ರಾರಂಭದಶೆ ಆಗಿರುತ್ತವೆ. ಅನಂತರ ಕೇಂದ್ರದಲ್ಲಿ ಸ್ಥಿತಗ್ರಹರ (ಹೆಚ್ಚು ಗ್ರಹರಿದ್ದಲ್ಲಿ ಬಲಿಷ್ಠನಾದವನ) ದಶೆಯು ಕ್ರಮವಾಗಿ ಬರುತ್ತದೆ. ಕೇಂದ್ರದ ಗ್ರಹರು ಸಮಾನ ಬಲಿಷ್ಠರಾದರೆ ಅವರಲ್ಲಿ ಹೆಚ್ಚು ಆಯುರ್ದಾಯ ನೀಡುವ ಗ್ರಹನದಶೆಯು ಪ್ರಥಮವಾಗಿ ಬರುತ್ತದೆ. ಎಲ್ಲ ಗ್ರಹರು ಸಮಾನ ಆಯುರ್ದಾಯ ನೀಡಿದರೆ ಅಸ್ತದಿಂದ ಉದಿತ ಗ್ರಹನದಶೆಯು ಪ್ರಥಮ ಎಂದು ತಿಳಿಯಬೇಕು.

ಅಂಶೋದ್ಭವಂ ಲಗ್ನಬಲಾತ್ಪ್ರಸಾಧ್ಯಮಾಯುಶ್ಚ ಪಿಂಡೋದ್ಭವಮರ್ಕವೀರ್ಯಾತ್ ।
ನೈಸರ್ಗಿಕಂ ಚಂದ್ರಬಲಾತ್ಪ್ರಸಾಧ್ಯಂ ಬ್ರೂಮಸ್ತ್ರಯಾಣಾಮಪಿ ವೀರ್ಯಸಾಮ್ಯೇ ॥

ತೇಷಾಂ ತ್ರಯಾಣಾಮಿಹ ಸಂಯುತಿಸ್ಸು, ತ್ರಿಭಿರ್ಹೃತಾ ಸ್ಯೈವ ದಶಾ ಪ್ರಕಲ್ಪ್ಯಾ। ವೀ-
ರ್ಯೇ ದ್ವಯೋರೈಕ್ಯದಲಂ ತಯೋಃ ಸ್ಯಾಚ್ಚೇಜ್ಜೀವಶರ್ಮಾಯುರವಿೂ ಬಲೋನಾಃ ॥

ಲಗ್ನವು ಬಲಿಷ್ಠವಾದರೆ ಅಂಶಾಯುರ್ದಾಯ ವಿಧಾನ, ರವಿಯು ಬಲಿಷ್ಠನಾದರೆ ಪಿಂಡಾಯುರ್ದಾಯ ಕ್ರಮವನ್ನು, ಚಂದ್ರನು ಬಲಿಷ್ಠನಾದರೆ ನೈಸರ್ಗಿಕ ಆಯುರ್ದಾಯ ವಿಧಾನವನ್ನು ಅನುಸರಿಸಬೇಕು. ಮೂರು ಸಮಾನ ಬಲಿಷ್ಠವಾದ್ದಲ್ಲಿ ಮೂರು ವಿಧಾನಗಳಿಂದ ಪ್ರಾಪ್ತ ಆಯುರ್ದಾಯದ ಮೊತ್ತವನ್ನು ಮೂರರಿಂದ ಭಾಗಿಸಿ ಬಂದ ಲಬ್ಧವು ಆಯುರ್ದಾಯ ಆಗಿರುತ್ತದೆ. ಎರಡು ಸಮಾನ ಬಲಿಷ್ಠ ಆದ್ದಲ್ಲಿ, ಆ ಎರಡು ವಿಧಾನಗಳಿಂದ ಶೋಧಿತ ಆಯುರ್ದಾಯದ ಮೊತ್ತವನ್ನು ಎರಡರಿಂದ ಭಾಗಿಸಿ ಕಂಡುಹಿಡಿಯುಬೇಕು. ಮೂರು (ಲಗ್ನ, ರವಿ, ಚಂದ್ರ) ಬಲಹೀನ ಆದ್ದಲ್ಲಿ ಜೀವಶರ್ಮಾಯು ವಿಧಾನವಿಂದ ಆಯುರ್ದಾಯವನ್ನು ಶೋಧಿಸಬೇಕು.

ಕಾಲಚಕ್ರದಶಾ ಜ್ಞೇಯಾ ಚಂದ್ರಾಂಶೇಶೇ ಬಲಾನ್ವಿತೇ ।
ಸದಾ ನಕ್ಷತ್ರಮಾರ್ಗೇಣ ದಶಾ ಬಲವತೀ ಸ್ಮೃತಾ ॥೩೦॥

ಚಂದ್ರಸ್ಥಿತನವಾಂಶಾಧಿಪತಿಯು ಬಲಿಷ್ಠನಾದ್ದಲ್ಲಿ ಕಾಲಚಕ್ರದಶಾ ಕ್ರಮವನ್ನು ಅನುಸರಿಸಬೇಕು. ಸಕಲ ವಿಧಾನಗಳಲ್ಲಿ ನಕ್ಷತ್ರದಶಾ (ಉಡುದಶಾ) ಕ್ರಮವೇ ಶ್ರೇಷ್ಠ ಆಗಿರುತ್ತದೆ.

ಸಮಾಃ ಷಷ್ಟಿರ್ದ್ವಿಘ್ನಾ ಮನುಜಕರಿಣಾಂ ಪಂಚ ಚ ನಿಶಾ ಹಯಾನಾಂ ದ್ವಾತ್ರಿಂ-
ಶತಕರಭಯೋಃ ಪಂಚಕಕೃತಿಃ । ವಿರೂಪಾ ಸಾಪ್ಯಾಯುರ್ವೃಷಮಹಿಷಯೋರ್ದ್ವಾ-
ದಶ ಶುನಾಂ ಸ್ಮೃತಂ ಛಾಗಾದೀನಾಂ ದಶಕಸಹಿತಾಃ ಷಟ್ ಚ ಪರಮಮ್ ॥೩೧॥

ಪರಮಾಯುಃ- ಮನುಷ್ಯರಿಗೆ ಮತ್ತು ಆನೆಗೆ ಪರಮಾಯುವು 120 ವರ್ಷ 5ದಿನ ಆಗಿರುತ್ತದೆ. ಕುದುರೆಗೆ-32ವರ್ಷ, ಕತ್ತೆಗೆ ಮತ್ತು ಒಂಟೆಗೆ-25ವರ್ಷ. ಎತ್ತು ಮತ್ತು ಎಮ್ಮೆಗೆ-24ವರ್ಷ, ನಾಯಿಗೆ–12ವರ್ಷ ಮತ್ತು ಕುರಿಗೆ-16ವರ್ಷ ಪರಮಾಯು ಆಗಿರುತ್ತದೆ.

ಯೇ ಧರ್ಮಕರ್ಮನಿರತಾ ವಿಜಿತೇಂದ್ರಿಯಾ ಯೇ ಯೇ ಪಥ್ಯಭೋಜನಜುಷೋ
ದ್ವಿಜದೇವಭಕ್ತಾಃ । ಲೋಕೇ ನರಾ ದಧತಿ ಯೇ ಕುಲಶೀಲಲೀಲಾಂ ತೇಷಾಮಿದಂ
ಕಥಿತಮಾಯುರುದಾರಧೀಭಿಃ ॥೩೨॥

ಪಂಡಿತರಿಂದ ಹೇಳಲ್ಪಟ್ಟ ಈ ಆಯುರ್ದಾಯವು, ನ್ಯಾಯ-ಧರ್ಮನಿರತ, ಇಂದ್ರಿಯನಿಗ್ರಹಿಸುವ. ಆಹಾರ ನಿಯಂತ್ರಿಸುವ, ದೇವ-ಬ್ರಾಹ್ಮಣರನ್ನು ಪೂಜಿಸುವ, ತನ್ನ ಕುಲಧರ್ಮವನ್ನು ಅನುಸರಿಸುವವ, ಸದಾಚಾರ ಸಂಪನ್ನ ಗುಣವಂತನಿಗೆ ಮಾತ್ರ ಈ ಆಯುರ್ದಾಯವು ಅನ್ವಯಿಸುತ್ತದೆ.

ಂಂ ಂಂ ಂಂ

ಅಷ್ಟಕವರ್ಗ-ಅಧ್ಯಾಯ೨೩

ಗೋಚರಗ್ರಹವಶಾನ್ಮನುಜಾನಾಂ ಯಚ್ಛುಭಾಶುಭಫಲಾಪ್ಯುಪಲಬ್ಧೇಃ ।
ಅಷ್ಟವರ್ಗ ಇತಿ ಯೋ ಮುಹದುಕ್ತಸ್ತತ್ಪ್ರಸಾಧನಮಿಹಾಭಿದಧೇಽಹಮ್ ॥೧॥

ಗೋಚರದಲ್ಲಿ ಗ್ರಹರು ನೀಡುವ ತಾತ್ಕಾಲಿಕ ಶುಭಾಶುಭಫಲಗಳನ್ನು ತಿಳಿಯಲು ಪ್ರಾಚೀನ ಮುನಿಪ್ರಣೀತ ಅಷ್ಟಕವರ್ಗ ಪದ್ಧತಿ ವಿಚಾರ ಈ ಅಧ್ಯಾಯದಲ್ಲಿ ಹೇಳುತ್ತಾನೆ.

ಆಲಿಖ್ಯ ಸಮ್ಯಗ್ಭುವಿ ರಾಶಿಚಕ್ರಂ ಗ್ರಹಸ್ಥಿತಿಂ ತಜ್ಜನನಪ್ರವೃತ್ತಾಮ್ ।
ತತ್ತದ್ಗ್ರಹರ್ಕ್ಷಾತ್ಕ್ರಮಶೋಽಷ್ಟವರ್ಗಂ ಪ್ರೋಕ್ತಂ ಕರೋತ್ಯಕ್ಷವಿಧಾನಮತ್ರ ॥೨॥

ಜನ್ಮಕುಂಡಲಿಯನ್ನು ಬರೆದು ಆಯಾರಾಶಿಯಲ್ಲಿ ಜನನಕಾಲದ ಗ್ರಹಸ್ಥಿತಿಯನ್ನು ಗುರುತಿಸಿ ಅಲ್ಲಿಂದ ಇನ್ನು ಮುಂದೆ ಹೇಳುವ ರೀತ್ಯಾ ಸೂಕ್ತ ಸ್ಥಾನವನ್ನು ಕ್ರಮವಾಗಿ ಗುರುತಿಸಬೇಕು.

ಪುತ್ರೀವಸಾಹಿಧನಿಕೇಽರ್ಕಕುಜಾರ್ಕಜೇಭ್ಯೋ ಮುಕ್ತಾಳಕೇ ಸುರಗುರೋರ್ಭೃಗುಜಾತ್ತ-ಥಾಶ್ರೀಃ । ಜ್ಞಾದ್ಗೋಮತೀಧನಪರಾ ರವಿರಿಷ್ಟದೋಽಬ್ಜಾದ್ಗೀತೋನ್ನಯೇಽಷ್ಟ-ದಯಭಾಲ್ಲಘುತಾನ್ನಪಾತ್ರೇ ॥೩॥

ಸೂರ್ಯಾಷ್ಟಕವರ್ಗಃ- (48 ಬಿಂದುಗಳು) ರವಿ ಅಷ್ಟಕವರ್ಗ ಶೋಧನೆಗೆ ರವಿಯು ತಾನು ಸ್ಥಿತ ಸ್ಥಾನದಿಂದ–1, 2, 4, 7, 8, 9, 10 ಮತ್ತು 11ರಲ್ಲಿ ಶುಭನು ಮತ್ತು ಕುಜ, ಶನಿಗಳಿಂದಲೂ ಇವೇ ಸ್ಥಾನಗಳಲ್ಲಿ ಶುಭನು, ಗುರುವಿನಿಂದ 5, 6, 9 ಮತ್ತು 11ರಲ್ಲಿ, ಶುಕ್ರನಿಂದ 6, 7 ಮತ್ತು 12ರಲ್ಲಿ, ಬುಧನಿಂದ 3, 5, 6, 9, 10, 11 ಮತ್ತು 12ರಲ್ಲಿ, ಚಂದ್ರನಿಂದ 3, 6, 10 ಮತ್ತು 11ರಲ್ಲಿ ಮತ್ತು ಲಗ್ನದಿಂದ 3, 4, 6, 10, 11 ಮತ್ತು 12ರಲ್ಲಿ ಶುಭಫಲದಾಯಕನು ಆಗುತ್ತಾನೆ.

ಗೀತಾಸೌ ಜನಕೇ ರವೇಃ ಕಲಿತಸಾನ್ನಿಷ್ಕೇ ತುಷಾರದ್ಯುತೇಃ ಭೌಮಾಚ್ಛ್ರೀ-
ಗುಣಿತೇ ಧನಸ್ಯ ಯುಗವನ್ಯಾಸಾಬ್ದನಿತ್ಯೇ ಬುಧಾತ್ ।
ಜೀವತ್ಪೌರವಸಜ್ಜನಸ್ಯ ಭೃಗುಜಾದ್ಗೂಢಾತ್ಮಸಿದ್ಧಾ ಜ್ಞಯಾ ಮಂದಾದ್ಬಾಣ-
ಚಯೇ ತನೋರ್ಗತಿನಯೇ ಚಂದ್ರಃ ಶುಭೋ ಗೋಚರೇ ॥೪॥

ಚಂದ್ರಾಷ್ಟಕವರ್ಗಃ- (49 ಬಿಂದುಗಳು) ಚಂದ್ರನು ರವಿಯಿಂದ 3, 6, 7, 8, 10 ಮತ್ತು 11ರಲ್ಲಿ ಶುಭನು, ತಾನು ನಿಂತ ಸ್ಥಾನದಿಂದ 1, 3, 6, 7, 10 ಮತ್ತು 11ರಲ್ಲಿ, ಕುಜನಿಂದ 2, 3, 5, 6, 9, 10 ಮತ್ತು 11ರಲ್ಲಿ, ಬುಧನಿಂದ 1, 3.4. 5, 7, 8, 10 ಮತ್ತು 11ರಲ್ಲಿ, ಗುರುವಿನಿಂದ 1, 2, 4, 7, 8, 10 ಮತ್ತು 11ರಲ್ಲಿ, ಶುಕ್ರನಿಂದ 3, 4, 5, 7, 9, 10 ಮತ್ತು 11ರಲ್ಲಿ, ಶನಿಯಿಂದ 3, 5. 6, ಮತ್ತು 11ರಲ್ಲಿ ಮತ್ತು ಲಗ್ನದಿಂದ 3, 6, 10 ಮತ್ತು 11ರಲ್ಲಿ ಶುಭನು ಆಗಿರುತ್ತಾನೆ.

ತೀಕ್ಷ್ಣಾಂಶೋಗಣಿತಾನಕೇ ಶಿಶಿರಗೋರ್ಲರ್ಕ್ಷಾಯ ಭೂಮೇ: ಸುತಾತ್ ಪುತ್ರೀವಾಸ-ಜನಾಯ ಚಂದ್ರತನಯಾದ್ಗೋಮೇತಕೇ ಗೀಷ್ಪತೇ: । ತನ್ನಾಕಾರಿ ಸಿತಾತ್ತದಾ ಕುರು-ಶನೇ: ಕೋವಾಸದಾಧೇನುಕೋ ಲಗ್ನಾಸ್ತ್ವತ್ಕಲಿತಂ ನಯೇತ್ ಕ್ಷಿತಿಸುತ: ಕ್ಷೇಮಪ್ರದೋ ಗೋಚರೇ ॥೫॥

ಕುಜಾಷ್ಟಕವರ್ಗ:- (39 ಬಿಂದುಗಳು) ಕುಜನು ರವಿಯಿಂದ 3, 5, 6, 10 ಮತ್ತು 11ರಲ್ಲಿ, ಚಂದ್ರನಿಂದ 3, 6 ಮತ್ತು 11ರಲ್ಲಿ, ತನ್ನಿಂದ 1, 2, 4, 7, 8, 10ಮತ್ತು 11ರಲ್ಲಿ, ಬುಧನಿಂದ 3, 5, 6ಮತ್ತು 11ರಲ್ಲಿ, ಗುರುವಿನಿಂದ 6, 10, 11ಮತ್ತು 12ರಲ್ಲಿ, ಶುಕ್ರನಿಂದ 6, 8, 11ಮತ್ತು 12ರಲ್ಲಿ, ಶನಿಯಿಂದ 1, 4, 7, 8, 9, 10ಮತ್ತು 11ರಲ್ಲಿ ಮತ್ತು ಲಗ್ನದಿಂದ 1, 3, 6, 10ಮತ್ತು 11ರಲ್ಲಿ ಶುಭನು ಆಗಿರುತ್ತಾನೆ.

ಸೌಮ್ಯಾದ್ಯೋಗಶತಂ ಧನ್ಯೆ ಕುರುರವೇ: ಮೋರ್ಷಾಧಿಕಶ್ರೀಗುರ್ರೋ : ತೇಜೋ ಯತ್ರ ಯಮಾರಯೋ: ಪುರವಸಂದಿಗ್ಧೇನಯೋ ಭಾರ್ಗವಾತ್ । ಪುತ್ರೋ ಗರ್ಭ ಮಹಾಂಧಕೇ ಪರಭೃತಾಂ ದಾನಾಯ ಲಗ್ನಾತ್ಸುಧಾಮೂರ್ತೇ: ಪ್ರಾವೃಷಿ ಜಾನಕೀ ಶಶಿಸುತಸ್ತ್ವತ್ರಸ್ಥಿತಶ್ಚೇಚ್ಛುಭ: ॥೬॥

ಬುಧಾಷ್ಟಕವರ್ಗ:- (54ಬಿಂದುಗಳು) ಬುಧನು ತನ್ನಿಂದ 1, 3, 5, 6, 9, 10, 11 ಮತ್ತು 12ರಲ್ಲಿ, ರವಿಯಿಂದ 5, 6, 9, 11ಮತ್ತು 12ರಲ್ಲಿ, ಗುರುವಿನಿಂದ 6, 8 11ಮತ್ತು 12ರಲ್ಲಿ, ಶನಿ ಮತ್ತು ಕುಜನಿಂದ 1, 2, 4, 7, 8, 9, 10ಮತ್ತು 11ರಲ್ಲಿ, ಶುಕ್ರನಿಂದ 1, 2, 3, 4, 5, 8, 9ಮತ್ತು 11ರಲ್ಲಿ, ಲಗ್ನದಿಂದ 1, 2, 4, 6, 8, 10ಮತ್ತು 11ರಲ್ಲಿ, ಮತ್ತು ಚಂದ್ರನಿಂದ 2, 4, 6, 8, 10ಮತ್ತು 11ರಲ್ಲಿ ಶುಭನು ಆಗಿರುತ್ತಾನೆ.

ಮಾರ್ತಾಂಡಾತ್ಕರಲಾಭಸಜ್ಜ ಧನಿಕೇ ಚಂದ್ರಾದ್ರುಮೇಸಾಳಿಕೇ ಭೌಮಾತ್ಕಿಂ ಪ್ರಭು ಸೂದನಾಯ ಕುರವ: ಶಿಕ್ಷಾಧನಾಢ್ಯೇ ಬುಧಾತ್ । ಪುತ್ರೀ ಗರ್ಭಸದಾನಕೇ ಸುರ ಗುರೋ: ಸ್ವಲ್ಲಕ್ಷ್ಮಿಚಂದ್ರೇ ಶನೇ: ಶ್ರೀಮಂತೋ ಧನಿಕಾ: ಸಿತಾತ್ಕರಿ ವಿಶೇಷೇ ಸಿದ್ಧಿ ನಿತ್ಯಂ ತನೋ: ॥೭॥

ಗುರು ಅಷ್ಟಕವರ್ಗ:- (56 ಬಿಂದುಗಳು) ಗುರುವು ರವಿಯಿಂದ 1, 2, 3, 4, 7, 8, 9, 10ಮತ್ತು 11ರಲ್ಲಿ, ಚಂದ್ರನಿಂದ 2, 5, 7, 9ಮತ್ತು 11ರಲ್ಲಿ, ಕುಜನಿಂದ 1, 2, 4. 7. 8, 10ಮತ್ತು 11ರಲ್ಲಿ, ಬುಧನಿಂದ 1, 2, 4, 5, 6, 9, 10 ಮತ್ತು 11ರಲ್ಲಿ, ತನ್ನಿಂದ 1, 2, 3, 4, 7, 8, 10ಮತ್ತು 11ರಲ್ಲಿ, ಶನಿಯಿಂದ 3, 5, 6ಮತ್ತು 12, ಶುಕ್ರನಿಂದ 2, 5, 6, 9, 10ಮತ್ತು 11ರಲ್ಲಿ ಮತ್ತು ಲಗ್ನ ದಿಂದ 1, 2, 4, 5, 6, 7, 9, 10ಮತ್ತು 11ರಲ್ಲಿ ಶುಭನು ಆಗಿರುತ್ತಾನೆ.

ಜಾತ್ಯಾಂ ಶ್ರೀಸ್ತು ರವೇರ್ವಿಧೋ: ಪುರಗವಾಮಂದೋಳಿಪುತ್ರ ತನೋ: ಪೌರೇ ಲಾಭಮದಾಳಿಕೇ ಕುರುಲಪಂ ಮೋಹೇ ಧನೇಢ್ಯೇ ಭೃಗೋ: । ಲೋಮಸ್ತಾಳಿಪರೇ

ಕುಜಾದ್ರವಿಸುತಾದ್ಗರ್ಭಂ ಮಹಾಬ್ಧೌ ನಯೇಜ್ಞಾಲ್ಲಕ್ಷ್ಮೀಚುಳಕೇ ಗುರೋರ್ಮದ
ಧನಾಢ್ಯೋಽಸೌ ಭೃಗುಃ ಸೌಖ್ಯದಃ ॥೮॥

ಶುಕ್ರಾಷ್ಟಕವರ್ಗಃ- (52 ಬಿಂದುಗಳು) ಶುಕ್ರನು ರವಿಯಿಂದ 8, 11 ಮತ್ತು 12 ರಲ್ಲಿ, ಚಂದ್ರನಿಂದ 1, 2, 3, 4, 5, 8, 9, 11ಮತ್ತು 12ರಲ್ಲಿ, ಲಗ್ನದಿಂದ 1, 2, 3, 4, 5, 8, 9ಮತ್ತು 11ರಲ್ಲಿ, ತನ್ನಿಂದ 1, 2, 3, 4, 5, 8, 9, 10 ಮತ್ತು 11ರಲ್ಲಿ, ಕುಜನಿಂದ 3, 5, 6, 9, 11ಮತ್ತು 12ರಲ್ಲಿ, ಶನಿಯಿಂದ 3, 4, 5, 8, 9, 10ಮತ್ತು 11ರಲ್ಲಿ, ಬುಧನಿಂದ 3, 5, 6, 9ಮತ್ತು 11ರಲ್ಲಿ ಮತ್ತು ಗುರುವಿನಿಂದ 5, 8, 9, 10ಮತ್ತು 11ರಲ್ಲಿ ಶುಭನು ಆಗಿರುತ್ತಾನೆ.

ರವೇರ್ಯಾತ್ರಾವೀಥೀಜನಯ ಶಶಿನೋ ಲಕ್ಷಯ ಶನೇಃ ಗುಣೇಸ್ತ್ವೃತೋ್ಯ ಭೌಮಾ-
ದ್ಗಣಿತನಿಕರೋಽಸೌ ಶುಭಕರಃ । ಶತಾಕಾರೇ ಜೀವಾತ್ತದಧನಪರೇ ಜ್ಞಾದುದಯ-
ಭಾತ್ ಕಲಾಭೂತಾನಮ್ಯೇ ಭೃಗುಜ ಚಯುಖೇ ಸೂರ್ಯತನಯಃ ॥೯॥

ಶನಿ ಅಷ್ಟಕವರ್ಗಃ- (39 ಬಿಂದುಗಳು) ಶನಿಯು ರವಿಯಿಂದ 1, 2, 4, 7, 8, 10 ಮತ್ತು 11ರಲ್ಲಿ ಚಂದ್ರನಿಂದ 3, 6 ಮತ್ತು 11ರಲ್ಲಿ ತನ್ನಿಂದ3, 5, 6ಮತ್ತು 11ರಲ್ಲಿ, ಕುಜನಿಂದ 3, 5, 6, 10, 11ಮತ್ತು 12ರಲ್ಲಿ, ಗುರುವಿನಿಂದ 5, 6, 11ಮತ್ತು 12ರಲ್ಲಿ, ಬುಧನಿಂದ 6, 8, 9, 10, 11ಮತ್ತು 12ರಲ್ಲಿ, ಲಗ್ನದಿಂದ 1, 3, 4, 6, 10ಮತ್ತು 11ರಲ್ಲಿ ಮತ್ತು ಶುಕ್ರನಿಂದ 6, 11 ಮತ್ತು 12ರಲ್ಲಿ ಶುಭಫಲದಾಯಕನು ಆಗುತ್ತಾನೆ.

ಇತಿ ನಿಗದಿತಮಿಷ್ಟಂ ನೇಷ್ಟಮನ್ಯದ್ವಿಶೇಷಾದಧಿಕ ಫಲವಿಪಾಕಂ ಜನ್ಮಿನಾಂತತ್ರ ದದ್ಯುಃ ।
ಉಪಚಯಗೃಹಮಿತ್ರಸ್ವೋಚ್ಚಗೈಃ ಪುಷ್ಟಮಿಷ್ಟಂ ತ್ವಪಚಯಗೃಹನೀಚಾರಾತಿಗೈರ್ನೇ-
ಷ್ಟಸಂಪತ್ ॥೧೦॥

ಗ್ರಹರು ಈ ರೀತಿಯಲ್ಲಿ ತಾವು ನಿಂತಸ್ಥಾನದಿಂದ ಶುಭಾಶುಭಫಲಗಳನ್ನು ನೀಡುತ್ತಾರೆ. ತಮ್ಮ ಸ್ವಕ್ಷೇತ್ರ, ಉಚ್ಚ ಮತ್ತು ಉಪಚಯ ರಾಶಿಗಳಲ್ಲಿ ಶುಭಫಲಗಳು ಪುಷ್ಟ ಆಗುತ್ತದೆ. ಅಪಚಯ ರಾಶಿಗಳಲ್ಲಿ (1, 2, 4, 5, 7, 8, 9ಮತ್ತು 12), ನೀಚ ಅಥವಾ ಶತ್ರುಕ್ಷೇತ್ರದಲ್ಲಿ ಅಶುಭಫಲಗಳನ್ನು ನೀಡುತ್ತಾರೆ.

ಕೃತ್ವಾಷ್ಟವರ್ಗಂ ದ್ಯುಸದಾಂ ಕ್ರಿಯಾದಿಷ್ವಕ್ಷೈರ್ವಿಹೀನೇ ಮೃತಿರೇಕಬಿಂದೋಃ ।
ನಾಶೋ ವ್ಯಯೋ ಭೀತಿಭಯಾರ್ಥನಾರೀಶ್ರೀರಾಜ್ಯಸಿದ್ಧಿಃ ಕ್ರಮಶಃ ಫಲಾನಿ ॥೧೧॥

ಗ್ರಹರ ಅಷ್ಟಕವರ್ಗ ಶೋಧನೆಯ ನಂತರ ಯಾವುದಾದರೂ ರಾಶಿಯಲ್ಲಿ ಶೂನ್ಯ ಬಿಂದುಗಳು ಇರುವ ಗ್ರಹನ ಅಷ್ಟಕವರ್ಗದಲ್ಲಿ, ಆ ಗ್ರಹನು ಸಂಚರಿಸುವಕಾಲ ಮರಣ ಪ್ರದ ಆಗಿರುತ್ತದೆ. 1ಬಿಂದು-ನಾಶ, 2-ವ್ಯಯ, 3-ಭಯ, 4-ಭಯ, 5-ಧನ ಪ್ರಾಪ್ತಿ, 6-ಸ್ತ್ರಿಸುಖ, 7-ಸಂಪತ್ತು, 8ಬಿಂದು ಇದ್ದರೆ ರಾಜ್ಯಪ್ರಾಪ್ತಿ ಆಗುತ್ತದೆ.

ತತ್ತದ್ಗ್ರಹಾಧಿಷ್ಠಿತಸರ್ವರಾಶೀಂಸ್ತತ್ಸಂಜ್ಞಿತಂ ಲಗ್ನಮಿತಿ ಪ್ರಕಲ್ಪ್ಯ ।
ತೇಭ್ಯಃ ಫಲಾನ್ಯಷ್ಟವಿಧಾನ್ಯಭೂವಂಸ್ತತ್ತದ್ಗ್ರಹಾದ್ಭಾವವಶಾದ್ವದಂತು ॥೧೨॥

ಆಯಾಗ್ರಹರು ಸ್ಥಿತರಾಶಿಯನ್ನು ಲಗ್ನವೆಂದು ಪರಿಕಲ್ಪಿಸಿ ಅಲ್ಲಿಂದ ಆಯಾಗ್ರಹರ ಭಾವಫಲಕ್ಕೆ ಸಂಬಂಧ ಪಟ್ಟ ಅಷ್ಟಕವರ್ಗಫಲವನ್ನು, ಬಿಂದುಗಳನ್ನು ಆಧರಿಸಿ ಚಿಂತಿಸ ಬೇಕು.

ತತ್ತದ್ಗ್ರಹರ್ಕ್ಷಾಂಶಕತುಲ್ಯಭಾಂಶಸ್ಥಿತಾ ಗ್ರಹಾಶ್ಚಾರವಶಾದಿದಾನೀಮ್ ।
ತಥೈವ ತದ್ಭಾವಸಮುತ್ಥಿತಾನಿ ಫಲಾನಿ ಕುರ್ವಂತಿ ಶುಭಾಶುಭಾನಿ ॥೧೩॥

ಗ್ರಹನು ಸ್ಥಿತರಾಶಿ, ನವಾಂಶಾದಿ ಸ್ಫುಟವನ್ನು ತಿಳಿದು, ಗ್ರಹನು ಅಷ್ಟೇ ದೂರ ಸಂಚರಿಸುವ ರಾಶಿಯಲ್ಲಿ,ಆ ಭಾವಕ್ಕೆ ಸಂಬಂಧಪಟ್ಟ ಶುಭಾಶುಭ ಫಲವನ್ನು ನೀಡುತ್ತಾನೆ.

ಕೃತೇಽಷ್ಟವರ್ಗೇ ಸತಿ ಕಾರಕರ್ಕ್ಷಾದ್ಯದ್ಭಾವಮುಕ್ತಾಂಗಮುಪೈತಿಖೇಟ: ।
ತದ್ಭಾವಪುಷ್ಟಿಂ ಸಶುಭೋಽಶುಭೋ ವಾ ಕರೋತ್ಯನುಕ್ತೇ ವಿಪರೀತಮೇವ ॥೧೪॥

ಗ್ರಹನ ಅಷ್ಟಕವರ್ಗದಲ್ಲಿ ಅಧಿಕಬಿಂದು ಇರುವ ರಾಶಿಯು ಲಗ್ನಾದಿ ಅಥವಾ ಕಾರಕಗ್ರಹನಿಂದ ಯಾವಭಾವ ಎಂದು ತಿಳಿದು, ಆ ಭಾವವನ್ನು ಗ್ರಹನು ಸಂಚರಿಸು ವಾಗ ಆ ಭಾವದ ಶುಭಫಲವು ಅನುಭವಕ್ಕೆ ಬರುತ್ತದೆ. ಸಂಚರಿಸುವ ಗ್ರಹನು ಶುಭ ನಾಗಲೀ ಅಶುಭನಾಗಲೀ, ಅಧಿಕ ಬಿಂದು ಇರುವುದರಿಂದ ಭಾವದ ಶುಭಫಲವೇ ಅನು ಭವಕ್ಕೆ ಬರುತ್ತದೆ. ಗ್ರಹನು ಸಂಚರಿಸುವ ರಾಶಿಯಲ್ಲಿ ಕಮ್ಮಿ ಅಥವಾ ಶೂನ್ಯಬಿಂದು ಗಳಿದ್ದರೆ ಆ ಭಾವದ ಅಶುಭಫಲಗಳು ಲಭಿಸುತ್ತವೆ.

ಏಕತ್ರ ಭಾವೇ ಬಹವೋ ಯದಾನೀಮುಕ್ತಾಂಕಗಾಶ್ಚಾರವಶಾದ್ವ್ರಜಂತಿ ।
ಪುಷ್ಣಂತಿ ತದ್ಭಾವಫಲಾನಿ ಸಮ್ಯಕ್ತತ್ಕಾರಕಾತ್ತತ್ತನುಪೂರ್ವಭಾವೇ ॥೧೫॥

ಅಧಿಕ ಬಿಂದುಗಳಿರುವ ರಾಶಿಯು ಕಾರಕನಿಂದ ಯಾವ ಭಾಗ ಆಗುತ್ತದೋ ಎಂದು ತಿಳಿಯಬೇಕು. ಆ ರಾಶಿಯಲ್ಲಿ ಹೆಚ್ಚು ಗ್ರಹರು ಸಂಚರಿಸುವ ಕಾಲದಲ್ಲಿ ಆ ಭಾವಕ್ಕೆ ಸಂಭಂಧಪಟ್ಟ ಫಲವು ಶುಭಾಧಿಕ್ಯವಾಗಿ ಲಭಿಸುತ್ತದೆ.

ಬಿಂದೌ ಸ್ಥಿತೇ ತತ್ಫಲಸಿದ್ಧಿಕಾಲವಿನಿರ್ಣಯಾಯ ಪ್ರಹೀತೇಽಷ್ಟವರ್ಗೇ ।
ಭಾನ್ಯಷ್ಟಧಾ ತತ್ರ ವಿಭಜ್ಯ ಕಕ್ಷಾಕ್ರಮೇಣ ತೇಷಾಂ ಫಲಮಾಹುರನ್ಯೇ ॥೧೬॥

ಅಷ್ಟಕವರ್ಗದಿಂದ ಗೋಚರದ ಶುಭಾಶುಭ ಫಲ ಪ್ರಾಪ್ತಿಕಾಲ ಚಿಂತನೆಗೆ ರಾಶಿ ಯನ್ನು ಎಂಟು ಕಕ್ಷೆಗಳಾಗಿ ವಿಭಾಗ ಮಾಡುತ್ತಾರೆ. ಪ್ರತಿಒಂದು ರಾಶಿಯಲ್ಲಿ ಕಕ್ಷಾ ಕ್ರಮವು ಶನಿ, ಗುರು, ಕುಜ, ರವಿ, ಶುಕ್ರ, ಬುಧ, ಚಂದ್ರ ಮತ್ತು ಲಗ್ನ ಆಗಿರುತ್ತದೆ. (ಇದು ಹೋರಾಧಿಪತ್ಯ ಕ್ರಮದಂತೆ, ಒಂದು ಬಿಟ್ಟು ಒಂದು ವ್ಯುತ್ಕ್ರಮ ಆಗಿರುತ್ತದೆ,) ಗ್ರಹರು ತಮ್ಮ ಬಿಂದು ಇರುವ ರಾಶಿಯಲ್ಲಿ ಗೋಚರದಲ್ಲಿ ತಮ್ಮ ತಮ್ಮ ಕಕ್ಷೆಗಳಲ್ಲಿ ಸಂಚರಿಸುವ ಕಾಲ ಶುಭಫಲಗಳನ್ನು ನೀಡುತ್ತಾರೆ.

ಆಲಿಖ್ಯ ಚಕ್ರಂ ನವ ಪೂರ್ವರೇಖಾ ಯಾಮ್ಯೋತ್ತರಸ್ಥಾ ದಶ ಚ ತ್ರಿರೇಖಾ: ।
ಪ್ರಸ್ತಾರಕಂ ಷಣ್ಣವತಿ ಪ್ರಕೋಷ್ಠಂ ಪಂಕ್ತ್ಯಷ್ಟಕಂ ಚಾಷ್ಟಕವರ್ಗಜಂ ಸ್ಯಾತ್ ॥೧೭॥

ಸಮಾನ ಅಂತರಉಳ್ಳ 9 ರೇಖೆಗಳನ್ನು ಪೂರ್ವದಿಂದ ಪಶ್ಚಿಮಕ್ಕೆ ಎಳೆದು ಅನಂ

ತರ ಇವುಗಳನ್ನು ಛೇದಿಸುವಂತೆ 13 ರೇಖೆಗಳನ್ನು ಉತ್ತರದಿಂದ ದಕ್ಷಿಣಕ್ಕೆ ಎಳೆದು 96 ಕೋಣೆಗಳಿರುವ ಪ್ರಸ್ತಾರಾಷ್ಟಕವರ್ಗವನ್ನು ತಯಾರಿಸಬೇಕು.

ಹೋರಾಶಶೀಬೋಧನಶುಕ್ರಸೂರ್ಯಭೌಮಾಮರೇಂದ್ರಾರ್ಚಿತಭಾನುಪುತ್ರಾ: ।
ಯಾವ್ಯಾದಿಪಂಕ್ತ್ಯಷ್ಟಕರಾಶಿನಾಥಾ: ಕ್ರಮೇಣ ತದ್ಬಿಂದುಫಲಪ್ರದಾ: ಸ್ಯು: ॥೧೮॥

ದಕ್ಷಿಣದಿಂದ ಉತ್ತರಕ್ಕಿರುವ ಪ್ರತಿ ಕೋಣೆಗಳಲ್ಲಿ ಕ್ರಮವಾಗಿ ಲಗ್ನ, ಚಂದ್ರ, ಬುಧ, ಶುಕ್ರ, ರವಿ, ಕುಜ, ಗುರು ಮತ್ತು ಶನಿ ಅಧಿಪತಿಗಳಾಗುತ್ತಾರೆ. ಈ ಗ್ರಹರ ಬಿಂದು ಇರುವ ಭಾಗದಲ್ಲಿ ಗೋಚರದಲ್ಲಿ ಆಯಾ ಗ್ರಹಸಂಚಾರಕಾಲ ಶುಭಫಲ ಲಭಿಸುತ್ತದೆ.

ರಾಶ್ಯಷ್ಟಭಾಗಪ್ರಥಮಾಂಶಕಾಲೇ ಶನಿರ್ದ್ವಿತೀಯೇ ತು ಗುರು: ಫಲಾಯ ।
ಕಕ್ಷಾಕ್ರಮೇಣೈವಮಿಹಾಂತ್ಯಭಾಗಕಾಲೇ ವಿಲಗ್ನಂ ಫಲದಂ ಪ್ರದಿಷ್ಟಮ್ ॥೧೯॥

ಒಂದುರಾಶಿಯನ್ನು 8 ಸಮಾನ ವಿಭಾಗಮಾಡಬೇಕು. ಇದು ಕಕ್ಷೆ ಆಗಿರುತ್ತದೆ. ಪ್ರಥಮ ಕಕ್ಷೆ ಶನಿಯದ್ದು, ಅನಂತರ ಗುರುವಿನದ್ದು, ಅದೇರೀತಿ ಅವರವರ ಪಥದಂತೆ ಕಕ್ಷೆಗಳು ಕ್ರಮವಾಗಿ ಆಯಾಗ್ರಹರ ಅಧಿಪತ್ಯದಲ್ಲಿರುತ್ತದೆ. ರಾಶಿಯ ಕೊನೇಯ ಕಕ್ಷೆಯು ಲಗ್ನಕಕ್ಷೆ ಆಗಿರುತ್ತದೆ. ಯಾವುದಾದರೂ ಗ್ರಹನು ಲಗ್ನಕಕ್ಷೆಯಲ್ಲಿ ಸಂಚರಿಸುವ ಕಾಲ, ಆ ಕಕ್ಷೆಯಲ್ಲಿ ಲಗ್ನದ ಬಿಂದು ಇದ್ದರೆ, ಶುಭಫಲ ಲಭಿಸುತ್ತದೆ.

ಸರ್ವಗ್ರಹಾಣಾಂ ಪ್ರಹಿತೇಽಷ್ಟವರ್ಗೇ ತತ್ಕಾಲರಾಶಿಸ್ಥಿತಬಿಂದುಯೋಗೇ ।
ಅಷ್ಟಾಕ್ಷಸಂಖ್ಯಾಧಿಕಬಿಂದವಶ್ಚೇಚ್ಛುಭಂ ತದೂನೇ ವ್ಯಸನಂ ಕ್ರಮೇಣ ॥೨೦॥

ಎಲ್ಲಗ್ರಹರ ಅಷ್ಟಕವರ್ಗ ಶೋಧಿಸಿ ಸಿದ್ಧಗೊಳಿಸಿದ ಸರ್ವಾಷ್ಟಕವರ್ಗ ಚಕ್ರದ ಯಾವುದಾದರೂ ರಾಶಿಯಲ್ಲಿ 28 ಬಿಂದುಗಿಂತ ಹೆಚ್ಚು ಇದ್ದರೆ ಆ ರಾಶಿಯಲ್ಲಿ ಗ್ರಹಚಾರವು ಶುಭಫಲಗಳನ್ನು ನೀಡುತ್ತದೆ. 28ಕ್ಕಿಂತ ಕಮ್ಮಿ ಬಿಂದು ಇರುವರಾಶಿಯಲ್ಲಿ ಗ್ರಹಸಂಚಾರಕಾಲವು ದು:ಖವನ್ನು ಸೂಚಿಸುತ್ತದೆ.

ಯಾವಂತಸ್ತುಹಿನರುಚೇ: ಶುಭಾಙ್ಕಸಂಸ್ಥಾ ಯಾವಂತ: ಶುಭಭವನೇ ಹಿಮದ್ಯು- ತೇರ್ವಾ । ಇತ್ಥಂ ತದ್ವಿದಿತಮಿಹಾಧಿಕೇ ಚ ತೇಭ್ಯ: ಸ್ವಸ್ತ್ಯೂನೇ ವಿಪದಿತಿ ಸೂಚಿ- ತಂ ಪರೇಷಾಮ್ ॥೨೧॥

ಚಂದ್ರನಿಂದ ಶುಭಭಾವಗಳಲ್ಲಿ ಇರುವ ಬಿಂದುಗಳು ಅಥವಾ ಚಂದ್ರನಿಂದ ಶುಭಭಾವದಲ್ಲಿ ಗ್ರಹಗಳು ಇರುವ ರಾಶಿಯ ಬಿಂದುಗಳ ಮೊತ್ತವು ಅಧಿಕವಿದ್ದರೆ ಶುಭಫಲ ಅನ್ಯಥಾ ಅಶುಭಫಲ ಲಭಿಸುತ್ತದೆ.

ಕರ್ತು: ಸ್ವಜನ್ಮಸಮಯಾವಸಥಗ್ರಹಾಣಾಂ ಕೃತ್ವಾಷ್ಟವರ್ಗಕಥಿತಾಕ್ಷವಿಧಾನಮತ್ರ ।
ಬಹ್ವಕ್ಷಯೋಗವಶತ: ಶುಭರಾಶಿಮಾಸಭಾವಗ್ರಹಸ್ಥಿತಿಷು ಕರ್ಮಶುಭಂ ವಿದಧ್ಯಾತ್ ॥

ಅಷ್ಟಕವರ್ಗ ಬಿಂದುಗಳನ್ನು ಹಿಂದೆ ಹೇಳಿದ ಕ್ರಮದಲ್ಲಿ ಜನ್ಮಕಾಲದ ಗ್ರಹಸ್ಥಿತಿಯನ್ನು ಆಧರಿಸಿ ಶೋಧಿಸಿ ತಯಾರಿಸಿದ ಕೋಷ್ಟಕದಲ್ಲಿ ಅಧಿಕ ಬಿಂದು ಇರುವ ರಾಶಿಯಲ್ಲಿ ಗೋಚರದ ಗ್ರಹನು ಸಂಚರಿಸುವಾಗ ಶುಭಕಾರ್ಯಗಳನ್ನು ಮಾಡಬೇಕು.

ಪಾಪೋಽಪಿ ಸ್ವಗೃಹಸ್ಥಶ್ಚೇದ್ಭಾವವೃದ್ಧಿಂ ಕರೋತ್ಯಲಮ್ ।
ನೀಚಾರಾತಿಗೃಹಸ್ಥಶ್ಚೇತ್ಕುರ್ಯಾದ್ಭಾವಕ್ಷಯಂ ಧ್ರುವಮ್ ॥೨೩॥

ಸ್ವಕ್ಷೇತ್ರದ ಗ್ರಹನು ಪಾಪಗ್ರಹನಾದರೂ ಆ ಭಾವದ ವೃದ್ಧಿಯನ್ನು ಮಾಡುತ್ತಾನೆ. ತನ್ನ ನೀಚ ಅಥವಾ ಶತ್ರುಕ್ಷೇತ್ರದಲ್ಲಿ ಇದ್ದರೆ ಭಾವಫಲನಾಶ ಮಾಡುತ್ತಾನೆ.

ಸ್ವೋಚ್ಚಸ್ಥೋಽಪಿ ಶುಭೋ ಭಾವಹಾನಿಂ ದುಃಸ್ಥಾನಪೋ ಯದಿ ।
ಸುಸ್ಥಾನಪಶ್ಚೇತ್ ಸ್ವೋಚ್ಚಸ್ಥಃ ಪಾಪೀ ಭಾವಾನುಕೂಲ್ಯಕೃತ್ ॥೨೪॥

ಶುಭಗ್ರಹಗಳು ಉಚ್ಚದಲ್ಲಿದ್ದರೂ ದುಃಸ್ಥಾನಾಧಿಪತಿಗಳಾದರೆ ತಾವು ಸ್ಥಿತಭಾವ ಫಲವನ್ನು ನಾಶಮಾಡುತ್ತಾರೆ. ಪಾಪಗ್ರಹನು ಸುಸ್ಥಾನಾಧಿಪತಿಯಾಗಿ ಉಚ್ಚದಲ್ಲಿ ಇದ್ದರೆ ಶುಭಫಲ ನೀಡುತ್ತಾನೆ.

ಹೋರಾಸಾರೋಕ್ತ ಅಷ್ಟಕವರ್ಗಫಲಾಧ್ಯಾಯ-೨೪

ಅರ್ಕಸ್ಥಿತಸ್ಯ ನವಮೊ ರಾಶಿಃ ಪಿತೃಗೃಹಃ ಸ್ಮೃತಃ । ತದ್ರಾಶಿ ಫಲಸಂಖ್ಯಾಭಿವರ್ಧ್ದಯೇಚ್ಛೋಧ್ಯಪಿಂಡಕಮ್॥೧॥ ಸಪ್ತವಿಂಶಹೃತಾಲ್ಲಬ್ಧಂ ನಕ್ಷತ್ರಂ ಯಾತಿ ಭಾನುಜೇ । ತಸ್ಮಿನ್ ಕಾಲೇ ಪಿತೃಕ್ಲೇಶೋ ಭವಿಷ್ಯತಿ ನ ಸಂಶಯಃ ॥೨॥ ತತ್‌ತ್ರಿಕೋಣಗತೇ ವಾಽಪಿ ಪಿತೃತುಲ್ಯಸ್ಯ ವಾ ಮೃತಿಃ । ಸಂಯೋಗಃ ಶೋಧ್ಯಶೇಷಾಣಾಂ ಶೋಧ್ಯ–ಪಿಂಡ ಇತಿ ಸ್ಮೃತಃ ॥೩॥

ಸೂರ್ಯನಿಂದ ನವಮಭಾವವನ್ನು ಪಿತೃಸ್ಥಾನ ಎಂದು ತಿಳಿಯುತ್ತಾರೆ. ಆ ರಾಶಿಯಲ್ಲಿರುವ ಬಿಂದುಗಳನ್ನು ಶೋಧ್ಯಪಿಂಡದಿಂದ ಗುಣಿಸಬೇಕು. ಲಬ್ಧವನ್ನು 27ರಿಂದ ಭಾಗಿಸಬೇಕು. ಶೇಷಸಂಖ್ಯೆತುಲ್ಯ ನಕ್ಷತ್ರ ಅಶ್ವಿನೀಯಿಂದ ಗುಣಿಸಿ ಶೋಧಿಸಬೇಕು. ಈ ನಕ್ಷತ್ರದಲ್ಲಿ ಅಥವಾ ಅದರ ತ್ರಿಕೋಣ ನಕ್ಷತ್ರದಲ್ಲಿ ಶನಿಸಂಚಾರಕಾಲ ತಂದೆಗೆ ಅರಿಷ್ಟ ಸಂಭವಿಸುತ್ತದೆ. ಅಥವಾ ಪಿತೃಸಮಾನ ವ್ಯಕ್ತಿಯ ಮರಣಸಂಭವಿಸುತ್ತದೆ. ಅಷ್ಟವರ್ಗದಲ್ಲಿ 2 ಶೋಧನೆನಂತರ ಉಳಿದ ಬಿಂದುಗಳಿಗೆ ಶೋಧ್ಯಪಿಂಡ ಎಂದು ಕರೆಯುತ್ತಾರೆ.

ಲಗ್ನಾತ್ಸುಖೇಶ್ವರಾಂಶೇಶದಶಾಯಾಂ ಚ ಪಿತೃಕ್ಷಯಃ ।
ಸುಖನಾಥದಶಾಯಾಂ ವಾ ಪಿತೃತುಲ್ಯಮೃತಿಂ ವದೇತ್ ॥೪॥

ತಂದೆಯಮರಣಃ- ಚತುರ್ಥಾಧಿಪತಿ ಅಥವಾ ಅವನ ನವಾಂಶಾಧಿಪನ ದಶಾಕಾಲದಲ್ಲಿ ತಂದೆಯು ಅಥವಾ ಹಿರಿಯರ ನಾಶ ಆಗುತ್ತದೆ.

ಸಂಶೋಧ್ಯ ಪಿಂಡಂ ಸೂರ್ಯಸ್ಯ ರಂಧ್ರಮಾನೇನ ವರ್ಧ್ದಯೇತ್‌ದ್ವಾದಶೇನ ಹತಾಚ್ಛೇಷ ರಾಶಿಂ ಯಾತೇ ದಿವಾಕರೇ ॥೫॥ ತತ್ತ್ರಿಕೋಣಗತೇ ವಾಽಪಿ ಮರಣಂ ತಸ್ಯ ನಿರ್ದಿಶೇತ್ ॥ ಏವಂ ಗ್ರಹಾಣಾಂ ಸರ್ವೇಷಾಂ ಚಿಂತಯೇನ್ಮತಿಮಾನ್ನರಃ ॥೬॥

ಸೂರ್ಯನ ಶೋಧ್ಯಪಿಂಡ ಬಿಂದುಗಳನ್ನು 8ರಿಂದ ಗುಣಿಸಿ 12ರಿಂದ ಭಾಗಿಸಬೇಕು. ಶೇಷತುಲ್ಯ ಮೇಷಾದಿ ರಾಶಿಗಳಲ್ಲಿ ಅಥವಾ ಅವುಗಳ ತ್ರಿಕೋಣ ರಾಶಿಯಲ್ಲಿ ರವಿ ಸಂಚಾರಕಾಲ ತಂದೆಯ ಮರಣ ಸಂಭವಿಸಬಹುದು. ಈ ರೀತಿಯಲ್ಲಿ ತಂದೆಯು ಅವ

ಸಾನ ವಿಚಾರವನ್ನು ಚಿಂತಿಸಬೇಕು.

ಚಂದ್ರಾತ್ಸುಖಫಲೈ: ಪಿಂಡಂ ಹತ್ವಾ ಸಾರಾವಶೇಷಿತವ್ ।
ಶನೌಯಾತೇ ಮಾತೃಹಾನಿ; ತ್ರಿಕೋಣರ್ಕ್ಷಗತೇऽಪಿ ವಾ ॥೭॥

ಮಾತೃಮರಣವಿಚಾರ:- ಶೋಧ್ಯ ಚಂದ್ರಾಷ್ಟಕವರ್ಗವನ್ನು ಚಂದ್ರನಿಂದ ಚತುರ್ಥದ ಬಿಂದುಗಳಿಂದ ಗುಣಿಸಿ, 27ರಿಂದ ಭಾಗಿಸಿ, ಲಬ್ಧವನ್ನು ಅಶ್ವಿನೀಯಿಂದ ಗುಣಿಸಿ ಬಂದ ನಕ್ಷತ್ರದಲ್ಲಿ ಅಥವಾ ಆ ನಕ್ಷತ್ರ ತ್ರಿಕೋಣ ನಕ್ಷತ್ರದಲ್ಲಿ ಶನಿಸಂಚಾರ ಕಾಲ ತಾಯಿಯ ಮರಣ ಸಂಭವಿಸಬಹುದು.

ಚಂದ್ರಾತ್ಸುಖಾಷ್ಟಮೇಶಾಂಶತ್ರಿಕೋಣೇ ದಿವಸಾಧಿಪೇ ।
ಮಾತುರ್ವಿಯೋಗಂ ತನ್ಮಾಸೇ ನಿರ್ದಿಶೇಲ್ಲಗ್ನತ: ಪಿತು: ॥೮॥

ಚಂದ್ರನಿಂದ ಚತುರ್ಥ ಮತ್ತು ಅಷ್ಟಮಾಧಿಪತಿಯ ನವಾಂಶ ತ್ರಿಕೋಣದಲ್ಲಿ ರವಿಸಂಚಾರಕಾಲ ಮಾತೃವಿಯೋಗ ಸಂಭವಿಸುತ್ತದೆ. ಅದೇ ರೀತಿ ಪಿತೃವಿಯೋಗವನ್ನು ಲಗ್ನದ ಚತುರ್ಥ ಮತ್ತು ಅಷ್ಟಮಾಧಿಪತಿಯ ನವಾಂಶ ತ್ರಿಕೋಣದಲ್ಲಿ ರವಿಸಂಚಾರ ಕಾಲ ಪಿತೃವಿಯೋಗವನ್ನು ಸೂಚಿಸುತ್ತದೆ.

ಭೌಮಾತ್ತೃತೀಯರಾಶಿಸ್ಥಫಲೈರ್ಭ್ರಾತೃಗಣಂ ವದೇತ್ ।
ಬುಧಾತ್ಸುಖಫಲೈರ್ಬಂಧುಗಣಂ ವಾ ಮಾತುಲಸ್ಯ ಚ ॥೯॥

ಕುಜಾಷ್ಟಕವರ್ಗದ ತೃತೀಯದಲ್ಲಿರುವ ಬಿಂದುಗಳಿಂದ ಸಹೋದರ ಸಂಖ್ಯೆಯನ್ನು ಚಿಂತಿಸಬೇಕು. ಬುಧಾಷ್ಟಕವರ್ಗದ ಚತುರ್ಥದಿಂದ ಬಂಧು ಅಥವಾ ಸೋದರಮಾವನ ಸಂಖ್ಯೆಯನ್ನು ಚಿಂತಿಸಬೇಕು.

ಗುರುಸ್ಥಿತಸುತಸ್ಥಾನೇ ಯಾವತಾಂ ವಿದ್ಯತೇ ಫಲವ್ ।
ಶತ್ರುನೀಚಗ್ರಹಂ ತ್ಯಕ್ತ್ವಾ ಶೇಷಾಸ್ತಸ್ಯಾತ್ಮಜಾ: ಸ್ಮೃತಾ: ॥೧೦॥

ಗುರು ಅಷ್ಟಕವರ್ಗದ ಪಂಚಮದಲ್ಲಿರುವ ಬಿಂದುಗಳಲ್ಲಿ ಶತ್ರು ಮತ್ತು ನೀಚಗ್ರಹರಿಂದ ಲಭಿಸಿದ ಬಿಂದುಗಳನ್ನು ಕಳೆದು ಉಳಿದ ಬಿಂದುಗಳ ಸಂಖ್ಯೆಯಷ್ಟು ಮಕ್ಕಳಾಗುತ್ತಾರೆ.

ಗುರೋರಷ್ಟಕವರ್ಗೇ ತು ಶೋಧ್ಯಶಿಷ್ಟಫಲಾನಿ ವೈ ।
ಕ್ರೂರರಾಶಿಫಲಂ ತ್ಯಕ್ತ್ವಾ ಶೇಷಾಸ್ತಸ್ಯಾತ್ಮಜಾ: ಸ್ಮೃತಾ: ॥೧೧॥

ಶೋಧ್ಯಗುರ್ವಷ್ಟಕವರ್ಗದ ಮೊತ್ತದಲ್ಲಿ ಕ್ರೂರರಾಶಿಗಳಲ್ಲಿರುವ ಬಿಂದುಗಳನ್ನು ಕಳೆದು ಉಳಿದ ಸಂಖ್ಯೆಯಷ್ಟು ಮಕ್ಕಳು ಇರುತ್ತವೆ.

ಫಲಾಧಿಕಂ ಭೃಗೋರ್ಯತ್ರ ತತ್ರಭಾರ್ಯಾಜನಿರ್ಯದಿ ।
ತಸ್ಯಾಂ ವಂಶಾಭಿವೃದ್ಧಿ: ಸ್ಯಾದಲ್ಪೇ ಕ್ಷೀಣಾರ್ಥಸಂತತಿ; ॥೧೨॥

ಶುಕ್ರಾಷ್ಟಕವರ್ಗದಲ್ಲಿ ಅಧಿಕಬಿಂದು ಇರುವ ರಾಶಿಯಲ್ಲಿ ಪತ್ನಿಯು ಜನಿಸಿದ್ದರೆ,

ಅವಳು ವಂಶಾಭಿವೃದ್ಧಿಗೆ ಯೋಗ್ಯಳು ಆಗಿರುತ್ತಾಳೆ. ಅಲ್ಪಬಿಂದು ಇರುವ ರಾಶಿಯಲ್ಲಿ ಜನಿಸಿದವಳಾದರೆ ಧನ ಮತ್ತು ಸಂತಾನ ಕ್ಷೀಣತೆ ಸೂಚಿಸುತ್ತದೆ.

ಶೋಧ್ಯಪಿಂಡಂ ಶನೇಲಗ್ನಾದ್ಧತ್ವಾ ರಂಧ್ರಫಲ್ಯೈ: ಸುಖೈ: ।
ಹೃತ್ವಾವಶೇಷಭಂ ಯಾತೇ ಮಂದೇಜೀವೇsಪಿ ವಾ ಮೃತಿ: ॥೧೩॥

ಶನ್ಯಾಷ್ಟಕವರ್ಗದ ಶೋಧ್ಯಪಿಂಡವನ್ನು, ಲಗ್ನದಿಂದ ಅಷ್ಟಮ ಭಾವದಲ್ಲಿರುವ ಶುಭಬಿಂದುಗಳಿಂದ ಗುಣಿಸಿ 27ರಿಂದ ಭಾಗಿಸಿ ಬರುವ ನಕ್ಷತ್ರದಲ್ಲಿ (ಅಶ್ವಿನ್ಯಾದಿಯಿಂದ ಗಣಿಸಿ) ಗುರು ಅಥವಾ ಶನಿಚಾರಕಾಲ ಜಾತಕನ ಮರಣ ಸಂಭವಿಸಬಹುದು.

ಲಗ್ನಾದಿಮಂದಾಂತಫಲೈಕ್ಯಸಂಖ್ಯಾವರ್ಷೇ ವಿಪತ್ತಿಸ್ತು ತಥಾರ್ಕಪುತ್ರಾತ್ ।
ಯಾವದ್ವಿಲಗ್ನಾಂತಫಲಾನಿ ತಸ್ಮಿನ್ನಾಶೋ ಹಿ ತದ್ಯೋಗಸಮಾನವರ್ಷೇ ॥೧೪॥

ಶನ್ಯಾಷ್ಟಕವರ್ಗದಲ್ಲಿ ಲಗ್ನದಿಂದ ಶನಿಸ್ಥಿತರಾಶಿಯ ತನಕ ಇರುವ (ಲಗ್ನ ಮತ್ತು ಶನಿಸ್ಥಿತ ರಾಶಿಯನ್ನು ಕೂಡಿಸಿ) ಶುಭಗ್ರಹರ ಬಿಂದುಗಳ ಮೊತ್ತ ಮತ್ತು ಶನಿಯಿಂದ ಲಗ್ನದ ತನಕ ಇರುವ (ಲಗ್ನ ಮತ್ತು ಶನಿಸ್ಥಿತರಾಶಿಯನ್ನು ಕೂಡಿಸಿ) ಶುಭಗ್ರಹರ ಬಿಂದುಗಳ ಮೊತ್ತ ತುಲ್ಯ ವರ್ಷಪ್ರಾಯದಲ್ಲಿ ಹಾನಿ ಅಥವಾ ನಾಶ ಸಂಭವಿಸುತ್ತದೆ.

ಅಷ್ಟಮಸ್ಥಫಲೈರ್ಲಗ್ನಾತ್ಪಿಂಡಂ ಹತ್ವಾ ಸುಖೈರ್ಭಜೇತ್ ।
ಫಲಮಾಯುರ್ವಿಜಾನೀಯಾತ್ಪ್ರಾಗ್ವದ್ವೇಲಾಂ ತು ಕಲ್ಪಯೇತ್ ॥೧೫॥

ಶನ್ಯಾಷ್ಟಕವರ್ಗದ ಶೋಧ್ಯಪಿಂಡವನ್ನು ಲಗ್ನದಿಂದ ಅಷ್ಟಮಭಾವದಲ್ಲಿರುವ ಶುಭಬಿಂದುಗಳಿಂದ 27ರಿಂದ ಭಾಗಿಸಿ ಬರುವ ಸಂಖ್ಯೆಯಷ್ಟು ವರ್ಷ ಆಯುಸ್ಸು ಇರುತ್ತದೆ. ಮರಣಕಾಲವನ್ನು ಹಿಂದೆ ಹೇಳಿದಂತೆ ಚಿಂತಿಸಬೇಕು.

ತ್ರಿಕೋಣೇಷು ತು ಯನ್ನ್ಯೂನಂ ತತ್ತುಲ್ಯಂ ತ್ರಿಷು ಶೋಧಯೇತ್ ।
ಏಕಸ್ಮಿನ್ ಭವನೇ ಶೂನ್ಯೇ ತತ್ತ್ರಿಕೋಣಂ ನ ಶೋಧಯೇತ್ ॥೧೬॥
ಭವನದ್ವಯಶೂನ್ಯೇ ತು ಶೋಧಯೇದನ್ಯಮಂದಿರಮ್ ।
ಸಮತ್ವೇ ಸರ್ವಗೇಹೇಷು ಸರ್ವಂ ಸಂಶೋಧಯೇತ್ತದಾ ॥೧೭॥

ತ್ರಿಕೋಣಶೋಧನೆ:- 1.ಪರಸ್ಪರ ತ್ರಿಕೋಣದಲ್ಲಿರುವ ಮೂರು ರಾಶಿಗಳಲ್ಲಿ, ಕಡಿಮೆ ಬಿಂದು ಇರುವ ರಾಶಿಯ ಬಿಂದುಗಳ ಸಂಖ್ಯೆಯನ್ನು ಮೂರು ರಾಶಿಗಳ ಬಿಂದುಗಳಿಂದ ಕಳೆಯಬೇಕು. 2.ತ್ರಿಕೋಣದ ಒಂದು ರಾಶಿಯಲ್ಲಿ ಬಿಂದುಗಳು ಇಲ್ಲದಿದ್ದರೆ ಉಳಿದೆರಡು ರಾಶಿಗಳ ಬಿಂದುಗಳನ್ನು ಸಂಸ್ಕರಿಸದೇ ಹಾಗೆಯೇ ಇಡಬೇಕು. 3.ತ್ರಿಕೋಣದ ಎರಡು ರಾಶಿಗಳಲ್ಲಿ ಶೂನ್ಯ ಬಿಂದುಗಳು ಇದ್ದರೆ ಮೂರನೇ ರಾಶಿಯ ಬಿಂದುಗಳನ್ನು ಶೂನ್ಯಕ್ಕೆ ಸಂಸ್ಕರಿಸಬೇಕು. 4. ತ್ರಿಕೋಣದ ಮೂರುರಾಶಿಗಳಲ್ಲಿ ಸಮಾನ ಬಿಂದುಗಳಿದ್ದರೆ ಎಲ್ಲಾ ಬಿಂದುಗಳನ್ನು ಶೂನ್ಯಕ್ಕೆ ಸಂಸ್ಕರಿಸಬೇಕು. ಇದನ್ನು ತ್ರಿಕೋಣಶೋಧನೆ ಎಂದು ಕರೆಯುತ್ತಾರೆ.

ತ್ರಿಕೋಣಶೋಧನಾಂ ಕೃತ್ವಾ ಪಶ್ಚಾದೈಕಾಧಿಪತ್ಯಕಮ್ ।
ಕ್ಷೇತ್ರದ್ವಯೋ ಫಲಾನಿ ಸ್ಯುಸ್ತದಾ ಸಂಶೋಧಯೇತ್ಸುಧೀಃ ॥೧೮॥

ಏಕಾಧಿಪತ್ಯಶೋಧನೆ:- ತ್ರಿಕೋಣ ಶೋಧನೆಯ ನಂತರ ಏಕಾಧಿಪತ್ಯಶೋಧನೆ ಮಾಡಬೇಕು. ಒಬ್ಬ ಗ್ರಹನ ಎರಡೂಕ್ಷೇತ್ರದಲ್ಲಿ ಬಿಂದುಗಳು ಇದ್ದರೆ ಮಾತ್ರ ಏಕಾಧಿಪತ್ಯ ಶೋಧನೆ ಮಾಡಬೇಕು.

ಗ್ರಹಯುಕ್ತೇ ಫಲೈರ್ಹೀನೇ ಗ್ರಹಾಭಾವೇ ಫಲಾಧಿಕೇ ಊನೇನ ಸದೃಶಂತ್ವಸ್ಮಿನ್ ಶೋಧಯೇದ್ಗ್ರಹವರ್ಜಿತೇ ॥೧೯॥ ಫಲಾಧಿಕೇ ಗ್ರಹೈರ್ಯುಕ್ತೇ ಚಾನ್ಯಸ್ಮಿನ್ ಸರ್ವಮುತ್ಸೃಜೇತ್ । ಸಗ್ರಹಾಗ್ರಹತುಲ್ಯತ್ವೇ ಸರ್ವಂ ಸಂಶೋಧ್ಯಮಗ್ರಹಾತ್ ॥

ಉಭಾಭ್ಯಾಂಗ್ರಹಹೀನಾಭ್ಯಾಂ ಸಮತ್ವೇ ಸಕಲಂ ತ್ಯಜೇತ್ । ಉಭಯೋರ್ಗ್ರಹ-ಸಂಯುಕ್ತೇ ನ ಸಂಶೋಧ್ಯಂ ಕದಾಚನ ॥೨೦॥ ಏಕಸ್ಮಿನ್ ಭವನೇ ಶೂನ್ಯೇ ನ ಸಂಶೋಧ್ಯಂ ಕದಾಚನ । ದ್ವಾವಗ್ರಹೌ ಚೇದ್ಯನ್ನ್ಯೂನಂ ತತ್ತುಲ್ಯಂ ಶೋಧಯೇ-ದ್ದ್ವಯೋಃ ॥೨೧॥

1.ಏಕಾಧಿಪತ್ಯರಾಶಿಗಳಲ್ಲಿ ಕಮ್ಮಿ ಬಿಂದು ಇರುವ ರಾಶಿಯಲ್ಲಿ ಗ್ರಹನಿದ್ದರೆ ಹೆಚ್ಚು ಬಿಂದು ಇದ್ದು ಗ್ರಹನಿಲ್ಲದ ರಾಶಿಯ ಬಿಂದುಗಳನ್ನು ಗ್ರಹನಿದ್ದ ರಾಶಿಯಷ್ಟೇ ಬಿಂದುಗಳನ್ನಾಗಿ ಸಂಸ್ಕರಿಸಬೇಕು. 2.ಗ್ರಹನಿದ್ದ ರಾಶಿಯಲ್ಲಿ ಹೆಚ್ಚು ಬಿಂದುಗಳು ಇದ್ದರೆ, ಕಮ್ಮಿ ಬಿಂದು ಇರುವ ರಾಶಿಯ ಬಿಂದುಗಳನ್ನು ಶೂನ್ಯಕ್ಕೆ ಸಂಸ್ಕರಿಸಬೇಕು. 3.ಗ್ರಹನಿದ್ದ ಮತ್ತು ಗ್ರಹನಿಲ್ಲದ ರಾಶಿಗಳಲ್ಲಿ ಸಮಾನ ಬಿಂದುಗಳು ಇದ್ದರೆ ಗ್ರಹನಿಲ್ಲದ ರಾಶಿಯ ಬಿಂದುಗಳನ್ನು ಶೂನ್ಯಕ್ಕೆ ಸಂಸ್ಕರಿಸಬೇಕು. 4.ಏಕಾಧಿಪತ್ಯದ ಎರಡೂ ರಾಶಿಗಳಲ್ಲಿ ಗ್ರಹರಿಲ್ಲದೆ ಸಮಾನ ಬಿಂದುಗಳು ಇದ್ದರೆ ಎರಡೂ ಬಿಂದುಗಳನ್ನು ಶೂನ್ಯಕ್ಕೆ ಸಂಸ್ಕರಿಸಬೇಕು. 5.ಎರಡೂ ರಾಶಿಗಳಲ್ಲಿ ಗ್ರಹರಿದ್ದರೆ ಬಿಂದುಗಳನ್ನು ಸಂಸ್ಕರಿಸದೆ ಹಾಗೆಯೇ ಇಡಬೇಕು. 6.ಗ್ರಹರಿದ್ದರೂ ಅಥವಾ ಗ್ರಹರಿಲ್ಲದಿದ್ದರೂ ಒಂದು ರಾಶಿಯಲ್ಲಿ ಬಿಂದುಗಳಿಲ್ಲದೆ, ಇನ್ನೊಂದು ರಾಶಿಯಲ್ಲಿ ಮಾತ್ರ ಇದ್ದರೆ ಆ ಬಿಂದುಗಳನ್ನು ಸಂಸ್ಕರಿಸದೆ ಹಾಗೆಯೇ ಇಡಬೇಕು. 7.ಎರಡೂ ರಾಶಿಗಳಲ್ಲಿ ಗ್ರಹರಿಲ್ಲದೆ ಬಿಂದುಗಳಲ್ಲಿ ವ್ಯತ್ಯಾಸವಿದ್ದಲ್ಲಿ ಹೆಚ್ಚು ಬಿಂದು ಇರುವ ರಾಶಿಯ ಬಿಂದುಗಳನ್ನು ಕಮ್ಮಿ ಬಿಂದು ಇರುವ ರಾಶಿಯಷ್ಟೇ ಬಿಂದುಗಳನ್ನಾಗಿ ಪರಿವರ್ತಿಸಬೇಕು.

ಶೋಧ್ಯಾವಶಿಷ್ಟಂ ಸಂಸ್ಥಾಪ್ಯ ರಾಶಿಮಾನೇನ ವರ್ಧಯೇತ್ ।
ಗ್ರಹಯುಕ್ತೇಽಪಿ ತದ್ರಾಶೌ ಗ್ರಹಮಾನೇನ ವರ್ಧಯೇತ್ ॥೨೩॥

1. ತ್ರಿಕೋಣ ಮತ್ತು ಏಕಾಧಿಪತ್ಯ ಶೋಧನೆಯ ನಂತರ ರಾಶಿಗಳಲ್ಲಿ ಉಳಿದ ಬಿಂದುಗಳನ್ನು ರಾಶಿಮಾನಗುಣಕದಿಂದ ಗುಣಿಸಬೇಕು. 2. ಗ್ರಹಸ್ಥಿತರಾಶಿಯ ಬಿಂದುಗಳನ್ನು ಆಯಾಗ್ರಹಮಾನ ಗುಣಕದಿಂದ ಗುಣಿಸಬೇಕು.

ಗೋಸಿಂಹೌ ದಶಗುಣಿತೌ ವಸುಭಿರ್ಮಿಥುನಾಲಿಭೇ । ವಣಿಜಮೇಷೌ ಚ ಮುನಿಭಿಃ ಕನ್ಯಾಕಾಮಕರೇ ಶರೈಃ ॥೨೪॥ ಶೇಷಾಃ ಸ್ವಮಾನಗುಣಿತಾಃ ಕರ್ಕಿಚಾಪಘಟೀ-

ಝಷಾ: । ಏತೇ ರಾಶಿಗುಣಾ: ಪ್ರೋಕ್ತಾ: ಪೃಥಗ್ಗ್ರಹಗುಣಾ: ಪ್ರಥಕ್ ॥೨೫॥

ರಾಶಿಮಾನಗುಣಕಗಳು:- ಮೇಷ-7, ವೃಷಭ-10, ಮಿಥುನ-8, ಕರ್ಕಟಕ-4, ಸಿಂಹ–10, ಕನ್ಯಾ-5, ತುಲಾ-7, ವೃಶ್ಚಿಕ-8, ಧನು-9, ಮಕರ-5, ಕುಂಭ-11 ಮತ್ತು ಮೀನ-12, ಇವು ರಾಶಿಗುಣಕಗಳು ಆಗಿರುತ್ತವೆ.

ಜೀವಾರಶುಕ್ರಸೌಮ್ಯಾನಾಂ ದಶವಸುಸಪ್ತೇಂದ್ರಿಯೈ: ಕ್ರಮಾದ್ಗುಣಿತಾ: ।
ಬುಧಸಂಖ್ಯಾ ಶೇಷಾಣಾಂ ರಾಶಿಗುಣಾದ್ಗ್ರಹಗುಣ: ಪೃಥಕ್ಕಾರ್ಯ: ॥೨೬॥

ಗ್ರಹಗುಣಕ:- ರವಿ-5, ಚಂದ್ರ–5, ಕುಜ–8, ಬುಧ–5, ಗುರು–10, ಶುಕ್ರ–7, ಮತ್ತು ಶನಿ–5, ಇದು ಗ್ರಹಗುಣಕ ಆಗಿರುತ್ತದೆ, ಮತ್ತು ರಾಶಿಗುಣಕದಿಂದ ಪ್ರತ್ಯೇಕ ಆಗಿರುತ್ತದೆ.

ಏವಂ ಗುಣಿತ್ವಾ ಸಂಯೋಜ್ಯ ಸಪ್ತಭಿರ್ಗುಣಯೇತ್ಪುನ: ।
ಸಪ್ತವಿಂಶಹೃತಾಲ್ಲಬ್ಧವರ್ಷಾಣ್ಯತ್ರ ಭವಂತಿ ಹಿ ॥೨೭॥

ರಾಶಿಗುಣಕದಿಂದ ಗ್ರಹನ ಶೋಧಿತ ಬಿಂದುಗಳನ್ನು ಗುಣಿಸಿ ಲಬ್ಧ ಮೊತ್ತ ಮತ್ತು ಗ್ರಹಗುಣಕದಿಂದ ಗ್ರಹಸ್ಥಿತರಾಶಿಯ ಬಿಂದುಗಳನ್ನು ಗುಣಿಸಿ ಲಬ್ಧ ಮೊತ್ತ, ಇವೆರಡನ್ನು ಕೂಡಿಸಿ 7ರಿಂದ ಗುಣಿಸಿ, 27ರಿಂದ ಭಾಗಿಸಿದರೆ ಆ ಗ್ರಹನು ನೀಡುವ ಆಯುರ್ದಾಯ ವರ್ಷಾದಿ ಲಭಿಸುತ್ತದೆ.

ದ್ವಾದಶಾದ್ಗುಣಯೇಲ್ಲಭ್ಧಾ ಮಾಸಾಹರ್ಘಟಿಕಾ: ಕ್ರಮಾತ್ ।
ಸಪ್ತವಿಂಶತಿ ವರ್ಷಾಣಿ ಮಂಡಲಂ ಶೋಧಯೇತ್ಪುನ: ॥೨೮॥

ಶೇಷವನ್ನು 12ರಿಂದ ಗುಣಿಸಿ 27ರಿಂದ ಭಾಗಿಸಿದರೆ ಆಯುರ್ದಾಯಮಾಸ ಪುನ: ಶೇಷವನ್ನು 30ರಿಂದ ಗುಣಿಸಿ 27ರಿಂದ ಭಾಗಿಸಿದರೆ ದಿನಗಳು ಬರುತ್ತವೆ. ಅದೇ ರೀತಿ ಘಟಿ, ವಿಘಟಿ ಇತ್ಯಾದಿ ಸೂಕ್ಷ್ಮವಾಗಿ ತಿಳಿಯಬೇಕು. 27ವರ್ಷ ಒಂದು ಮಂಡಲ ಆಗಿರುತ್ತದೆ. ಇದರಲ್ಲಿ ಸಂಸ್ಕರಿಸಬೇಕಾದ ವಿಚಾರ ಮುಂದೆ ಹೇಳುತ್ತಾನೆ.

ಅನ್ಯೋನ್ಯಮರ್ಧಹರಣಂ ಗ್ರಹಯುಕ್ತೇ ತು ಕಾರಯೇತ್ । ನೀಚೇಽರ್ಧಮಸ್ತಗೇಽ-ಪ್ಯರ್ಧಹರಣಂ ತೇಷು ಕಾರಯೇತ್ ॥೨೯॥ ಶತ್ರುಕ್ಷೇತ್ರೇ ತ್ರಿಭಾಗೋನಂ ದೃಶ್ಯಾರ್ಧ-ಹರಣಂ ತಥಾ। ತ್ರ್ಯಂಶೋನಹರಣಂ ಭಂಗೇ ಸೂರ್ಯೇಂದ್ವೋ: ಪಾತಸಂಶ್ರಯಾತ್

ಹರಣಗಳು:- 1. ಒಂದು ರಾಶಿಯಲ್ಲಿ ಎರಡುಗ್ರಹಗಳು ಇದ್ದರೆ ಆ ಗ್ರಹರು ನೀಡುವ ಆಯುರ್ದಾಯದ ಅರ್ಧಾಂಶ ಹರಣ ಮಾಡಬೇಕು. 2.ನೀಚ ಅಥವಾ ಅಸ್ತಗ್ರಹನು ತಾನು ನೀಡುವ ಆಯುರ್ದಾಯದ ಅರ್ಧಾಂಶ ಹರಣ ಮಾಡಬೇಕು. 3.ಶತ್ರುಕ್ಷೇತ್ರದಲ್ಲಿದ್ದ ಗ್ರಹನಿಗೆ $\frac{1}{3}$ ಅಂಶ ಹರಣ, 4.ದೃಶ್ಯಾರ್ಧದಲ್ಲಿರುವ ಗ್ರಹನಿಗೆ $\frac{1}{3}$ ಅಂಶ ಹರಣ, 5.ಗ್ರಹ ಯುದ್ಧದಲ್ಲಿ ಸೋತ ಗ್ರಹನಿಗೆ $\frac{1}{3}$ ಅಂಶ ಹರಣ, 6.ಸೂರ್ಯ ಮತ್ತು ಚಂದ್ರರು ಪಾತದಲ್ಲಿದ್ದರೆ(ಗ್ರಹಣ ಕಾಲ) $\frac{1}{3}$ ಅಂಶ ಆಯುರ್ದಾಯ ಹರಣ ಮಾಡಬೇಕು.

ಬಹುತ್ವೇಹರಣಂ ಪ್ರಾಪ್ತೇ ಕಾರಯೇದ್ಬಲವತ್ತರಮ್ । ಪಶ್ಚಾತ್ತಾನ್ ಸಕಲಾನ್ ಕೃತ್ವಾ ವರಾಂಗೇಣ ವಿವರ್ಧಯೇತ್ ॥೩೧॥ ಮಾತಙ್ಗಲಬ್ಧಂ ಶುದ್ಧಾಯುರ್ಭವತೀತಿ ನ ಸಂಶಯ: ಪೂರ್ವವದ್ದಿನ ಮಾಸಾಬ್ದಾನ್ ಕೃತ್ವಾ ತಸ್ಯ ದಶಾ ಭವೇತ್ ॥೩೨॥

ಒಬ್ಬ ಗ್ರಹನಿಗೆ ಅನೇಕ ಹರಣಗಳು ಇದ್ದರೆ, ಅವುಗಳಲ್ಲಿ ಅಧಿಕ ಬಲಿಷ್ಠವಾದ ಹರಣಮಾತ್ರ ಮಾಡಬೇಕು. ಈ ರೀತಿ ಗ್ರಹರು ನೀಡುವ ಆಯುರ್ದಾಯವನ್ನು ಶೋಧಿಸಿ ಅದನ್ನು 324ರಿಂದ ಗುಣಿಸಿ 365ರಿಂದ ಭಾಗಿಸಿ ಬಂದ ಲಬ್ಧವು ಸಂಸ್ಕರಿಸಿದ ಆಯುರ್ದಾಯ ವರ್ಷ, ಮಾಸಾದಿಗಳು ಲಭಿಸುತ್ತವೆ. ಅವುಗಳೇ ಗ್ರಹರ ದಶಾಕಾಲ ಆಗಿರುತ್ತದೆ.

ಏವಂ ಗ್ರಹಾಣಾಂ ಸರ್ವೇಷಾಂ ದಶಾಂ ಕುರ್ಯಾತ್ ಪೃಥಕ್ ಪೃಥಕ್ ।
ಅಷ್ಟವರ್ಗದಶಾಮಾರ್ಗ: ಸರ್ವೇಷಾಮುತ್ತಮೋತ್ತಮಾ: ॥೩೩॥

ಈ ರೀತಿಯಲ್ಲಿ ಸಕಲಗ್ರಹಗಳ ಶೋಧಿತ ಅಷ್ಟಕ ವರ್ಗದಶಾ ಕ್ರಮವು ಎಲ್ಲ ವಿಧದ ಕ್ರಮಗಳಲ್ಲಿ ಉತ್ತಮ ಆಗಿರುತ್ತದೆ.

ಬಾಲೋ ಬಲಿಷ್ಠೋ ಲವಣಾಗಮೋಸುರೋ ರಾಗೀ ಮುರಾರೀ ಶಿಖರೀಂದ್ರಗಾ-ಥಯಾ । ಭೌಮೋ ಗಣೇಂದ್ರೋ ಲಘುಭಾವತಾಸುರೋ ಗೋಕರ್ಣರಕ್ತಾ ತು ಪುರಾಣಮೈಥಿಲೀ ॥೩೪॥ ರುದ್ರ: ಪರಂ ಗವ್ವರಭೈರವಸ್ಥಲೀ ರಾಗೀ ಬಲೀ ಭಾಸ್ವರ-ಗೀರ್ಭಗಾಚಲಾ: । ಗಿರೌ ವಿವಸ್ವಾನ್‌ಬಲವದ್ವಿವಕ್ಷಯಾ ಶೂಲೀ ಮುಮುಕ್ಷೀತಿಕ-ರೋsತ್ರ ತೀರ್ಥಕೃತ್ ॥೩೫॥

ಸರ್ವಾಷ್ಟಕ ಬಿಂದುಗಳ ಶೋಧನೆ ಕ್ರಮವನ್ನು ಮೇಷಾದಿರಾಶಿಗಳಲ್ಲಿ ಕ್ರಮವಾಗಿ ಹೇಳುತ್ತಾನೆ. ಇವುಗಳ ಮೊತ್ತ 337 ಆಗಿರುತ್ತದೆ.

ರವಿಯಿಂದ	3, 3, 3, 3, 2, 3, 4, 5, 3, 5, 7, 2=43
ಚಂದ್ರನಿಂದ	2, 3, 5, 2, 2, 5, 2, 2, 2, 3, 7, 1=36
ಕುಜನಿಂದ	4, 5, 3, 5, 2, 3, 4, 4, 4, 6, 7, 2=49
ಬುಧನಿಂದ	3, 1, 5, 2, 6, 6, 1, 2, 5, 5, 7, 3=46
ಗುರುವಿನಿಂದ	2, 2, 1, 2, 3, 4, 2, 4, 2, 4, 7, 3=36
ಶುಕ್ರನಿಂದ	2, 3, 3, 3, 4, 4, 2, 3, 4, 3, 6, 3=40
ಶನಿಯಿಂದ	3, 2, 4, 4, 4, 3, 3, 4, 4, 4, 6, 1=42
ಲಗ್ನದಿಂದ	5, 3, 5, 5, 2, 6, 1, 2, 2, 6, 7, 1=45

ಸರ್ವಕರ್ಮಫಲೋಪೇತಮಷ್ಟವರ್ಗಕಮುಚ್ಯತೇ ।
ಅನ್ಯಥಾ ಬಲವಿಜ್ಞಾನಂ ದುಜ್ಞೇಯಂ ಗುಣದೋಷಜಮ್ ॥೩೬॥

ಸಕಲ ಕಾರ್ಯಗಳ ಸಿದ್ಧಿಗೆ ಅಷ್ಟಕವರ್ಗಪದ್ಧತಿಯು ಫಲಕಾರಿ ಆಗಿರುತ್ತದೆ. ಗ್ರಹರ ತಾತ್ಕಾಲಿಕ ಬಲಾಬಲ ಪರಿಣಾಮಾದಿ ಜ್ಞಾನಕ್ಕೆ ಅಥವಾ ಗುಣಾವಗುಣ ಚಿಂತನೆಗೂ ಉಪಯುಕ್ತ ಆಗಿರುತ್ತದೆ.

ತ್ರಿಂಶಾಧಿಕಫಲಾ ಯೇ ಸ್ಯು ರಾಶಯಸ್ತೇ ಶುಭಪ್ರದಾ: ।
ಪಂಚವಿಂಶಾತ್ಪರಂ ಮಧ್ಯಂ ಕಷ್ಟಂ ತಸ್ಮಾದಧ: ಫಲಮ್ ॥೩೭॥

ಸರ್ವಾಷ್ಟಕವರ್ಗ ರಾಶಿಗಳಲ್ಲಿ 30 ಅಥವಾ ಅಧಿಕ ಬಿಂದುಗಳಿದ್ದರೆ ಆ ಭಾವವು ಶುಭಫಲದಾಯಕ. 25ರಿಂದ 30ರ ಒಳಗೆ ಇರುವ ಭಾವವು ಮಧ್ಯಮ ಫಲದಾಯಕ ಮತ್ತು 25ಕ್ಕಿಂತ ಕಮ್ಮಿ ಬಿಂದು ಇರುವ ಭಾವಫಲವು ಕಷ್ಟಕರ ಆಗಿರುತ್ತದೆ.

ಮಧ್ಯಾತ್ಫಲಾಧಿಕಾ ಲಾಭೇ ಲಾಭಾತ್ ಕ್ಷೀಣತರೇ ವ್ಯಯೇ ।
ಯಸ್ಯ ವ್ಯಯಾಧಿಕೇ ಲಗ್ನೇ ಭೋಗವಾನರ್ಥವಾನ್ ಭವೇತ್ ॥೩೮॥

ಸರ್ವಾಷ್ಟಕವರ್ಗದಲ್ಲಿ ಲಾಭಭಾವದಲ್ಲಿ ದಶಮಭಾವಕ್ಕಿಂತ ಅಧಿಕ ಬಿಂದು ಇರಬೇಕು. ವ್ಯಯಭಾವದಲ್ಲಿ ಲಾಭಕ್ಕಿಂತ ಕಮ್ಮಿ ಬಿಂದು ಇರಬೇಕು. ಮತ್ತು ಲಗ್ನದಲ್ಲಿ ವ್ಯಯಭಾವಕ್ಕಿಂತ ಅಧಿಕ ಬಿಂದು ಇದ್ದರೆ ಭೋಗವಂತನು. ಧನವಂತನು ಆಗುತ್ತಾನೆ.

ಮೂರ್ತ್ಯಾದಿ ವ್ಯಯಭಾವಾಂತಂ ದೃಷ್ಟ್ವಾ ಭಾವಫಲಾನಿ ವೈ ।
ಅಧಿಕೇ ಶೋಭನಂ ವಿದ್ಯಾದ್ಧೀನೇ ದೋಷಂ ವಿನಿರ್ದಿಶೇತ್ ॥೩೯॥

ಲಗ್ನದಿಂದ ವ್ಯಯಭಾವಪರ್ಯಂತ ಇರುವ ಭಾವದಲ್ಲಿ ಅಧಿಕ ಬಿಂದುಗಳಿರುವ ಗ್ರಹರು ಗೋಚರಿಸುವಾಗ ಶುಭಫಲಪ್ರಾಪ್ತಿ ಮತ್ತು ಕಮ್ಮಿ ಬಿಂದುಗಳಿರುವ ರಾಶಿಚಾರದಲ್ಲಿ ಅಶುಭಫಲ ನೀಡುತ್ತಾರೆ.

ಷಷ್ಠಾಷ್ಟಮವ್ಯಯಾಂಸ್ತ್ಯಕ್ತ್ವಾ ಶೇಷೇಷ್ವೇವ ಪ್ರಕಲ್ಪಯೇತ್ ।
ಶ್ರೇಷ್ಠರಾಶಿಷು ಸರ್ವಾಣಿ ಶುಭಕಾರ್ಯಾಣಿ ಕಾರಯೇತ್ ॥೪೦॥

ಹಿಂದಿನ ಶ್ಲೋಕದಲ್ಲಿ ಹೇಳಿದ ಶುಭಫಲಗಳು ಷಷ್ಠ, ಅಷ್ಟಮ ಮತ್ತು ದ್ವಾದಶವನ್ನು ಹೊರತು ಉಳಿದ ಭಾವಗಳಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಈ ಉತ್ತಮ ಭಾವಗಳಲ್ಲಿ ಗ್ರಹಸಂಚಾರಕಾಲದಲ್ಲಿ ಶುಭಕಾರ್ಯಗಳನ್ನು ನೆರವೇರಿಸಬೇಕು.

ಲಗ್ನಾತ್ಪ್ರಭೃತಿ ಮಂದಾಂತಮೇಕೀಕೃತ್ಯ ಫಲಾನಿ ವೈ । ಸಪ್ತಭಿರ್ಗುಣಯೇತ್ಪಶ್ಚಾತ್ಸ-
ಪ್ತವಿಂಶಹೃತಾತ್ಫಲಮ್ ॥೪೧॥ ತತ್ಸಮಾನಗತೇ ವರ್ಷೇ ದು:ಖಂ ವಾ ರೋಗಮಾ-
ಪ್ನುಯಾತ್ । ಏವಂ ಮಂದಾದಿ ಲಗ್ನಾಂತಂ ಭೌಮರಾಹ್ವೋಸ್ತಥಾ ಫಲಮ್ ॥

ಲಗ್ನದಿಂದ ಶನಿಸ್ಥಿತರಾಶಿವರೆಗಿನ (ಲಗ್ನದ ಮತ್ತು ಶನಿಸ್ಥಿತ ರಾಶಿಯ ಬಿಂದುಗಳನ್ನು ಕೂಡಾ ಸೇರಿಸಿ) ಬಿಂದುಗಳ ಮೊತ್ತವನ್ನು 7ರಿಂದ ಗುಣಿಸಿ 27ರಿಂದ ಭಾಗಿಸಿ ಬಂದ ಸಂಖ್ಯಾತುಲ್ಯ ವರ್ಷ ಪ್ರಾಯದಲ್ಲಿ ದು:ಖ ಅಥವಾ ರೋಗ ಸಂಭವಿಸುತ್ತದೆ. ಅದೇ ರೀತಿ ಶನಿಯಿಂದ ಲಗ್ನದವರೆಗೆ ಇರುವ ಬಿಂದುಗಳ ಮೊತ್ತವನ್ನು ಶೋಧಿಸಿ ಬಂದ ವರ್ಷದಲ್ಲಿ ದು:ಖ ಅಥವಾ ರೋಗ ಮತ್ತು ಕುಜ-ರಾಹುಗಳ ಅಂತರದಲ್ಲಿರುವ ಬಿಂದುಗಳ ಮೊತ್ತ ಶೋಧನೆಯು ಕೂಡಾ ದು:ಖಪ್ರದ ಆಗಿರುತ್ತದೆ.

ಶುಭಗ್ರಹಾಣಾಂ ಸಂಯೋಗಸಮಾನಾಬ್ದೇ ಶುಭಂ ಭವೇತ್ ।
ಪುತ್ರವಿತ್ತಸುಖಾದೀನಿ ಲಭತೇ ನಾತ್ರ ಸಂಶಯ: ॥೪೩॥

ಶುಭಗ್ರಹರುಸ್ಥಿತ ರಾಶಿಯ ಬಿಂದುಗಳನ್ನು ಕೂಡಿಸಿ ಮೊತ್ತವನ್ನು 7ರಿಂದಗುಣಿಸಿ 27ರಿಂದ ಭಾಗಿಸಿ ತುಲ್ಯವರ್ಷ ಶುಭಫಲ, ಅದೇ ರೀತಿ ಮೇಲಿನ ಮೊತ್ತವನ್ನು 3ರಿಂದ ಗುಣಿಸಿ 27ರಿಂದ ಭಾಗಿಸಿದರೆ (ಅಂದರೆ 9ರಿಂದ ಭಾಗಿಸಿದರೆ) ತುಲ್ಯವರ್ಷ ಶುಭಫಲ ಗಳು ಸಂಭವಿಸುತ್ತವೆ. ಈ ಕಾಲದಲ್ಲಿ ಸಂತಾನ, ಸಂಪತ್ತು ಮತ್ತು ಸುಖ ಇತ್ಯಾದಿ ನಿಃಸಂಶಯವಾಗಿ ಲಭಿಸುತ್ತದೆ.

ಸಂಜ್ಞಗ್ರಹೇಣ ಮಯಾ ಪ್ರೋಕ್ತಮಷ್ಟವರ್ಗಫಲಂ ತ್ವಿಹ ।
ತಜ್ಞೈರ್ವಿಸ್ತರತಃ ಪ್ರೋಕ್ತಮನ್ಯತ್ರ ಪಟುಬುದ್ಧಿಭಿಃ ॥೪೪॥

ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ನನ್ನಿಂದ ವಿವರಿಸಲ್ಪಟ್ಟ ಅಷ್ಟಕವರ್ಗಪದ್ಧತಿಯು ಇತರ ಗ್ರಂಥಗಳಲ್ಲಿ ವಿಸ್ತಾರವಾಗಿ ಬುದ್ಧಿವಂತರಿಂದ ಹೇಳಲ್ಪಟ್ಟಿದೆ.

ಗುಳಿಕಾದಿ ಫಲವಿಚಾರ-ಅಧ್ಯಾಯ-೨೫

ನಮಾಮಿ ಮಾಂದಿ ಯಮಕಂಟಕಾಖ್ಯಮರ್ಧಪ್ರಹಾರಂ ಭುವಿ ಕಾಲಸಂಜ್ಞಮ್।
ಧೂಮವ್ಯತೀಪಾತಪರಿಧ್ಯಭಿಖ್ಯಾನುಪಗ್ರಹಾನಿಂದ್ರಧನುಶ್ಚ ಕೇತೂನ್ ॥೧॥

ಉಪಗ್ರಹಗಳು:- ಮಂತ್ರೇಶ್ವರ ಮುನಿಯು ಉಪಗ್ರಹರನ್ನು ವಂದಿಸುತ್ತಾನೆ. 1.ಮಾಂದಿ, 2.ಯಮಕಂಟಕ, 3.ಅರ್ಧಪ್ರಹಾರ, 4.ಕಾಲ, 5.ಧೂಮ, 6.ಪಾತ ಅಥವಾ ವ್ಯತಿಪಾತ, 7.ಪರೀಧಿ, 8.ಇಂದ್ರಚಾಪ ಮತ್ತು 9.ಉಪಕೇತು ಇವರನ್ನು ಉಪಗ್ರಹರೆಂದು ಕರೆಯುತ್ತಾರೆ.

ಚರಂ ರುದ್ರದಾಸ್ಯಂ ಘಟಂ ನಿತ್ಯತಾನಂ ಖನಿರ್ಮಾಂದಿನಾಡ್ಯಃ ಕ್ರಮೇಣಾರ್ಕವಾರಾತ್ ।
ಅಹರ್ಮಾನವೃದ್ಧಿಕ್ಷಯೌ ತತ್ರ ಕಾರ್ಯೌ ನಿಶಾಯಾಂ ತು ವಾರೇಶ್ವರಾತ್ಪಂಚಮಾದ್ಯಾಃ ॥

ಮಾಂದಿ(ಗುಳಿಕ)ಶೋಧನೆ:- ದಿನಮಾನವು 30ಘಟಿಗಳಿರುವಾಗ ಮಾಂದಿ ಉದಯ ಕಾಲವನ್ನು ರವಿವಾರದಿಂದ ಕ್ರಮವಾಗಿ ಸೂರ್ಯೋದಯದ ನಂತರ 26, 22, 18, 14, 10, 6 ಮತ್ತು 2 ಘಟಿಕಾಂತ್ಯಕಾಲ ಹಗಲಿನ ಮಾಂದಿ ಉದಯ ಕಾಲ ಆಗಿರುತ್ತದೆ. ಮಾಂದಿಯ ರಾತ್ರಿಯ ಉದಯಕಾಲವು ಸೂರ್ಯಾಸ್ತದನಂತರ, ರವಿವಾರ ದಿಂದ ಕ್ರಮವಾಗಿ 10, 6, 2, 26, 22, 18 ಮತ್ತು 14 ಘಟಿಗಳು ಆಗಿರುತ್ತವೆ. ದಿವಾಮಾನ ಅಥವಾ ರಾತ್ರಿಮಾನವು 30 ಘಟಿಗಳಿಗಿಂತ ಹೆಚ್ಚು ಯಾ ಕಮ್ಮಿ ಇದ್ದಲ್ಲಿ ಮಾಂದಿ ಉದಯ ಕಾಲ ಪರಿಮಾಣದಲ್ಲಿ ವೃದ್ಧಿ-ಕ್ಷಯ ಆಗುತ್ತದೆ. ಗುಳಿಕ ಅಥವಾ ಮಾಂದಿಯು ಶನಿಯ ಪುತ್ರ ಹಾಗೂ ಉಪಗ್ರಹನು.

ದಿವ್ಯಾ ಘಟೀ ನಿತ್ಯತನುಃ ಖನೀನಾಂ ಚಂದ್ರೇ ರುರುಃ ಸ್ಯಾದ್ಯಮಕಂಟಕಸ್ಯ ।
ಅರ್ಧಪ್ರಹಾರಸ್ಯ ಭಟೋ ನಟೀನ ಸ್ತನೌ ಖನೀ ಚಂದ್ರಖರೌ ಜಯಜ್ಞಃ ॥೩॥

ಯಮಕಂಟಕಶೋಧನೆ:- ಯಮಕಂಟಕನ ಉದಯವು ದಿನಮಾನ 30ಘಟಿ ಇರುವಾಗ ರವಿವಾರದಿಂದ ಕ್ರಮವಾಗಿ ಸೂರ್ಯೋದಯದ ನಂತರ 18, 14, 10, 6, 2,

26 ಮತ್ತು 22 ಘಟಿಕಾಂತಕಾಲ ಹಗಲಿನ ಜನನಕ್ಕೆ ಆಗಿರುತ್ತದೆ. ಯಮಕಂಟಕನು ಗುರುವಿನ ಉಪಗ್ರಹನು.

ಅರ್ಧಪ್ರಹಾರ ಶೋಧನೆ:- ಅರ್ಧಪ್ರಹಾರನ ಉದಯವು ದಿನಮಾನ 30 ಘಟಿ ಇರುವಾಗ ರವಿವಾರದಿಂದ ಕ್ರಮವಾಗಿ ಸೂರ್ಯೋದಯದ ನಂತರ 14, 10, 6, 2, 26, 22 ಮತ್ತು 18 ಘಟಿಕಾಂತ್ಯಕಾಲ ಹಗಲಿನ ಜನನಕ್ಕೆ ಆಗಿರುತ್ತದೆ. ಅರ್ಧಪ್ರಹಾರನು ಬುಧನ ಉಪಗ್ರಹನು.

ಕಾಲಸ್ಯ ಫೇನಂ ತನುರುದ್ರದಿವ್ಯಂ ಪಂದ್ಯೋ ನಟಸ್ತ್ರೈರನುಸೂರ್ಯವಾರಾತ್ ।
ಏಷಾಂ ಸಮಂ ಮಾಂದಿವದೇವ ತತ್ತನ್ನಾಡ್ಯಾ ಸ್ಫುಟಂ ಲಗ್ನವದತ್ರ ಸಾಧ್ಯಮ್ ॥

ಕಾಲಶೋಧನೆ:- ಕಾಲನ ಉದಯವು ದಿನಮಾನ 30ಘಟಿ ಇರುವಾಗ ರವಿವಾರದಿಂದ ಕ್ರಮವಾಗಿ ಸೂರ್ಯೋದಯದ ನಂತರ 2, 26, 22, 18, 14, 10ಮತ್ತು 6ಘಟಿಕಾಂತ್ಯಕಾಲ ಹಗಲಿನ ಜನನಕ್ಕೆ ಆಗಿರುತ್ತದೆ. ಕಾಲನು ರವಿಯ ಉಪಗ್ರಹನು.

ಗುಳಿಕ ಶೋಧನೆಯಂತೆ ಈ ವರೆಗೆ ಹೇಳಿದ ದಿನ ಅಥವಾ ರಾತ್ರಿಮಾನದಲ್ಲಿ ವ್ಯತ್ಯಾಸವಿದ್ದಲ್ಲಿ ಆಯಾ ಉಪಗ್ರಹರ ಉದಯಕಾಲವು ಪ್ರಮಾಣದಲ್ಲಿ ವೃದ್ಧಿ-ಕ್ಷಯ ಆಗುತ್ತದೆ. ಲಗ್ನಸ್ಫುಟ ಶೋಧನೆಯಂತೆ ಈ ಉಪಗ್ರಹರ ಸ್ಫುಟಶೋಧನೆ ಮಾಡಬೇಕು.

ಧೂಮೋ ವೇದಗೃಹೈಸ್ತ್ರಯೋದಶಭಿರಪ್ಯಂಶೈ: ಸಮೇತೇ ರವೌ ಸ್ಯಾತ್ತಸ್ಮಿನ್ ವ್ಯತಿಪಾತಕೋ ವಿಗಲಿತೇ ಚಕ್ರಾದಥಾಸ್ಮಿನ್ಯುತೇ । ಷಡ್‌ಭಿರ್ಭೈ: ಪರಿವೇಷ ಇಂದ್ರಧನುರಿತ್ಯಸ್ಮಿಂಶ್ಚ ಯುತೇ ಮಂಡಲಾದತ್ಯಷ್ಟ್ಯಂಶಯುತೇಽತ್ರ ಕೇತುರಥ ತತ್ರೈಕರ್ಕ್ಷಯುಕ್ತೋ ರವಿ: ॥೫॥

ಧೂಮು, ವ್ಯತೀಪಾತ, ಪರಿವೇಷ, ಇಂದ್ರಛಾಪ, ಉಪಕೇತು ಶೋಧನೆ:- ತತ್ಕಾಲ ಸೂರ್ಯಸ್ಫುಟಕ್ಕೆ 4ರಾಶಿ 13ಭಾಗ ಮತ್ತು 20ಕಲೆ (10ನಕ್ಷತ್ರ) ಕೂಡಿಸಿದರೆ ಧೂಮಸ್ಫುಟ ಲಭಿಸುತ್ತದೆ. ದ್ವಾದಶರಾಶಿಯಿಂದ ಧೂಮಸ್ಫುಟವನ್ನು ಕಳೆದರೆ ವ್ಯತಿಪಾತಸ್ಫುಟ, ವ್ಯತಿಪಾತಕ್ಕೆ 6 ರಾಶಿಗಳನ್ನು ಕೂಡಿಸಿದರೆ ಪರಿವೇಷ ಅಥವಾ ಪರೀಧಿಸ್ಫುಟ. ಪರಿವೇಷವನ್ನು 12 ರಾಶಿಯಿಂದ ಕಳೆಯಲಾಗಿ ಇಂದ್ರಛಾಪ ಅಥವಾ ಕೋದಂಡಸ್ಫುಟ, ಇಂದ್ರಛಾಪಕ್ಕೆ 16° 14' ಕೂಡಿಸಲಾಗಿ ಉಪಕೇತುಸ್ಫುಟ ಉಪಕೇತುವಿಗೆ ಒಂದುರಾಶಿ ಕೂಡಿಸಿದರೆ ತಾತ್ಕಾಲಿಕ ರವಿಸ್ಫುಟ ಬರುತ್ತದೆ.

ಭಾವಾಧ್ಯಾಯೇ ಪೂರ್ವಮೇವಂ ಮಯಾ ಪ್ರೋಕ್ತಂ ಸಮುಚ್ಚಯಮ್ ।
ಮುಕ್ತಾನಾಂ ಯತ್ತದೇವಾತ್ರ ವಾಚ್ಯಂ ಭಾವಫಲಂ ದೃಥಮ್ ॥೬॥

ಹಿಂದಿನ ಭಾವಾಧ್ಯಾಯದಲ್ಲಿ ಇವುಗಳ (ಮಾಂದಿ ಇತ್ಯಾದಿ ಉಪಗ್ರಹಗಳ) ವಿಚಾರ ಹೇಳಿರುತ್ತದೆ. ಅಲ್ಲಿ ಬಿಟ್ಟುಹೋದ ಭಾವಸ್ಥಿತ ಉಪಗ್ರಹಗಳ ಫಲವನ್ನು ಇಲ್ಲಿ ವಿವರಿಸಿ ಬರೆದಿರುತ್ತದೆ.

ತಥಾಪಿ ಗುಲಿಕಾದೀನಾಂ ವಿಶೇಷೋऽತ್ರ ನಿಗದ್ಯತೇ ।
ಪೂರ್ವಾಚಾರ್ಯೈರ್ಯದಾಖ್ಯಾತಂ ತತ್ಸಂಗೃಹ್ಯ ಮಯೋದಿತಮ್ ॥೭॥

ಹಿಂದಿನ ಆಚಾರ್ಯರಿಂದ ಹೇಳಲ್ಪಟ್ಟ ಗುಳಿಕ ಮತ್ತು ಇತರ ಉಪಗ್ರಹಗಳ ಫಲವನ್ನು ಸಂಗ್ರಹಿಸಿ ಇಲ್ಲಿ ಬರೆದಿರುತ್ತದೆ.

ಚೋರಃ ಕ್ರೂರೋ ವಿನಯರಹಿತೋ ವೇದಶಾಸ್ತ್ರಾರ್ಥಹೀನೋ ನಾತಿಸ್ಥೂಲೋ
ನಯನವಿಕೃತೋ ನಾತಿಧೀರ್ನಾತಿಪುತ್ರಃ । ನಾಲ್ಪಾಹಾರೀ ಸುಖವಿರಹಿತೋ ಲಂಪ-
ಟೋ ನಾತಿಜೀವೀ ಶೂರೋ ನ ಸ್ಯಾದಪಿ ಜಡಮತಿಃ ಕೋಪನೋ ಮಾಂದಿಲಗ್ನೇ ॥

ಲಗ್ನಸ್ಥಿತ ಮಾಂದಿಫಲಃ- ಗುಳಿಕನು ಲಗ್ನದಲ್ಲಿ ಇದ್ದರೆ ಕಳ್ಳನು, ಕ್ರೂರಸ್ವಭಾವದವನು, ವಿನಯತೆ ಇಲ್ಲದವನು, ವೇದ ಮತ್ತು ಶಾಸ್ತ್ರಜ್ಞಾನ ಇಲ್ಲದವನು, ಸ್ಥೂಲವಾದ ಶರೀರ ಇಲ್ಲದವನು, ವಿಕೃತವಾದ ಕಣ್ಣು ಉಳ್ಳವನು, ಹೆಚ್ಚು ಚುರುಕುತನ ಅಥವಾ ಬುದ್ಧಿವಂತಿಕೆ ಮತ್ತು ಹೆಚ್ಚು ಸಂತಾನ ಇರುವುದಿಲ್ಲ. ಅಧಿಕ ಆಹಾರ ತಿನ್ನುವವನು, ಸುಖವನ್ನು ಕಳಕೊಂಡವನು, ಲಂಪಟನು, ಹೆಚ್ಚು ಬಾಳದೇ ಇರುವವನು, ಶೂರತನ ಇಲ್ಲದವನು, ಜಡಮತಿಯು, ಕೋಪಉಳ್ಳವನು ಆಗುತ್ತಾನೆ.

ನ ಚಾರುವಾಕ್ಯಂ ಕಲಹಾಯಮಾನೋ ನ ವಿತ್ತಧಾನ್ಯಂ ಪರದೇಶವಾಸೀ ।
ನ ವಾಕ್ ನಸೂಕ್ಷ್ಮಾರ್ಥವಿವಾದವಾಕ್ಯೋ ದಿನೇಶಪೌತ್ರೇ ಧನರಾಶಿಸಂಸ್ಥೇ ॥

ದ್ವಿತೀಯದ ಮಾಂದಿಫಲಃ- ಗುಳಿಕನು ದ್ವಿತೀಯದಲ್ಲಿ ಇದ್ದರೆ ಸುಂದರವಾದ ಅಥವಾ ಸಿಹಿಯಾದ ಮಾತಗಳಿಲ್ಲದವನು, ಕಲಹಮಾಡುವವನು, ಧನ-ಧಾನ್ಯ ಸಂಪತ್ತಿಲ್ಲದವನು, ವಿದೇಶವಾಸಿಯು, ಹೇಳಿದ ಮಾತಿನಂತೆ ನಡೆಯದವನು, ಮತ್ತು ಮಾತಿನಲ್ಲಿ ಸೂಕ್ಷ್ಮಾರ್ಥ ಇಲ್ಲದವನು, ವಿವಾದಕರ ಮಾತುಗಳನ್ನು ಆಡುವವನು ಆಗುತ್ತಾನೆ.

ವಿರಹಗರ್ವಮದಾದಿಗುಣೈರ್ಯುತಃ ಪ್ರಚುರಕೋಪಧನಾರ್ಜನ ಸಂಭ್ರಮಃ ।
ವಿಗತಶೋಕಭಯಶ್ಚ ವಿಸೋದರಃ ಸಹಜಧಾಮನಿ ಮಂದಸುತೋ ಯದಾ ॥

ತೃತೀಯದ ಮಾಂದಿಫಲಃ- ಗುಳಿಕನು ತೃತೀಯದಲ್ಲಿ ಇದ್ದರೆ ವಿರಹ, ಗರ್ವ, ಮದ, ಮತ್ಸರ ಇತ್ಯಾದಿ ಗುಣ ಉಳ್ಳವನು, ಅತ್ಯಂತ ಕೋಪ ಉಳ್ಳವನು, ಧನಾರ್ಜನೆಯಲ್ಲಿ ನಿರತನು, ದುಃಖ, ಭಯ ಇತ್ಯಾದಿಗಳಿಲ್ಲದವನು, ಸಹೋದರರನ್ನು ಕಳಕೊಂಡವನು ಆಗುತ್ತಾನೆ.

ಸುಹೃದಿ ಶನಿಸುತೇ ಸ್ಯಾದ್ಬಂಧುಯಾನಾರ್ಥಹೀನಶ್ಚಲಮತಿರವಬುದ್ಧಿಸ್ತ್ವಲ್ಪಜೀವಿ-
ಚ ಪುತ್ರೇ । ಬಹುರಿಪುಗಣಹಂತಾ ಭೂತವಿದ್ಯಾವಿನೋದೀ ರಿಪುಗತಗುಲಿಕೇ ಸಚ್ಛ್ರೇ-
ಷ್ಠಪುತ್ರಃ ಸ ಶೂರಃ ॥೧೧॥

ಚತುರ್ಥದ ಮಾಂದಿಫಲಃ- ಗುಳಿಕನು ಚತುರ್ಥದಲ್ಲಿ ಇದ್ದರೆ ಬಂಧು-ಬಾಂಧವರಿಲ್ಲದವನು, ಧನ ಮತ್ತು ವಾಹನ ಇಲ್ಲದವನು ಆಗುತ್ತಾನೆ.

ಪಂಚಮದ ಮಾಂದಿಫಲ:- ಗುಳಿಕನು ಪಂಚಮದಲ್ಲಿ ಇದ್ದರೆ ಛಲಸ್ವಭಾವದವನು, ವಿಪರೀತಬುದ್ಧಿಯವನು, ಅಲ್ಪತನದಿಂದ ಅಥವಾ ಅಲ್ಪಕಾಲ ಜೀವಿಸುವವನು ಆಗುತ್ತಾನೆ

ಷಷ್ಠದ ಮಾಂದಿಫಲ:- ಗುಳಿಕನು ಷಷ್ಠದಲ್ಲಿ ಇದ್ದರೆ ಶತ್ರುಸಮೂಹ ನಾಶಮಾಡುತ್ತಾನೆ. ಗೂಢವಿದ್ಯೆಗಳಲ್ಲಿ ಪ್ರವೀಣನು ಅಥವಾ ಭೂತ, ಪ್ರೇತ ಮೊದಲಾದ ಶಕ್ತಿಗಳ ವಶೀಕರಣ, ಉತ್ತಮ ಪುತ್ರಪ್ರಾಪ್ತಿ ಮತ್ತು ಶೂರನು ಆಗುತ್ತಾನೆ.

ಕಲತ್ರ ಸಂಸ್ಥೇ ಗುಲಿಕೇ ಕಲಹೀ ಬಹುಭಾರ್ಯಕ: ।
ಲೋಕದ್ವೇಷೀ ಕೃತಘ್ನಶ್ಚ ಸ್ವಲ್ಪಜ್ಞ: ಸ್ವಲ್ಪ ಕೋಪನ: ॥೧೨॥

ಸಪ್ತಮದ ಮಾಂದಿಫಲ:- ಗುಳಿಕನು ಸಪ್ತಮದಲ್ಲಿ ಇದ್ದರೆ ಕಲಹವಂತನು, ಅನೇಕ ಪತ್ನಿಯರು ಉಳ್ಳವನು, ಸಮಾಜದ ಜನರನ್ನು ದ್ವೇಷಿಸುವವನು, ಕೃತಘ್ನನು, ಸ್ವಲ್ಪ ತಿಳುವಳಿಕೆ ಉಳ್ಳವನು, ಅಲ್ಪಕೋಪ ಉಳ್ಳವನು, ಆಗುತ್ತಾನೆ.

ವಿಕಲನಯನವಕ್ತ್ರೋ ಹ್ರಸ್ವದೇಹೋಽಷ್ಟಮಸ್ಥೇ ಗುರುಸುತವಿಯುತೋಽಭೂದ್ಧರ್ಮಸಂಸ್ಥೇಽರ್ಕಪೌತ್ರೇ । ನ ಶುಭಫಲದಕರ್ಮಾ ಕರ್ಮಸಂಸ್ಥೇ ವಿದಾನ: ಸುಖಸುತಮತಿತೇಜ: ಕಾಂತಿಮಾಂಲ್ಲಾಭಸಂಸ್ಥೇ ॥೧೩॥

ಅಷ್ಟಮದ ಮಾಂದಿಫಲ:- ಗುಳಿಕನು ಅಷ್ಟಮದಲ್ಲಿ ಇದ್ದರೆ ವಿಕೃತವಾದ ಕಣ್ಣುಗಳು ಮತ್ತು ಮುಖ ಉಳ್ಳವನು, ಗಿಡ್ಡವಾದ ಶರೀರ ಉಳ್ಳವನು ಆಗುತ್ತಾನೆ.

ನವಮದ ಮಾಂದಿಫಲ:- ಮಾಂದಿಯು ನವಮದಲ್ಲಿ ಇದ್ದರೆ ಗುರು-ಹಿರಿಯರನ್ನು ಮತ್ತು ಮಕ್ಕಳನ್ನು ಕಳೆಕೊಂಡವನು ಆಗುತ್ತಾನೆ.

ದಶಮದ ಮಾಂದಿಫಲ:- ಮಾಂದಿಯು ದಶಮದಲ್ಲಿ ಇದ್ದರೆ ಸತ್ಕರ್ಮಗಳನ್ನು ಮಾಡದವನು, ಅಥವಾ ಕರ್ಮಕ್ಷೇತ್ರದಲ್ಲಿ ಫಲಪ್ರದ ಕಾರ್ಯಗಳನ್ನು ಮಾಡದವನು, ದಾನ ಧರ್ಮಗಳನ್ನು ಮಾಡದವನು ಆಗುತ್ತಾನೆ.

ಲಾಭದ ಮಾಂದಿಫಲ:- ಮಾಂದಿಯು ಲಾಭದಲ್ಲಿ ಇದ್ದರೆ ಸುಖವಂತನು, ಸಂತಾನ ಸುಖಉಳ್ಳವನು, ಬುದ್ಧಿವಂತನು, ತೇಜಸ್ವಿಯು ಮತ್ತು ಶೋಭಾಯಮಾನನು ಆಗುತ್ತಾನೆ.

ವಿಷಯವಿರಹಿತೋ ದೀನೋ ಬಹುವ್ಯಯ: ಸ್ಯಾದ್ವ್ಯಯೇ ಗುಲಿಕಸಂಸ್ಥೇ ।
ಗುಲಿಕತ್ರಿಕೋಣಭೇ ವಾ ಜನ್ಮ ಬ್ರೂಯಾನ್ನವಾಂಶೇ ವಾ ॥೧೪॥

ವ್ಯಯದ ಮಾಂದಿಫಲ:- ಗುಳಿಕನು ವ್ಯಯದಲ್ಲಿ ಇದ್ದರೆ ವಿಷಯಾಭಿಲಾಷೆ ಇಲ್ಲದವನು, ದೀನನು, ಅಧಿಕವ್ಯಯ ಮಾಡುವವನು ಆಗುತ್ತಾನೆ. ಜನ್ಮಲಗ್ನ ಅಥವಾ ಜನ್ಮರಾಶಿಯು, ಗುಳಿಕಸ್ಥಿತರಾಶಿಯಿಂದ ಅಥವಾ ಗುಳಿಕಸ್ಥಿತ ನವಾಂಶರಾಶಿಯ ತ್ರಿಕೋಣ ರಾಶಿಯಲ್ಲಿ ಇರುತ್ತದೆ.

ರವಿಯುಕ್ತೇ ಪಿತೃಹಂತಾ ಮಾತೃಕ್ಲೇಶೀ ನಿಶಾಪ ಸಂಯುಕ್ತೇ । ಭ್ರಾತೃವಿಯೋಗ: ಸಕುಜೇ ಬುಧಯುಕ್ತೇ ಮಂದಜೇ ಚ ಸೋನ್ಮಾದೀ ॥೧೫॥ ಗುರುಯುಕ್ತೇ ಪಾಪಂಡೀ

ಶುಕ್ರಯುತೇ ನೀಚಕಾಮಿನೀಸಙ್ಗ: । ಶನಿಯುಕ್ತೇ ಶನಿಪುತ್ರೇಕುಷ್ಠವ್ಯಾಧ್ಯರ್ದಿತಶ್ಚ ಸೋಽಲ್ಪಾಯು: ॥೧೭॥ ವಿಷರೋಗೀ ರಾಹುಯುತೇ ಶಿಖೀಯುಕ್ತೇ ವಹ್ನಿಪೀಡಿತೋ ಮಾಂದೌ । ಗುಲಿಕಸ್ತ್ಯಾಜ್ಯಯುತಶ್ಚೇತ್ತಸ್ಮಿಂಜಾತೋ ನೃಪೋಽಪಿ ಭಿಕ್ಷಾಶೀ ॥೧೮॥ ಗುಲಿಕಸ್ಯ ತು ಸಂಯೋಗೇ ದೋಷಾನ್ಸರ್ವತ್ರ ನಿರ್ದಿಶೇತ್ ಯಮಕಂಟಕ ಸಂಯೋಗೇ ಸರ್ವತ್ರ ಕಥಯೇಚ್ಛುಭವತ್ ॥೧೯॥

ಗುಳಿಕ-ಯುತಿಫಲ:- ಗುಳಿಕನು ರವಿಯುತಿಯಲ್ಲಿದ್ದರೆ ತಂದೆಯನಾಶ, ಚಂದ್ರನ ಯುತಿ–ತಾಯಿಗೆ ದು:ಖ ನೀಡುವವನು, ಕುಜನಯುತಿ–ಸಹೋದರ ವಿಯೋಗ, ಬುಧನಯುತಿ–ಉನ್ಮಾದ, ಗುರುವಿನಯುತಿ–ಪಾಷಂಡಿಯು, ಶುಕ್ರಯುತಿಯಲ್ಲಿ–ನೀಚ ಸ್ತ್ರೀಯರ ಸಹವಾಸ, ಶನಿಯುಯುತಿ–ಕುಷ್ಠರೋಗ ಮತ್ತು ಅಲ್ಪಾಯು, ರಾಹುಯುತಿ–ವಿಷಪೀಡೆಯಿಂದ ರೋಗ, ಕೇತುಯುತಿ-ಬೆಂಕಿಯಿಂದ ಪೀಡೆ ಮತ್ತು ಗುಳಿಕನು ತ್ಯಾಜ್ಯ ಕಾಲದಲ್ಲಿದ್ದಾಗ ಜನಿಸಿದವನು ರಾಜನಾದರೂ ಭಿಕ್ಷುಕನು ಆಗುತ್ತಾನೆ.

ಗುಳಿಕನು ಇದ್ದಲ್ಲಿ ಅಥವಾ ಯುತನಾದ್ದಲ್ಲಿ ಅಶುಭಫಲಗಳನ್ನೇ ನಿರ್ದೇಶಿಸುತ್ತಾನೆ. ಯಮಕಂಟಕನು ತಾನು ಸ್ಥಿತ ಅಥವಾ ಯುತ ಫಲವು ಶುಭಉಳ್ಳದ್ದೇ ಆಗಿರುತ್ತದೆ.

ದೋಷಪ್ರದಾನೇ ಗುಲಿಕೋ ಬಲೀಯಾನ್ ಶುಭಪ್ರದಾನೇ ಯಮಕಂಟಕ: ಸ್ಯಾತ್ ।
ಅನ್ಯೇ ಚ ಸರ್ವೇ ವ್ಯಸನಪ್ರದಾನೇ ಮಾಂದ್ಯಕ್ತವೀರ್ಯಾರ್ಧಬಲಾನ್ವಿತಾ: ಸ್ಯು: ॥
ಶನಿವದ್ಗುಲಿಕೇ ಪ್ರೋಕ್ತಂ ಗುರುವದ್ಯಮಕಂಟಕೇ ।
ಅರ್ಧಪ್ರಹಾರೇ ಬುಧವತ್ಫಲಂ ಕಾಲೇ ತು ರಾಹುವತ್ ॥೨೦॥

ಗುಳಿಕನು ದೋಷ ನೀಡುವುದರಲ್ಲಿ ಬಲಿಷ್ಠನು, ಯಮಕಂಟಕನು ಶುಭಫಲ ನೀಡುವುದರಲ್ಲಿ ಬಲಿಷ್ಠನು ಆಗಿರುತ್ತಾನೆ. ಇತರ ಉಪಗ್ರಹಗಳು ಮಾಂದಿಯು ನೀಡುವ ದೋಷಗಳ ಅರ್ಧದಷ್ಟು ದು:ಖಫಲ ನೀಡುತ್ತಾರೆ. ಗುಳಿಕನು ಶನಿಯಂತೆ, ಯಮಕಂಟಕನು ಗುರುವಿನಂತೆ, ಅರ್ಧಪ್ರಹಾರನು ಬುಧನಂತೆ ಮತ್ತು ಕಾಲನು ರಾಹುವಿನಂತೆ ಫಲನೀಡುತ್ತಾನೆ.

ಕಾಲಸ್ತು ರಾಹುರ್ಗುಲಿಕಸ್ತು ಮೃತ್ಯುರ್ಜೀವಾತುಕ: ಸ್ಯಾದ್ಯಮಕಂಟಕೋಽಪಿ ।
ಅರ್ಧಪ್ರಹಾರ: ಶುಭದ: ಶುಭಾಙ್ಕಯುಕ್ತೋಽನ್ಯಥಾ ಚೇದಶುಭಂ ವಿದಧ್ಯಾತ್ ॥

ರವಿಯ ಉಪಗ್ರಹನಾದ ಕಾಲನು ರಾಹುವಿನಂತೆ ಫಲನೀಡುತ್ತಾನೆ. ಗುಳಿಕನು ಮರಣಕಾಲ ಸೂಚಕನು, ಯಮಕಂಟಕನು ರಕ್ಷಕನು ಮತ್ತು ಪೋಷಕನು ಆಗಿರುತ್ತಾನೆ. ಬುಧನ ಉಪಗ್ರಹನಾದ ಅರ್ಧಪ್ರಹಾರನು ಅಷ್ಟಕವರ್ಗದಲ್ಲಿ ಹೆಚ್ಚು ಬಿಂದುಗಳು ಇರುವ ರಾಶಿಯಲ್ಲಿದ್ದರೆ ಶುಭಫಲಗಳನ್ನು ಅನ್ಯಥಾ ಅಶುಭಫಲಗಳನ್ನು ನೀಡುತ್ತಾನೆ.

ಆತ್ಮಾದಯೋಽಧಿಪೈರ್ಯುಕ್ತಾ ಧೂಮಾದಿಗ್ರಹಸಂಯುತಾ: ।
ತೇ ಭಾವಾ ನಾಶತಾಂ ಯಾಂತಿ ವದತೀತಿ ಪರಾಶರ: ॥೨೧॥

ಲಗ್ನಾದಿ ಭಾವಗಳಲ್ಲಿ ಆಯಾ ಭಾವಾಧಿಪತಿಯೊಂದಿಗೆ, ಧೂಮಾದಿ ಗ್ರಹರಿದ್ದರೆ ಆ ಭಾವಫಲವು ನಾಶಹೊಂದುತ್ತದೆ ಎಂದು ಪರಾಶರ ಮುನಿಗಳು ಹೇಳಿರುತ್ತಾರೆ.

ಧೂಮೇ ಸತತಂಮುಷ್ಣಂ ಸ್ಯಾದಗ್ನಿಭೀತಿರ್ಮನೋವ್ಯಥಾ । ವ್ಯತೀಪಾತೇ ಮೃಗಭಯಂ ಚತುಷ್ಪಾನ್ಮರಣಂ ತು ವಾ ॥೨೩॥ ಪರಿವೇಷೇ ಜಲೇ ಭೀರುರ್ಜಲರೋಗಶ್ಚ ಬಂಧನಮ್ । ಇಂದ್ರಚಾಪೇ ಶಿಲಾಘಾತಃ ಕ್ಷತಂ ಶಸ್ತ್ರೈರಪಿ ಚ್ಯುತಿಃ ॥೨೪॥ ಕೇತೌ ಪತನಘಾತಾದ್ಯಂ ಕಾರ್ಯನಾಶೋsಶನೇರ್ಭಯಮ್ । ಏತೇ ಯದ್ಭಾವಸಹಿತಾಸ್ತ-ದ್ದಶಾಯಾಂ ಫಲಂ ವದೇತ್ ॥೨೫॥

ಧೂಮನು ನಿರಂತರ ಉಷ್ಣ ಪೀಡೆ, ಮತ್ತು ಅಗ್ನಿಭಯ ಮತ್ತು ಮಾನಸಿಕ ಪೀಡೆ ನೀಡುತ್ತಾನೆ. **ವ್ಯತೀಪಾತನು** ಕೊಂಬುಳ್ಳಪ್ರಾಣಿಗಳ ಭಯ ಅಥವಾ ಚತುಷ್ಪಾದ ಪ್ರಾಣಿಗಳಿಂದ ಮರಣ ನೀಡುತ್ತಾನೆ. **ಪರಿವೇಷನು** ಜಲಭೀತಿ, ಜಲಜನ್ಯರೋಗಗಳು, ಬಂಧನ ನೀಡುತ್ತಾನೆ. **ಇಂದ್ರಛಾಪನು** ಕಲ್ಲು ಶಿಲೆಗಳಿಂದ ಹೊಡೆತ, ಶಸ್ತ್ರಗಳಿಂದ ಘಾಯ, ಬೀಳುವುದು, ಸ್ಥಾನಚ್ಯುತಿ ನೀಡುತ್ತಾನೆ. **ಉಪಕೇತುವು** ಪತನ, ಆಘಾತ, ಕರ್ಮನಾಶ, ಸಿಡಿಲಿನ ಭಯ ನೀಡುತ್ತಾನೆ. ಈ ಫಲಗಳು ಉಪಗ್ರಹನು ಸ್ಥಿತ-ರಾಶ್ಯಾಧಿಪನ ದಶಾಕಾಲದಲ್ಲಿ ಸಂಭವಿಸುತ್ತದೆ.

ಅಲ್ಪಾಯುಃ ಕುಮುಖಃ ಪರಾಕ್ರಮಗುಣೋ ದುಃಖೀ ಚ ನಷ್ಟಾತ್ಮಜಃ ಪ್ರತ್ಯರ್ಥಿ-ಕ್ಷುಭಿತೋ ವಿಶೀರ್ಣಮದನೋ ದುರ್ಮಾರ್ಗಮೃತ್ಯುಂ ಗತಃ । ಧರ್ಮಾದಿ ಪ್ರತಿಕೂಲಶಾಟನರುಚಿರ್ಲಾಭಾನ್ವಿತೋ ದೋಷವಾನಿತ್ಯೇವಂ ಕ್ರಮಶೋ ವಿಲಗ್ನಭವನಾತ್ಕೇತೋಃ ಫಲಂ ಕೀರ್ತಯೇತ್ ॥೨೬॥

ಭಾವಸ್ಥಿತ ಉಪಕೇತು ಫಲ:- ಲಗ್ನ–ಅಲ್ಪಾಯು, 2–ಕುರೂಪಉಳ್ಳ ಮುಖ, 3-ಪರಾಕ್ರಮ, 4-ದುಃಖ, 5-ಸಂತಾನ ನಷ್ಟ, 6-ಶತ್ರುಹೇತುವಿನಿಂದ ಮಾನಸಿಕಪೀಡೆ, 7-ಅಲ್ಪಕಾಮ, 8-ದುರ್ಮಾರ್ಗದಲ್ಲಿ ನಡೆಯುವುದರಿಂದ ಮರಣ, 9-ಧರ್ಮವಿರುದ್ಧ ಕಾರ್ಯ, 10-ಅನಾವಶ್ಯಕ ಸಂಚಾರ, 11-ಲಾಭ, 12-ದೋಷಉಳ್ಳವನು ಆಗುತ್ತಾನೆ. ಈ ಫಲಗಳು ಲಗ್ನಾದಿಭಾವಸ್ಥಿತ ಉಪಕೇತುವಿನ ಫಲ ಕ್ರಮವಾಗಿ ಆಗಿರುತ್ತದೆ.

ಅಪ್ರಕಾಶಾಃ ಸಂಚರಂತಿ ಧೂಮಾದ್ಯಾಃ ಪಂಚಖೇಚರಾಃ ।
ಕ್ವಚಿತ್ಕದಾಚಿದ್ದೃಶ್ಯಂತೇ ಲೋಕೋಪದ್ರವಹೇತವೇ ॥೨೭॥

ಧೂಮಾದಿ ಪಂಚಗ್ರಹರು ಆಕಾಶದಲ್ಲಿ ಸಂಚರಿಸುವುದು ಕಂಡುಬರುವುದಿಲ್ಲ. ಯಾವಾಗಲಾದರೂ ಒಮ್ಮೆ ಕಂಡುಬಂದರೆ ಲೋಕಕ್ಕೆ ಹಾನಿ ಸಂಭವಿಸುತ್ತದೆ.

ಧೂಮಸ್ತು ಧೂಮಪಟಲಃ ಪುಚ್ಛರ್ಕ್ಷಮಿತಿ ಕೇಚನ ।
ಉಲ್ಕಾಪಾತೋ ವ್ಯತೀಪಾತಃ ಪರಿವೇಷಸ್ತು ದೃಶ್ಯತೇ ॥೨೮॥

ಧೂಮನು ಹೊಗೆಯ ಮೋಡದಂತೆ ಕಂಡು ಬರುತ್ತಾನೆ ಎಂದು ಕೆಲವರು ಹೇಳುತ್ತಾರೆ. ಬಾಲಉಳ್ಳ ನಕ್ಷತ್ರದಂತೆ ಎಂದು ಕೆಲವರು ಹೇಳುತ್ತಾರೆ. ಉಪಕೇತುವು ಉಲ್ಕಾಪಾತ ಆಗಿರುತ್ತದೆ. ಪರಿವೇಷನು ಸೂರ್ಯ ಅಥವಾ ಚಂದ್ರನ ಸುತ್ತಲೂ ಮಂಡಲಾಕೃತಿಯಂತೆ ಕಾಣುತ್ತಾನೆ.

ಗುಲಿಕಭವನನಾಥೇ ಕೇಂದ್ರಗೇ ವಾ ತ್ರಿಕೋಣೇ ಬಲಿನಿ ನಿಜಗೃಹಸ್ಥೇ ಸ್ವೋಚ್ಚೆ ಮಿ-
ತ್ರಸ್ಥಿತೇ ವಾ । ರಥಗಜತುರಗಾಣಾಂ ನಾಯಕೋ ಮಾರತುಲ್ಯೋ ಮಹಿತಪೃಥು-
ಯಶಾಸ್ಸ್ಯಾನ್ಮೇದಿನೀಮಂಡಲೇಂದ್ರ : ॥೩೦॥

ಮಾಂದಿಸ್ಥಿತರಾಶ್ಯಾಧಿಪತಿಯು ಬಲಿಷ್ಠನಾಗಿ ಕೇಂದ್ರ, ತ್ರಿಕೋಣ, ಸ್ವಕ್ಷೇತ್ರ, ಉಚ್ಚ ಅಥವಾ ಮಿತ್ರಕ್ಷೇತ್ರದಲ್ಲಿ ಇದ್ದರೆ ಜಾತಕನು ರಥ, ಆನೆ, ಕುದುರೆ (ವಾಹನ) ಮೊದಲಾದವುಗಳ ಒಡೆಯನು, ಮನ್ಮಥನಂತೆ ಸೌಂದರ್ಯಉಳ್ಳವನು, ಅತ್ಯಂತ ಯಶಸ್ಸುಳ್ಳ ರಾಜನಾಗಿ ಭೂಮಂಡಲವನ್ನು ಆಳುತ್ತಾನೆ.

ಗೋಚರಫಲಾಧ್ಯಾಯ-೨೬

ಸರ್ವೇಷು ಲಗ್ನೇಷ್ವಪಿ ಸತ್ಸು ಚಂದ್ರಲಗ್ನಂ ಪ್ರಧಾನಂ ಖಲು ಗೋಚರೇಷು ।
ತಸ್ಮಾತ್ತದೃಕ್ಷಾದಪಿ ವರ್ತಮಾನಗ್ರಹೇಂದ್ರಚಾರೈ: ಕಥಯೇತ್ಫಲಾನಿ ॥೧॥

ಗೋಚರದ ಫಲಗಳನ್ನು ತಿಳಿಯಲು ಎಲ್ಲ ಲಗ್ನಗಳಲ್ಲಿ ಚಂದ್ರಲಗ್ನವೇ ಪ್ರಧಾನ ಆಗಿರುತ್ತದೆ. ಆದ್ದರಿಂದ ತಾತ್ಕಾಲಿಕಗ್ರಹರ ಚಾರದ ಫಲಾಫಲ ತಿಳಿಯಲು ಚಂದ್ರನಿಂದ (ಜನ್ಮರಾಶಿ) ಆ ಗ್ರಹಸ್ಥಿತ ರಾಶಿಗಳನ್ನು ಗಣಿಸಬೇಕು.

ಸೂರ್ಯ: ಷಟ್‌ತ್ರಿದಶಸ್ಥಿತಸ್ತ್ರಿದಶಷಟ್‌ಸಪ್ತಾದ್ಯಗಶ್ಚಂದ್ರಮಾ: ಜೀವಸ್ತ್ವಸ್ತ-
ಪೋದ್ವಿಪಶ್ಚಮಗತೋ ವಕ್ರಾರ್ಕಜೌ ಷಟ್‌ತ್ರಿಗೌ । ಸೌಮ್ಯ: ಷಟ್‌ಸ್ವಚತುರ್ದಶಾ
ಷ್ಟಮಗತ: ಸರ್ವೇಽಪ್ಯುಪಾಂತಸ್ಥಿತಾ: ಶುಕ್ರ: ಖಾಸ್ತರಿಪೂನ್ವಿಹಾಯ ಶುಭದಸ್ತಿ-
ಗ್ಮಾಂಶುವದ್ಭೋಗಿನೌ ॥೨॥

ಜನ್ಮರಾಶಿಯಿಂದ ಗೋಚರದ **ರವಿಯು** 6, 3ಮತ್ತು 10ನೇ ಭಾವದಲ್ಲಿ, **ಚಂದ್ರ**-3, 10, 6, 7 ಮತ್ತು 1, ಗುರು-7, 9, 2ಮತ್ತು 5, **ಕುಜ** ಮತ್ತು **ಶನಿ**-6ಮತ್ತು 3, ಬುಧ-6, 2, 4, 10 ಮತ್ತು 8, **ಶುಕ್ರ**-1, 2, 3, 4, 5, 8, 9ಮತ್ತು 12, ರಾಹು ಮತ್ತು ಕೇತುವು 6, 3ಮತ್ತು 10ನೇ ಭಾವದಲ್ಲಿ. ಅಲ್ಲದೆ ಎಲ್ಲಗ್ರಹರು ಏಕಾದಶದಲ್ಲಿ ಸಂಚರಿಸುವಾಗ ಶುಭಫಲ ನೀಡುತ್ತಾರೆ.

ಲಾಭವಿಕ್ರಮಖಶತ್ರುಷು ಸ್ಥಿತ: ಶೋಭನೋ ನಿಗದಿತೋ ದಿವಾಕರ; ।
ಖೇಚರೈ: ಸುತತಪೋಜಲಾಂತ್ಯಗೈ: ವ್ಯಾರ್ಕಿಭಿರ್ಯದಿ ನ ವಿದ್ಧ್ಯತೇ ತದಾ ॥೩॥

ರವಿಚಾರ:- ಸೂರ್ಯನು ಜನ್ಮರಾಶಿಯಿಂದ 11, 3, 10ಮತ್ತು 6ರಲ್ಲಿ ಗೋಚರಿಸುವಾಗ ಶುಭಫಲ ನೀಡುತ್ತಾನೆ. ಆದರೆ ಆ ಕಾಲದಲ್ಲಿ ಗ್ರಹವೇಧ ಇರಬಾರದು. 11-5, 3-9, 10-4 ಮತ್ತು 6-12 ಇವು ವೇಧರಾಶಿಗಳು ಆಗಿರುತ್ತವೆ. ಆಯಾ ವೇಧ ರಾಶಿಯಲ್ಲಿ ಸಂಚರಿಸುವ ಶನಿ ಹೊರತು ಇತರ ಗ್ರಹಗಳಿಂದ ಸೂರ್ಯನ ಚಾರಫಲ ಪ್ರಾಪ್ತಿಗೆ ತಡೆ ಉಂಟಾಗುತ್ತದೆ.

ದ್ಯೂನಜನ್ಮರಿಪುಲಾಭಖತ್ರಿಗಶ್ಚಂದ್ರಮಾ: ಶುಭಫಲಪ್ರದ: ಸದಾ ।
ಸ್ವಾತ್ಮಜಾಂತ್ಯಮೃತಿಬಂಧುಧರ್ಮಗೈ: ವಿದ್ಧ್ಯತೇ ನ ವಿಬುಧೈರ್ಯದಿ ಗ್ರಹೈ: ॥

ಚಂದ್ರಚಾರ:- ಗೋಚರದ ಚಂದ್ರನು ಜನ್ಮರಾಶಿಯಿಂದ 7, 1, 6, 11, 10 ಮತ್ತು 3ರಲ್ಲಿ ಸಂಚರಿಸುವಾಗ ಶುಭಫಲ ನೀಡುತ್ತಾನೆ. ಕ್ರಮವಾಗಿ 2, 5, 12, 8, 4, ಮತ್ತು 9ರಲ್ಲಿ ಬುಧನ ಹೊರತು ಇರುವ ಗ್ರಹನಿಂದ ವೇಧ ಉಂಟಾಗುತ್ತದೆ.

ವಿಕ್ರಮಾಯರಿಪುಗ: ಕುಜ: ಶುಭ: ಸ್ಯಾತ್ತದಾಂತ್ಯಸುತಧರ್ಮಗೈ: ಖಗೈ: ।
ಚೇನ್ನ ವಿದ್ಧ ಇನಸೂನುರಪ್ಯಸೌ ಕಿಂತು ಘರ್ಮಘೃಣಿನಾ ನ ವಿದ್ಧ್ಯತೇ ॥೫॥

ಕುಜಚಾರ:- ಜನ್ಮರಾಶಿಯಿಂದ ಕುಜನು ಶುಭಫಲ ನೀಡುವ ಸ್ಥಾನ ಮತ್ತು ಅವುಗಳ ವೇಧರಾಶಿಗಳು 3-12, 11-5, 6-9 ಆಗಿರುತ್ತದೆ. ಈ ನಿಯಮವು ಶನಿಗೆ ಕೂಡಾ ಅನ್ವಯಿಸುತ್ತದೆ, ಆದರೆ ವೇಧಸ್ಥಾನದಲ್ಲಿ ರವಿ ಇದ್ದರೆ ಶನಿಯ ಫಲಾಫಲ ಭಂಗ ಇಲ್ಲ.

ಸ್ವಾಂಬುಶತ್ರುಮೃತಿಖಾಯಗ: ಶುಭೋ ಜ್ಞಸ್ತದಾ ನ ಖಲು ವಿದ್ಧ್ಯತೇ ಸದಾ ।
ಸ್ವಾತ್ಮಜತ್ರಿತಪ ಆದ್ಯನೈಧನಪ್ರಾಪ್ತಿಗೈರ್ವಿಬುಧುಭಿರ್ಯದಿ ಗ್ರಹೈ: ॥೬॥

ಬುಧಚಾರ:- ಜನ್ಮರಾಶಿಯಿಂದ ಬುಧನು ಶುಭಫಲ ನೀಡುವಸ್ಥಾನ ಮತ್ತು ಅವುಗಳ ವೇಧರಾಶಿಗಳು 2–5, 4-3, 6-9, 8–1, 10-8, ಮತ್ತು 11-12 ಆಗಿರುತ್ತದೆ. ವೇದಸ್ಥಾನದಲ್ಲಿ ಚಂದ್ರನಿದ್ದರೆ ಫಲಾಫಲ ಭಂಗ ಇಲ್ಲ.

ಸ್ವಾಯಧರ್ಮತನಯಾಸ್ತಸಂಸ್ಥಿತೋ ನಾಕನಾಯಕಪುರೋಹಿತ: ಶುಭ; ।
ರಿ:ಫರಂಧ್ರಖಜಲತ್ರಿಗೈರ್ಯದಾ ವಿಧ್ಯತೇ ಗಗನಚಾರಿಭಿರ್ನ ಹಿ ॥೭॥

ಗುರುಚಾರ:- ಜನ್ಮರಾಶಿಯಿಂದ ಗುರುವು ಶುಭಫಲ ನೀಡುವಸ್ಥಾನ ಮತ್ತು ಅವುಗಳ ವೇಧರಾಶಿಗಳು 2–12, 5-4, 7-3, 9-10, ಮತ್ತು 11-8 ಆಗಿರುತ್ತದೆ.

ಆಸುತಾಷ್ಟಮತಪೋವ್ಯಯಾಯಗೋ ವಿದ್ಧ ಆಸ್ಫುಜಿದಶೋಭನ: ಸ್ಮೃತ: ।
ನೈಧನಾಸ್ತತನುಕರ್ಮಧರ್ಮಧೀಲಾಭವೈರಿಸಹಜಸ್ಥಖೇಚರೈ: ॥೮॥

ಶುಕ್ರಚಾರ:- ಜನ್ಮರಾಶಿಯಿಂದ ಶುಕ್ರನು ಶುಭಫಲ ನೀಡುವ ಸ್ಥಾನ ಮತ್ತು ಅವುಗಳ ವೇಧಸ್ಥಾನಗಳು 1-8, 2-7, 3-1, 4-10, 5-9,8-5, 9-11,11-3 ಮತ್ತು 12-6 ಆಗಿರುತ್ತದೆ. ವೇಧಸ್ಥಾನದಲ್ಲಿ ಗ್ರಹನಿದ್ದರೆ ಗೋಚರಫಲ ಲಭಿಸುವುದಿಲ್ಲ.

ಜನ್ಮನ್ಯಾಯಾಸದಾತಾ ಕ್ಷಪಯತಿ ವಿಭವಾನ್ ಕ್ರೋಧರೋಗಾಧ್ವದಾತಾ ವಿತ್ತಭ್ರಂ-ಶಂ ದ್ವಿತೀಯೇ ದಿಶತಿ ನ ಸುಖದೋ ವಂಚನಾಮಾಗ್ರಹಂ ಚ । ಸ್ಥಾನಪ್ರಾಪ್ತಿಂ ತೃತೀಯೇ ಧನನಿಚಯಮುದಾಕಲ್ಯಕೃಚ್ಚಾರಿಹಂತಾ ರೋಗಾನ್ ದತ್ತೇ ಚತುರ್ಥೇ ಜನಯತಿ ಚ ಮುಹು: ಸ್ರಗ್ಧರಾಭೋಗವಿಘ್ನಮ್ ॥೯॥ ಚಿತ್ತಕ್ಷೋಭಂ ಸುತಸ್ಥೋ ವಿತರತಿ ಬಹುಶೋ ರೋಗಮೋಹಾದಿ ದಾತಾ ಷಷ್ಠೇsಕೋರ್ಣ ಹಂತಿ ರೋಗಾನ್ ಕ್ಷಪಯತಿ ಚ ರಿಪೂಂಛೋಕ ಮೋಹಾನ್ನಮಾಷ್ಟಿ । ಅಧ್ವಾನಂ ಸಪ್ತಮಸ್ಥೋ-ಜಠರಗುದಭಯಂ ದೈನ್ಯಭಾವಂ ಚ ತಸ್ಮೈ ರುಕ್‌ತ್ರಾಸಾವಷ್ಟಮಸ್ಥ: ಕಲಯತಿ ಕಲಹಂ ರಾಜಭೀತಿಂ ಚ ತಾಪಮ್ ॥೧೦॥ ಆಪದ್ದೈನ್ಯಂ ತಪಸಿ ವಿರಹಂ ಚಿತ್ತಚೇಷ್ಟಾ-ನಿರೋಧಂ ಪ್ರಾಪ್ನೋತ್ಯುಗ್ರಾಂ ದಶಮಗೃಹಗೇ ಕರ್ಮಸಿದ್ಧಿಂ ದಿನೇಶೇ । ಸ್ಥಾನಂ

ಮಾನಂ ವಿಭವಮಪಿ ಚೈಕಾದಶೇ ರೋಗನಾಶಂ ಕ್ಲೇಶಂ ವಿತ್ತಕ್ಷಯಮಪಿ ಸುಹೃದ್ವೈರ-
ಮಂತ್ಯೇ ಜ್ವರಂ ಚ ॥೧೧॥

ರವಿಚಾರಫಲ:- ಸೂರ್ಯನು 1.ಜನ್ಮರಾಶಿಯಲ್ಲಿ ಸಂಚರಿಸುವಾಗ ವೈಭವ ಕ್ಷೀಣಿಸುತ್ತದೆ. ಧನನಾಶ, ಶಾರೀರಿಕ ಆಯಾಸ, ಕ್ರೋಧ, ರೋಗ, ಆಯಾಸಕರ ಪ್ರಯಾಣಗಳು ಅಥವಾ ಅನಾವಶ್ಯಕ ಸಂಚಾರ ಸಂಭವಿಸುತ್ತದೆ. 2.ಜನ್ಮರಾಶಿಯಿಂದ ದ್ವಿತೀಯದಲ್ಲಿ ಸಂಪತ್ತಿನ ಅವನತಿ, ಸುಖಹೀನತೆ, ವಂಚಿಸಲ್ಪಡುವುದು ಹಠತನ ಇರುತ್ತದೆ. 3.ತೃತೀಯದಲ್ಲಿ ಸಂಚರಿಸುವಾಗ ಸ್ಥಾನಪ್ರಾಪ್ತಿ, ಧನಸಂಚಯ, ಸುಖ–ಸಂತೋಷ, ರೋಗವಿಮುಕ್ತಿ ಮತ್ತು ಶತ್ರುನಾಶ ಸಂಭವಿಸುತ್ತದೆ. 4.ಚತುರ್ಥದಲ್ಲಿ ರವಿ ಸಂಚರಿಸುವಾಗ ರೋಗಪ್ರಾಪ್ತಿ ಅಥವಾ ರೋಗೋತ್ಪತ್ತಿ, ಸುಖ-ಭೋಗಗಳಲ್ಲಿ ವಿಘ್ನ ಅಥವಾ ಅಡ್ಡಿ–ಆತಂಕ ಉಂಟಾಗುತ್ತದೆ. 5.ಪಂಚಮದಲ್ಲಿ ಸಂಚರಿಸುವಾಗ ಮಾನಸಿಕ ವ್ಯಥೆ, ಅನಾರೊಗ್ಯ, ಭ್ರಮ, ಮೋಹ ನೀಡುತ್ತಾನೆ. 6.ಷಷ್ಠದಲ್ಲಿ ಸಂಚರಿಸುವಾಗ ರೋಗನಾಶ, ಶತ್ರುವಿನಾಶ, ದು:ಖ ಮತ್ತು ಮಾನಸಿಕ ವ್ಯಥೆ ಹೋಗಲಾಡಿಸುತ್ತಾನೆ. 7.ಸಪ್ತಮದಲ್ಲಿ ಸಂಚರಿಸುವಾಗ ಆಯಾಸಕರ ಪ್ರಯಾಣ, ಉದರವ್ಯಾಧಿ, ಗುದರೋಗ, ದೀನತೆ, ಅನಾದರ ನೀಡುತ್ತಾನೆ. 8.ಅಷ್ಟಮದಲ್ಲಿ ಸಂಚರಿಸುವಾಗ ರೋಗಭಯದಿಂದ ಮಾನಸಿಕವ್ಯಥೆ, ವಾದ-ವಿವಾದ, ಕಲಹ, ರಾಜಭಯ ಅಥವಾ ಸರಕಾರದಿಂದ ತೊಂದರೆ ಮತ್ತು ಉಷ್ಣಪ್ರಕೋಪ ನೀಡುತ್ತಾನೆ.

ಕ್ರಮೇಣ ಭಾಗ್ಯೋದಯಮರ್ಥಹಾನಿಂ ಜಯಂ ಭಯಂ ಶೋಕಮರೋಗತಾಂ ಚ ।
ಸುಖಾನ್ಯನಿಷ್ಟಂ ಗದಮಿಷ್ಟಸಿದ್ಧಿಂ ಮೋದಂ ವ್ಯಯಂ ಚ ಪ್ರದದಾತಿ ಚಂದ್ರ: ॥೧೨॥

ಚಂದ್ರಚಾರಫಲ:- ಚಂದ್ರನು ಜನ್ಮರಾಶಿಯಿಂದ ಆರಂಭಿಸಿ ಕ್ರಮವಾಗಿ 1.ಭಾಗ್ಯೋದಯ, 2.ಧನಹಾನಿ, 3.ಜಯ, 4.ಭಯ, 5.ಶೋಕ, 6.ರೋಗ ನಿವಾರಣೆ, 7.ಸುಖ, 8.ಅಶುಭಫಲ, 9.ರೋಗ, 10.ಮನೋಭೀಷ್ಟಗಳ ಪೂರೈಕೆ, 11.ಸಂತೋಷ ಮತ್ತು 12. ಖರ್ಚು ನೀಡುತ್ತಾನೆ.

ಅಂತ: ಶೋಕಂ ಸ್ವಜನವಿರಹಂ ರಕ್ತಪಿತ್ತೋಷ್ಣರೋಗಂ ಲಗ್ನೇ ವಿತ್ತೇ ಭಯಮಪಿ ಗಿರಾಂ ದೋಷಮರ್ಥಕ್ಷಯಂ ಚ । ಧೈರ್ಯೇ ಭೌಮೋ ಜನಯತಿ ಜಯಂ ಸ್ವರ್ಣ-ಭೂಷಾಪ್ರಮೋದಂ ಸ್ಥಾನಭ್ರಂಶಂ ರುಜಮುದರಜಾಂ ಬಂಧುದು:ಖಂ ಚತುರ್ಥೇ-॥೧೩॥ ಜ್ವರಮನುಚಿತಚಿಂತಾಂ ಪುತ್ರಹೇತುವ್ಯಥಾಂ ವಾ ಕಲಯತಿ ಕಲಹಂ ಸ್ವೈ: ಪಂಚಮೇ ಭೂಮಿಪುತ್ರ: । ರಿಪುಕಲಹನಿವೃತ್ತಿಂ ರೋಗಶಾಂತಿಂ ಚ ಷಷ್ಠೇ ವಿಜಯಮಥ ಧನಾಪ್ತಿಂ ಸರ್ವ ಕಾರ್ಯಾನುಕೂಲ್ಯಮ್ ॥೧೪॥ ಕಲತ್ರಕಲಹಾಕ್ಷಿರುಗ್ಜಠರ–ರೋಗಕೃತ್ಸಪ್ತಮೇ ಜ್ವರಕ್ಷತಜರೂಕ್ಷಿತೋ ವಿಗತವಿತ್ತಮಾನೋಽಷ್ಟಮೇ । ಕುಜೇ ನವಮಸಂಸ್ಥಿತೇ ಪರಿಭವೋಽರ್ಥನಾಶಾದಿಭಿರ್ವಿಲಂಬಿತಗತಿರ್ಭವತ್ಯಬಲದೇಹಧಾ–ತುಕ್ಷಯೈ: ॥೧೫॥ ದುಶ್ಚೇಷ್ಟಾ ವಾ ಕರ್ಮವಿಘ್ನ: ಶ್ರಮ: ಖೇ ದ್ರವ್ಯಾರೋಗ್ಯಕ್ಷೇತ್ರವೃದ್ಧಿಶ್ಚ ಲಾಭೇ । ಭೌಮ: ಖೇಟೋ ಗೋಚರೇ ದ್ವಾದಶಸ್ಥೋ ದ್ರವ್ಯಚ್ಛೇದಸ್ತಾಪ ಉಷ್ಣಾಮಯಾದ್ಯೈ: । ॥೧೬॥

ಕುಜಚಾರಫಲ:- ಕುಜನು 1-ಜನ್ಮರಾಶಿಯಲ್ಲಿ ಸಂಚರಿಸುವಾಗ ಮಾನಸಿಕ ಚಿಂತೆ, ಸ್ವಜನವಿಯೋಗ, ರಕ್ತ-ಪಿತ್ತ ಅಥವಾ ರಕ್ತಜನಿತ, ಅಥವಾ ಪಿತ್ತಜನಿತ ವ್ಯಾಧಿಗಳಿಂದ ಪೀಡೆ, ಜ್ವರ ಅಥವಾ ಉಷ್ಣಪ್ರಕೋಪ ಸಂಭವಿಸುತ್ತದೆ. 2. ದ್ವಿತೀಯದಲ್ಲಿ ಭಯ, ಮಾತಿನಿಂದ ಕಲಹ ಮತ್ತು ಧನಹಾನಿ ಸಂಭವಿಸುತ್ತದೆ. 3. ತೃತೀಯದಲ್ಲಿ ಕೈಕೊಂಡ ಕಾರ್ಯಗಳಲ್ಲಿ ಯಶಸ್ಸು, ಬಂಗಾರದ ಆಭರಣ ಪ್ರಾಪ್ತಿ ಮತ್ತು ಸಂತೋಷ ಲಭಿಸುತ್ತದೆ- 4. ಚತುರ್ಥದಲ್ಲಿ ಸ್ಥಾನನಾಶ, ಉದರ ವ್ಯಾಧಿಗಳಿಂದ ಪೀಡೆ, ಬಂಧು-ಬಾಂಧವರಿಂದ ದು:ಖ ಉಂಟಾಗುತ್ತದೆ. 5. ಪಂಚಮದಲ್ಲಿ ಜ್ವರ, ಅನಾವಶ್ಯಕ ಚಿಂತೆ, ಸಂತಾಪದಿಂದ ದು:ಖ ಅಥವಾ ಸ್ವಜನರೊಂದಿಗೆ ಕಲಹ ಸಂಭವಿಸುತ್ತದೆ. 6. ಷಷ್ಠದಲ್ಲಿ ಶತ್ರುಗಳೊಂದಿಗೆ ಇರುವ ಕಲಹ ಅಥವಾ ವಿವಾದದಿಂದ ಬಿಡುಗಡೆ, ರೋಗ ವಿಮುಕ್ತಿ, ಜಯ. ಧನಪ್ರಾಪ್ತಿ, ಸಕಲಕಾರ್ಯಗಳಲ್ಲಿ ಸಫಲತೆ ಲಭಿಸುತ್ತದೆ. 7. ಸಪ್ತಮದಲ್ಲಿ ತನ್ನ ಪತ್ನಿಯೊಂದಿಗೆ ಕಲಹ, ಕಣ್ಣಿನವ್ಯಾಧಿಗಳು ಮತ್ತು ಜಠರರೋಗ ಸಂಭವಿಸುತ್ತದೆ. 8.ಅಷ್ಟಮದಲ್ಲಿ ಜ್ವರ. ಘಾಯದಿಂದ ಶರೀರದಲ್ಲಿ ಕ್ಷೀಣತೆ. ಧನನಾಶ ಮತ್ತು ಮಾನಹಾನಿ ಸಂಭವಿಸುತ್ತದೆ. 9. ನವಮದಲ್ಲಿ ಪರಾಭವ. ಧನನಾಶ, ಧಾತುಕ್ಷಯದಿಂದ ಶಾರೀರಿಕ ಬಲಹೀನತೆ ಮತ್ತು ಕಾರ್ಯವಿಳಂಬತೆ ನೀಡುತ್ತಾನೆ. 10. ದಶಮದಲ್ಲಿ ಕೆಟ್ಟಕಾರ್ಯಗಳನ್ನು ಮಾಡುವುದು ಅಥವಾ ಕರ್ಮದಲ್ಲಿ ಅಡ್ಡಿ-ಆತಂಕ ಮತ್ತು ಶಾರೀರಿಕ ಶ್ರಮ ನೀಡುತ್ತಾನೆ. 11. ಲಾಭದಲ್ಲಿ ಧನ, ಆರೋಗ್ಯ, ಭೂಮಿ, ಗದ್ದೆ ಮತ್ತು ಅಭಿವೃದ್ಧಿ ನೀಡುತ್ತಾನೆ. 12. ವ್ಯಯದಲ್ಲಿ ಧನನಾಶ, ಉಷ್ಣವಿಕಾರ, ಮಾನಸಿಕ ಚಿಂತೆ ನೀಡುತ್ತಾನೆ.

> ವಿತ್ತಕ್ಷಯಂ ಶ್ರಿಯಮರಾತಿಭಯಂ ಧನಾಪ್ತಿಂ ಭಾರ್ಯಾತನೂಜಕಲಹಂ ವಿಜಯಂ ವಿರೋಧಮ್ । ಪುತ್ರಾರ್ಥಲಾಭಮಥ ವಿಘ್ನಮಶೇಷಸೌಖ್ಯಂ ಪುಷ್ಟಿಂ ಪರಾಭವ-ಭಯಂ ಪ್ರಕರೋತಿ ಚಾಂದ್ರಿ: ॥೧೭॥

ಬುಧ ಚಾರಫಲ:- ಬುಧನ ಜನ್ಮಾದಿ ದ್ವಾದಶರಾಶಿಯ ಚಾರಫಲ ಕ್ರಮವಾಗಿ 1.ಜನ್ಮರಾಶಿಯಲ್ಲಿ ಧನ-ಸಂಪತ್ತಿನ ಕ್ಷೀಣತೆ, 2.ಧನಲಾಭ, 3,ಶತ್ರುಭಯ, 4.ಧನಲಾಭ, 5.ಹೆಂಡತಿಮಕ್ಕಳೊಂದಿಗೆ ಕಲಹ, 6.ವಿಜಯ, 7.ವಿರೋಧ. 8.ಪುತ್ರಪ್ರಾಪ್ತಿ ಮತ್ತು ಧನಲಾಭ, 9.ಕಾರ್ಯವಿಘ್ನತೆ, 10.ಸಕಲ ಸುಖ, 11.ಅಭಿವೃದ್ಧಿ ಮತ್ತು 12.ಸೋಲು ನೀಡುತ್ತಾನೆ.

> ಜೀವೇ ಜನ್ಮನಿ ದೇಶನಿರ್ಗಮನಮಪ್ಯರ್ಥಚ್ಯುತಿಂ ಶತ್ರುತಾಂ ಪ್ರಾಪ್ನೋತಿ ದ್ರವಿಣಂ ಕುಟುಂಬಸುಖಮಪ್ಯರ್ಥೇ ಸ್ವವಾಚಾಂ ಫಲಮ್ । ದುಶ್ಚಿಕ್ಯೇ ಸ್ಥಿತಿನಾಶಮಿಷ್ಟವಿ-ಯುತಿಂ ಕಾರ್ಯಾಂತರಾಯಂ ರುಜಂ ದು:ಖೈರ್ಬಂಧುಜನೋದ್ಭವೈಶ್ಚ ಹಿಬುಕೇ ದೈನ್ಯಂ ಚತುಷ್ಪಾದ್ಭಯಮ್ ॥೧೮॥ ಪುತ್ರೋತ್ಪತ್ತಿಮುಪೈತಿ ಸಜ್ಜನಯುತಿಂ ರಾಜಾನುಕೂಲ್ಯಂ ಸುತೇ ಷಷ್ಠೇ ಮಂತ್ರಿಣಿ ಪೀಡಯಂತಿ ರಿಪವ: ಸ್ವಜ್ಞಾತಯೋ ವ್ಯಾಧಯ: । ಯಾತ್ರಾಂ ಶೋಭನಹೇತವೇ ವನಿತಯಾ ಸೌಖ್ಯಂ ಸುತಾಪ್ತಿಂ ಸ್ಮರೇ ಮಾರ್ಗಕ್ಲೇಶಮರಿಷ್ಟಮಷ್ಟಮಗತೇ ನಷ್ಟಂ ಧನೈ: ಕಷ್ಟತಾಮ್ ॥೧೯॥ ಭಾಗ್ಯೇ

ಜೀವೇ ಸರ್ವಸೌಭಾಗ್ಯಸಿದ್ಧಿ: ಕರ್ಮಣ್ಯರ್ಥಸ್ಥಾನಪುತ್ರಾದಿ ಪೀಡಾ । ಲಾಭೇ ಪುತ್ರ-ಸ್ಥಾನಮಾನಾದಿಲಾಭೋ ರಿ:ಫೇ ದು:ಖಂ ಸಾಧ್ವಸಂ ದ್ರವ್ಯಹೇತೋ: ॥೨೦॥

ಗುರು ಚಾರಫಲ:- ಗುರುವಿನ ಜನ್ಮಾದಿ ದ್ವಾದಶರಾಶಿಯ ಚಾರಫಲ ಕ್ರಮವಾಗಿ 1.ಜನ್ಮರಾಶಿಯಲ್ಲಿ ಸ್ವದೇಶ ಅಥವಾ ಜನ್ಮಸ್ಥಳ ತ್ಯಾಗ ಅಧಿಕ ಧನವ್ಯಯ ಮತ್ತು ಶತ್ರುತ್ವ ಉಂಟಾಗುತ್ತದೆ. 2.ದ್ವಿತೀಯದಲ್ಲಿ ಧನ–ಸಂಪತ್ತಿನಪ್ರಾಪ್ತಿ, ಕುಟುಂಬ ಸುಖ, ಮಾತುಕತೆಯಿಂದ ಕಾರ್ಯ ಸಾಧನೆ ನೀಡುತ್ತಾನೆ. 3.ತೃತೀಯದಲ್ಲಿ ಸ್ಥಾನನಾಶ, ಇಷ್ಟ ಜನರ ವಿಯೋಗ, ಕೈಕೊಂಡಕಾರ್ಯಗಳಲ್ಲಿ ವಿಘ್ನ ಮತ್ತು ರೋಗದಿಂದ ಪೀಡೆ ಉಂಟಾಗುತ್ತದೆ, 4.ಚತುರ್ಥದಲ್ಲಿ ಬಂಧು-ಬಾಂಧವರಿಂದ ದು:ಖ, ದೀನತೆ ಮತ್ತು ಚತುಷ್ಪಾದ ಪ್ರಾಣಿಗಳಿಂದ ಪೀಡೆ ಸಂಭವಿಸುತ್ತದೆ. 5.ಪಂಚಮದಲ್ಲಿ ಪುತ್ರಸಂತಾನಪ್ರಾಪ್ತಿ, ಸಾಧು-ಸಜ್ಜನರೊಂದಿಗೆ ಸಮಾಗಮ, ರಾಜರಿಂದ ಅಥವಾ ಸರಕಾರದಿಂದ ಅನುಕೂಲತೆ ಅಥವಾ ಸಹಾಯ ಲಭಿಸುತ್ತದೆ. 6.ಷಷ್ಠದಲ್ಲಿ ಶತ್ರುಪೀಡೆ, ಸಹೋದರ ಸಮಾನರಿಂದ ಹಾನಿ, ಮತ್ತು ರೋಗಪೀಡೆ ಉಂಟಾಗುತ್ತದೆ. 7.ಸಪ್ತಮದಲ್ಲಿ ಸತ್ಕರ್ಮ ಅಥವಾ ಶುಭಸಮಾರಂಭದ ಕಾರಣ ಯಾತ್ರೆಗಳು, ಸ್ತ್ರೀಸುಖ ಮತ್ತು ಪುತ್ರಸಂತಾನ ಜನಿಸುತ್ತದೆ 8.ಅಷ್ಟಮದಲ್ಲಿ ಅನಾವಶ್ಯಕ ಸಂಚಾರ ಅಥವಾ ದು:ಖಕರ ಪ್ರಯಾಣಗಳು, ಅಶುಭ ಅಥವಾ ಹಾನಿಕಾರಕ ಘಟನೆಗಳು, ಧನನಷ್ಟ ಮತ್ತು ಸಂಕಷ್ಟಗಳಿಂದ ಪೀಡಿಸಲ್ಪಡುತ್ತಾನೆ 9.ನವಮದಲ್ಲಿ ಸಕಲ ಸೌಭಾಗ್ಯಪ್ರಾಪ್ತಿ, ಕೈಕೊಂಡ ಕಾರ್ಯಗಳಲ್ಲಿ ಜಯ ಇತ್ಯಾದಿ ಸಂಭವಿಸುತ್ತದೆ. 10.ದಶಮದಲ್ಲಿ ಧನಹಾನಿ. ಸ್ಥಾನಚ್ಯುತಿ, ಮಕ್ಕಳಿಗೆ ಸಂಕಷ್ಟಗಳು ಸಂಭವಿಸುತ್ತದೆ. 11.ಏಕಾದಶದಲ್ಲಿ ಪುತ್ರಪ್ರಾಪ್ತಿ, ಸ್ಥಾನ–ಮಾನ ಇತ್ಯಾದಿ ಲಭಿಸುತ್ತದೆ. 12.ದ್ವಾದಶದಲ್ಲಿ ಧನ–ಸಂಪತ್ತಿನ ಹೇತುವಿನಿಂದ ದು:ಖ. ಭಯ, ಚಿಂತೆ ಇತ್ಯಾದಿ ಉಂಟಾಗುತ್ತದೆ.

ಅಖಿಲವಿಷಯಭೋಗಂ ವಿತ್ತಸಿದ್ಧಿಂ ವಿಭೂತಿಂ ಸುಖಸುಹೃದಭಿವೃದ್ಧಿಂ ಪುತ್ರಲಬ್ಧಿಂ ವಿಪತ್ತಿಮ್ । ದಿಶತಿ ಯುವತಿ ಪೀಡಾಂ ಸಂಪದಂ ವಾ ಸುಖಾಪ್ತಿಂ ಕಲಹಮಭಯ-ಮರ್ಥಪ್ರಾಪ್ತಿಮಿಂದ್ರಾರಿಮಂತ್ರೀ ॥೨೧॥

ಶುಕ್ರಚಾರಫಲ:- ಶುಕ್ರನು ಗೋಚರದಲ್ಲಿ ಜನ್ಮರಾಶಿಯಿಂದ ಕ್ರಮವಾಗಿ 1.ಸಕಲ ಸುಖ–ಭೋಗ. 2.ಧನಲಾಭ, 3.ಅಭಿವೃದ್ಧಿ, 4.ಸುಖ ಮತ್ತು ಮಿತ್ರಲಾಭ, 5.ಪುತ್ರಪ್ರಾಪ್ತಿ ಅಥವಾ ಸಂತಾನಸುಖ, 6.ವಿಪತ್ತು, 7.ಸ್ತ್ರೀಹೇತುವಿನಿಂದ ಸಂಕಷ್ಟಗಳು, 8.ಸಂಪತ್ತು, 9.ಸುಖ, 10.ಕಲಹ, 11.ಭಯನಾಶ ಮತ್ತು ವ್ಯಯದಲ್ಲಿ ಧನಪ್ರಾಪ್ತಿ ನೀಡುತ್ತಾನೆ.

ರೋಗಾಂಶೌಚಕ್ರಿಯಾಪ್ತಿಂ ದನಸುತವಿಪತಿಂ ಸ್ಥಾನಭೃತ್ಯಾರ್ಥಲಾಭಂ ಸ್ತ್ರೀ ಬಂಧ್ವರ್ಥ–ಪ್ರಣಾಶಂ ದ್ರವಿಣಸುತಮತಿಪ್ರಚ್ಯುತಿಂ ಸರ್ವಸೌಖ್ಯಮ್ । ಸ್ತ್ರೀರೋಗಾಧ್ವಾವಭೀತಿಂ ಸ್ವಸುತಪಶುಸುಹೃದ್ವಿತ್ತನಾಶಾಮಯಾರ್ತಿಂ ಜನ್ಮಾದೇರಷ್ಟಮಾಂತಂ ದಿಶತಿ ಪವಮಶೇ-ನಾರ್ಕಸೂನು: ಕ್ರಮೇಣ ॥೨೨॥ ದಾರಿದ್ರ್ಯಂ ಧರ್ಮವಿಘ್ನಂ ಪಿತೃಸಮ ವಿಲಯಂ ನಿತ್ಯ-

ದು:ಖಂ ಶುಭಸ್ಥೇ ದುರ್ವ್ಯಾಪಾರಪ್ರವೃತ್ತಿಂ ಕಲಯತಿ ದಶಮೇ ಮಾನಭಂಗಂ ರುಜಂ ವಾ । ಸೌಖ್ಯಾನ್ಯೇಕಾದಶಸ್ಥೋ ಬಹುವಿಧವಿಭವಪ್ರಾಪ್ತಿಮುತ್ಕೃಷ್ಟಕೀರ್ತಿಂ ವಿಶ್ರಾಂತಿಂ ವ್ಯರ್ಥಕಾರ್ಯಾದ್ವಸುಹೃತಿಮರಿಭಿ: ಸ್ತ್ರೀಸುತವ್ಯಾಧಿಮಂತ್ಯೇ ॥೨೩॥

ಶನಿಚಾರಫಲ:- ಶನಿಯು ಗೋಚರದಲ್ಲಿ ಜನ್ಮರಾಶಿಯಿಂದ ಕ್ರಮವಾಗಿ 1.ರೋಗ ಮತ್ತು ಮರಣಸೂಚಕ, 2.ಧನನಾಶ ಮತ್ತು ಸಂತಾನಹಾನಿ, 3.ಸ್ಥಾನಪ್ರಾಪ್ತಿ, ಸೇವಕರು ಮತ್ತು ಧನಲಾಭ, 4.ಪತ್ನಿ, ಬಂಧು-ಬಾಂಧವರು ಮತ್ತು ಧನನಾಶ, 5.ಧನ-ಸಂಪತ್ತಿನ ಅವನತಿ, ಸಂತಾನ ಹಾನಿ ಮತ್ತು ಮಾನಸಿಕ ಪೀಡೆ, 6.ಸಕಲ ಸುಖಪ್ರಾಪ್ತಿ, 7.ಪತ್ನಿಗೆ ಅನಾರೋಗ್ಯ, ಪ್ರಯಾಣದಲ್ಲಿ ಹಾನಿ, 8.ಸಂತಾನಹಾನಿ,ಪಶು, ಮಿತ್ರ ಮತ್ತು ಸಂಪತ್ತಿನನಾಶ, 9.ದಾರಿದ್ರ್ಯ, ಧಾರ್ಮಿಕ ಕಾರ್ಯಗಳಲ್ಲಿ ವಿಘ್ನ. ತಂದೆಯ ಅಥವಾ ಪಿತೃಸಮಾನ ವ್ಯಕ್ತಿಯ ಮರಣ, ನಿರಂತರ ದು:ಖ, 10. ದುಷ್ಕರ್ಮಪ್ರವೃತ್ತಿ ಮಾನಭಂಗ, ರೋಗಪೀಡೆ, 11.ಅನೇಕ ವಿಧದ ಸುಖಪ್ರಾಪ್ತಿ, ಅತ್ಯಂತ ವೈಭವ, ಶ್ರೇಷ್ಠಕೀರ್ತಿ ಲಭಿಸುತ್ತದೆ. 12.ಕೈಕೊಂಡ ಕಾರ್ಯಗಳಲ್ಲಿ ಅಸಫಲತೆ, ಅಥವಾ ಫಲ ಹೀನ ಕಾರ್ಯಗಳು, ಶತ್ರುಗಳಿಂದ ಧನಾಪಹಾರ, ಹೆಂಡತಿ-ಮಕ್ಕಳಿಗೆ ಅನಾರೋಗ್ಯ ಸಂಭವಿಸುತ್ತದೆ.

ದೇಹಕ್ಷಯಂ ವಿತ್ತವಿನಾಶಸೌಖ್ಯೇ ದು:ಖಾರ್ಥನಾಶೌ ಸುಖನಾಶಮೃತ್ಯೂನ್ ।
ಹಾನಿಂ ಚ ಲಾಭಂ ಸುಭಗಂ ವ್ಯಯಂ ಚ ಕುರ್ಯಾತ್ತಮೋ ಜನ್ಮಗೃಹಾತ್ಕ್ರಮೇಣ ॥

ರಾಹುಚಾರ ಫಲ:- ರಾಹುವು ಗೋಚರದಲ್ಲಿ ಜನ್ಮರಾಶಿಯಿಂದ ಕ್ರಮವಾಗಿ 1.ಶಾರೀರಿಕ ಪೀಡೆ, 2.ಸಂಪತ್ತಿನನಾಶ, 3.ಸುಖ, 4.ದು:ಖ, 5.ಧನನಾಶ, 6.ಸುಖ, 7.ನಷ್ಟ, 8.ಮರಣ, 9.ಹಾನಿ, 10.ಲಾಭ, 11.ಸೌಭಾಗ್ಯ ಮತ್ತು 12.ಖರ್ಚು ನೀಡುತ್ತಾನೆ.

ಕ್ಷಿತಿತನಯಪತಂಗೌ ರಾಶಿಪೂರ್ವತ್ರಿಭಾಗೇ ಸುರಪತಿಗುರುಶುಕ್ರೌ ರಾಶಿಮಧ್ಯತ್ರಿ- ಭಾಗೇ । ತುಹಿನಕಿರಣಮಂದೌ ರಾಶಿಪಾಶ್ಚಾತ್ಯಭಾಗೇ ಶಶಿತನಯಭುಜಂಗೌ ಪಾಕದೌ ಸಾರ್ವಕಾಲವ್ ॥೨೫॥

ಫಲಪ್ರಾಪ್ತಿಕಾಲ:- ಕುಜ ಮತ್ತು ರವಿಯು ರಾಶಿಯ ಪ್ರಥಮ ದ್ರೇಕ್ಕಾಣದಲ್ಲಿ ಸಂಚರಿಸುವಾಗ ಫಲಾಫಲಗಳನ್ನು ನೀಡುತ್ತಾರೆ. ಗುರು ಮತ್ತು ಶುಕ್ರನು ಮಧ್ಯದ್ರೇಕ್ಕಾಣದಲ್ಲಿ, ಚಂದ್ರ ಮತ್ತು ಶನಿಯು ರಾಶಿಯ ಮೂರನೇ ದ್ರೇಕ್ಕಾಣದಲ್ಲಿ ಮತ್ತು ಬುಧ-ರಾಹುಗಳು ತಮ್ಮ ಚಾರದ ರಾಶಿಯಲ್ಲಿ ಪ್ರಾರಂಭದಿಂದ ಅಂತ್ಯದ ವರೇಗೆ ಸರ್ವಕಾಲದಲ್ಲಿಯೂ ಫಲಾಫಲಗಳನ್ನು ನೀಡುತ್ತಾರೆ.

ನಕ್ಷತ್ರಗೋಚರ

ರೇಖಾ: ಸಪ್ತಸಮಾಲಿಖೇದುಪರಿಗಾಸ್ತಿರ್ಯಕ್ತಥೈವ ಕ್ರಮಾದೀಶಾದಗ್ನಿಭಮಾದಿ- ತೋSಪಿ ಗಣಯೇದಾದಿತ್ಯಭಸ್ಯಾವಧಿ। ವೇಧಾಜನ್ಮದಿನೇ ಮೃತಿರ್ಭಯಮಥಾಧಾನಾ- ಖ್ಯನಕ್ಷತ್ರಕೇ ಕರ್ಮಣ್ಯರ್ಥವಿನಾಶನಂ ಖಲು ರವಿರ್ದದ್ಯಾತ್ಸಪಾಪೋ ಮೃತಿಮ್ ॥೨೬॥

ಸಪ್ತಶಲಾಕಾ:- ಪಶ್ಚಿಮದಿಂದ ಪೂರ್ವಕ್ಕೆ 7ಗೆರೆಗಳನ್ನು ಎಳೆದು, ಅವುಗಳನ್ನು ಭೇದಿಸುವಂತೆ ಉತ್ತರದಿಂದ ದಕ್ಷಿಣಕ್ಕೆ 7 ಗೆರೆಗಳನ್ನು ಎಳೆಯಬೇಕು. ಲಭಿಸಿದ 28 ಕೋಣೆಗಳ ತುದಿಯಲ್ಲಿ ಈಶಾನ್ಯದಿಂದ 28 ನಕ್ಷತ್ರಗಳನ್ನು (ಅಭಿಜಿನ್ ನಕ್ಷತ್ರ ಕೂಡಿಸಿ) ಕೃತ್ತಿಕಾದಿಯಾಗಿ ಕ್ರಮವಾಗಿ ಬರೆಯಬೇಕು. ಗೋಚರದ ರವಿಸ್ಥಿತನಕ್ಷತ್ರವು ಜನ್ಮನಕ್ಷತ್ರಕ್ಕೆ ವೇಧನಕ್ಷತ್ರವಾದರೆ ಮರಣಭಯ ನೀಡುತ್ತದೆ. ಜನ್ಮ ನಕ್ಷತ್ರದಿಂದ 19ನೇ ನಕ್ಷತ್ರವಾದ ಆಧಾನನಕ್ಷತ್ರಕ್ಕೆ ಈ ವೇಧ ಸಂಭವಿಸಿದರೆ ಭಯ ಮತ್ತು ಮಾನಸಿಕ ಅಶಾಂತಿ ಮತ್ತು ಜನ್ಮನಕ್ಷತ್ರದಿಂದ 10ನೇ ನಕ್ಷತ್ರವಾದ ಕರ್ಮರ್ಕ್ಷ ನಕ್ಷತ್ರಕ್ಕೆ ವೇಧ ಆದರೆ ಧನನಾಶ ಸಂಭವಿಸುತ್ತದೆ. ಈ ಗೋಚರದ ರವಿಗೆ ಪಾಪಗ್ರಹಯುತಿ ಇದ್ದರೆ ಮರಣಸಂಭವಿಸ ಬಹುದು.

ಏವಂ ವಿದ್ಧೇ ಖಚರೈ: ಕ್ರೂರೈರನ್ಯೈರ್ಮರಣಮ್ ।
ಸೌಮ್ಯೈರ್ವಿದ್ಧೇ ನ ಮೃತಿರ್ವಿದ್ಯಾದೇವಂ ಸಕಲಮ್ ॥೨೭॥

ನಕ್ಷತ್ರವೇಧದಲ್ಲಿ ಬರುವ ಮೂರು ನಕ್ಷತ್ರದಲ್ಲಿ ಕ್ರೂರಗ್ರಹರಿಂದ ವೇಧ ಸಂಭವಿಸಿದರೆ ಮರಣ ಸಂಭವಿಸುತ್ತದೆ. ಪಾಪಗ್ರಹರೊಂದಿಗೆ ಶುಭಗ್ರಹರೂ ಇದ್ದರೆ ಮರಣ ಸಂಭವಿಸುವುದಿಲ್ಲ. ರವಿಗೆ ಹೇಳಿದಂತೆ ಅನ್ಯಗ್ರಹರ ವೇಧ ಫಲ ಚಿಂತಿಸಬೇಕು.

ಆಧಾನಕರ್ಮರ್ಕ್ಷವಿಪನ್ನಿಜರ್ಕ್ಷೇ ವೈನಾಶಿಕೇ ಪ್ರತ್ಯರಭೇ ವಧಾಖ್ಯೇ ।
ಪಾಪಗ್ರಹೋ ಮೃತ್ಯುಭಯಂ ವಿದಧ್ಯಾದ್ವೇಧೇ ತಥಾ ಕಾರ್ಯಹರ: ಶುಭಾಖ್ಯೇ ॥೨೮॥

ಜನ್ಮನಕ್ಷತ್ರದಿಂದ 19, 10, 3, 1, 23, 5 ಅಥವಾ 7ನೇ ನಕ್ಷತ್ರವು ಗೋಚರದಲ್ಲಿ ಪಾಪಗ್ರಹರಿಂದ ದೂಷಿತವಾದರೆ ಆಯುರ್ದಾಯದ ಹಾನಿ ಸಂಭವಿಸುತ್ತದೆ. ಶುಭಗ್ರಹರಾದರೆ ವ್ಯಾಪಾರ ವ್ಯವಹಾರದಲ್ಲಿ ಹಾನಿ ಸಂಭವಿಸುತ್ತದೆ.

ಆದಿತ್ಯಸಂಕ್ರಾಂತಿದಿನೇ ಗ್ರಹಾಣಾಂ ಪ್ರವೇಶನೇ ವಾ ಗ್ರಹಣೇ ಚ ಯುದ್ಧೇ ।
ಉಲ್ಕಾನಿಪಾತೇ ಚ ತಥಾದ್ಭುತೇ ಚ ಜನ್ಮತ್ರಯಂ ಸ್ಯಾನ್ಮರಣಾದಿದು:ಖಮ್ ॥೨೯॥

1.ಸಂಕ್ರಮಣ ದಿನ, 2.ಇತರ ಗ್ರಹಗಳು ರಾಶಿ ಪ್ರವೇಶಿಸುವ ದಿನ, 3.ಗ್ರಹಣ ಕಾಲ, 4.ಗ್ರಹಯುದ್ಧ, 5.ಉಲ್ಕಾಪಾತ ಅಥವಾ ಆಕಾಶದಲ್ಲಿ ವಿಚಿತ್ರವಾದ ದೃಷ್ಯ ಕಂಡುಬಂದರೆ, ಆದಿನ ಗೋಚರದ ಚಂದ್ರನು ಜನ್ಮನಕ್ಷತ್ರ (1), ಅನುಜನ್ಮ (10), ತ್ರಿಜನ್ಮ (19) ನಕ್ಷತ್ರದಲ್ಲಿ ಇದ್ದರೆ ಮರಣ ಅಥವಾ ದು:ಖಾದಿಅಶುಭಫಲ ಸಂಭವಿಸುತ್ತದೆ

ಅಸತ್ಫಲ: ಸೌಮ್ಯನಿರೀಕ್ಷಿತೋ ಯ: ಶುಭಪ್ರದಶ್ಚಾಪ್ಯಶುಭೇಕ್ಷಿತಶ್ಚ ।
ದ್ವೌ ನಿಷ್ಫಲೌ ದ್ವಾವಪಿ ಖೇಚರೇಂದ್ರೌ ಯ: ಶತ್ರುಣಾ ಸ್ವೇನ ವಿಲೋಕಿತಶ್ಚ ॥೩೦॥

1,ಗೋಚರದಲ್ಲಿ ಅಶುಭಫಲ ಸೂಚಿಸುವ ಗ್ರಹನು ಶುಭದೃಷ್ಟನಾದರೆ, ಅಶುಭ ಫಲ ನೀಡುವುದಿಲ್ಲ. 2.ಶುಭಫಲ ನೀಡುವ ಗೋಚರದ ಗ್ರಹನು ಪಾಪಗ್ರಹನಿಂದ ನೋಡಲ್ಪಟ್ಟರೆ ಶುಭಫಲ ನೀಡುವುದಿಲ್ಲ. ಹಾಗೆಯೇ ಶತ್ರುಗ್ರಹರಿಂದ ನೋಡಲ್ಪಟ್ಟರೆ ಫಲಾಫಲಹಾನಿ ಸಂಭವಿಸುತ್ತದೆ.

ಅನಿಷ್ಟಭಾವಸ್ಥಿತಖೇಚರೇಂದ್ರ: ಸ್ವೋಚ್ಚಸ್ವಗೇಹೋಪಗತೋ ಯದಿ ಸ್ಯಾತ್ ।
ನ ದೋಷಕೃಚ್ಚೋತ್ತಮಭಾವಗಶ್ಚೇತ್ ಪೂರ್ಣಂ ಫಲಂ ಯಚ್ಛತಿ ಗೋಚರೇಷು ॥೩೧॥

1.ಅಶುಭಭಾವದಲ್ಲಿರುವ ಗ್ರಹನು ಉಚ್ಚ ಅಥವಾ ಸ್ವಕ್ಷೇತ್ರಗತನಾದರೆ ದೋಷವನ್ನು ನೀಡುವುದಿಲ್ಲ. 2. ಶುಭಭಾವದಲ್ಲಿರುವ ಗ್ರಹನು ಉಚ್ಚ ಅಥವಾ ಸ್ವಕ್ಷೇತ್ರಗತನಾದರೆ ಪೂರ್ಣ ಶುಭಫಲಗಳನ್ನು ತನ್ನಚಾರದಲ್ಲಿ ನೀಡುತ್ತಾನೆ.

ಗ್ರಹೇಶ್ವರಾಸ್ತೇ ಶುಭಗೋಚರಸ್ಥಾ ನೀಚಾರಿಮೌಢ್ಯಂ ಸಮುಪಾಶ್ರಿತಾಶ್ಚೇತ್ ।
ತೇ ನಿಷ್ಫಲಾ: ಕಿಂತ್ವಶುಭಾಂಕಸಂಸ್ಥಾ: ಕಷ್ಟಂ ಫಲಂ ಸಂವಿದಧತ್ಯನಲ್ಪಮ್ ॥೩೨॥

1.ಗೋಚರದ ಗ್ರಹರು ಶುಭಫಲ ನೀಡುವ ಸ್ಥಾನದಲ್ಲಿ ಸಂಚರಿಸುವಾಗ ಆ ಭಾವವು ನೀಚ, ಶತ್ರುಕ್ಷೇತ್ರ, ಅಥವಾ ಗ್ರಹನು ಅಸ್ತನಾದರೆ ಶುಭಫಲನಾಶ ಆಗುತ್ತದೆ. 2.ಗೋಚರದ ಗ್ರಹನು ಅಶುಭಫಲ ನೀಡುವ ಸ್ಥಾನದಲ್ಲಿ ಸಂಚರಿಸುವಾಗ ಅಸ್ತ, ನೀಚ ಅಥವಾ ಶತ್ರುಕ್ಷೇತ್ರಗತನಾದರೆ ಅಧಿಕ ಅಶುಭಫಲ ನೀಡುತ್ತಾನೆ.

ದ್ವಾದಶಾಷ್ಟಮಜನ್ಮಸ್ಥಾ: ಶನ್ಯರ್ಕಾಂಗಾರಕಾ ಗುರು: ।
ಕುರ್ವಂತಿ ಪ್ರಾಣಸಂದೇಹಂ ಸ್ಥಾನಭ್ರಂಶಂ ಧನಕ್ಷಯಮ್ ॥೩೩॥

ಶನಿ, ರವಿ, ಕುಜ ಮತ್ತು ಗುರುವು ಗೋಚರದಲ್ಲಿ ಜನ್ಮರಾಶಿಯಿಂದ ದ್ವಾದಶ, ಅಷ್ಟಮ, ಜನ್ಮರಾಶಿಯಲ್ಲಿ ಸಂಚರಿಸುವಾಗ ಜೀವಕ್ಕೆ ಅಪಾಯ, ಸ್ಥಾನನಾಶ ಅಥವಾ ಧನಕ್ಷಯ ನೀಡುತ್ತಾರೆ.

ಚಂದ್ರೋಷ್ಟಮೇ ಚ ಧರಣೀತನಯ: ಕಲತ್ರೇ ರಾಹು: ಶುಭೇ ಕವಿರರೌ ಚ ಗುರುಸ್ತೃತೀಯೇ । ಅರ್ಕ: ಸುತೇಽರ್ಕಿರುದಯೇ ಚ ಬುಧಶ್ಚತುರ್ಥೇ ಮಾನಾರ್ಥಹಾನಿಮರಣಾನಿ ವದೇದ್ವಿಶೇಷಾತ್ ॥೩೪॥

ಗೋಚರದಲ್ಲಿ ಜನ್ಮರಾಶಿಯಿಂದ ಅಷ್ಟಮದ ಚಂದ್ರ, ಸಪ್ತಮದ ಕುಜ, ನವಮದ ರಾಹು, ಷಷ್ಠದ ಶುಕ್ರ, ತೃತೀಯದ ಗುರು, ಪಂಚಮದ ರವಿ, ಜನ್ಮರಾಶಿಯ ಶನಿ ಮತ್ತು ಚತುರ್ಥದ ಬುಧನು ತಮ್ಮ ಚಾರಕಾಲದಲ್ಲಿ ಮಾನಹಾನಿ, ಧನನಾಶ, ಜೀವಕ್ಕೆ ಅಪಾಯ ನೀಡುತ್ತಾರೆ.

ವಕ್ತ್ರೇ ಕ್ಷ್ಮಾ ಮೂರ್ಧ್ನಿ ಚತ್ವಾರ್ಯುರಸಿ ಚ ಚತುರ: ಸವ್ಯಹಸ್ತೇ ಚತುಷ್ಕಂ ಪಾದೇ ಷಡ್ವಾಮಹಸ್ತೇ ಚತುರಥ ನಯನೇ ದ್ವೇ ಚ ಗುಹ್ಯೇ ದ್ವಯಂ ಚ । ಭಾನುರ್ನಾಶಂ ವಿಭೂತಿಂ ವಿಜಯಮಥ ಧನಂ ನಿರ್ಧನಂ ದೇಹಪೀಡಾಂ ಲಾಭಂ ಮೃತ್ಯುಂ ಚ ಚಕ್ರೇ ಜನಯತಿ ವಿವಿಧಾನ್ ಜನ್ಮಭಾದ್ದೇಹಸಂಸ್ಥ: ॥೩೫॥

ಗೋಚರ ರವಿಯಿಂದ ಸೂಚಿತ ಅಂಗವಿಭಾಗ

ರವಿಯು ಗೋಚರದಲ್ಲಿ (೧) 1ನೇ ನಕ್ಷತ್ರ ಚಾರ (ಜನ್ಮನಕ್ಷತ್ರ) ಚಾರದಲ್ಲಿ ಮುಖ (೨) 2, 3, 4 ಮತ್ತು 5ನೇ ನಕ್ಷತ್ರ–ತಲೆ, (೩) 6, 7, 8 ಮತ್ತು 9ನೇ ನಕ್ಷತ್ರ-ಎದೆ, (೪) 10, 11, 12 ಮತ್ತು 13ನೇ ನಕ್ಷತ್ರ-ಬಲ ಕೈ, (೫) 14, 15, 16,

17, 18 ಮತ್ತು 19ನೇ ನಕ್ಷತ್ರ–ಎರಡು ಪಾದಗಳು, (೬) 20, 21, 22 ಮತ್ತು 23ನೇ ನಕ್ಷತ್ರ-ಎಡಕೈ, (೭) 24 ಮತ್ತು 25ನೇ ನಕ್ಷತ್ರ 2 ಕಣ್ಣುಗಳು, (೮) 26 ಮತ್ತು 27ನೇ ನಕ್ಷತ್ರ ಗುಹ್ಯಸ್ಥಾನ, ಇವುಗಳನ್ನು ಸೂಚಿಸುತ್ತಾನೆ. ರವಿಯು ಈ 8 ವಿಭಾಗದಲ್ಲಿ ಸಂಚರಿಸುವಾಗ ನೀಡುವ ಫಲಗಳನ್ನು ಕ್ರಮವಾಗಿ ಹೇಳುತ್ತಾನೆ. ೧. ನಾಶ. ೨.ಧನಪ್ರಾಪ್ತಿ, ೩.ವಿಜಯ, ೪.ಧನಲಾಭ, ೫.ಧನನಷ್ಟ, ೬.ದೇಹಪೀಡೆ, ೭.ಲಾಭ, ೮.ಪ್ರಾಣಾಪಾಯ ಸಂಭವಿಸುತ್ತದೆ.

ಶೀತಾಂಶೋರ್ವದನೇ ದ್ವಯೋರತಿಭಯಂ ಕ್ಷೇಮಂ ಶಿರಸ್ಯಂಬುಧೌ ಪೃಷ್ಠೇ ಶತ್ರುಜಯಂ ದ್ವಯೋರ್ನಯನಯೋರ್ನೇತ್ರೇ ಧನಂ ಜನ್ಮಭಾತ್ । ಪಂಚಸ್ವಾತ್ಮಸುಖಂ ಹೃದಿತ್ರಿಷು ಕರೇ ವಾಮೇ ವಿರೋಧಂ ಕ್ರಮಾತ್ ಪಾದೌ ಷಟ್ಸು ವಿದೇಶತಾಂ ಜನಯತಿ ತ್ರಿಷ್ವರ್ಥಲಾಭಂ ಕರೇ ॥೩೬॥

ಗೋಚರದ ಚಂದ್ರನಿಂದ ಸೂಚಿತ ಅಂಗವಿಭಾಗ

ನಕ್ಷತ್ರಗಳು	ಜನ್ಮನಕ್ಷತ್ರದಿಂದ ನಕ್ಷತ್ರಗಳು	ಅಂಗವಿಭಾಗ	ಚಾರಪರಿಣಾಮ
2	1 ಮತ್ತು 2	ಮುಖ	ಅತೀ ಭಯ
4	3 ರಿಂದ 6	ತಲೆ	ಕ್ಷೇಮ
2	7 ಮತ್ತು 8	ಬೆನ್ನು	ಶತ್ರುನಾಶ
2	9 ಮತ್ತು 10	2 ಕಣ್ಣುಗಳು	ಧನಾಗಮ
5	11 ರಿಂದ 15	ಎದೆ	ಆತ್ಮಸುಖ
3	16 ರಿಂದ 18	ಎಡಕೈ	ವಿರೋಧ
6	19 ರಿಂದ 24	2 ಪಾದಗಳು	ವಿದೇಶಯಾನ
3	25 ರಿಂದ 27	ಬಲಕೈ	ಧನಲಾಭ

ಕುಜಚಾರದಿಂದ ಅಂಗವಿಭಾಗ ಫಲ

ವಕ್ತ್ರೇ ದ್ವೇ ಮರಣಂ ಕರೋತ್ಯವನಿಜಃ ಷಟ್ ಪಾದಯೋರ್ವಿಗ್ರಹಂ ಕ್ರೋಡೇ ತ್ರೀಣಿ ಜಯಂ ಚತುರ್ವಿಧನತಾಂ ವಾಮೇ ಕರೇ ಮಸ್ತಕೇ । ದ್ವೇ ಲಾಭಂ ಚತುರಾಸನೇಽಧಿಕಭಯಂ ಕ್ಷೇಮಂಕರೇ ದಕ್ಷಿಣೇ ವಾರ್ದ್ಧಿರ್ದ್ವೇ ನಯನೇ ವಿದೇಶಗಮನಂ ಚಕ್ರೇ ಸ್ವಜನ್ಮರ್ಕ್ಷತಃ ॥೩೭॥ ಮೂರ್ಧ್ನಿ ತ್ರೀಣಿ ಮುಖೇ ತ್ರಯಂ ಚ ಕರಯೋಃ ಷಟ್ ಪಂಚ ಕುಕ್ಷೌ ತಥಾ ಲಿಂಗೇ ದ್ವೇ ದ್ವಿಚತುಷ್ಟಯಂ ಚರಣಯೋಃ ಪ್ರಾಪ್ತೇಽಮರೇಂದ್ರಾರ್ಚಿತಃ । ಶೋಕಂ ಲಾಭಮನರ್ಥಮರ್ಥನಿಚಯಂ ನಾಶಂ ಪ್ರತಿಷ್ಠಾಂ ತಥಾ ದದ್ಯಾದಾತ್ಮದಿನಾತ್ತಥೈವ ಭೃಗುಜಸ್ತದ್ವದ್ಭುಧೋಽಪಿ ಕ್ರಮಾತ್ ॥೩೮॥

ನಕ್ಷತ್ರಗಳು	ಜನ್ಮನಕ್ಷತ್ರದಿಂದ ನಕ್ಷತ್ರಗಳು	ಅಂಗವಿಭಾಗ	ಚಾರಪರಿಣಾಮ
2	1 ಮತ್ತು 2	ಮುಖ	ಜೀವಕ್ಕೆ ಹಾನಿ
6	3 ರಿಂದ 8	2 ಪಾದಗಳು	ವಿರೋಧ

3	9 ರಿಂದ 11	ಎದೆ	ಜಯ
4	12 ರಿಂದ 15	ಎಡಕೈ	ನಿರ್ಧನತೆ
2	16 ಮತ್ತು 17	ತಲೆ	ಲಾಭ
4	18 ರಿಂದ 21	ಮುಖ	ಅಧಿಕ ಭಯ
4	22 ರಿಂದ 25	ಬಲಕೈ	ಸುಖ
2	26 ಮತ್ತು 27	2 ಕಣ್ಣುಗಳು	ವಿದೇಶ ಗಮನ

ಬುಧ, ಗುರು ಮತ್ತು ಶುಕ್ರ

3	1 ರಿಂದ 3	ತಲೆ	ದು:ಖ
3	4 ರಿಂದ 6	ಮುಖ	ಲಾಭ
6	7 ರಿಂದ 12	2 ಕೈಗಳು	ಅನರ್ಥ
5	13 ರಿಂದ 17	ಉದರ	ಧನಲಾಭ
2	18 ಮತ್ತು 19	ಗುಹ್ಯಸ್ಥಾನ	ನಾಶ
8	20 ರಿಂದ 27	ಎರಡು ಪಾದಗಳು	ಪ್ರತಿಷ್ಠೆ

ಶನಿ, ರಾಹು ಮತ್ತು ಕೇತು

ಭೂವೇದವಹ್ನಿಗುಣವೇದಶರಾಗ್ನಿನೇತ್ರದಸ್ರಂ ಚ ವಕ್ತ್ರಕರಪಾದಪದೇಷು ಹಸ್ತೇ । ಕುಕ್ಷೌ ಚ ಮೂರ್ಧ್ನಿ ನಯನದ್ವಯ ಪೃಷ್ಠಭಾಗೇ ನ್ಯಸ್ಯ ಕ್ರಮೇಣ ಶನಿಸಂಯುತ-ಭಾನ್ನಿಜರ್ಕ್ಷಾತ್ ॥೭೯॥ ದು:ಖಂ ಚ ಸೌಖ್ಯಂ ಗಮನಂ ಚ ನಾಶಂ ಲಾಭಂ ಸ್ವಭೋ-ಗಂ ಸುಖ ಸೌಖ್ಯಮೃತ್ಯೂನ್ । ವಕ್ತ್ರಕ್ರಮಾದಾಹ ಫಲಾನಿ ಮಂದಸ್ಯೈವಂ ತಮ: ಖೇಚರಯೋರ್ವದಂತು ॥೮೦॥

1	ಜನ್ಮನಕ್ಷತ್ರ	ಮುಖ	ದು:ಖ
4	2 ರಿಂದ 5	ಬಲಕೈ	ಸುಖ
3	6 ರಿಂದ 8	ಬಲಕಾಲು	ಪ್ರಯಾಣ
3	9 ರಿಂದ 11	ಎಡಕಾಲು	ನಷ್ಟ
4	12 ರಿಂದ 15	ಎಡಕೈ	ಲಾಭ
5	16 ರಿಂದ 20	ಉದರ	ಭೋಗ
3	21 ರಿಂದ 23	ತಲೆ	ಸುಖ
2	24 ಮತ್ತು 25	ಕಣ್ಣುಗಳು	ಸುಖ
2	26 ಮತ್ತು 27	ಬೆನ್ನು	ಜೀವಕ್ಕೆ ಅಪಾಯ

ಯತ್ರಾಷ್ಟವರ್ಗೇಽಧಿಕಬಿಂದವ: ಸ್ಯುಸ್ತತ್ರ ಸ್ಥಿತೋ ಗೋಚರತೋ ಗ್ರಹೇಂದ್ರ: । ತದ್ವತ್ಫಲಂ ಪ್ರಾಹ ಶುಭಂ ವ್ಯಯಾರಿರಂಧ್ರಸ್ಥಿತೋ ವಾಽಪಿ ಶುಭಂ ವಿಧತ್ತೇ॥೮೧॥

ಅಷ್ಟಕವರ್ಗದಲ್ಲಿ ಅಧಿಕ ಬಿಂದು ಇರುವ ರಾಶಿಯಲ್ಲಿ ಚಾರದಗ್ರಹರು ಸಂಚರಿಸುವಾಗ ಶುಭಫಲಗಳನ್ನೇ ನೀಡುತ್ತಾರೆ. ಈ ರಾಶಿಯು ಷಷ್ಠ, ಅಷ್ಟಮ ಅಥವಾ ದ್ವಾದಶವಾದರೂ ಶುಭಫಲಗಳೇ ಲಭಿಸುತ್ತವೆ.

ಲತ್ತಾಫಲ

ರವೇರ್ದ್ವಾದಶನಕ್ಷತ್ರಂ ಭೂಸುತಸ್ಯ ತೃತೀಯಕಮ್ । ಗುರೋಃ ಷಟ್‌ತಾರಕಂ ಚೈವ ಶನೇರಷ್ಟಮತಾರಕಮ್ ॥೪೨॥ ಏತೇಷಾಂ ಚ ಪುರೋಲತ್ತಾ ಪೃಷ್ಠಲತ್ತಾಃ ಪ್ರಕೀರ್ತಿತಾಃ । ಶುಕ್ರಸ್ಯ ಪಂಚಮಂ ತಾರಮ್ ಚಂದ್ರಜಸ್ಯ ತು ಸಪ್ತಮಮ್ ॥ ರಾಹೋಸ್ತು ನವಮಂ ಚೈವ ದ್ವಾವಿಂಶಂ ಭಂ ಹಿಮದ್ಯುತೇಃ । ಗ್ರಹಸ್ಥಿತರ್ಕ್ಷಾದ್ಗ-ಣಯೇಲ್ಲತ್ತಾಯಾಂ ಜನ್ಮಭೇ ವ್ಯಥಾ ॥೪೪॥

ಪುರೋಲತ್ತಾ: (1).ಚಾರದ ಸೂರ್ಯಸ್ಥಿತ ನಕ್ಷತ್ರದಿಂದ 12ನೇ ನಕ್ಷತ್ರ, (2).ಕುಜನಿಂದ 3ನೇ, (3).ಗುರುವಿನಿಂದ 6ನೇ, (4).ಶನಿಯಿಂದ 8ನೇ ನಕ್ಷತ್ರ ಪುರೋಲತ್ತೆ ಆಗುತ್ತದೆ. ಉದಾ: ಗೋಚರದ ಸೂರ್ಯನು ಪೂರ್ವಾಷಾಢಾ ನಕ್ಷತ್ರದಲ್ಲಿ ಇದ್ದರೆ, ಅಲ್ಲಿಂದ 12ನೇ ನಕ್ಷತ್ರವಾದ **ರೋಹಿಣಿ** ನಕ್ಷತ್ರವು ಪುರೋಲತ್ತೆ ಆಗುತ್ತದೆ. ಈ ನಕ್ಷತ್ರವು ಜನ್ಮನಕ್ಷತ್ರವಾದರೆ ದುಃಖ ಅನುಭವಿಸಬೇಕಾಗುತ್ತದೆ.

ಪೃಷ್ಠಲತ್ತಾ:- (1).ಚಾರದ ಶುಕ್ರಸ್ಥಿತ ನಕ್ಷತ್ರದಿಂದ 5ನೇ ನಕ್ಷತ್ರವು. (2).ಬುಧನಿಂದ 7ನೇ ನಕ್ಷತ್ರ, (3).ರಾಹುವಿನಿಂದ 9ನೇ ನಕ್ಷತ್ರ, (4).ಚಂದ್ರನಿಂದ 22ನೇ ನಕ್ಷತ್ರವು ಪೃಷ್ಠಲತ್ತೇ ಆಗುತ್ತದೆ. ಪೃಷ್ಠಲತ್ತೆಯನ್ನು ವ್ಯುತ್ಕ್ರಮವಾಗಿ ಗಣಿಸಬೇಕು. ಉದಾ: ಪುಷ್ಯಾನಕ್ಷತ್ರದಲ್ಲಿ ಶುಕ್ರನಿದ್ದರೆ ಅಲ್ಲಿಂದ ವ್ಯುತ್ಕಮವಾಗಿ 5ನೇ ನಕ್ಷತ್ರವಾದ ರೋಹಿಣಿ ನಕ್ಷತ್ರವು ಪೃಷ್ಠಲತ್ತೆ ಆಗುತ್ತದೆ. ಈ ನಕ್ಷತ್ರವು ಜನ್ಮನಕ್ಷತ್ರವಾದರೆ ದುಃಖ ಅನುಭವಿಸಬೇಕಾಗುತ್ತದೆ.

ರವೇಃ ಸರ್ವಾರ್ಥಹಾನಿಃ ಸ್ಯಾತ್ತಮಸೋದುಃಖಮುಚ್ಯತೇ। ಮರಣಂ ಜೀವಲತ್ತಾ-ಯಾಂ ಬಂಧುನಾಶೋ ಭಯಾವಹಃ ॥೪೫॥ ಶುಕ್ರಸ್ಯ ಕಲಹೋ ಭ್ರಂಶ ಅನರ್ಥಃ ಶಶಿಜಸ್ಯ ತು । ಚಂದ್ರಸ್ಯ ತು ಮಹಾಹಾನಿರ್ಲತ್ತಾಮಾತ್ರಫಲಂ ಭವೇತ್ ॥೪೬॥

ಲತ್ತಾಫಲ:- ಸೂರ್ಯನ ಲತ್ತೆಯಲ್ಲಿ ಸಕಲ ಧನ-ಸಂಪತ್ತಿನ ಹಾನಿ, ರಾಹು-ದುಃಖ, ಗುರು-ಮರಣ, ಬಂಧುನಾಶ, ಮತ್ತು ಭಯ, ಶುಕ್ರ–ಕಲಹ, ಬುಧ-ಸ್ಥಾನಚ್ಯುತಿ, ಅಶುಭ ಅಥವಾ ಅನರ್ಥಕರ ಘಟನೆ ಮತ್ತು ಚಂದ್ರನ ಲತ್ತೆಯಲ್ಲಿ ಅಧಿಕ ಹಾನಿ ಸಂಭವಿಸುತ್ತದೆ.

ಸರ್ವತ್ರ ಲತ್ತಾಸಾಙ್ಕರ್ಯೇ ದ್ವಿಗುಣತ್ರಿಗುಣಾದಿಕಮ್ ।
ವದೇದ್ದೋಷಫಲಂ ನೃಣಾಂ ಗ್ರಹಾಲ್ಲತ್ತಾಧಿಕಕ್ರಮಾತ್ ॥೪೭॥

ಜನ್ಮನಕ್ಷತ್ರಕ್ಕೆ ಚಾರದ ಗ್ರಹರಿಂದ ಏಕಕಾಲದಲ್ಲಿ ಎರಡು ಅಥವಾ ಹೆಚ್ಚುಲತ್ತೆಗಳು ಸಂಭವಿಸಿದರೆ, ಲತ್ತಾಸಂಖ್ಯೆಯಷ್ಟು ಅಧಿಕ ಅಶುಭಫಲಗಳು ಸಂಭವಿಸುತ್ತದೆ.

ಸರ್ವತೋ ಭದ್ರ ಚಕ್ರೋಕ್ತ ಶುಭವೇಧಾಃ ಶುಭಾವಹಾಃ ।
ಪಾಪವೇಧಾ ದುಃಖತರಾ ಗೋಚರೇತಾಶ್ಚ ಚಿಂತಯೇತ್ ॥೪೮॥

ಸರ್ವತೋಭದ್ರ ಚಕ್ರದಲ್ಲಿ ಶುಭಗ್ರಹರಿಂದ ಸಂಭವಿಸುವ ವೇಧವು ಶುಭಫಲವನ್ನು ಪಾಪಗ್ರಹರಿಂದ ಸಂಭವಿಸುವ ವೇಧವು ಅಶುಭಫಲವನ್ನು ಗೋಚರವಲ್ಲಿ ನೀಡುತ್ತದೆ.

ದಶಾಪಹಾರಾಷ್ಟಕವರ್ಗಗೋಚರೇ ಗ್ರಹೇಷು ನೃಣಾಂ ವಿಷಮಸ್ಥಿತೇಷ್ವಪಿ ।
ಜಪೇಚ್ಚ ತತ್ಪ್ರೀತಿಕರೈ ಸುಕರ್ಮಭಿಃ ಕರೋತಿ ಶಾಂತಿಂ ವ್ರತದಾನವಂದನೈಃ ॥೪೯॥

ದಶಾಭುಕ್ತಿ, ಅಷ್ಟಕವರ್ಗ ಅಥವಾ ಗೋಚರದ ಗ್ರಹರು ಅಶುಭಫಲವನ್ನು ಸೂಚಿಸುವುದಾದರೆ, ಆ ಗ್ರಹನನ್ನು, ಜಪ, ಹೋಮ, ಪ್ರಾರ್ಥನೆ, ದಾನ ಇತ್ಯಾದಿಗಳಿಂದ ಆರಾಧಿಸಿದರೆ ಅಶುಭಫಲನಾಶ ಸಂಭವಿಸುತ್ತದೆ.

ಅಹಿಂಸಕಸ್ಯ ದಾಂತಸ್ಯ ಧರ್ಮಾರ್ಜಿತಧನಸ್ಯ ಚ ।
ಸರ್ವದಾ ನಿಯಮಸ್ಥಸ್ಯ ಸದಾ ಸಾನುಗ್ರಹಾ ಗ್ರಹಾಃ ॥೫೦॥

ಅಹಿಂಸೆ, ಸಂಯಮ, ನ್ಯಾಯ ಮತ್ತು ಧರ್ಮಮಾರ್ಗ ಅನುಸರಿಸುವವನು, ಶಾಸ್ತ್ರದಲ್ಲಿ ಹೇಳಿದ ನಿಯಮವನ್ನು ಅನುಸರಿಸುವವನು ಸದಾ ಗ್ರಹರ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

ಪ್ರವ್ರಜ್ಯಾಯೋಗ ಅಧ್ಯಾಯ ೨೭

ಗ್ರಹೈಶ್ಚತುರ್ಭಿಃ ಸಹಿತೇ ಖನಾಥೇ ತ್ರಿಕೋಣಗೈಃ ಕೇಂದ್ರಗತೈಸ್ತು ಮುಕ್ತಃ ।
ಲಗ್ನೇ ಗೃಹಾಂತೇ ಸತಿ ಸೌಮ್ಯಭಾಗೇ ಕೇಂದ್ರೇ ಗುರೌ ಕೋಣಗತೇ ಚ ಮುಕ್ತಃ ॥೧॥

1.ನಾಲ್ಕು ಗ್ರಹರು ಕೇಂದ್ರ (1, 4, 7, 10.) ಅಥವಾ ತ್ರಿಕೋಣದಲ್ಲಿ (5,9.) ಇದ್ದರೆ ಜಾತಕನಿಗೆ ಮೋಕ್ಷಯೋಗ ಆಗುತ್ತದೆ. 2.ದಶಮಾಧಿಪತಿಯು ನಾಲ್ಕು ಗ್ರಹರಯುತಿಯಲ್ಲಿ ಕೇಂದ್ರ-ತ್ರಿಕೋಣದಲ್ಲಿ ಇದ್ದರೆ ಮೋಕ್ಷಯೋಗ. 3.ಶುಭಗ್ರಹರ ರಾಶಿಯ ಅಂತ್ಯಭಾಗದಲ್ಲಿ ಲಗ್ನ ಇರಬೇಕು ಮತ್ತು ಗುರುವು ಕೇಂದ್ರ ಅಥವಾ ತ್ರಿಕೋಣದಲ್ಲಿದ್ದರೆ ಮೋಕ್ಷಯೋಗ ಆಗುತ್ತದೆ.

ಏಕಸ್ಥೈಶ್ಚತುರಾದಿಭಿರ್ಬಲಯುತೈರ್ಜಾತಾಃ ಪೃಥಗ್ವೀರ್ಯಗೈಃ ಶಾಕ್ಯಾಜೀವಕಭಿಕ್ಷು-
ವೃದ್ಧಚರಕಾ ನಿರ್ಗ್ರಂಥಿವನ್ಯಾಶನಾಃ । ಮಾಹೇಯಜ್ಞಗುರುಕ್ಷಪಾಕರಸಿತಪ್ರಾಭಾಕ-
ರೀನೈಃ ಕ್ರಮಾತ್ ಪ್ರವ್ರಜ್ಯಾ ಬಲಿಭಿಃ ಸಮಾಃ ಪರಜಿತೈಸ್ತತ್ಸ್ವಾಮಿಭಿಃ ಪ್ರಚ್ಯುತಿಃ ॥

ವರಾಹಮತ:- ಒಂದುರಾಶಿಯಲ್ಲಿ ನಾಲ್ಕು ಅಥವಾ ಹೆಚ್ಚುಗ್ರಹರು ಬಲಿಷ್ಠರಾಗಿ ಇದ್ದರೆ ಸನ್ಯಾಸಯೋಗ ಆಗುತ್ತದೆ. ಈ ಗ್ರಹಯುತಿಯಲ್ಲಿ ಬಲಿಷ್ಠಗ್ರಹನು ಕುಜನಾದರೆ– ಶಾಕ್ಯ (ಬೌದ್ಧದೀಕ್ಷೆ), ಬುಧ–ಆಜೀವಕ (ವೈಷ್ಣವ ದೀಕ್ಷೆ), ಗುರು ಭಿಕ್ಷು (ಅದ್ವೈತ ಮತ), ಚಂದ್ರ-ವೃದ್ಧ (ಕಾಪಾಲಿಕ–ಶೈವದೀಕ್ಷೆ), ಜಟಾಧಾರಿಯಾದ ಬೋಧಕನು, ಶುಕ್ರ-ಚರಕ (ಯೋಗಾಭ್ಯಾಸ, ಚಿಕಿತ್ಸಾನಿಪುಣ), ಶನಿ-ನಿಗ್ರಂಥ (ದಿಗಂಬರ ದೀಕ್ಷೆ, ಅವಧೂತ), ರವಿ–ವನ್ಯಾಶನ (ವಾನಪ್ರಸ್ಥ, ವನವಾಸಿ), ಈ ರೀತಿ ಸಪ್ತಗ್ರಹರಿಂದ ಏಳು ವಿಧದ ಸಂನ್ಯಾಸ ಆಗುತ್ತದೆ. ಬಲಿಷ್ಠಗ್ರಹತುಲ್ಯ ದೀಕ್ಷೆ ಸಂಭವಿಸುತ್ತದೆ. ಈ ಯೋಗದಲ್ಲಿ ಹೆಚ್ಚು ಗ್ರಹರು ಬಲಿಷ್ಠರಾಗಿದ್ದರೆ ಆಯಾಗ್ರಹರಿಗೆ ಹೇಳಿದ ಸಂನ್ಯಾಸವನ್ನು ತಮ್ಮ ದಶಾಕಾಲದಲ್ಲಿ ನೀಡುತ್ತಾರೆ. ಒಬ್ಬ ಗ್ರಹನು ಬಲಿಷ್ಠನಾದರೆ ಆ ಗ್ರಹನಿಗೆ ಹೇಳಿದ ಸನ್ಯಾಸವನ್ನೇ ಜೀವಮಾನ ಪರ್ಯಂತ್ರ ನಿರ್ವಹಿಸುತ್ತಾನೆ. ಎಲ್ಲಗ್ರಹರು ಬಲಹೀನರಾದದರೆ ಪ್ರವೃಜ್ಯಾಯೋಗ ಅಥವಾ ದೀಕ್ಷೆ ಸಂಭವಿಸುವುದಿಲ್ಲ. ಗ್ರಹಯುದ್ಧದಲ್ಲಿ ಸೋತ ಗ್ರಹನಿದ್ದರೆ ಅವನು ದೀಕ್ಷೆ ನೀಡಿದರೂ ಸಂನ್ಯಾಸಯೋಗಭಂಗ ಆಗುತ್ತದೆ.

ರವಿಲುಪ್ತಕರೈರದೀಕ್ಷಿತಾ ಬಲಿಭಿಸ್ತದ್ಗತಭಕ್ತಯೋ ನರಾ: ।
ಅಭಿಯಾಚಿತಮಾತ್ರದೀಕ್ಷಿತಾ ನಿಹತೈರನ್ಯನಿರೀಕ್ಷಿತೈರಪಿ ॥

ಸನ್ಯಾಸಯೋಗ ನೀಡುವ ಬಲಿಷ್ಠಗ್ರಹರು ಅಸ್ತಂಗತರಾದರೆ ಸಂನ್ಯಾಸ ದೀಕ್ಷೆ ಲಭಿಸುವುದಿಲ್ಲ. ಆದರೆ ಸಂನ್ಯಾಸಿಗಳಲ್ಲಿ ಭಕ್ತಿ, ಪ್ರೇಮ ಇರುತ್ತದೆ. ಗ್ರಹಯುದ್ಧದಲ್ಲಿ ಸೋತಗ್ರಹನು, ಇತರ ಗ್ರಹನಿಂದ ನೋಡಲ್ಪಟ್ಟರೆ ಸಂನ್ಯಾಸಿಯಾಗುವ ಆಕಾಂಕ್ಷೆ ಇರುತ್ತದೆ. ಆದರೆ ದೀಕ್ಷೆ ಲಭಿಸುವುದಿಲ್ಲ. ಅಸ್ತರಾಗದ ಅಥವಾ ಗ್ರಹಯುದ್ಧದಲ್ಲಿ ಜಯ ಹೊಂದಿದ ಬಲಿಷ್ಠಗ್ರಹದಶಾಕಾಲದಲ್ಲಿ ದೀಕ್ಷೆ ಲಭಿಸುತ್ತದೆ. ಅಸ್ತ ಮತ್ತು ಪರಾಜಿತ ಗ್ರಹರ ದಶಾಕಾಲದಲ್ಲಿ ಸಂನ್ಯಾಸ ತ್ಯಜಿಸಲ್ಪಡುತ್ತದೆ.

ಏಕರ್ಕ್ಷಸಂಸ್ಥೈಶ್ಚತುರಾದಿಕೈಸ್ತು ಗ್ರಹೈರ್ವದೇತ್ತತ್ರ ಬಲಾನ್ವಿತೇನ ।
ಪ್ರವ್ರಜ್ಯಕಾಂ ತತ್ರ ವದಂತಿ ಕೇಚಿತ್ ಕರ್ಮೇಶತುಲ್ಯಾಂ ಸಹಿತೇ ಖನಾಥೇ ॥೨॥

ಜನನಕಾಲದಲ್ಲಿ ನಾಲ್ಕು ಅಥವಾ ಹೆಚ್ಚು ಗ್ರಹರು ಒಂದು ರಾಶಿಯಲ್ಲಿ ಇದ್ದರೆ ಅವರಲ್ಲಿ ಬಲಿಷ್ಠನಾದ ಗ್ರಹನಿಗೆ ತುಲ್ಯ ಸಂನ್ಯಾಸ ಸಂಭವಿಸುತ್ತದೆ. ಈ ಗ್ರಹರಲ್ಲಿ ದಶಮಾಧಿಪನಿದ್ದರೆ, ಅವನು ಸೂಚಿತ ಸಂನ್ಯಾಸ ಲಭಿಸುತ್ತದೆ ಎಂದು ಕೆಲವರ ಮತ ಆಗಿರುತ್ತದೆ.

ಶಶೀ ದೃಗಾಣೇ ರವಿಜಸ್ಯ ಸುಸ್ಥಿತ: ಕುಜಾರ್ಕಿದೃಷ್ಟ: ಪ್ರಕರೋತಿ ತಾಪಸಮ್ ।
ಕುಜಾಂಶಕೇ ವಾ ರವಿಜೇನ ದೃಷ್ಟೋ ನವಾಂಶತುಲ್ಯಾಂ ಕಥಯಂತಿ ತಾಂ ಪುನ: ॥

ಚಂದ್ರನು ಶನಿಯ ದ್ರೇಕ್ಕಾಣದಲ್ಲಿದ್ದು ಕುಜ ಮತ್ತು ಶನಿಯಿಂದ ನೋಡಲ್ಪಟ್ಟರೆ ಜಾತಕನು ತಪಸ್ವಿಯು ಆಗುತ್ತಾನೆ. ಚಂದ್ರನು ಕುಜನ ನವಾಂಶದಲ್ಲಿದ್ದು ಶನಿಯಿಂದ ನೋಡಲ್ಪಟ್ಟರೆ ಜಾತಕನು ಚಂದ್ರಸ್ಥಿತ ನವಾಂಶತುಲ್ಯ(ಕುಜ) ದೀಕ್ಷೆ ಹೊಂದುತ್ತಾನೆ.

ದ್ವಾದಶ ಭಾಗಾತ್ಮಕ ರಾಶಿಚಕ್ರದ 2 ರಾಶಿಗಳ ಅಧಿಪತ್ಯ ಪ್ರಕಾಶಕ ಗ್ರಹರಾದ ಸೂರ್ಯ-ಚಂದ್ರರಿಗೆ, ಮತ್ತು ಕುಜಾದಿ 5ತಾರಾಗ್ರಹರಿಗೆ, ಎರಡೆರಡು ರಾಶಿಯಂತೆ ಉಳಿದ 10 ರಾಶಿಗಳ ಅಧಿಪತ್ಯ ಇದೆ. ರಾಶಿಚಕ್ರದಲ್ಲಿರುವ 36 ದ್ರೇಕ್ಕಾಣಗಳಲ್ಲಿ ಪ್ರಕಾಶಕಗ್ರಹರಿಗೆ ಮೂರು-ಮೂರು ದ್ರೇಕ್ಕಾಣಾಧಿಪತ್ಯ, ಮತ್ತು ಉಳಿದ 30ದ್ರೇಕ್ಕಾಣಗಳ ಅಧಿಪತ್ಯ, ಪ್ರತಿ ಒಬ್ಬನಿಗೆ 6 ದ್ರೇಕ್ಕಾಣದಂತೆ ಕುಜಾದಿ 5ತಾರಾಗ್ರಹರ ಅಧೀನದಲ್ಲಿದೆ. ಕುಂಭ ಮತ್ತು ಮಕರ ರಾಶಿಯ ಮೊದಲನೇ ದ್ರೇಕ್ಕಾಣ, ತುಲಾ ಮತ್ತು ಕನ್ಯಾರಾಶಿಯ ದ್ವಿತೀಯ ದ್ರೇಕ್ಕಾಣ, ಮಿಥುನ ಮತ್ತು ವೃಷಭರಾಶಿಯ ಅಂತ್ಯ ದ್ರೇಕ್ಕಾಣ, ಇವುಗಳ ಅಧಿಪತಿ ಶನಿ ಆಗಿರುತ್ತಾನೆ. ಶನಿಯ ಅಧಿಪತ್ಯದಲ್ಲಿರುವ ಈ ಆರು ದ್ರೇಕ್ಕಾಣದಲ್ಲಿ, ಯಾವುದಾದರೂ ಒಂದು ದ್ರೇಕ್ಕಾಣದಲ್ಲಿ ಚಂದ್ರನಿದ್ದು ಶನಿ ಮತ್ತು ಕುಜನಿಂದ ನೋಡಲ್ಪಡಬೇಕು. ಇದು ಪ್ರವ್ರಜ್ಯಾಯೋಗ ಆಗುತ್ತದೆ.

ಜನ್ಮೇಶೋಽನ್ಯೈರ್ಯದ್ಯದೃಷ್ಟೋಽರ್ಕಪುತ್ರಂ ಪಶ್ಯತ್ಯಾರ್ಕಿರ್ಜನ್ಮಪಂ ವಾ ಬಲೋನಮ್
ದೀಕ್ಷಾಂ ಪ್ರಾಪ್ನೋತ್ಯಾರ್ಕಿದೃಕ್ಕಾಣಸಂಸ್ಥೇ ಭೌಮಾರ್ಕ್ಯಂಶೇ ಸೌರಿದೃಷ್ಟೇ ಚ ಚಂದ್ರೇ ॥

ಶನಿಯ ದ್ರೇಕ್ಕಾಣಗಳು

ರಾಶಿ	ದ್ರೇಕ್ಕಾಣ	ನವಾಂಶ	ನಕ್ಷತ್ರ ಪಾದ	ಶನಿಸ್ಥಿತಿ	ಕುಜಸ್ಥಿತಿ
ಕುಂಭ	1	ತುಲಾ, ವೃಶ್ಚಿಕ, ಧನು.	ಧನಿಷ್ಠಾ-3, 4. ಶತಭೀಷಾ 1.	ವೃಷಭ, ಸಿಂಹ, ಧನು.	ಕರ್ಕ, ಸಿಂಹ, ವೃಶ್ಚಿಕ.
ಮಕರ	1	ಮಕರ, ಕುಂಭ, ಮೀನ.	ಉತ್ತರಾಷಾಢಾ 2,3,4.	ಮೇಷ, ಕರ್ಕಟಕ, ವೃಶ್ಚಿಕ.	ಮಿಥುನ, ಕರ್ಕ, ತುಲಾ.
ತುಲಾ	2	ಮಕರ, ಕುಂಭ. ಮೀನ.	ಸ್ವಾತಿ–2, 3, 4.	ಮಕರ, ಮೇಷ, ಸಿಂಹ.	ಮೀನ, ಮೇಷ, ಕರ್ಕಟಕ.
ಕನ್ಯಾ	2	ಮೇಷ, ವೃಷಭ, ಮಿಥುನ.	ಹಸ್ತಾ=1, 2, 3.	ಧನು, ಮೀನ, ಕರ್ಕ.	ಕುಂಭ, ಮೀನ, ಮಿಥುನ.
ಮಿಥುನ	3	ಮೇಷ, ವೃಷಭ, ಮಿಥುನ.	ಪುನರ್ವಸು–1, 2, 3.	ಕನ್ಯಾ, ಧನು, ಮೇಷ.	ವೃಶ್ಚಿಕ, ಧನು, ಮೀನ.
ವೃಷಭ	3	ಕರ್ಕಟಕ, ಸಿಂಹ, ಕನ್ಯಾ.	ರೋಹಿಣಿ 4. ಮೃಗಶಿರಾ 1, 2.	ಸಿಂಹ, ವೃಶ್ಚಿಕ, ಮೀನ.	ತುಲಾ, ವೃಶ್ಚಿಕ, ಕುಂಭ.

ವರಾಹಮತ:- 1.ಯಾವಗ್ರಹರಿಂದಲೂ ನೋಡಲ್ಪಡದ ಜನ್ಮರಾಶ್ಯಾಧಿಪತಿಯು ಶನಿಯನ್ನು ನೋಡಬೇಕು. ಇದು ದೀಕ್ಷಾಯೋಗ ಆಗುತ್ತದೆ. ಜನ್ಮರಾಶ್ಯಾಧಿಪತಿ ಮತ್ತು ಶನಿ, ಇವರಲ್ಲಿ ಬಲಿಷ್ಠನಾದ ಗ್ರಹನು ಸೂಚಿಸುವ ಸಂನ್ಯಾಸ ಆಗುತ್ತದೆ. 2.ಯಾವಗ್ರಹರಿಂದಲೂ ನೋಡಲ್ಪಡದ ಶನಿಯು, ಬಲಹೀನನಾದ ಜನ್ಮರಾಶ್ಯಾಧಿಪನನ್ನು ನೋಡಿದರೆ ಸಂನ್ಯಾಸಯೋಗ ಆಗುತ್ತದೆ. 3.ಶನಿದ್ರೇಕ್ಕಾಣದಲ್ಲಿರುವ ಚಂದ್ರನು ಕುಜ ಅಥವಾ ಶನಿಯ ನವಾಂಶದಲ್ಲಿದ್ದು, ಶನಿಯಿಂದ ನೋಡಲ್ಪಟ್ಟರೆ ಪ್ರವ್ರಜ್ಯಾಯೋಗ ಆಗುತ್ತದೆ.

ಜನ್ಮಾಧಿಪ: ಸೂರ್ಯಸುತೇನ ದೃಷ್ಟ: ಶೇಷೈ:ರದೃಷ್ಟ: ಪುರುಷಸ್ಯ ಸೂತೌ ।
ಆರ್ತ್ರೀಯದೀಕ್ಷಾಂ ಕುರುತೇ ಹ್ಯವಶ್ಯಂ ಪೂರ್ವೋಕ್ತಮತ್ರಾಪಿ ವಿಚಾರಣೀಯಮ್॥

ಜನ್ಮರಾಶ್ಯಾಧಿಪನು (ಚಂದ್ರಸ್ಥಿತ ರಾಶ್ಯಾಧಿಪ) ಶನಿಯಿಂದ ಮಾತ್ರ ನೋಡಲ್ಪಡಬೇಕು. ಇತರ ಗ್ರಹರಿಂದ ನೋಡಲ್ಪಡಬಾರದು. ಈ ಯೋಗದಲ್ಲಿ ಜನಿಸಿದವನು ನಿಶ್ಚಯವಾಗಿ ದೀಕ್ಷೆ ಹೊಂದುತ್ತಾನೆ. ಹಿಂದಿನ ಶ್ಲೋಕಗಳಲ್ಲಿ ಹೇಳಿದ ವಿಚಾರಗಳನ್ನು ಕೂಡಾ ಇಲ್ಲಿ ಚಿಂತಿಸಬೇಕು.

ಯೋಗೀಶಂ ದೀಕ್ಷಿತಂ ವಾ ಕಲಯತಿ ತರಣಿಸ್ತೀರ್ಥಪಾಂಥಂ ಹಿಮಾಂಶುರ್ಮಂ-
ತ್ರಜ್ಞಂ ಚ ಬೌಧಾಶ್ರಯಮವನಿಸುತೋ ಜ್ಞೋ ಮತಾನ್ಯಪ್ರವಿಷ್ಟಮ್ । ವೇದಾಂ-
ತಜ್ಞಾನಿನಂ ವಾ ಯತಿವರಮಮರೇಢ್ಯೋ ಭೃಗುರ್ಲಿಙ್ಗವೃತ್ತಿಂ ವ್ರಾತ್ಯಂ ಶೈಲೂ-
ಷವೃತ್ತಿಂ ಶನಿರಿಹ ಪತಿತಂ ವ್ಯಾಥ ಪಾಷಂಡಿನಂ ವಾ ॥೫॥

1. ರವಿಯಿಂದ ಜಾತಕನು ಯೋಗಿಗಳಲ್ಲಿ ಶ್ರೇಷ್ಠ ಅಥವಾ ಸನ್ಯಾಸದೀಕ್ಷೆ ಹೊಂದಿದವನು, 2. ಚಂದ್ರನಿಂದ ತೀರ್ಥಸ್ಥಳಗಳನ್ನು ಸಂಚರಿಸುವವನು, 3. ಕುಜನಿಂದ ಬೌಧಸಂನ್ಯಾಸಿ, ಅಥವಾ ವಾಮಾಚಾರ ಪಂಥದವನು, 4.ಬುಧನಿಂದ ಅನ್ಯಮತಾನುಯಾಯಿಯು, 5.ಗುರುವಿನಿಂದ ವೇದಾಂತ ಜ್ಞಾನಿಯು ಅಥವಾ ಪ್ರಖ್ಯಾತ ಸಂನ್ಯಾಸಿಯು, 6.ಶುಕ್ರನಿಂದ ಧಾರ್ಮಿಕ ಅವಹೇಳನ ಮಾಡುವವ ಅಥವಾ ಯೋಗಿಯಂತೆ ನಟನೆ ಮಾಡುವವ, ಅಥವಾ ನಾಟ್ಯವೃತ್ತಿಯವನು ಮತ್ತು ಶನಿಯಿಂದ ಪತಿತನು ಅಥವಾ ಪಾಷಂಡಿಯು ಆಗುತ್ತಾನೆ.

ಅತಿಶಯಬಲಯುಕ್ತ: ಶೀತಗು: ಶುಕ್ಲಪಕ್ಷೇ ಬಲವಿರಹಿತಮೇನಂ ಪ್ರೇಕ್ಷತೇ ಲಗ್ನನಾಥ: । ಯದಿ ಭವತಿ ತಪಸ್ವೀ ದು:ಖಿತ: ಶೋಕತಪ್ತೋ ಧನ-ಜನಪರಿಹೀನ: ಕೃಚ್ಛ್ರಲಬ್ಧಾನ್ನಪಾನ: ॥೬॥

ಶುಕ್ಲಪಕ್ಷದ ಚಂದ್ರನು ಅತ್ಯಂತ ಬಲಿಷ್ಠನು, ಬಲಹೀನನಾದ ಚಂದ್ರನನ್ನು ಲಗ್ನಾಧಿಪತಿಯು ನೋಡಿದರೆ ಜಾತಕನು ದು:ಖಿತನು, ಶೋಕದಿಂದ ಪೀಡಿತನು, ಧನರಹಿತನು ಹಿಂಬಾಲಿಸುವ(ಶಿಷ್ಯವರ್ಗ) ಜನರಿಲ್ಲದವನು ಮತ್ತು ಅತ್ಯಂತ ಕಷ್ಟದಿಂದ ಅನ್ನ-ಪಾನಾದಿ ಪಡೆಯುವ ತಪಸ್ವಿಯು ಆಗುತ್ತಾನೆ.

ಪ್ರಕಥಿತಮುನಿಯೋಗೇ ರಾಜಯೋಗೋ ಯದಿ ಸ್ಯಾದಶುಭಫಲವಿಪಾಕಂ ಸರ್ವ-

ಮುನ್ಮೂಲ್ಯ ಪಶ್ಚಾತ್ । ಜನಯತಿ ಪೃಥಿವೀಶಂ ದೀಕ್ಷಿತಂ ಸಾಧುಶೀಲಂ ಪ್ರಣತ-ನೃಪಶಿರೋಭಿಃ ಸ್ಪೃಷ್ಟಪಾದಾಬ್ಜಯುಗ್ಮಮ್ ॥೭॥

ಶ್ಲೋಕ ೬ರಲ್ಲಿ ಹೇಳಿದಂತೆ ಜಾತಕನಿಗೆ ರಾಜಯೋಗ ಇದ್ದರೆ ಅಶುಭಫಲಗಳು ನಾಶ ಆಗುತ್ತದೆ, ಮತ್ತು ಜಾತಕನು ರಾಜನು, ದೀಕ್ಷಿತನು, ಸಾಧುಸ್ವಭಾವದವನು, ಗುಣವಂತನು ಆಗಿ ಇತರ ರಾಜರಿಂದ ವಂದಿಸಲ್ಪಡುತ್ತಾನೆ.

ಚತ್ವಾರೋ ದ್ಯುಚರಾಃ ಖನಾಥಸಹಿತಾಃ ಕೇಂದ್ರೇ ತ್ರಿಕೋಣೇಽಥವಾ ಸುಸ್ಥಾನೇ ಬಲಿನಸ್ತ್ರಯೋ ಯದಿ ತದಾ ಸನ್ಯಾಸಸಿದ್ಧಿರ್ಭವೇತ್ । ಸದ್ಬಾಹುಲ್ಯವಶಾಚ್ಚ ತತ್ರ ಸುಶುಭಸ್ಥಾನಸ್ಥಿತೈಸ್ತೈರ್ವದೇತ್ ಪ್ರವ್ರಜ್ಯಾಂ ಮಹಿತಾಂ ಸತಾಮಭಿಮತಾಂ ಚೇದನ್ಯಥಾ ನಿಂದಿತಾಮ್ ॥೮॥

ನಾಲ್ಕುಗ್ರಹರು ದಶಮಾಧಿಪತಿಯ ಯುತಿಯಲ್ಲಿ ಕೇಂದ್ರ ಅಥವಾ ತ್ರಿಕೋಣದಲ್ಲಿ ಇದ್ದರೆ ಅಥವಾ ಬಲಿಷ್ಠರಾದ ಮೂರು ಗ್ರಹರು ಸುಸ್ಥಾನದಲ್ಲಿ ಇದ್ದರೆ ಜಾತಕನಿಗೆ ಸಂನ್ಯಾಸದೀಕ್ಷೆ ಪ್ರಾಪ್ತಿ ಆಗಿ ಅನಂತರ ಪ್ರಸಿದ್ಧಿ ಹೊಂದುತ್ತಾನೆ. ಸುಸ್ಥಾನದಲ್ಲಿರುವ ಈ ಸಂನ್ಯಾಸಕಾರಕ ಗ್ರಹರು ಶುಭಗ್ರಹರಾದರೆ, ಕೀರ್ತಿ, ಸತ್ಪುರುಷರಿಂದ ಸನ್ಮಾನ ಲಭಿಸುತ್ತದೆ. ವ್ಯತ್ಯಯವಾದ್ದಲ್ಲಿ ನಿಂದಿಸಲ್ಪಡುತ್ತಾನೆ.

ಸುರಗುರುಶಶಿಹೋರಾಸ್ವಾರ್ಕಿದೃಷ್ಟಾಸು ಧರ್ಮೇ ಗುರುರಥ ನೃಪತೀನಾಂ ಯೋಗ-ಜಸ್ತೀರ್ಥಕೃತ್ ಸ್ಯಾತ್ । ನವಮಭವನಸಂಸ್ಥೇ ಮಂದಗೇಽನ್ಯೈರದೃಷ್ಟೇ ಭವತಿ ನರಪಯೋಗೇ ದೀಕ್ಷಿತಃ ಪಾರ್ಥಿವೇಂದ್ರಃ ॥

ವರಾಹಮತ:- 1.ಗುರು, ಚಂದ್ರ ಮತ್ತು ಲಗ್ನ, ಈ ಮೂರು ಶನಿಯಿಂದ ನೋಡಲ್ಪಡಬೇಕು, ಮತ್ತು ನವಮಸ್ಥಾನದಲ್ಲಿ ಗುರು ಇದ್ದರೆ, ಜಾತಕನು ರಾಜಯೋಗದಲ್ಲಿ ಜನಿಸಿದರೂ ಶಾಸ್ತ್ರಕರ್ತನು ಆಗುತ್ತಾನೆ. 2.ಧನು, ಮೀನ ಅಥವಾ ಕರ್ಕಟಕ ಲಗ್ನವಾಗಿ ಶನಿಯಿಂದ ನೋಡಲ್ಪಡಬೇಕು, ಮತ್ತು ಗುರುವು ನವಮದಲ್ಲಿ ಇದ್ದರೆ ಶಾಸ್ತ್ರಕರ್ತನು ಅಥವಾ ತೀರ್ಥಯಾತ್ರೆ ಮಾಡುವವನೂ ಎಂದು ಕೆಲವರ ಮತ ಆಗಿರುತ್ತದೆ. 3. ಲಗ್ನದಿಂದ ನವಮದಲ್ಲಿ ಶನಿಯಿದ್ದು ಯಾವಗ್ರಹನಿಂದಲೂ ನೋಡಲ್ಪಡದೇ ಇದ್ದರೆ ರಾಜನಾದರೂ ಸನ್ಯಾಸಿ ಆಗುತ್ತಾನೆ.

ಉಪಸಂಹಾರಾಧ್ಯಾಯ-೨೮

ಸಂಜ್ಞಾಧ್ಯಾಯಃ ಕಾರಕೋ ವರ್ಗಸಂಜ್ಞೋ ವೀರ್ಯಾಧ್ಯಾಯಃ ಕರ್ಮಜೀವೋಽಥ ಯೋಗಃ । ಯೋಗೋ ರಾಜ್ಞಾಂ ರಾಶಿಶೀಲೋ ಗ್ರಹಾಣಾಂ ಮೇಷಾದೀನಾಂ ಲಗ್ನಸಂಪ್ರಾಪ್ತಶೀಲಃ ॥೧॥ ಭಾರ್ಯಾ ಭಾವೋ ಜಾತಕಂ ಕಾಮಿನೀನಾಂ ಸೂನು-ರ್ಬಾಲಾರಿಷ್ಟಯೋಗೋಽಥ ರೋಗಃ । ಭಾವಸ್ತಸ್ಮಾದ್ ದ್ವಾದಶಾವಾಪ್ತಭಾವಾಃ ಸೂರ್ಯಾದೀನಾಂ ಯತ್ಫಲಂ ತದ್ದಶಾಪ್ತಂ ಭಾವಾದೀನಾಮೀಶ್ವರಾಂಕಾ ದಶಾ ಚ । ಸೂರ್ಯಾದೀನಾಮಂತರಾಖ್ಯಾ ದಶಾಽಥ ಸವ್ಯಾಸವ್ಯಾ ಕಾಲಚಕ್ರೋಽಷ್ಟವರ್ಗಃ ॥

ಹೋರಾಸಾರಾವಾಪ್ತಯದ್ಯಷ್ಟವರ್ಗೋ ಮಾಂದ್ಯಧ್ಯಾಯೋ ಗೋಚರಃ ಸ್ಯಾತ್ಪ್ರವ್ರಜ್ಯಃ । ಅಧ್ಯಾಯಾನಾಂ ವಿಂಶತಿಃ ಸಪ್ತಯುಕ್ತಾನ್ ಜನ್ಮನ್ಯೇತದ್ಗೋಲಜಂ ಸಂವದಾಮಿ ॥೪॥ ಶ್ರೀಶಾಲಿವಾಟಿಜಾತೇನ ಮಯಾ ಮಂತ್ರೇಶ್ವರೇಣ ವೈ । ದೈವಜ್ಞೇನ ದ್ವಿಜಾಗ್ರೇಣ ಸತಾಂ ಜ್ಯೋತಿರ್ವಿದಾಂ ಮುದೇ ॥೫॥ ಸುಕುಂತಲಾಂಬಾಂ ಸಂಪೂಜ್ಯ ಸರ್ವಾಭೀಷ್ಟಪ್ರದಾಯಿನೀಮ್ ತತ್ಕಟಾಕ್ಷವಿಶೇಷೇಣ ಕೃತಾಯಾ ಫಲದೀಪಿಕಾ ॥೬॥

ಸಕಲ ಅಭೀಷ್ಟಗಳನ್ನು ಪೂರೈಸುವ **ಸುಕುಂತಲಾಂಬಾ** ದೇವಿಯನ್ನು ಆರಾಧಿಸಿ, ಶ್ರೀದೇವಿಕಟಾಕ್ಷದಿಂದ "**ಫಲದೀಪಿಕಾ** ಎಂಬ ಈ ಗ್ರಂಥವನ್ನು, ದ್ವಿಜಾಗ್ರಣಿಯೂ, ದೈವಜ್ಞನೂ ಆದ ಮತ್ತು ತಿರುನಲ್‌ವೆಲ್ಲಿಯಲ್ಲಿ ಜನಿಸಿದ ಮಂತ್ರೇಶ್ವರ ನಾಮದ ನಾನು ಜ್ಯೋತಿಷ್ಕರಿಗೆ ಉಪಯುಕ್ತ ಆಗುವಂತೆ ರಚಿಸಿರುತ್ತೇನೆ. ಈ ಗ್ರಂಥದಲ್ಲಿ 27 ಅಧ್ಯಾಯದಲ್ಲಿ ಹೇಳಿದ ವಿಚಾರಗಳನ್ನು ಕೆಳಗೆ ಕ್ರಮವಾಗಿ ಬರೆದಿರುತ್ತದೆ.

1.ಸಂಜ್ಞಾಧ್ಯಾಯ, 2.ಕಾರಕವಿಚಾರ, 3.ರಾಶಿವಿಭಾಗಾದಿವಿಚಾರ, 4.ಬಲಾಬಲವಿಚಾರ, 5.ಕರ್ಮಾಜೀವ ಮತ್ತು ಜೀವನೋಪಾಯ ವಿಚಾರ, 6.ಯೋಗಗಳು, 7.ರಾಜಯೋಗ, 8.ಭಾವಫಲ, 9.ಮೇಷಾದಿ ದ್ವಾದಶ ಲಗ್ನಫಲ, 10.ಪತ್ನಿವಿಚಾರ, 11.ಸ್ತ್ರೀಜಾತಕ, 12.ಸಂತಾನಭಾವ, 13.ಬಾಲಾರಿಷ್ಟ, 14.ರೋಗವಿಚಾರ, 15.ಭಾವವಿಚಾರ, 16.ಭಾವಫಲ, 17.ನಿರ್ಯಾಣ ವಿಚಾರ, 18.ದ್ವಿಗ್ರಹಾದಿಯುತಿಫಲ, 19.ಉಡುದಶಾಪದ್ಧತಿ, 20.ಭಾವಾಧಿಪತಿದಶಾಫಲ, 21.ಭುಕ್ತಿವಿಚಾರ, 22.ಕಾಲಚಕ್ರದಶಾ,23.ಅಷ್ಟಕವರ್ಗಪದ್ಧತಿ,24.ಹೋರಾಸಾರೋಕ್ತಅಷ್ಟಕವರ್ಗ,25.ಮಾಂದಿ ಮತ್ತು ಉಪಗ್ರಹಗಳು, 26.ಗೋಚರವಿಚಾರ ಮತ್ತು, 27.ಪ್ರವ್ರಜ್ಯಾಯೋಗ.

ಪರಿಶಿಷ್ಟ

ದೈವಜ್ಞ ಮಂತ್ರೇಶ್ವರ ಕೃತ ಫಲದೀಪಿಕಾ ಗ್ರಂಥದ ೨೭ ಅಧ್ಯಾಯಗಳ ಭಾವಾನುವಾದ ಜ್ಯೋತಿಷ್ಕರಿಗೂ, ವಿದ್ಯಾರ್ಥಿಗಳಿಗೂ ಉಪಯುಕ್ತ ಆಗುವಂತೆ ಮೂಲಶ್ಲೋಕಗಳಿಂದ ಅನುವಾದಿಸಿರುತ್ತೇವೆ. ಈ ಗ್ರಂಥದ ಪ್ರಥಮ ೧೩ ಅಧ್ಯಾಯಗಳನ್ನು ಭಾಗ-೧ರಲ್ಲಿ ಮತ್ತು ಉಳಿದ ೧೪ ಅಧ್ಯಾಯಗಳ ಅನುವಾದವನ್ನು ದ್ವಿತೀಯ ಭಾಗವಾದ ಈ ಗ್ರಂಥದಲ್ಲಿ ಕೊಟ್ಟಿರುತ್ತೇವೆ. ಗ್ರಂಥವ ಅಧ್ಯಯನಕ್ಕೆ ಉಪಯುಕ್ತ ಆಗುವಂತೆ ಬೃಹಜ್ಜಾತಕ, ಸಾರಾವಲಿ, ಪರಾಶರೀ ಇತ್ಯಾದಿ ಗ್ರಂಥಗಳಿಂದ ಆಯ್ದ ಶ್ಲೋಕಗಳನ್ನು ಟಿಪ್ಪಣಿ ಸಹಿತ ಬರೆದಿರುತ್ತದೆ.

ಗ್ರಂಥವಿಚಾರ

ರೋಗ, ಮರಣ, ಪೂರ್ವ-ಭವಿಷ್ಯ ಜನ್ಮಚಿಂತಾಧ್ಯಾಯ-೧೪

ಈ ಅಧ್ಯಾಯದಲ್ಲಿ ರೋಗವಿಚಾರ, ಸೂರ್ಯಾದಿ ಗ್ರಹರಿಂದ ಮತ್ತು ಗುಳಿಕನಿಂದ ಸೂಚಿತರೋಗಗಳು, ರಾಶಿಗಳಿಂದ ಸೂಚಿತವ್ಯಾಧಿಗಳು, ಕಣ್ಣಿನವ್ಯಾಧಿ, ರಾತ್ರೆ ಕುರುಡುತನಯೋಗ, ಜನ್ಮಾಂಧಯೋಗ, ಕಿವಿರೋಗ, ಉದರರೋಗ, ಗುದರೋಗ,

ಗುಹ್ಯರೋಗ, ಜ್ವರ, ವ್ರಣ, ಕ್ಷಯರೋಗ, ವಾತರೋಗ, ಪಿಟಕರೋಗ, ಗುಲ್ಮರೋಗ, ಜಲಜನ್ಯರೋಗ, ನಿರ್ಯಾಣಗ್ರಹ, ನಿರ್ಯಾಣಹೇತು, ಗ್ರಹರಿಂದ ಸೂಚಿತ ಅವಸಾನ ಹೇತು, ನಿರ್ಯಾಣವಿಚಾರ, ಮರಣಹೇತು ರಾಶಿ, ದುರ್ಮರಣ, ಅನಾಯಾಸಮರಣ, ಸ್ವರ್ಗಲೋಕಪ್ರಾಪ್ತಿ, ಹಿಂದಿನ ಮತ್ತು ಮುಂದಿನ ಜನ್ಮವಿಚಾರ, ಪೂರ್ವಾಪರ ಜನ್ಮ ಭೂಮಿ, ಗ್ರಹರಿಂದ ಸೂಚಿತ ಜನ್ಮಭೂಮಿ, ಮರ, ಬಳ್ಳಿ ಇತ್ಯಾದಿ ಜನ್ಮ, ಪೂರ್ವಾ ಪರ ಜನ್ಮವಿಚಾರ, ಜನ್ಮಭೂಮಿ ಮತ್ತು ಜಾತಿವಿಚಾರ ವಿವೇಚನೆ ಇದೆ. ಅವಸಾನ ವಿಚಾರವನ್ನು ನಮ್ಮಿಂದ ಪ್ರಕಟಿತ ಆಯುರ್ದಾಯ ಗ್ರಂಥದಲ್ಲಿ ವಿವರಿಸಿ ಬರೆದಿರುತ್ತದೆ.

ಭಾವಚಿಂತಾ-ಅಧ್ಯಾಯ-೧೫

ಈ ಅಧ್ಯಾಯದಲ್ಲಿ ಭಾವಫಲ ಪೂರ್ಣಪ್ರಾಪ್ತಿವಿಚಾರ, ಭಾವಫಲ, ಭಾವಾಧಿ ಪತಿಯ ಶುಭಾಶುಭಫಲ, ದುಃಸ್ಥಾನದ ಗ್ರಹಫಲ, ಭಾವಾಧಿಪನಫಲ, ಭಾವಹಾನಿ ವಿಚಾರ, ದಶಾಫಲಹಾನಿ ವಿಚಾರ, ಎರಡು ಭಾವಾಧಿಪತ್ಯ ಉಳ್ಳಗ್ರಹನಫಲ, ಪ್ರಶ್ನೆ ಯಲ್ಲಿ ಭಾವಫಲ ಚಿಂತನೆ, ಭಾವಸಂಧಿಸ್ಥಿತ ಗ್ರಹಫಲ, ಭಾವಸಂಧಿವಿಚಾರ ಶ್ರೀಪತಿ ಮತ, ಭಾವಮಧ್ಯ ಮತ್ತು ಸಂಧಿಸ್ಥಿತಗ್ರಹಫಲ, ಸೂರ್ಯಾದಿಗ್ರಹರಿಂದ ಚಿಂತಿಸ ಬೇಕಾದ ವಿಚಾರ. ಲಗ್ನಾದಿಭಾವಕಾರಕರು ಮತ್ತು ಐದು ವಿಧದ ಗ್ರಹಸಂಬಂಧ ಇತ್ಯಾದಿ ವಿಚಾರ ವಿವೇಚನೆ ಇದೆ.

ಲಗ್ನಾದಿ ದ್ವಾದಶಭಾವಫಲಾಧ್ಯಾಯ-೧೬

ಈ ಅಧ್ಯಾಯದಲ್ಲಿ ದೀರ್ಘಾಯು ಯೋಗ, ಧನ–ಸಂಪತ್ತಿನ ವಿಚಾರ, ಲಗ್ನಾದಿ ದ್ವಾದಶಭಾವ ವಿಚಾರ, ಭಾವಫಲಸಿದ್ಧಿಕಾಲ, ಭಾವಫಲ ಅನುಭವಕಾಲ, ಭಾವಫಲ ಪ್ರಾಪ್ತಿಕಾಲ, ಶತ್ರುತ್ವ ವಿಚಾರ ಇತ್ಯಾದಿ ವಿವೇಚನೆ ಇದೆ.

ನಿರ್ಯಾಣ ಪ್ರಕರಣಾಧ್ಯಾಯ-೧೭

ಈ ಅಧ್ಯಾಯದಲ್ಲಿ ನಿರ್ಯಾಣ ಗ್ರಹವಿಚಾರ, ಮರಣಕಾಲ, ಹೆತ್ತವರ, ಸಹೋ ದರರ ಮತ್ತು ಮಕ್ಕಳ ಮರಣ, ಸ್ವಮರಣ, ನಿರ್ಯಾಣಲಗ್ನ ವ್ಯಯೇಶ, ಷಷ್ಠೇಶಮರ ಣಚಿಂತನೆ, ಮರಣಕಾಲದ ಗ್ರಹಸ್ಥಿತಿ ಇತ್ಯಾದಿ ವಿಚಾರ ವಿವೇಚನೆ ಇದೆ.

ದ್ವಿಗ್ರಹಯೋಗಾಧ್ಯಾಯ-೧೮

ಈ ಅಧ್ಯಾಯದಲ್ಲಿ ಎರಡು ಗ್ರಹಯುತಿ ವಿಚಾರ, ಮೇಷಾದಿರಾಶಿಸ್ಥಿತ ಚಂದ್ರ ದೃಷ್ಟಿಫಲ, ಗ್ರಹ ನವಾಂಶಸ್ಥಿತ ಚಂದ್ರನ ಫಲ, ವರ್ಗೋತ್ತಮಾದಿ ನವಾಂಶಸ್ಥಿತಫಲ.

ದಶಾಫಲ-ಅಧ್ಯಾಯ-೧೯

ಈ ಅಧ್ಯಾಯದಲ್ಲಿ ವಿಂಶೋತ್ತರೀದಶಾ ಶೋಧನೆ, ರವಿವರ್ಷವಿಚಾರ, ಸೂರ್ಯಾ ದಿ ಗ್ರಹ ದಶಾಫಲ ವಿವೇಚನೆ ಇದೆ.

ದಶಾಫಲ- ಭುಕ್ತಿಫಲಾಧ್ಯಾಯ-೨೦

ಲಗ್ನಾದಿ ದ್ವಾದಶಭಾವಾಧಿಪತಿಗಳ ಫಲಾಧ್ಯಾಯ, ಶುಭಾಶುಭಗ್ರಹರ ದಶಾಫಲವಿಚಾರ, ಮಾರಕ ದಶಾ–ಭುಕ್ತಿಗಳು, ದಶಾಫಲ ಪ್ರಾಪ್ತಿಕಾಲ, ಚಾರವಶದಿಂದ ದಶಾಫಲ ಪ್ರಾಪ್ತಿ ಕಾಲ, ಉಚ್ಚ-ನೀಚ, ಮಿತ್ರಕ್ಷೇತ್ರ ಇತ್ಯಾದಿ ಸ್ಥಿತಗ್ರಹದಶಾ-ಭುಕ್ತಿಫಲ, ಕೇಂದ್ರ ತ್ರಿಕೋಣಾಧಿಪತಿದಶಾವಿಚಾರ, ದಶಾನಾಥನ ಸಂಬಂಧದಲ್ಲಿರುವ ಭುಕ್ತಿನಾಥನ ಫಲ, ಆರೋಹಿ, ಅವರೋಹಿ, ಮಧ್ಯಾದಶಾಫಲ, ಇತ್ಯಾದಿ ವಿವೇಚನೆ ಇದೆ.

ಭುಕ್ತಿಫಲಾಧ್ಯಾಯ-೨೧

ಈ ಅಧ್ಯಾಯದಲ್ಲಿ ದಶಾಭುಕ್ತಿ ಶೋಧನೆ, ಸೂರ್ಯಾದಿಗ್ರಹರ ದಶಾಭುಕ್ತಿಫಲ ಗಳು, ಅಂತರ್ಭುಕ್ತಿ, ಸೂಕ್ಷ್ಮ ಮತ್ತು ಪ್ರಾಣಭುಕ್ತಿಫಲ ವಿವರ ಹೇಳಿರುತ್ತದೆ.

ಕಾಲಚಕ್ರ ದಶಾಧ್ಯಾಯ-೨೨

ಈ ಅಧ್ಯಾಯದಲ್ಲಿ ಕಾಲಚಕ್ರದಶಾ ಕ್ರಮ, ಅಶ್ವಿನ್ಯಾದಿ ನಕ್ಷತ್ರಪಾದಭುಕ್ತಿಕ್ರಮ, ಉತ್ಪನ್ನದಶಾ, ಆಧಾನದಶಾ, ಮಹಾದಶಾ, ನಿಸರ್ಗದಶಾ, ಅಂಶದಶಾ, ಪಿಂಡಾಯು ರ್ದಾಯ, ಜೀವಶರ್ಮಾಯು, ಆಯುರ್ದಾಯ, ಪರಮಾಯು ಇತ್ಯಾದಿ ವಿಚಾರ ಇದೆ.

ಅಷ್ಟಕವರ್ಗ ಅಧ್ಯಾಯ-೨೩

ಈ ಅಧ್ಯಾಯದಲ್ಲಿ ಅಷ್ಟಕವರ್ಗಕ್ರಮ, ಸೂರ್ಯಾದಿ ಸಪ್ತಗ್ರಹರ ಅಷ್ಟಕವರ್ಗ ಶೋಧನೆ, ಅಷ್ಟಕವರ್ಗಫಲ, ಗೋಚರದಿಂದ ಅಷ್ಟಕವರ್ಗಫಲ ಚಿಂತನೆ, ಸರ್ವಾಷ್ಟಕ ವರ್ಗ, ಕಕ್ಷಾಕ್ರಮ ಇತ್ಯಾದಿ ವಿಚಾರ ಇದೆ.

ಹೋರಾಸಾರೋಕ್ತ ಅಷ್ಟಕವರ್ಗಫಲಾಧ್ಯಾಯ-೨೪

ಈ ಅಧ್ಯಾಯದಲ್ಲಿ ಪೃಥುಯಶಾ ವಿರಚಿತ ಹೋರಾಸಾರ ಗ್ರಂಥದಲ್ಲಿ ಹೇಳಿದ ಅಷ್ಟಕವರ್ಗಫಲ, ತಂದೆಯಮರಣ, ತಾಯಿಯ ಮರಣ, ಸಂತಾನ ಸಂಖ್ಯೆ, ಶೋಧ್ಯ ಪಿಂಡ, ತ್ರಿಕೋಣಶೋಧನೆ, ಏಕಾಧಿಪತ್ಯಶೋಧನೆ, ರಾಶಿಮಾನಗುಣಕ, ಗ್ರಹಗುಣಕ, ಹರಣಗಳು, ಸರ್ವಾಷ್ಟಕಬಿಂದು ಶೋಧನೆ ಮತ್ತು ಫಲ ಇತ್ಯಾದಿ ವಿಚಾರ ಇದೆ.

ಗುಳಿಕಾದಿ ಫಲವಿಚಾರಅಧ್ಯಾಯ-೨೫

ಈ ಅಧ್ಯಾಯದಲ್ಲಿ ಉಪಗ್ರಹ ಶೋಧನೆ, ಭಾವಸ್ಥಿತ ಮಾಂದಿಫಲ, ಗುಳಿಕ ಯುತಿಫಲ, ಉಪಗ್ರಹಫಲ, ವಿಚಾರ ಇದೆ. ಉಪಗ್ರಹಗಳ ವಿಚಾರ ವಿವೇಚನೆಯನ್ನು ನಾವು ಪ್ರಕಟಿಸಿದ "ಗುಳಿಕ ಅಥವಾ ಮಾಂದಿ ಮತ್ತು ಉಪಗ್ರಹಗಳು ಎಂಬ ಗ್ರಂಥದಲ್ಲಿ ಬರೆದಿರುತ್ತದೆ.

ಗೋಚರಫಲಾಧ್ಯಾಯ-೨೬

ಈ ಅಧ್ಯಾಯದಲ್ಲಿ ಚಂದ್ರಲಗ್ನದ ಪ್ರಾಮುಖ್ಯತೆ, ಗೋಚರದ ಸೂರ್ಯಾದಿ ಗ್ರಹರಿಂದ ಭಾವಫಲ ಚಿಂತನೆ, ಮತ್ತು ಅವರು ನೀಡುವ ಫಲಾಫಲಗಳು, ನಕ್ಷತ್ರಗೋಚರ, ಸಪ್ತಶಲಾಕಾವಿಚಾರ, ಜನ್ಮನಕ್ಷತ್ರ, ಆಧಾನ ನಕ್ಷತ್ರ ಮತ್ತು ಕರ್ಮನಕ್ಷತ್ರ, ಜನ್ಮ, ಅನುಜನ್ಮ, ಮತ್ತು ತ್ರಿಜನ್ಮ ನಕ್ಷತ್ರ, ಸರ್ವತೋಭದ್ರಚಕ್ರ, ಪುರೋಲತ್ತಾ ಮತ್ತು ಪೃಷ್ಠಲತ್ತಾ, ಗೃಹವೇಧ ಇತ್ಯಾದಿ ಗೋಚರ ವಿಚಾರ ವಿವೇಚನೆ ಇದೆ.

ಪ್ರವ್ರಜ್ಯಾಯೋಗ-ಅಧ್ಯಾಯ ೨೭

ಈ ಅಧ್ಯಾಯದಲ್ಲಿ ಸಂನ್ಯಾಸಯೋಗ, ಸೂರ್ಯಾದಿ ಗ್ರಹರಿಂದ ಸಂಭವಿಸುವ ವಿವಿಧ ರೀತಿಯ ದೀಕ್ಷೆ, ಸಂನ್ಯಾಸಭಂಗಯೋಗ, ರಾಜಯೋಗದಲ್ಲಿ ಜನಿಸಿದವರಿಗೆ ಸಂನ್ಯಾಸ ಇತ್ಯಾದಿ ಮತ್ತು ಬೃಹಜ್ಜಾತಕ ಅಧ್ಯಾಯ 15ರಲ್ಲಿ ಹೇಳಿದ ಪ್ರವ್ರಜ್ಯಾಯೋಗ, ಶನಿದ್ರೇಕ್ಕಾಣ ಗ್ರಹಸ್ಥಿತಿಯಿಂದ ದೀಕ್ಷೆ ಇತ್ಯಾದಿ ವಿಚಾರ ಇದೆ.

ಈ ಗ್ರಂಥದಲ್ಲಿ ನ್ಯೂನಾಧಿಕ್ಯಗಳು ಕಂಡುಬಂದಲ್ಲಿ ಇದನ್ನು ವಾಚಕರು ಕ್ಷಮಿಸುವರೆಂದು ಆಶಿಸುತ್ತೇನೆ. ಈ ಕೃತಿಯನ್ನು ವಿದ್ವಜ್ಜನರು, ಸಾಧುಸಾಹಿತಿಗಳು ಮತ್ತು ಸತ್ಯಾನ್ವೇಷಕ ದೈವಜ್ಞರು ಸಫಲಗೊಳಿಸುವರೆಂದು ನಾನು ನಂಬುತ್ತೇನೆ. ಹಿಂದಿನ ಆಚಾರ್ಯರನ್ನು ಇಂದೀಗ ನಾನು ನಮಸ್ಕರಿಸುವುದು ನನ್ನ ಕರ್ತವ್ಯ. ನನ್ನ ಇಷ್ಟ ದೇವತೆಗಳಾದ ನವಗ್ರಹರನ್ನು ವಂದಿಸಿ ಹಾಗೂ ಗ್ರಂಥಕರ್ತನಾದ ಮಂತ್ರೇಶ್ವರ ಮುನಿಯನ್ನು ಶಿರಸಾವಂದಿಸಿ ಈ ಪರಿಶಿಷ್ಟವನ್ನು ಮುಗಿಸುತ್ತೇನೆ.

ಪುಟ 110ರಲ್ಲಿ ರವಿಚಾರದಲ್ಲಿ ಸೇರಿಸಿ ಓದಿರಿ

9. ರವಿಯು ನವಮದಲ್ಲಿ ಸಂಚರಿಸುವಾಗ ವಿಪತ್ತು, ದೀನತೆ, ಸ್ವಜನ ವಿರಹ, ಚಿತ್ತಕ್ಷೋಭೆ ಮತ್ತು ಕರ್ಮದಲ್ಲಿ ಅಡ್ಡಿ-ಆತಂಕ ಸಂಭವಿಸುತ್ತದೆ. 10. ಕೈಕೊಂಡಕಾರ್ಯಗಳಲ್ಲಿ ಸಫಲತೆ, ಉನ್ನತ ಅಥವಾ ಕ್ಲಿಷ್ಟಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುತ್ತಾನೆ. 11. ಲಾಭದಲ್ಲಿ ಸ್ಥಾನ–ಮಾನ, ಗೌರವ, ವೈಭವ ಮತ್ತು ರೋಗ ವಿಮುಕ್ತಿ ನೀಡುತ್ತಾನೆ. 12. ಮಾನಸಿಕ ದುಃಖ, ಧನ–ಸಂಪತ್ತಿನ ಅವನತಿ, ಇಷ್ಟಜನರೊಂದಿಗೆ ಕಲಹ, ಮತ್ತು ಜ್ವರದಿಂದ ಪೀಡಿಸಲ್ಪಡುತ್ತಾನೆ.

ತಿದ್ದುಪಡಿ

ಪುಟ	ಪಂಕ್ತಿ	ತಪ್ಪು	ಸರಿ
22	5	ಮತ್ತು ವೃಶ್ಚಿಕ ಲಗ್ನಕ್ಕೆ	ವೃಷಭ ಮತ್ತು ವೃಶ್ಚಿಕ ಲಗ್ನಕ್ಕೆ
48	7	ಘಟೆ	ಘಟಿ
52	7	ಜ್ಯನಿತ	ಜನಿತ
58	9	ನೀಚಕ್ಷೇತ	ನೀಚಕ್ಷೇತ್ರ
59	8	ಶುಕ್ರನು	ಶುಕ್ರನು
64	26	ಗೃಹ	ಗ್ರಹ
65	1	ಶತುಕ್ಷೇತ್ರ	ಶತ್ರುಕ್ಷೇತ್ರ
67	11	ಧನಾಪಹರ	ಧನಾಪಹಾರ
68	23	ಗಂಭಿರವಾದ	ಗಂಭೀರವಾದ
75	10	ಕಷಿ	ಕೃಷಿ
92	29	6. ಸ್ತ್ರಿಸುಖ	6. ಸ್ತ್ರೀಸುಖ
95	18	ಗುಣಿಸಿ	ಗಣಿಸಿ
96	5	ಲಬ್ಧವನ್ನು ಅಶ್ವನೀಯಿಂದ ಗುಣಿಸಿ	ಶೇಷವನ್ನು ಅಶ್ವನೀಯಿಂದ ಗಣಿಸಿ
97	17	ಶುಭಬಿಂದುಗಳಿಂದ	ಶುಭಬಿಂದುಗಳಿಂದ ಗುಣಿಸಿ ಬಂದ ಲಬ್ಧವನ್ನು

ಮೇಳಾ-ಮೇಳಿ

ವಧು-ವರರ ಜ್ಯೋತಿಷ ಗ್ರಂಥ

ಜಾತಕ ಘಟನೆಯಲ್ಲಿ ಉಪಯುಕ್ತ ಗಿಲಕೂಟಗಳು, ಬಲಾಬಲ ಪರಿಶೀಲನೆ, ದಶಾ ಸಂಧಿ ವಿಚಾರ, ಕುಜದೋಷ ಮತ್ತು ಅಪವಾದ, ಯೋಗಾವಳಿ, ಯೋಗ, ವೈಧವ್ಯ ಯೋಗ, ವಿವಾಹ ಮೂಹೂರ್ತ, ವಿವಾಹಕಾಲದ ಗ್ರಹಸ್ಥಿತಿಫಲ, ಸಪ್ತಮ ಭಾವವಿಚಾರ, ಕಳತ್ರ ನಾಶಯೋಗ, ದ್ವಿಭಾರ್ಯಾದಿ ವಿಚಾರ ಇತ್ಯಾದಿ 108 ಮಾದರಿ ಜಾತಕಗಳು 8 ಕೋಷ್ಟಕಗಳಿಂದ ಕೂಡಿದ ಸುಗಮ ದಾಂಪತ್ಯ ಜೀವನದ ಅದ್ವಿತೀಯ ಜ್ಯೋತಿಷ ಗ್ರಂಥ ತಿದ್ದಿದ ದ್ವಿತೀಯಾವೃತ್ತಿ ಅಚ್ಚಿನಲ್ಲಿ

ಷಟ್ ಪಂಚಾಶಿಕಾ

(ಭಾವಫಲ ಸಹಿತ)

ವರಾಹಮಿಹಿರಾಚಾರ್ಯರ ಪುತ್ರ ದೈವಜ್ಞ ಪ್ರಥುಯಶಾ ಕೃತ ಪ್ರಶ್ನಶಾಸ್ತ್ರ ಗ್ರಂಥದ ಕನ್ನಡ ಅನುವಾದ. ಉತ್ಪಲಭಟ್ಟನ ಟೀಕೆ ಮತ್ತು ಪ್ರಾಚೀನ ಜ್ಯೋತಿಷ ಗ್ರಂಥಗಳಿಂದ ಆಯ್ದ ಶ್ಲೋಕಗಳಿಂದ ಕೂಡಿದ ಪ್ರಶ್ನಶಾಸ್ತ್ರದ ಅದ್ವಿತೀಯ ಗ್ರಂಥ, ಪ್ರಶ್ನಕಾಲದ ಶುಭಾಶುಭ ಫಲ ನಿರ್ಣಯಕ್ಕೆ ಉಪಯುಕ್ತ ಆಗುವಂತೆ ಪ್ರಶ್ನಮಾರ್ಗ ಅಧ್ಯಾಯ ೧೪-ಭಾವಫಲಾಧ್ಯಾಯ ಮತ್ತು ಅಧ್ಯಾಯ ೨೩ರಲ್ಲಿ ಹೇಳಿದ ಭೋಜನ ಪ್ರಶ್ನೆಯ ವಿಚಾರ ವಿವರಿಸಿ ಬರೆದಿರುತ್ತದೆ.

ಪುಟ 154 **ಬೆಲೆ ರೂ. 12-00**

ಫಲದೀಪಿಕಾ

ಪ್ರಥಮಭಾಗ

ಮಂತ್ರೇಶ್ವರಮುನಿ ಪ್ರಣೀತ ಫಲಜ್ಯೋತಿಷ ಗ್ರಂಥದ ಪ್ರಥಮ ೧೩ ಅಧ್ಯಾಯ ಗಳ ಭಾವಾನುವಾದ, 1.ಸಂಜ್ಞಾಧ್ಯಾಯ, 2.ಕಾರಕಾಧ್ಯಾಯ, 3.ವರ್ಗಸಂಜ್ಞಾಧ್ಯಾಯ 4.ಷಡ್ಬಲ, 5.ಕರ್ಮಾಜೀವ, 6.ಯೋಗವಿಚಾರ, 7.ರಾಜಯೋಗ, 8.ಭಾವಸ್ಥಿತಗ್ರಹ ಫಲ, 9. ಲಗ್ನಫಲ, 10. ಕಳತ್ರಭಾವ, 11. ಸ್ತ್ರೀಜಾತಕ, 12. ಸಂತಾನಚಿಂತೆ, 13. ಆಯುರ್ಭಾವ, ಮೊದಲಾದ ವಿಚಾರಗಳನ್ನು ಆಧಾರಶ್ಲೋಕ ಮತ್ತು ಟಿಪ್ಪಣಿ ಯಿಂದ ವಿವರಿಸಿ ಬರೆದಿರುತ್ತದೆ. ಉತ್ತಮ ಫಲಜ್ಯೋತಿಷ ಗ್ರಂಥ.

147 ಪುಟಗಳು **ಬೆಲೆ ರೂ. 13-00**

ಪ್ರಕಾಶಕರು : ಗಜಾನನ ಪ್ರಕಾಶನ

ಅಧಿಕೃತ ಮಾರಾಟಗಾರರು

ಶ್ರೀ ನಿತ್ಯಾನಂದ ಗ್ರಂಥಾಲಯ

ಹಂಪನಕಟ್ಟಾ, ಮಂಗಳೂರು–1.

ಟಿ. ಯನ್. ಕೃಷ್ಣಯ್ಯ ಶೆಟ್ಟಿ ಅಂಡ್ ಸನ್

ಪುಸ್ತಕವ್ಯಾಪಾರಿಗಳು

235, ಚಿಕ್ಕಪೇಟೆ, ಬೆಂಗಳೂರು 560053

ಸಮಾಜ ಪುಸ್ತಕಾಲಯ

ಶಿವಾಜಿ ಬೀದಿ, ಧಾರವಾಡ–೧.

ಜ್ಯೋತಿಷದ ಉಪಯುಕ್ತ ಗ್ರಂಥಗಳು

1. **ಜ್ಯೋತಿಷಬೋಧಿನಿ** ಬೆಲೆ ರೂ. 10.00
(ಉತ್ತಮ ಪ್ರಾಥಮಿಕ ಜ್ಯೋತಿಷ ಗ್ರಂಥ)

2. **ಮೇಳಾ-ಮೇಳಿ** ಅಚ್ಚಿನಲ್ಲಿ
(ವಧು-ವರರ ಜ್ಯೋತಿಷ ಗ್ರಂಥ)

3. **ಮೇಷ ಲಗ್ನ** ಬೆಲೆ ರೂ. 2-25

4. **ಗುಳಿಕಅಥವಾಮಾಂದಿಮತ್ತುಉಪಗ್ರಹಗಳು**
(ಮಾಂದಿ ಮತ್ತು ಉಪಗ್ರಹ ವಿಚಾರಗ್ರಂಥ) ಬೆಲೆ ರೂ. 3-00

5. **ಆಯುರ್ದಾಯ** ಬೆಲೆ ರೂ. 10-00
(ಆಯುರ್ದಾಯ ವಿಚಾರಗ್ರಂಥ)

6. **ಷಟ್‌ಪಂಚಾಶಿಕಾ** ಬೆಲೆ ರೂ. 12.00
(ಪ್ರಶ್ನಶಾಸ್ತ್ರ ಮತ್ತು ಭಾವಫಲ ವಿಚಾರ ಗ್ರಂಥ)

7. **ಫಲದೀಪಿಕಾ** ಭಾಗ-೧ ಬೆಲೆ ರೂ. 13-00
(ಅಧ್ಯಾಯ 1ರಿಂದ13ರವರೆಗೆ)

8. **ಫಲದೀಪಿಕಾ** ಭಾಗ-೨ ಬೆಲೆ ರೂ. 14-00
(ಅಧ್ಯಾಯ 14ರಿಂದ 27ರವರೆಗೆ)

9. **ಚಂದ್ರ** ಬೆಲೆ ರೂ. 8-00

ಪ್ರಕಾಶಕರು:

ಗಜಾನನ ಪ್ರಕಾಶನ

ಕಾಮಧೇನು ಪ್ರಿಂಟರ್ಸ್

ಗಣಪತಿ ಹೈಸ್ಕೂಲ್ ಕ್ರೊಸ್ ರೋಡ್,

ಮಂಗಳೂರು-575001